# ಭಾಗವತದ
# ಅಧ್ಯಾತ್ಮ ಸಂದೇಶಗಳು

ಲೇಖಕರು :

ವೇ|| ಬ್ರ|| ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ

ಕ್ರಮಾಂಕ : 272

Price List Catalog Sl.No. 197

ಅಧ್ಯಾತ್ಮಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ - 573 211, ಹಾಸನ ಜಿಲ್ಲೆ, ಕರ್ನಾಟಕ ರಾಜ್ಯ

ದೂರವಾಣಿ: 08175-273820

website: www.adhyatmaprakasha.org

E-mail: secretary@adhyatmaprakasha.org

coordinator_apk@yahoo.com

ಬೆಂಗಳೂರು ಶಾಖೆ :

ನಂ. 68, (ಹೊಸ ನಂ. 6), ಎ.ಪಿ.ಕೆ. ರಸ್ತೆ, 2ನೇ ಬ್ಲಾಕ್,

ತ್ಯಾಗರಾಜನಗರ, ಬೆಂಗಳೂರು - 560 028 ದೂ : 080-2676 5548

E-mail : shankara.bhaskara@gmail.com

**2017**

BHAGAVATADA ADHYATMA SANDESHAGALU :
Written by **Sri H.S. Lakshminarasimhamurthy**, Published by Adhyatma Prakasha Karyalaya, Holenarasipura-573211, Hassan District, Karnataka State, INDIA.

website www.adhyatmaprakasha.org
E-mail secretary@adhyatmaprakasha.org
coordinator_apk@yahoo.com
Bengaluru Branch E-mail :
shankara.bhaskara@gmail.com

ಒಂದನೆಯ ಮುದ್ರಣ : **2017 - 1000 ಪ್ರತಿಗಳು**

ಮುದ್ರಣ ಕಾಗದ : **70 GSM NS Maplitho**

ಪುಟಗಳು : **10+219=229**

ಬೆಲೆ : ರೂ. **100 /-**

© ಅಧ್ಯಾತ್ಮಪ್ರಕಾಶಕಾರ್ಯಾಲಯದವು

*ಪ್ರತಿಗಳು ದೊರೆಯುವ ಸ್ಥಳ :*
**ಅಧ್ಯಾತ್ಮಪ್ರಕಾಶಕಾರ್ಯಾಲಯ**
**ಹೊಳೆನರಸೀಪುರ - 573 211, ದೂರವಾಣಿ: 08175-273820**
**Bengaluru Branch :**
**Adhyatma Prakasha Karyalaya**
No. 68, A.P.K. Road, 6th Cross, 2nd Block
Thyagarajanagar, Bengaluru-560 028 Phone : 080-26765548

ಮುದ್ರಣ ಸ್ಥಾನ:
ಶ್ರೀರಾಮ ಪ್ರಿಂಟರ್ಸ್
ನಂ.25, 15ನೇ ಕ್ರಾಸ್, ಶ್ರೀನಿಧಿಲೇಔಟ್,
ಬೆಂಗಳೂರು - 560 062. ಮೊಬೈಲ್: [illegible]

# ಭಾಗವತದ ಅಧ್ಯಾತ್ಮ ಸಂದೇಶಗಳು

**BHAGAVATADA ADHYATMA SANDESHAGALU** :
Written by **Sri H.S. Lakshminarasimhamurthy,** Published by Adhyatma Prakasha Karyalaya, Holenarasipura-573211, Hassan District, Karnataka State, INDIA.

website www.adhyatmaprakasha.org
E-mail secretary@adhyatmaprakasha.org
coordinator_apk@yahoo.com
Bengaluru Branch E-mail :
shankara.bhaskara@gmail.com

**ಒಂದನೆಯ ಮುದ್ರಣ : 2017 - 1000 ಪ್ರತಿಗಳು**

**ಮುದ್ರಣ ಕಾಗದ : 70 GSM NS Maplitho**

**ಪುಟಗಳು : 10+219=229**

**ಬೆಲೆ: ರೂ. 100 /-**

© ಅಧ್ಯಾತ್ಮಪ್ರಕಾಶಕಾರ್ಯಾಲಯದವು

*ಪ್ರತಿಗಳು ದೊರೆಯುವ ಸ್ಥಳ :*
**ಅಧ್ಯಾತ್ಮಪ್ರಕಾಶಕಾರ್ಯಾಲಯ**
**ಹೊಳೆನರಸೀಪುರ - 573 211, ದೂರವಾಣಿ: 08175-273820**
**Bengaluru Branch :**
**Adhyatma Prakasha Karyalaya**
No. 68, A.P.K. Road, 6th Cross, 2nd Block
Thyagarajanagar, Bengaluru-560 028 Phone : 080-26765548

**ಮುದ್ರಣ ಸ್ಥಾನ:**
**ಶ್ರೀರಾಮ ಪ್ರಿಂಟರ್ಸ್**
**ನಂ.25, 15ನೇ ಕ್ರಾಸ್, ಶ್ರೀನಿಧಿಲೇಔಟ್,**
**ಬೆಂಗಳೂರು - 560 062. ಮೊಬೈಲ್: ೯೮೪೫೩ ೪೭೧೯೨**

BHAGAVATADA ADHYATMA SANDESHAGALU :
Written by **Sri H.S. Lakshminarasimhamurthy,** Published by Adhyatma Prakasha Karyalaya, Holenarasipur-573211, Hassan District, Karnataka State, INDIA.

ಒಂದನೆಯ ಮುದ್ರಣ : **2017 - 1000** ಪ್ರತಿಗಳು

ಮುದ್ರಣ ಕಾಗದ : **70 GSM NS Maplitho**

ಪುಟಗಳು : **10+219=239**

ಬೆಲೆ: ರೂ. **100 /-**

© ಅಧ್ಯಾತ್ಮಪ್ರಕಾಶಕಾರ್ಯಾಲಯದವು

*ಪ್ರತಿಗಳು ದೊರೆಯುವ ಸ್ಥಳ :*
ಅಧ್ಯಾತ್ಮಪ್ರಕಾಶಕಾರ್ಯಾಲಯ
**ಹೊಳೆನರಸೀಪುರ - 573 211, ದೂರವಾಣಿ: 08175-273820**
www. adhyatmaprakasha.org.
email : secretary@adhyatmaprakasha.org
coordinator_apk@yahoo.com

**Bangalore Branch :**
**Adhyatma Prakasha Karyalaya**
Thyagarajanagar, Bengaluru-560 028 Phone : 080-26765548
email: shankara.bhaskara@gmail.com

ಮುದ್ರಣ ಸ್ಥಾನ:
ಶ್ರೀರಾಮ ಪ್ರಿಂಟರ್ಸ್
ನಂ.25, 15ನೇ ಕ್ರಾಸ್, ಶ್ರೀನಿಧಿಲೇಔಟ್,
ಬೆಂಗಳೂರು - 560 062. ಮೊಬೈಲ್: ೯೮೪೫೩ ೪೬೧೯೨

# ಪ್ರಕಾಶಕರ ಬಿನ್ನಹ

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರು ''ಅಧ್ಯಾತ್ಮಪ್ರಕಾಶ'' ವೆಂಬ ಮಾಸಪತ್ರಿಕೆಯನ್ನು ಆರಂಭಿಸಿ ಮಂದ ಮಧ್ಯಮ-ಉತ್ತಮ ಅಧಿಕಾರಿಗಳಿಗೆ ವೇದಾಂತಚಿಂತನೆಗೆ ಅನುಕೂಲವಾಗಲೆಂದು ಅನೇಕ ಲೇಖನಗಳನ್ನು ಬರೆದು ಪತ್ರಿಕೆಯನ್ನು ಸಂಪಾದಿಸಿದರು. ಅದರಲ್ಲಿ ''ತಿಂಗಳಸಂದೇಶ'' ಎಂಬ ಶೀರ್ಷಿಕೆಯಲ್ಲಿ ಅಗ್ರಲೇಖಗಳನ್ನು ಬರೆಯುತ್ತಿದ್ದರು. ಅವುಗಳಲ್ಲಿ ಕೆಲವನ್ನು ಸಂಕಲಿಸಿ ಪ್ರಕಟಿಸಿದ್ದೇವೆ. ಶ್ರೀಶ್ರೀಗಳವರ ಕಾಲಾನಂತರ ಅವರ ಸಾಕ್ಷಾತ್ ಶಿಷ್ಯರಾದ ಅಧ್ಯಾತ್ಮವಿದ್ಯಾಪ್ರವೀಣ, ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳು ಪತ್ರಿಕೆಯ ಸಂಪಾದಕರಾದರು. ಅವರು ''ಅಧ್ಯಾತ್ಮಸಂದೇಶ'' ಎಂಬ ಶಿರೋನಾಮೆಯಲ್ಲಿ ಅಗ್ರಲೇಖನಗಳನ್ನು ಬರೆಯುತ್ತಿದ್ದರು. ಅವುಗಳಲ್ಲಿ ಸಂಪುಟ-72 (ಸೆಪ್ಟೆಂಬರ್-2002) ರಿಂದ ಸಂಪುಟ-76 (ಆಗಸ್ಟ್ 2007)ರವರೆಗೆ ಭಾಗವತ ಮಹಾಪುರಾಣಂತರ್ಗತವಾದ ಕೆಲವು ಉಪಾಖ್ಯಾನಗಳನ್ನು ಆಯ್ಕೆಮಾಡಿಕೊಂಡು 60 ಲೇಖನಗಳಲ್ಲಿ ಅಧ್ಯಾತ್ಮಸಂದೇಶಗಳನ್ನು ಬಿತ್ತರಿಸಿದರು. ಅವುಗಳನ್ನು ಸಂಕಲಿಸಿ ಈಗ ''ಭಾಗವತದ ಅಧ್ಯಾತ್ಮ ಸಂದೇಶಗಳು'' ಎಂಬ ಗ್ರಂಥವನ್ನು ಮುದ್ರಿಸಿ ಲೋಕಾರ್ಪಣೆಗೊಳಿಸುತ್ತಿದ್ದೇವೆ.

72ನೇ ಸಂಪುಟದ ಆರಂಭದಿಂದ 75ನೇ ಸಂಪುಟದ ಕೊನೆಯವರೆಗೆ ಪಂಡಿತರೇ ಅಧ್ಯಾತ್ಮಸಂದೇಶಗಳನ್ನು ಬರೆದರು. ಅನಂತರ ಅನಾರೋಗ್ಯದ ನಿಮಿತ್ತದಿಂದ ಪತ್ರಿಕೆಯ ಕಾರ್ಯವನ್ನು ಮುನ್ನಡೆಸಲು ಅಸಾಧ್ಯವಾದಾಗ ವೇ॥ ಬ್ರ॥ ಶ್ರೀ ಚಂದ್ರಮೌಳಿಅವಧಾನಿಗಳು (ಶ್ರೀ ಶ್ರೀ ಅದ್ವಯಾನಂದೇಂದ್ರಸರಸ್ವತೀ ಸ್ವಾಮಿಗಳು) ಭಾಗವತದ ಕಥಾನಕಗಳಿಂದ ಆಯ್ದು ಅಧ್ಯಾತ್ಮಸಂದೇಶವನ್ನು ಮುಂದುವರೆಸಿ ಸಮಗ್ರವಾಗಿ ಭಾಗವತದ ಸಾರವು ಓದುಗರಿಗೆ ದೊರೆಯುವಂತೆ ಮಾಡಿದರು.

ಈ ಗ್ರಂಥದಲ್ಲಿ ಭಾಗವತದಲ್ಲಿರುವ ಆಧ್ಯಾತ್ಮಿಕ ಅಂಶಗಳನ್ನು ಆಯ್ದು ಅದನ್ನು ಶಾಂಕರವೇದಾಂತದ ಬೆಳಕಿನಲ್ಲಿ ವಿವೇಚನೆ ಮಾಡಲಾಗಿದೆ. ಸಾಮಾನ್ಯ ಜಿಜ್ಞಾಸುಗಳಿಗೆ ಭಗವತ್ತತ್ತ್ವವು ಸುಲಭವಾಗಿ ತಿಳಿಯುವಂತೆ ಆ ಮೂಲಕ ವೇದಾಂಭಿರುಚಿಯಿಂದ ತತ್ತ್ವಜ್ಞಾನಕ್ಕೆ ಮಾರ್ಗದೊರೆಯುವಂತೆ ನಿರೂಪಿಸಲಾಗಿದೆ. ಇದು ಕೇವಲ ಭಾಗವತದ ದಿಗ್ದರ್ಶನವೇ ಹೊರತು ಸಂಪೂರ್ಣವಲ್ಲ. ಇದರಿಂದ ಮೂಲ ಭಾಗವತಪುರಾಣವನ್ನು

ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ 'ವಾಸುದೇವ ಭಗವಂತನ ತತ್ತ್ವವು' ದೊರೆಯುವಂತಾದರೆ ನಮ್ಮ ಕಾರ್ಯ ಸಾರ್ಥಕವೆಂದು ಭಾವಿಸುತ್ತೇವೆ.

ಈ ಗ್ರಂಥಮುದ್ರಣಕ್ಕೆ ಅವಶ್ಯವಾದ ಧನಸಹಾಯವನ್ನು ಶ್ರೀಯುತರುಗಳಾದ- 1.ಶ್ರೀಮತಿ ಸುಶೀಲ ಮತ್ತು ಶ್ರೀ ಯು.ಜಿ. ಕೃಷ್ಣಮೂರ್ತಿ, ಉಚ್ಚಂಗಿ, 2.ಶ್ರೀಮತಿ ಲೀಲಾಶೇಖರ್ ಮತ್ತು ಕುಟುಂಬ, ಬೆಂಗಳೂರು, 3.ಶ್ರೀಮತಿ ಜ್ಯೋತಿ ಮತ್ತು ಶ್ರೀ ಹೆಚ್.ಎಸ್. ಬಾಲಕೃಷ್ಣ, ತುಮಕೂರು, 4.ಶ್ರೀಮತಿ ವಲ್ಲಿ ಮತ್ತು ಶ್ರೀ ಬಿ.ಎನ್. ನಾಗೇಂದ್ರ, ಮಲೇಶಿಯಾ; 5.ಶ್ರೀಮತಿ ಸ್ವರ್ಣ ಮತ್ತು ಶ್ರೀ ಹೆಚ್.ಸಿ. ಮಹೇಶ್, ಚಿಕ್ಕಮಗಳೂರು; 6.ಶ್ರೀಮತಿ ಸರಸ್ವತಿ ಮತ್ತು ಶ್ರೀ ಕೃಷ್ಣಸ್ವಾಮಿ, ಹೊ.ನ.ಪುರ; 7.ಶ್ರೀಮತಿ ಮುಕ್ತಾ ಮತ್ತು ಶ್ರೀ ಸಂದೀಪ್, ಯು.ಎಸ್.ಎ.; 8. ಶ್ರೀಮತಿ ಬೃಂದಾ ಮತ್ತು ಶ್ರೀ ಸಮೀರ, ಬೆಂಗಳೂರು; 9.ಶ್ರೀಮತಿ ಯು.ವಿ. ಗೌರಮ್ಮ, ಶ್ರೀಮತಿ ಗಾಯತ್ರಿ ಮತ್ತು ಶ್ರೀ ಬಿ. ವಾಸುದೇವಮೂರ್ತಿ; 10.ಶ್ರೀಮತಿ ಸ್ಮಿತಾ ಮತ್ತು ಶ್ರೀ ಬಿ.ವಿ.ವಿನಯ್, ಬೆಂಗಳೂರು; 11.ಶ್ರೀಮತಿ ಲಲಿತಾಸತ್ಯನಾರಾಯಣ, ಚಿಕ್ಕಮಗಳೂರು; 12.ಶ್ರೀಮತಿ ಕಮಲಾ ಮತ್ತು ಡಾ|| ಎಸ್. ನಾಗರಾಜು ಮತ್ತು ಕುಟುಂಬ, ಬೆಂಗಳೂರು; 13.ಶ್ರೀಮತಿ ಛಾಯಾ ಮತ್ತು ಶ್ರೀಶಂಕರ್ ಮತ್ತು ಕುಟುಂಬ, ಹೊಸಪಟ್ಟಣ; 14.ಶ್ರೀಮತಿ ವಸಂತ ಮತ್ತು ಶ್ರೀ ಜೆ.ಎಂ. ನಾಗಭೂಷಣ ಮತ್ತು ಕುಟುಂಬ ಜಂಬೂರ್; 15.ಶ್ರೀಮತಿ ಪ್ರಮೀಳವಾಸುದೇವಮೂರ್ತಿ ಕುಟುಂಬ, ಹಾಸನ; 16.ಶ್ರೀಮತಿ ಶಾಂತಾ ಮತ್ತು ಬಿ.ಕೆ. ರಾಮಚಂದ್ರ ಕುಟುಂಬ, ಬೆಂಗಳೂರು; 17.ಶ್ರೀಮತಿ ಸರೋಜಮ್ಮ ಸೂರ್ಯನಾರಾಯಣ ಮತ್ತು ಕುಟುಂಬ, ಬೆಂಗಳೂರು; 18.ಅಂತರಂಗ ಭಕ್ತರು; 19.ಶ್ರೀಮತಿ ವಿಜಯಲಕ್ಷ್ಮೀ ಅನಂತನಾರಾಯಣರಾವ್, ಚಾಮರಾಜನಗರ; 20.ಶ್ರೀಮತಿ ಮಮತಾ ಮತ್ತು ಶ್ರೀ ವೆಂಕಟೇಶಪ್ರಸಾದ್, ಮೈಸೂರು; 21.ಶ್ರೀಮತಿ ದೇವಿಕಾ ಮತ್ತು ಶ್ರೀ ಪ್ರಶಾಂತರಾವ್, ಚಾಮರಾಜನಗರ; 22.ಶ್ರೀಮತಿ ಭಾಗೀರಥಿ ಮತ್ತು ಎನ್. ವೇಣುಗೋಪಾಲ್, ಬೆಂಗಳೂರು; 23.ಶ್ರೀಮತಿ ಅನುಪಮಾ ಮತ್ತು ಮುರಳೀಕೃಷ್ಣ, ಬೆಂಗಳೂರು; 24.ಶ್ರೀಮತಿ ಸಂಧ್ಯಾ ಮತ್ತು ಶ್ರೀ ಎಲ್. ವಿಜಯರಾಘವ, ಬೆಂಗಳೂರು; - ಇವರುಗಳು ಉದಾರವಾಗಿ ನೀಡಿರುತ್ತಾರೆ. ಇವರೆಲ್ಲರೂ ದಿ|| ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳ ಕುಟುಂಬದವರೇ ಆಗಿದ್ದು ಅವರೆಲ್ಲರಿಗೂ, ಸಪರಿವಾರ ದಿಗ್ವಿಜಯರಾಮಚಂದ್ರನು

ಮತ್ತು ಸದ್ಗುರುಗಳು ಸಕಲೇಷ್ಟಾರ್ಥಗಳನ್ನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇವೆ. ಎಲ್ಲರಿಗೂ ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕ ಧನ್ಯವಾದಗಳು.

ಈ ಗ್ರಂಥಕ್ಕೆ 'ಅಧ್ಯಾತ್ಮಪ್ರಕಾಶ' ಮಾಸಪತ್ರಿಕೆಯಿಂದ ಲೇಖನಗಳನ್ನು ಸಂಕಲಿಸುವದು, ಕರಡನ್ನು ತಿದ್ದುವದು, ಅಕ್ಷರಜೋಡಣೆ, ಮುದ್ರಣ ಕಾರ್ಯಗಳಲ್ಲಿ ಸಹಕರಿಸಿ ಸಕಾಲಕ್ಕೆ ಗ್ರಂಥವು ಲೋಕಾರ್ಪಣೆಗೊಳ್ಳಲು ಕಾರಣರಾದ ಎಲ್ಲ ಗುರುಬಂಧುಗಳಿಗೂ ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕ ವಂದನೆಗಳು. ಮೊದಲಮಾತನ್ನು ಬರೆದುಕೊಟ್ಟ ಶ್ರೀ ಅದ್ವಯಾನಂದೇಂದ್ರಸರಸ್ವತೀ ಸ್ವಾಮಿಗಳಿಗೂ ಸಾಷ್ಟಾಂಗ ನಮಸ್ಕಾರಗಳನ್ನು ಅರ್ಪಿಸುತ್ತೇವೆ.

ಈ ಗ್ರಂಥವನ್ನು ಭಕ್ತಾದಿಗಳು ಆದರದಿಂದ ಬರಮಾಡಿಕೊಂಡು ಅನುಸಂಧಾನ ವನ್ನು ಮಾಡಿ ಭಗವತ್ಕೃಪೆಗೆ ಪಾತ್ರರಾಗಲೆಂದು ಪ್ರಾರ್ಥಿಸುತ್ತೇವೆ. ಹೀಗೆಯೇ ಗ್ರಂಥಪ್ರಕಟಣೆಗೆ ಸಹಾಯ ಸಹಕಾರ ನೀಡುತ್ತಾ ಈ ಕಾರ್ಯವು ಅವಿಚ್ಛಿನ್ನವಾಗಿ ಮುಂದುವರೆಯಲು ಪ್ರೋತ್ಸಾಹಿಸುವಿರಾಗಿ ನಂಬಿದ್ದೇವೆ.

ಹೇಮಲಂಬಿನಾಮ ಸಂವತ್ಸರದ
ಚೈತ್ರಶುದ್ಧ ನವಮಿ (ರಾಮನವಮಿ) ಪ್ರಕಾಶಕರು
5-4-2017

# ಮೊದಲ ಮಾತು

ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯ ಅಗ್ರಲೇಖನವಾಗಿ ''ವೇದಾಂತದ ಸಂದೇಶ'' ಗಳನ್ನು ಬರೆಯುವದು ಶ್ರೀ ಶ್ರೀಗಳವರು ಹಾಕಿಕೊಟ್ಟ ಮಾರ್ಗ. ಅಂತೆಯೇ ಪಂಡಿತ ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳೂ ಮುಂದುವರೆಸಿಕೊಂಡು ಬಂದರು. ಹಾಗೆಯೇ ಸಂಪುಟ 72 (ಸೆಪ್ಟೆಂಬರ್-2002) ರಿಂದ ಸಂಪುಟ-76 (ಆಗಸ್ಟ್-2007) ರವರೆಗೆ - ಅರವತ್ತು ಲೇಖನಗಳಲ್ಲಿ ''ಶ್ರೀಮದ್ಭಾಗವತಪುರಾಣದ'' ಕೆಲವು ಭಾಗಗಳನ್ನು ಆಯ್ದು ''ಅಧ್ಯಾತ್ಮಸಂದೇಶ''ಗಳನ್ನು ಕೊಡಲಾಯಿತು. ಪಂಡಿತರ ಲೇಖನಗಳು ಅತ್ಯಂತ ಸರಳವೂ, ವಿದ್ವತ್ಪೂರ್ಣವೂ, ಚೇತೋಹಾರಿಯೂ ಆಗಿತ್ತು. ಆದರೆ ವಯಸ್ಸಿನ ನಿಮಿತ್ತ ಅವರಿಗೆ ಅನಾರೋಗ್ಯವುಂಟಾಗಲಾಗಿ 2006 ಸೆಪ್ಟೆಂಬರ್‌ನಿಂದ ಮುಂದೆ ನಾನೇ ಯಥಾಮತಿಯಾಗಿ ಆ ಲೇಖನಗಳನ್ನು ಮುಂದುವರೆಸಿದೆನು. ಈ ಲೇಖನಗಳು ಸಂಪೂರ್ಣ ಅಧ್ಯಾಯಗಳನ್ನು ಪರಾಮರ್ಶಿಸಿದವಲ್ಲ. ಅತಿ ಮುಖ್ಯವೆಂದು ತೋರಿದ ಅಧ್ಯಾಯಗಳಿಗೆ ಮಾತ್ರ ವಿವರಣೆಯನ್ನು ಕೊಟ್ಟಿದೆ. ಭಾಗವತದಲ್ಲಿರುವ ವಿಚಾರಗಳನ್ನು ಸಂಪೂರ್ಣವಾಗಿ ತಿಳಿಯಬೇಕೆನ್ನುವವರು ಮೂಲಗ್ರಂಥವನ್ನೇ ಅಧ್ಯಯನ ಮಾಡಬೇಕು.

ಈ ಲೇಖನಗಳನ್ನು ನಾವು ಬರೆಯುವಾಗ ಆಯಾ ಅಧ್ಯಾಯದ ಕಥೆಯನ್ನಾಗಲಿ, ಅನುವಾದವನ್ನಾಗಲಿ, ಮುಖ್ಯವಾಗಿ ಪರಿಗಣಿಸಿಲ್ಲ. ಆಯಾ ಅಧ್ಯಾಯದಲ್ಲಿರುವ ತತ್ತ್ವದ ರಹಸ್ಯವೇನೆಂಬುದನ್ನೂ, ಭಕ್ತಿ-ಜ್ಞಾನ-ವೈರಾಗ್ಯಗಳ ಮರ್ಮವೇನೆಂಬುದನ್ನೂ ವಿವರಿಸಿರುತ್ತೇವೆ. ಶ್ಲೋಕಗಳು, ಅಧ್ಯಾಯಗಳು ವಿಚಾರಕ್ಕೆ ನೆಪಮಾತ್ರವೇ ಹೊರತು ಪ್ರಧಾನವಲ್ಲ. ಶ್ರೀಮದ್ಭಾಗವತವನ್ನು ಆಳವಾಗಿ ಅಧ್ಯಯನ ಮಾಡಿದವರಿಗೇ ಅದರಲ್ಲಿರುವ ಗಹನವಾದ ತತ್ತ್ವ ವಿಚಾರದ ಗುಟ್ಟು ಬಿಚ್ಚಿಕೊಳ್ಳುತ್ತದೆ.

ಹಾಗೆಯೇ ಭಾಗವತದಲ್ಲಿ ಭಕ್ತಿಯ ವಿಚಾರವು ತುಂಬಿತುಳುಕಾಡುತ್ತಿದೆ. ಕೆಲವರು ಶ್ರೀಮದ್ಭಾಗವತದಲ್ಲಿ ಕೇವಲ ದ್ವೈತಭಕ್ತಿಯೇ ಇದೆ, ಅದ್ವೈತಭಕ್ತಿಯು ಇಲ್ಲವೆಂತಲೂ, ಅದ್ವೈತದ ಪ್ರಕಾರ ಭಕ್ತಿ ಎಂಬುದೇ ಹೊಂದುವದಿಲ್ಲವೆಂತಲೂ ಹೇಳುತ್ತಿದ್ದಾರೆ. ಆದರೆ ಇದು ಮೂರ್ಖತನವೇ ಹೊರತು ವಿವೇಕಯುಕ್ತ ವಿಚಾರವಲ್ಲ. ಏಕೆಂದರೆ ಭಕ್ತಿಯ ಸ್ವಭಾವವೇ ಎರಡನ್ನೂ ಒಂದುಮಾಡುವದು. ಒಂದಾಗದಿದ್ದರೆ ಭಕ್ತಿಯೇ ಅಲ್ಲ. ಪ್ರೇಮದ ಪರಾಕಾಷ್ಠೆಯಿಂದ ಭಕ್ತಿ-ಭಕ್ತ-ಭಗವಂತ ಎಂಬ

ತ್ರಿಪುಟಿಯೇ ಇಲ್ಲವಾಗುವದು. ಎಲ್ಲವೂ ಪ್ರೇಮಸಾಗರದಲ್ಲಿ ಸೇರಿಹೋಗುತ್ತದೆ. ಇದೇ ನಿಜವಾದ ಭಕ್ತಿ.

ಎಲ್ಲಿಯವರೆಗೆ ಮಾಡುವುದೆಂಬ ಕ್ರಿಯಾರೂಪವಾಗಿರುತ್ತದೆಯೋ ಅಲ್ಲಿಯವರೆಗೆ ಆ ಭಕ್ತಿಯು ಅನಿತ್ಯವಾಗಿರುತ್ತದೆ. ಏಕೆಂದರೆ ಕ್ರಿಯೆ ಎಂಬುದು ಮಾಡುವಾತನ ಪ್ರಯತ್ನದಿಂದ ನಡೆಯುವಂಥದ್ದಾಗಿರುತ್ತದೆ. ಜೀವನಾಗಿ ನಿಮಿತ್ತವಾದ ಅಶನ-ಮೋಚನಗಳು ಇರುವಾಗ ಅದಕ್ಕೆ ನಿರಂತರವೆಂಬುದು ಹೊಂದುವದಿಲ್ಲ. ಆದರೆ ಅದು ಅನುಭವರೂಪವಾದರೆ ಆಗ ವಿಚ್ಛೇದವೇ ಇರುವದಿಲ್ಲ. ಇಂತಹ ಉತ್ತಮವಾದ ಭಕ್ತಿಯ ವಿಚಾರವನ್ನು ತಿಳಿಸುವ ಗ್ರಂಥ ಭಾಗವತವು. ವಾಸುದೇವಭಗವಂತನ ಸ್ವರೂಪಜ್ಞಾನವನ್ನುಂಟುಮಾಡುವ ಭಾಗವತವನ್ನು ಪ್ರತಿಯೊಬ್ಬರೂ ಅವಶ್ಯವಾಗಿ ಓದಲೇಬೇಕು. ಅದನ್ನು ಓದಲು ಪ್ರೇರಣೆಯನ್ನು ಈ ಗ್ರಂಥವು ಕೊಟ್ಟರೆ ಆದರಿಂದಲೇ ಈ ಲೇಖನಗಳು ಸಾರ್ಥಕವೆಂದು ಭಾವಿಸುತ್ತೇವೆ.

ಎಲ್ಲರಿಗೂ ಪರಮಾತ್ಮನಲ್ಲಿ ಅಚಲವಾದ ಭಕ್ತಿಯನ್ನು ಕರುಣಿಸಿ ಅನುಗ್ರಹವನ್ನುಂಟುಮಾಡಲೆಂದು ನಾರಾಯಣಸ್ಮರಣಪೂರ್ವಕವಾಗಿ ನಾವು ಹಾರೈಸುತ್ತೇವೆ.

ಇಂತಿ

ಶ್ರೀ ಅದ್ವಯಾನಂದೇಂದ್ರಸರಸ್ವತೀ ಸ್ವಾಮಿಗಳು

ಹೇಮಲಂಬಿನಾಮಸಂವತ್ಸರದ
ಚೈತ್ರಶುದ್ಧ ಪಾಡ್ಯ (ಯುಗಾದಿ)
29-3-2017

# ವಿಷಯಾನುಕ್ರಮಣಿಕೆ


| | | | |
|---|---|---|---|
| 1. | ಪರಮಪುರುಷಸ್ತುತಿ | - ಪರತತ್ತ್ವ | 1 |
| 2. | ಭಾಗವತಪುರಾಣ ಸ್ತುತಿ | - ಶ್ರೀಮದ್ಭಾಗವತ ಮಹಾಪುರಾಣದ ವೈಶಿಷ್ಟ್ಯ | 5 |
| 3. | ತಸ್ಯ ನಾಮ ಮಹದ್ಯಶಃ | - ಭಗವನ್ನಾಮದ ಮಹಿಮೆ | 9 |
| 4. | ನಿರ್ಗುಣಭಕ್ತಿ | - ಭಾಗವತ ಕಥಾಮೃತ | 13 |
| 5. | ಕಲಿಕಲ್ಮಷ ಪರಿಹಾರೋಪಾಯ | - ಭಾಗವತ ಕಥಾರಂಭ | 16 |
| 6. | ಭಗವಂತನ ಮಾಯೆ | - ವಿದುರ ಉದ್ಧವರ ಸಂವಾದ | 20 |
| 7. | ಅಧ್ಯಾತ್ಮ ಯೋಗ | - ಕಪಿಲದೇವಹೂತಿ ಸಂವಾದ | 24 |
| 8. | ಅಧ್ಯಾತ್ಮ ಯೋಗ | - ಶ್ರೇಯಃ ಸಾಧನಗಳು | 27 |
| 9. | ಅಧ್ಯಾತ್ಮ ಯೋಗ | - ಭಕ್ತಿ ಮೀಮಾಂಸೆ | 31 |
| 10. | ಅಂತರ್ಯಾಮಿಯಾದ ಭಗವಂತನ ಸ್ತುತಿ | - ಧ್ರುವೋಪಾಖ್ಯಾನ | 35 |
| 11. | ಸರ್ವಾತ್ಮನಾದ ಭಗವಂತನ ಸ್ವರೂಪ | - ವಾಸುದೇವ ತತ್ತ್ವಪ್ರಾಪ್ತಿ ಸಾಧನ | 39 |
| 12. | ರುದ್ರಗೀತೆ | - ರುದ್ರನು ಉಪದೇಶಿಸಿದ ವಾಸುದೇವತತ್ತ್ವ | 42 |
| 13. | ಜೀವಬ್ರಹ್ಮರ ಐಕ್ಯೋಪದೇಶ | -ಪುರಂಜನೋಪಾಖ್ಯಾನದ ತಾತ್ಪರ್ಯ | 46 |
| 14. | ಋಷಭದೇವನು ಪುತ್ರರಿಗೆ ಮಾಡಿದ ಉಪದೇಶ | - ಮಹಾಪುರುಷರ ದಿವ್ಯಜೀವನ | 49 |
| 15. | ರಹೂಗಣರಾಜನಿಗೆ ಭರತಮುನಿಯ ಉಪದೇಶ | -ಭರತಮುನಿಯ ಜ್ಞಾನೋಪದೇಶ | 53 |
| 16. | ಭಗವನ್ನಾಮದ ಮಹತ್ವ | - ಅಜಾಮಿಳೋಪಾಖ್ಯಾನ | 57 |
| 17. | ಯಮಧರ್ಮರಾಜನ ಸಂದೇಶ | - ಯಮದೇವನು ತನ್ನ ದೂತರಿಗೆ ಮಾಡಿದ ಉಪದೇಶ | 61 |
| 18. | ಪ್ರಹ್ಲಾದನ ಉಪದೇಶ | -ದೈತ್ಯಬಾಲಕರಿಗೆ ಪ್ರಹ್ಲಾದನ ಉಪದೇಶ | 64 |
| 19. | ನೃಸಿಂಹಾವತಾರ | - ಪ್ರಹ್ಲಾದಕೃತ ಭಗವತ್‌ಸ್ತುತಿ | 68 |

| | | | |
|---|---|---|---|
| 20. | ಗಜೇಂದ್ರ ಮಾಡಿದ ನಾರಾಯಣಸ್ತುತಿ | - ಗಜೇಂದ್ರಮೋಕ್ಷ | 72 |
| 21. | ಬ್ರಹ್ಮದೇವನು ಮಾಡಿದ ವಿಷ್ಣುಸ್ತುತಿ | - ಬ್ರಹ್ಮಕೃತ ನಾರಾಯಣಸ್ತುತಿ | 76 |
| 22. | ದೇವತೆಗಳು ಮಾಡಿದ ಶಿವಸ್ತುತಿ | - ಹಾಲಾಹಲಪ್ರಾಶನ | 80 |
| 23. | ಅದಿತಿಯು ಭಗವಂತನನ್ನು ಸ್ತುತಿಸಿದುದು | - ವಾಮನಾವತಾರ ವೃತ್ತಾಂತ | 84 |
| 24. | ಅಂಬರೀಷನು ಸುದರ್ಶನ ಚಕ್ರವನ್ನು ಸ್ತುತಿಸಿದುದು | - ಅಂಬರೀಷೋಪಖ್ಯಾನ | 87 |
| 25. | ದೇವತೆಗಳು ಮಾಡಿದ ವಿಷ್ಣುಸ್ತುತಿ | - ಕೃಷ್ಣಾವತಾರ | 91 |
| 26. | ಶ್ರೀಕೃಷ್ಣಭಗವಂತನ ಮಹಿಮೆ | - ರಾಮ-ಕೃಷ್ಣರ ಬಾಲಲೀಲೆ | 94 |
| 27. | ಶ್ರೀಕೃಷ್ಣಭಗವಂತನ ನಾಮಮಹಿಮೆ | - ಭಗವಂತನ ದಿವ್ಯಲೀಲೆ | 98 |
| 28. | ಶ್ರೀಕೃಷ್ಣಭಗವಂತನ ಸ್ತುತಿ | -ಕುಬೇರಪುತ್ರರು ಮಾಡಿದ ವಿಷ್ಣುಸ್ತುತಿ | 102 |
| 29. | ದೇವೋತ್ತಮನಾದ ಪರಮ ಪುರುಷ ಸ್ತುತಿ | - ಅಘಾಸುರವಧೆ | 105 |
| 30. | ಶ್ರೀಕೃಷ್ಣಭಗವಂತನ ಸರ್ವಾತ್ಮತ್ವ | - ಶ್ರೀಕೃಷ್ಣ ಭಗವಂತನ ವಿಶ್ವರೂಪ | 109 |
| 31. | ಅಕ್ರೂರನು ಮಾಡಿ ಶ್ರೀಕೃಷ್ಣಸ್ತೋತ್ರ | - ಅಕ್ರೂರನ ಭಗವತ್ ಸ್ತುತಿ | 112 |
| 32. | ಅಕ್ರೂರನ ಭಗವತ್ ಸ್ತುತಿ | - ಮಧುರಾಪಟ್ಟಣ ಪ್ರವೇಶ | 115 |
| 33. | ಮಾತಾಪಿತೃಗಳ ವೈಶಿಷ್ಟ್ಯ | - ರಾಮ-ಕೃಷ್ಣರ ವಿದ್ಯಾಭ್ಯಾಸ | 118 |
| 34. | ಶ್ರೀಕೃಷ್ಣಭಗವಂತನ ಸರ್ವಾತ್ಮಭಾವ | - ಉದ್ಧವನ ವ್ರಜಯಾತ್ರೆ | 122 |
| 35. | ಜಗತ್ತೆಲ್ಲವೂ ಶ್ರೀಮಹಾವಿಷ್ಣುವೇ | - ಸರ್ವಂ ವಿಷ್ಣುಮಯಂ ಜಗತ್ | 125 |
| 36. | ನಂದಗೋಪಾದಿಗಳು ಉದ್ಧವನಿಗೆ ಹೇಳಿದ್ದು | - ಶ್ರೀಕೃಷ್ಣನು ಅಕ್ರೂರನಮನೆಗೆ ಹೋದದ್ದು | 128 |
| 37. | ಕುಂತಿಯು ಮಾಡಿದ ಶ್ರೀಕೃಷ್ಣಸ್ತುತಿ | - ಕುಂತಿಯು ಶರಣಾಗತಿ | 131 |
| 38. | ಭಗವಂತನ ಅವತಾರದ ಉದ್ದೇಶ | - ಭಗವಂತನ ಅನುಗ್ರಹ | 133 |
| 39. | ಮುಚುಕುಂದನ ಸ್ತೋತ್ರ | - ಮುಚುಕುಂದನಿಗೆ ಶ್ರೀಕೃಷ್ಣನದರ್ಶನ | 136 |

| | | | |
|---|---|---|---|
| 40. | ರುಕ್ಮಿಣಿಯ ಆರ್ತತೆ | - ಭಕ್ತಿ ಸರ್ವಸ್ವಸಮರ್ಪಣೆ | 139 |
| 41. | ರುಕ್ಮಿಣಿ ಗೀತೆ | - ಅಪೂರ್ವ ದಾಂಪತ್ಯ | 143 |
| 42. | ರುದ್ರಸ್ತೋತ್ರ | - ವಿದಾಡ್ರೂಪದ ಸ್ತೋತ್ರ | 147 |
| 43. | ದಾನದ ಮಾಹಾತ್ಮ್ಯೆ | - ನೃಗೋಪಾಖ್ಯಾನ | 151 |
| 44. | ಶ್ರೀಕೃಷ್ಣನ ಚರಣದ ಮಹಿಮೆ | - ನಾರದರಿಗೆ ತೋರಿದ ಅದ್ಭುತ | 155 |
| 45. | ಭಕ್ತನ ಸ್ತೋತ್ರ | - ಶ್ರೀಕೃಷ್ಣನ ದಿನಚರಿ | 159 |
| 46. | ಆರ್ತರ ಸ್ತೋತ್ರ | - ಆರ್ತ ಭಕ್ತರು | 164 |
| 47. | ಸುದಾಮನ ಪ್ರಾರ್ಥನೆ | - ಭಕ್ತಿಯ ಶುದ್ಧಮಾರ್ಗ | 168 |
| 48. | ಸತ್ಸಂಗ | - ಮಹಾತ್ಮರ ಸಹವಾಸ | 172 |
| 49. | ಭಗವತ್ಕೃಪಾ | - ಭಗವತ್ಪ್ರಸಾದ | 176 |
| 50. | ಶ್ರುತಿಗೀತಾ | - ಶ್ರುತಿಗೀತೆಯ ವಿಶೇಷ | 179 |
| 51. | ಶ್ರುತಿಸಂದೇಶ | - ಶ್ರುತಿಯ ವಿಚಾರಧಾರೆ | 182 |
| 52. | ಅಭಯ ಸಂದೇಶ | - ಅಭಯಪ್ರಾಪ್ತಿಯ ಪ್ರಕಾರ | 186 |
| 53. | ಅವಧೂತನ ಉಪದೇಶ | - ಪ್ರಕೃತಿಯೇ ಗುರು | 190 |
| 54. | ಭಕ್ತನ ಕೃತಾರ್ಥತೆ | - ಭಕ್ತನ ಕೃತಕೃತ್ಯತೆ | 194 |
| 55. | ಸಾಧಕನ ಲಕ್ಷಣ | - ಸಂನ್ಯಾಸಿಯ ಚರ್ಯೆ | 197 |
| 56. | ಸಾಧಕನ ಧರ್ಮ | - ಸಾಧಕನ ಸಮಸಚಿತ್ತತೆ | 201 |
| 57. | ದುಃಖಕ್ಕೆ ಮನಸ್ಸೇಕಾರಣ | - ಮನಸ್ಸಿನ ಸಂಯಮ | 204 |
| 58. | ದೇಹ ಸ್ವರೂಪ | - ದೇಹಾಭಿಮಾನ | 208 |
| 59. | ಸಾಧಕನಿಗೆ ಉಪದೇಶ | - ಸಾಧಕನ ಕರ್ತವ್ಯ | 211 |
| 60. | ಆತ್ಮನು ನಿರ್ವಿಕಾರನು | - ಭಗವತ್ಪ್ರಸಾದ | 215 |

|| ಓಂ ||

|| ಓಂ ನಮೋ ಭಗವತೇ ವಾಸುದೇವಾಯ ||

# ಭಾಗವತದ
# ಅಧ್ಯಾತ್ಮ ಸಂದೇಶಗಳು

## 1. ಪರಮಪುರುಷ ಸ್ತುತಿ

ಓಂ|| ಜನ್ಮಾದ್ಯಸ್ಯ ಯತೋಽನ್ವಯಾದಿತರತಃ ಚಾರ್ಥೇಷ್ವಭಿಜ್ಞಃ ಸ್ವರಾಟ್
ತೇನೇ ಬ್ರಹ್ಮಹೃದಾ ಯ ಆದಿಕವಯೇ ಮುಹ್ಯನ್ತಿ ಯತ್ಸೂರಯಃ
ತೇಜೋವಾರಿಮೃದಾಂ ಯಥಾ ವಿನಿಮಯೋ ಯತ್ರ ತ್ರಿಸರ್ಗೋಽಮೃಷಾ
ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ ಸತ್ಯಂ ಪರಂ ಧೀಮಹಿ ||

ಈ ಜಗತ್ತಿನ ಹುಟ್ಟು, ಇರವು, ನಾಶ- ಇವುಗಳು ಯಾವ (ಪರಬ್ರಹ್ಮನಿಂದ) ಆಗುತ್ತಿರುವವೋ ಬೇರೆ ಯಾರಿಂದಲೂ ಸಾಧ್ಯವಲ್ಲವೋ, ಈ ಬ್ರಹ್ಮಾಂಡಸೃಷ್ಟಿಯ (ರಹಸ್ಯಗಳನ್ನೆಲ್ಲ) ಪೂರ್ಣವಾಗಿ ಯಾವನು ಬಲ್ಲನೋ, ಸೃಷ್ಟಿಯ ಪ್ರಥಮಪುರುಷನಾದ ಹಿರಣ್ಯಗರ್ಭನಿಗೆ (ಆದಿಕವಿಯೆನಿಸಿದವನಿಗೆ) ಸಕಲವೇದಗಳನ್ನೂ ಯಾವನು ಅನುಗ್ರಹಿಸಿದನೋ, ಆದರೆ ಈ ಸೃಷ್ಟಿಯ ರಹಸ್ಯವನ್ನರಿಯದೆ ಮಹಾತ್ಮರು ಕೂಡ ಬೆರಗಾಗಿರುವರೋ, ಇನ್ನು ತೇಜಸ್ಸು, ನೀರು, ಭೂಮಿ ಇವುಗಳನ್ನು ತ್ರಿವೃತ್‌ಕರಣದಿಂದ ಯಾವನು ಸೃಷ್ಟಿಮಾಡಿರುವನೋ, ಆದರೆ ಈ ಸೃಷ್ಟಿಯೆಲ್ಲವೂ ಮಾಯೆಯೇ (ಸುಳ್ಳೇ) ಆಗಿರುವದೋ ಅಂಥ, ತನ್ನ ಸ್ವಸ್ವರೂಪದಿಂದ ಯಾವಾಗಲೂ ಇದ್ದುಕೊಂಡು ಕಲ್ಪನೆಗಳನ್ನು ದಾಟಿ ಎಂದೆಂದಿಗೂ ಸತ್ಯನೂ, ಪರಾತ್ಪರನೂ ಆಗಿರುವ ಆ ಭಗವಂತನನ್ನು ನಾವು ಧ್ಯಾನಮಾಡುತ್ತೇವೆ.

(ಪರಮಾತ್ಮತತ್ತ್ವವನ್ನು ತಿಳಿಯಲು ಈ ಜಗತ್ತಿನ ಸೃಷ್ಟಿಯನ್ನು ನೆಪಮಾಡಿ ಕೊಂಡು – ಆದರೆ ಈ ಜಗತ್ತಿನ ಗುಣದೋಷಗಳ ಅಂಟಿಲ್ಲದ ನಿತ್ಯಶುದ್ಧಬುದ್ಧ ಮುಕ್ತವಾದ ಆ ಬ್ರಹ್ಮವನ್ನು– ನಾವು ಧ್ಯಾನಮಾಡೋಣ– ಎಂದಭಿಪ್ರಾಯ.)

### ಪರತತ್ತ್ವ

ಮಾನವನ ಜನ್ಮಸಾರ್ಥಕ್ಯಕ್ಕೆ ಇಡಿಯ ಆಯುಷ್ಯವನ್ನೇ ಮೀಸಲಾಗಿರಿಸಿದರೂ

ಸಾಲದೆನಿಸುತ್ತದೆ. ಆದ್ದರಿಂದ ಆ ಪರಬ್ರಹ್ಮದ ಜಿಜ್ಞಾಸೆಯನ್ನೇ ಜೀವಮಾನ ಪರ್ಯಂತವೂ ಮಾಡೋಣ. ಭಗವತ್ತತ್ತ್ವವನ್ನೂ ಆ ಮಹಾಮಹಿಮನ ಗುಣಕರ್ಮ ಲೀಲೆಗಳನ್ನೂ ಮತ್ತೆ ಮತ್ತೆ ಅನುಸಂಧಾನಮಾಡುತ್ತಿರುವದೇ ಮಾನವಜೀವನದ ಪರಮಗುರಿಯಾಗಿರುತ್ತದೆ. ಇದನ್ನು ನಮ್ಮ ಪೂರ್ವಿಕರಾದ ಪರಮಋಷಿಗಳು ಆಚರಿಸಿ ಮೇಲುಪಂಕ್ತಿಯಾಗಿದ್ದು ನಮಗೂ ಇತಿಹಾಸಪುರಾಣಗಳ ಮೂಲಕ ಬೋಧಿಸಿರುತ್ತಾರೆ. ಹಾಗೂ ಪುರಾಣಸಾಹಿತ್ಯಗಳ ಮೂಲಕ ಬ್ರಹ್ಮವಿದ್ಯೆಯನ್ನು ತಿಳಿಸಿಕೊಟ್ಟಿರುತ್ತಾರೆ. ಆದ್ದರಿಂದ ಪುರಾಣಗಳನ್ನು ಗೌರವಿಸಿ ಶ್ರವಣಮಾಡಿ ಹಾಗೂ ಚಿಂತನೆಮಾಡಿಯೇ ಈ ಕಲಿಯುಗದಲ್ಲಿ ನಮ್ಮ ಆತ್ಮೋದ್ಧಾರವನ್ನು ಮಾಡಿಕೊಳ್ಳಬೇಕಾಗಿದೆ. ಶ್ರೀಕೃಷ್ಣಭಗವಂತನ ಅವತಾರವೂ ಲೀಲೆಗಳೂ ಹಾಗೂ ಆ ಭಗವಂತನೇ ತನ್ನ ಭಕ್ತರಿಗೆ ಉಪದೇಶಿಸಿರುವ ತತ್ತ್ವಜ್ಞಾನವೂ ಧರ್ಮಸಂದೇಶಗಳೂ ಈಗಲೂ ಭಾಗವತ ಮಹಾಪುರಾಣದ ಮೂಲಕ ನಮಗೆ ಲಭ್ಯವಿದೆ.

ಪುರಾಣಗಳ ಸಂಖ್ಯೆಯನ್ನು ಹದಿನೆಂಟು- ಎಂದು ನಮ್ಮ ಪ್ರಾಚೀನಋಷಿಗಳು ಗೊತ್ತುಮಾಡಿದ್ದಾರೆ. ಇದನ್ನು ಈ ಶ್ಲೋಕದಿಂದ ವಿವರಿಸಿರುತ್ತಾರೆ. ಅದು ಹೀಗಿದೆ:

**ಮದ್ವಯಂ ಭದ್ವಯಂ ಚೈವ ಬ್ರತ್ರಯಂ ವಚತುಷ್ಟಯಮ್ ।**
**ಅನಾಪಲಿಂಗಕೂಸ್ಕಾನಿ ಪುರಾಣಾನಿ ಪೃಥಕ್ ಪೃಥಕ್ ॥**

ಈ ಶ್ಲೋಕದ ಅಭಿಪ್ರಾಯವೇನೆಂದರೆ ಮ ಎಂಬಕ್ಷರದಿಂದ ಆರಂಭಿಸುವ ಹೆಸರುಳ್ಳ ಎರಡು ಪುರಾಣಗಳು. ಅವು ಹೀಗಿವೆ: (1) ಮತ್ಸ್ಯಪುರಾಣ (2) ಮಾರ್ಕಂಡೇಯಪುರಾಣ. ಅನಂತರ ಭದ್ವಯ- ಎಂದರೆ (3) ಭವಿಷ್ಯೋತ್ತರಪುರಾಣ (4) ಭಾಗವತಪುರಾಣಗಳು. ಮುಂದೆ ಬ್ರತ್ರಯ- ಎಂದರೆ ಬ್ರ- ಎಂಬಕ್ಷರದಿಂದ ಆರಂಭದ ಹೆಸರುಳ್ಳವು ಮೂರು. ಅವು ಹೀಗಿವೆ : (5) ಬ್ರಹ್ಮಾಂಡ (6) ಬ್ರಹ್ಮ (7) ಬ್ರಹ್ಮವೈವರ್ತ ಇವುಗಳು. ಇನ್ನು ವ- ಚತುಷ್ಟಯ- ಎಂದರೆ ವಕಾರದಿಂದ ಆರಂಭದ ಹೆಸರುಳ್ಳವು ನಾಲ್ಕು. ಹೇಗೆಂದರೆ (8) ವಾಮನ (9) ವಾರಾಹ (10) ವಿಷ್ಣು (11) ವಾಯು ಅಥವಾ ಶಿವಪುರಾಣವು. ಮುಂದೆ ಶ್ಲೋಕದ ಉತ್ತರಾರ್ಧದಲ್ಲಿರುವಂತೆ 'ಅನಾಪಲಿಂಗಕೂಸ್ಕಾನಿ' ಎಂದರೆ (12) ಅಗ್ನಿಪುರಾಣ (13) ನಾರದೀಯಪುರಾಣ (14) ಪದ್ಮಪುರಾಣ (15) ಲಿಂಗಪುರಾಣ (16) ಗರುಡಪುರಾಣ (17) ಕೂರ್ಮಪುರಾಣ (18) ಸ್ಕಾಂದಪುರಾಣ. ಹೀಗೆ ಹದಿನೆಂಟು ಮಹಾಪುರಾಣಗಳೆಂದು

ಪ್ರಾಜ್ಞರು ಗೊತ್ತುಪಡಿಸಿರುತ್ತಾರೆ. ಆದರೆ ಭದ್ವಯ- ಎಂಬಲ್ಲಿ ಸೂಚಿತವಾಗಿರುವ ಭಾಗವತಪುರಾಣದ ವಿಷಯದಲ್ಲಿ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. ಅದರಂತೆ ದೇವೀಉಪಾಸಕರು ದೇವೀಭಾಗವತವನ್ನೂ ವೈಷ್ಣವರು ಶ್ರೀಮದ್ಭಾಗವತವನ್ನೂ ಸ್ವೀಕರಿಸಿರುತ್ತಾರೆ. ಆದರೆ ಶ್ರೀಮದ್ಭಾಗವತದ ಸಾಹಿತ್ಯಶೈಲಿ, ಅಪ್ರಸಿದ್ಧಪದಗಳ ಪ್ರಯೋಗಗಳು, ಅತ್ಯಂತಗಡುಚಾದ ಹಾಗೂ ಅರ್ಥಗೌರವವುಳ್ಳ ಕಾವ್ಯರಚನೆ, ಸ್ತೋತ್ರಗಳು- ಇತ್ಯಾದಿಗಳು ಎಂಥ ವಿದ್ವಾಂಸರನ್ನಾದರೂ ಚಕಿತಗೊಳಿಸುತ್ತವೆ. ಯಾರಾದರೊಬ್ಬರು ತಾನು ಸಂಸ್ಕೃತಭಾಷೆಯಲ್ಲಿ ಉದ್ದಾಮಪಂಡಿತನೆಂದು ಪ್ರಶಂಸೆಮಾಡಿಕೊಂಡರೆ ಅಂಥವರಿಗೆ ಶ್ರೀಮದ್ಭಾಗವತವನ್ನು ಪ್ರವಚನಮಾಡುವಂತೆ ಹೇಳಿದರೆ ಆಗ ಅವರ ವಿದ್ವತ್ತು ಪ್ರಕಟವಾದೀತು- ಎಂದು ಬಲ್ಲವರು ಹೇಳುತ್ತಾರೆ. ಆದ್ದರಿಂದ ಶ್ರೀಮದ್ಭಾಗವತವು ಪುರಾಣಸಾಹಿತ್ಯಮಣಿಮಾಲೆಯಲ್ಲಿ ಅನರ್ಘ್ಯರತ್ನವಾಗಿ ಪ್ರಕಾಶಿಸುತ್ತಿದೆ. ಈ ಮಹಾಪುರಾಣದ ಆಧಾರದಿಂದ ಕೆಲವು *ಅಧ್ಯಾತ್ಮಸಂದೇಶ*ಗಳನ್ನು ಆ ಭಗವಂತನ ಪ್ರೇರಣೆಯಿಂದಲೇ  ಪ್ರಸ್ತಾಪಿಸಲಾಗುವದು.

ಶ್ರೀಮದ್ಭಾಗವತದ ಮಂಗಳಶ್ಲೋಕದಲ್ಲಿರುವ ''ಸತ್ಯಂ ಪರಂ ಧೀಮಹಿ'' ಎಂಬ ವಾಕ್ಯವನ್ನು ವಿಚಾರಮಾಡೋಣ. ''ಪರಮಸತ್ಯವಾದ ಆ ಪರಮಾರ್ಥತತ್ತ್ವವನ್ನು ಧ್ಯಾನಮಾಡುತ್ತೇವೆ'' ಎಂದು ಇದರ ಅರ್ಥ. ಆದ್ದರಿಂದ ಇಲ್ಲಿ ಶಿವ-ವಿಷ್ಣು ಎಂಬ ಭೇದವಿಲ್ಲದೆ ಪರಬ್ರಹ್ಮವನ್ನೇ ಪ್ರಸ್ತಾಪಿಸಿದೆ. ಇದಕ್ಕೆ ತಕ್ಕಂತೆ ಇಡಿಯ ಗ್ರಂಥದಲ್ಲೆಲ್ಲ ಸಂದರ್ಭಾನುಗುಣವಾಗಿ ಬಂದಿರುವ ಸ್ತೋತ್ರಗಳಲ್ಲೆಲ್ಲ ಈ ತತ್ತ್ವವನ್ನೇ ಪ್ರಸ್ತಾಪಿಸಿ ಸ್ತುತಿಸಲಾಗಿದೆ. ಗಜೇಂದ್ರನ ಕಥೆಯನ್ನು ಬರುವ ಸ್ತುತಿಯಲ್ಲಿಯೂ ''ನಿಷೇಧಶೇಷೋ ಜಯತಾದಶೇಷಃ'' ಎಂಬ ವರ್ಣನೆಯಿದೆ. ಮತ್ತು ಗಜೇಂದ್ರನ ಸ್ತುತಿಯು ನಿರ್ವಿಶೇಷಪರಬ್ರಹ್ಮತತ್ತ್ವವನ್ನು ತಾತ್ಪರ್ಯವಾಗಿ ಉಳ್ಳದ್ದಾಗಿದ್ದುದರಿಂದ ಅವನಿಗೆ ಬ್ರಹ್ಮಾದಿದೇವತೆಗಳು ಯಾರೂ ಪ್ರತ್ಯಕ್ಷರಾಗಲಿಲ್ಲ. ಕಡೆಗೆ ಸರ್ವದೇವತಾಸ್ವರೂಪನಾದ ಶ್ರೀಹರಿಯು ಪ್ರತ್ಯಕ್ಷನಾದನು- ಎಂದು ವರ್ಣಿಸಲಾಗಿದೆ. ಇದೇ ರೀತಿಯಲ್ಲಿ ಭಾಗವತದಲ್ಲಿ ವರ್ಣಿಸಿರುವ ಸ್ತೋತ್ರಗಳೆಲ್ಲವೂ ನಿರ್ವಿಶೇಷಪರಬ್ರಹ್ಮವನ್ನುವಸ್ತು ಪರವಾಗಿದ್ದು ಅದ್ವೈತತತ್ತ್ವದಲ್ಲಿಯೇ ತಾತ್ಪರ್ಯವುಳ್ಳವಾಗಿವೆ. ಆದರೆ ಶಿವ, ವಿಷ್ಣು- ಎಂಬ ಭೇದಭಾವವು ಇಲ್ಲಿಲ್ಲ. ಅಥವಾ ಶಿವ ಎಂದರೆ ಮಂಗಳಸ್ವರೂಪನೆಂದೂ ವಿಷ್ಣು ಎಂದರೆ ಸರ್ವವ್ಯಾಪಕನೆಂದೂ ಅರ್ಥವಿರುವದರಿಂದ ಎರಡು ನಾಮಗಳನ್ನೂ ಸಮನ್ವಯಮಾಡಬಹುದಾಗಿದೆ. ಹೀಗೆ ಶ್ರೀಮದ್ಭಾಗವತವು ಶೈವವೈಷ್ಣವ ಭೇದಗಳನ್ನು

ಮೀರಿದ, ಹಾಗೂ ಸರ್ವಧರ್ಮಸಮನ್ವಯದ ಉತ್ತುಂಗ ಶಿಖರದಲ್ಲಿ ವಿರಾಜಿಸುತ್ತಿದೆ. ಅಧ್ಯಾತ್ಮಚಿಂತಕರಿಗೆ ಇದು ಕಾಮಧೇನುವಾಗಿದೆ. ಮತಧರ್ಮಗಳ ಸಂಪರ್ಕವಿಲ್ಲದ ಹಾಗೂ ಸರ್ವಧರ್ಮಗಳ ಸಾರವಾದ ಭಗವತ್ತತ್ತ್ವದ ದೃಢವಾದ ತಳಹದಿಯಲ್ಲಿ ನೆಲೆನಿಂತಿರುವದು.

ಇಲ್ಲಿ ಮಂಗಳಶ್ಲೋಕದ ಕಡೆಯಲ್ಲಿರುವ ಕ್ರಿಯಾಪದವು ಗಾಯತ್ರೀಮಂತ್ರ ದಲ್ಲಿರುವ ಒಂದು ಪದವೇ ಆಗಿದೆ. 'ಧೀಮಹಿ' ಎಂಬ ಈ ಪದದಲ್ಲಿ 'ಭಗವಂತನನ್ನು ಧ್ಯಾನಮಾಡುತ್ತೇವೆ' ಎಂಬರ್ಥವಿರುವದರಿಂದ ಗಾಯತ್ರೀಪ್ರತಿಪಾದ್ಯವಾದ ದಿವ್ಯತೇಜಸ್ಸನ್ನೇ ಪರಾಮರ್ಶಿಸಿದೆ. ಈ ತೇಜಸ್ಸು ಸೂರ್ಯಭಗವಂತನ ರೂಪದಿಂದ ಸೃಷ್ಟಿಯಲ್ಲಿರುವ ಸಮಸ್ತಮಾನವರಿಗೂ ಚಿರಪರಿಚಿತವಾದುದಾಗಿದೆ. ಸ್ಥಾವರಜಂಗಮಪ್ರಾಣಿಗಳೆಲ್ಲಕ್ಕೂ ಸೂರ್ಯನು ಜೀವನಾಧಾರನಾಗಿರುತ್ತಾನೆ. ಆ ದೇವನನ್ನು ಸೂರ್ಯಾಂತರ್ಗತ 'ನಾರಾಯಣ'ನೆಂದು ಋಷಿಗಳು ಸ್ತುತಿಸಿದ್ದಾರೆ. ಜಗತ್ತಿನ ಸ್ಥಿತಿಕಾಲಕ್ಕೆ ನಾರಾಯಣನೇ ಅಧಿಪತಿಯು. ಆದ್ದರಿಂದ ಸೂರ್ಯಮಂಡಲದಲ್ಲಿ ಸನ್ನಿಹಿತನಾಗಿರುವ ನಾರಾಯಣನನ್ನು ಸರ್ವರೂ ಆರಾಧಿ ಸಬೇಕು. ಏಕೆಂದರೆ ಆತನ ತೇಜಸ್ಸಿನಿಂದ- ಎಂದರೆ ಶಾಖದಿಂದಲೇ ಸ್ಥಾವರಜಂಗಮ ಪ್ರಾಣಿಗಳೆಲ್ಲವೂ ಜೀವಿಸಿರುತ್ತವೆ. ಆ ಭಗವಂತನನ್ನು ಹುಡುಕಿಕೊಂಡು ಯಾರೂ ಎಲ್ಲಿಗೂ ಹೋಗಬೇಕಾದದ್ದಿಲ್ಲ. ನಾವು ಇರುವಲ್ಲಿಯೇ ಆತನು ಪ್ರತಿದಿನವೂ ದರ್ಶನವನ್ನು ನೀಡುತ್ತಾನೆ. ಹೀಗೆ ಆ ನಾರಾಯಣಭಗವಂತನು ಸೂರ್ಯರೂಪದಿಂದ ಜಗತ್ತಿಗೆಲ್ಲ ಬೆಳಕು-ಶಾಖಗಳನ್ನೂ ಕಾಲಪರಿಮಾಣವನ್ನೂ ಭರಿಸಿದ್ದಾನೆ. ಇಂಥ ಪ್ರತ್ಯಕ್ಷಭಗವಂತನನ್ನು ದರ್ಶನಮಾಡಿ ಜೀವರುಗಳು ಕೃತಾರ್ಥರಾಗಬೇಕಾಗಿದೆ. ಹೀಗೆ ಶ್ರೀಮದ್ಭಾಗವತ ದಲ್ಲಿನ ಮಂಗಳಶ್ಲೋಕದಲ್ಲಿಯೇ ಸರ್ವಧರ್ಮಸಮನ್ವಯವನ್ನೂ ಪರಮಪುರುಷಾರ್ಥ ಪ್ರಾಪ್ತಿಗೆ ಆಗತ್ಯವಾದ ವಿಚಾರಸರಣಿಯನ್ನೂ ಸೂಚಿಸಿದೆ.

* * * * *

# 2. ಭಾಗವತಪುರಾಣ ಸ್ತುತಿ

ಧರ್ಮಃ ಪ್ರೋಜ್ಝಿತ ಕೈತವೋಽತ್ರ ಪರಮೋ ನಿರ್ಮತ್ಸರಾಣಾಂ ಸತಾಂ।
ವೇದ್ಯಂ ವಾಸ್ತವಮತ್ರ ವಸ್ತು ಶಿವದಂ ತಾಪತ್ರಯೋನ್ಮೂಲನಮ್॥
ಶ್ರೀಮದ್ಭಾಗವತೇ ಮಹಾಮುನಿಕೃತೇ ಕಿಂ ವಾ ಪರೈರೀಶ್ವರಃ।
ಸದ್ಯೋ ಹೃದ್ಯವರುಧ್ಯತೇಽತ್ರ ಕೃತಿಭಿಃ ಶುಶ್ರೂಷುಭಿಃ ತತ್ಕ್ಷಣಾತ್॥

ಈ ಪುರಾಣದಲ್ಲಿ ಅನೃತಸಂಪರ್ಕವಿಲ್ಲದ ಪರಮಧರ್ಮವು ಪ್ರತಿಪಾದಿಸಲ್ಪಟ್ಟು ಅಸೂಯಾರಹಿತರಾದ ಸತ್ಪುರುಷರಿಗೆ ಉಪಯುಕ್ತವಾಗಿದೆ. ಇಲ್ಲಿ ತಿಳಿಯಬೇಕಾದ ನಿತ್ಯಸತ್ಯವಾದ ಮಂಗಳಕರವಾದ ತತ್ತ್ವವು ತಿಳಿಯಲ್ಪಡುವದಾಗಿದೆ. ಅದು ತಾಪತ್ರಯಗಳನ್ನು ಬುಡಸಮೇತ ನಾಶಗೊಳಿಸತಕ್ಕದ್ದಾಗಿದೆ. ಹೀಗಿರುವಲ್ಲಿ ಮಹಾಮುನಿಯಾದ (ವ್ಯಾಸಮಹರ್ಷಿಯಿಂದ) ರಚಿಸಲ್ಪಟ್ಟ ಈ ಪುರಾಣವು ಇರಲಾಗಿ ಉಳಿದವುಗಳ ಅಗತ್ಯವು ಕಂಡುಬರುವಂತಿಲ್ಲ. (ಏಕೆಂದರೆ) ಇದನ್ನು ಆಲೈಸಿ ಕೇಳುವ ಭಕ್ತರಾದ ಶ್ರೋತೃಗಳಿಗೆ (ಅವರ ಹೃದಯದಲ್ಲಿಯೇ ಭಗವಂತನು) ಬಂದಿಸಲ್ಪಟ್ಟು ಕೃತಕೃತ್ಯರನ್ನಾಗಿ ಮಾಡುವನು.

(ಪುರಾಣಸಾಹಿತ್ಯಗಳಲ್ಲಿ ಭಾಗವತವು ಕಿರೀಟಪ್ರಾಯವಾದುದು. ಇದರ ರಚನೆಯು ಬಹಳ ಗಾಢವಾಗಿದ್ದುಕೆಲವು ಅಪ್ರಸಿದ್ಧಸಂಸ್ಕೃತಪದಗಳನ್ನೂ ಇಲ್ಲಿ ಬಳಸಲಾಗಿದೆ. ಹೀಗೆ ಸಾಹಿತ್ಯರಚನೆಯಲ್ಲಿ ಗಂಭೀರವಾಗಿದ್ದು ವಾಸುದೇವತತ್ತ್ವವನ್ನು ಮತಧರ್ಮಗಳ ಕಲೆಬೆರಕೆಯಿಲ್ಲದೆ ಕೇವಲ ಅದ್ವಿತೀಯ ಸಚ್ಚಿದಾನಂದ ನಿರ್ಗುಣಪರತತ್ತ್ವವಾಗಿ ಪ್ರತಿಪಾದಿಸುವ ಮೂಲಕ ಮುಮುಕ್ಷುಗಳಿಗೆ ಅನುಸಂಧಾನ ಯೋಗ್ಯವಾಗಿದೆ.)

## ಶ್ರೀ ಮದ್ಭಾಗವತ ಮಹಾಪುರಾಣದ ವೈಶಿಷ್ಟ್ಯ

ಪುರಾಣಗಳೆಲ್ಲವೂ ವೇದಾರ್ಥದ ಉಪಬೃಂಹಣ(ವಿವರವಾದ ವ್ಯಾಖ್ಯಾನ) ಕ್ಕಾಗಿ ಹೊರಟಿರುತ್ತವೆ. ಶ್ರೀಮದ್ಭಾಗವತವೂ ವಾಸುದೇವತತ್ತ್ವದ ವಿಸ್ತಾರವಾದ ನಿರೂಪಣೆಗಾಗಿ ರಚಿತವಾಗಿದ್ದು ಅನೇಕ ಉಪಾಖ್ಯಾನಗಳು, ಧರ್ಮ ಹಾಗೂ ಆತ್ಮತತ್ತ್ವವನ್ನು ಕುರಿತ ಉಪದೇಶಗಳು, ಮತ್ತು ಪ್ರಸಂಗ (ಕಥೆ)ಗಳ ಮೂಲಕ ಶ್ರೋತೃಗಳಲ್ಲಿ ಧರ್ಮ, ಬ್ರಹ್ಮವಿದ್ಯೆಗಳ ವಿಚಾರದಲ್ಲಿ ಆಸಕ್ತಿಯನ್ನುಂಟುಮಾಡಿ

ಹೇಳುವವರನ್ನೂ ಕೇಳುವವರನ್ನೂ ಉದ್ಧಾರಮಾಡುತ್ತಿದೆ. ಇದು ಪರೀಕ್ಷಿತ್‌ರಾಜನಿಗೆ ಶುಕಮಹಾಮುನಿಗಳು ಮಾಡಿರುವ ಉಪದೇಶಗಳನ್ನು ಒಳಗೊಂಡಿದ್ದು ಶ್ರೋತೃಗಳಿಗೆ ಮೋಕ್ಷಪ್ರಾಪ್ತಿಗೆ ಮಾರ್ಗದರ್ಶಕವೂ ಆಗಿದೆ. ಈ ಮಹಾಪುರಾಣದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಪರಮಧರ್ಮವೆನಿಸಿದ ವಾಸುದೇವತತ್ತ್ವವು ಎಲ್ಲಾ ರೀತಿಯಿಂದಲೂ ಮುಕ್ತಿಸಾಧನವೇ ಆಗಿದೆ. ಹೀಗೆ ಈ ಮಹಾಪುರಾಣದಲ್ಲಿ ಅಡಕವಾಗಿರುವ ಉಪದೇಶವನ್ನೂ ಫಲವನ್ನೂ ಪುರಾಣದ ಆರಂಭದಲ್ಲಿಯೇ ಪ್ರಸ್ತಾಪಿಸಿದೆ. ಅವುಗಳನ್ನು ಈಗ ವಿಚಾರಮಾಡೋಣ.

ಮೊದಲನೆಯದಾಗಿ ಕಪಟವಿಲ್ಲದ ಹಾಗೂ ಅನೃತಾದಿಗಳಿಲ್ಲದ ಪರಮಧರ್ಮ (ಆತ್ಮತತ್ತ್ವಜ್ಞಾನ)ವನ್ನು ಇಲ್ಲಿ ಉಪದೇಶಿಸಲಾಗಿದೆ. ಈ ಧರ್ಮವು ಇತರ ಮತಧರ್ಮಗಳಂತೆ ಅಲ್ಲ. ಏಕೆಂದರೆ ಅವು ಆಯಾ ಗುಂಪಿನ ಜನರಿಗೆ ಸೀಮಿತವಾಗಿವೆ. ಇದಾದರೊ, ಅಹಂಕಾರ- ಮದ- ಮತ್ಸರಾದಿಗಳಿಲ್ಲದ ಸಜ್ಜನರಿಗೆ ಮಾತ್ರ ಮಾರ್ಗದರ್ಶಿಯಾಗಿದ್ದು ಫಲಕಾಲಕ್ಕೆ ಜಗತ್ತಿನ ಎಲ್ಲಾ ಧರ್ಮಗಳನ್ನೂ ಮೀರಿ ನಿಂತು ಸಂಸಾರದುಃಖವನ್ನು ನಿರ್ಮೂಲನಗೊಳಿಸಿ ಸಾಧಕನನ್ನು ಸಿದ್ಧನನ್ನಾಗಿ ಪರಿವರ್ತಿಸಿ ಶಾಂತಿ-ಸಮಾಧಾನಗಳನ್ನೂ ನೀಡುತ್ತದೆ. ಇದರಲ್ಲಿ ಮತಾಭಿಮಾನದ ಸಂಕರವಿರುವದಿಲ್ಲ. ಇನ್ನು ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕಗಳೆಂಬ ತಾಪತ್ರಯಗಳನ್ನು ಬುಡಸಮೇತವಾಗಿ ಕಿತ್ತೊಗೆದುಬಿಡುತ್ತದೆ. ಆಗ ಭಗವಂತನು ಅಂಥ ಸಾಧಕನ ಹೃದಯದಲ್ಲಿಯೇ ನೆಲೆನಿಂತುಬಿಡುತ್ತಾನೆ. ಮುಖ್ಯವಾಗಿ ಈ ಭಾಗವತವನ್ನು ಪಠನ-ಚಿಂತನ ಮಾಡುವ ಸಾಧಕನಿಗೆ ವಿವೇಕ-ವೈರಾಗ್ಯ ಹಾಗೂ ಶಾಸ್ತ್ರಜ್ಞಾನಗಳಿರಬೇಕು. ಭಗವಂತನಲ್ಲಿ ದೃಢವಾದ ಭಕ್ತಿಯೂ ಶ್ರದ್ಧೆಯೂ ಅಧ್ಯಾತ್ಮಮಾರ್ಗದಲ್ಲಿ ಆಸಕ್ತಿಯೂ ದೇಹಾದಿಗಳಲ್ಲಿ ಅನಿತ್ಯಭಾವನೆಯೂ ಹಾಗೂ ತೀವ್ರವಾದ ಮೋಕ್ಷೇಚ್ಛೆಯೂ ಇರಬೇಕು. ಈ ಸಾಧನಸಂಪತ್ತುಗಳನ್ನು ಅಳವಡಿಸಿಕೊಂಡ ಸಾಧಕನಿಗೆ ಮಾತ್ರ ಭಾಗವತದಲ್ಲಿ ಪ್ರಸ್ತಾಪಿಸಿರುವ ಧರ್ಮ-ಜ್ಞಾನಗಳ ಉಪದೇಶಗಳು ರುಚಿಸುವವು. ಇಂಥ ಸಾಧಕರು ಅಪರೂಪರೆಂದರೂ ತಪ್ಪಾಗಲಾರದು. ಆದರೆ ಈ ಸಾಧನಸಂಪತ್ತುಗಳ ಕೊರತೆಗೆ ಹೆದರಿಕೊಂಡು ಭಾಗವತದ ಪಠನವನ್ನೇ ಕೈಬಿಡಬಾರದು. ಸಾಧಕನು ತನ್ನ ಸ್ಥಿತಿ-ಗತಿಗಳನ್ನು ಸರಿಯಾಗಿ ಗುರುತಿಸಿಕೊಂಡು ತನ್ನ ಯೋಗ್ಯತೆಗೆ ಎಟಕುವಷ್ಟು ಮಟ್ಟಿಗೆ ಭಾಗವತಪಠನವನ್ನು ಪ್ರಾರಂಭಿಸಿ ಮುಂದುವರೆಯಬೇಕು. ಒಂದು ಇರುವೆಯೂ ಕೂಡ ಹರಿದಾಡುತ್ತಲಿದ್ದರೆ

ಕಿಲೋಮೀಟರ್‌ಗಟ್ಟಲೆಯ ದಾರಿಯನ್ನು ದಾಟಬಲ್ಲದು. ಆದರೆ ಗರುಡಪಕ್ಷಿಯೇ ಆಗಿರಲಿ, ಕೂತಲ್ಲಿಯೇ ಕುಳಿತು ತನ್ನ ಶಕ್ತಿಸಾಮರ್ಥ್ಯಗಳನ್ನು ಪ್ರಶಂಸೆಮಾಡಿಕೊಳ್ಳುತ್ತಿದ್ದರೆ ಒಂದು ಹೆಜ್ಜೆಯೂ ಮುಂದುವರೆಯಲಾರದು. ಆದ್ದರಿಂದ ಭಾಗವತಕಥಾಮೃತವನ್ನು ಶ್ರದ್ಧೆ, ಏಕಾಗ್ರತೆ, ಭಗವಂತನಲ್ಲಿ ಪೂರ್ಣನಂಬಿಕೆ, ಹಾಗೂ ನಿರಂತರ ಚಿಂತನೆಗಳ ಮೂಲಕ ವಶಪಡಿಸಿಕೊಂಡು ಪ್ರಪಂಚವ್ಯವಹಾರವನ್ನೆಲ್ಲವನ್ನೂ ಪರೀಕ್ಷಿತ್‌ರಾಜನಂತೆ ಬದಿಗಿಟ್ಟು ಆಲೈಸಿ ಕಥಾಶ್ರವಣ ಮಾಡಬೇಕು.

ಈಗ ಭಾಗವತಕಥಾಸಾಹಿತ್ಯವನ್ನು ಕೊಂಡಾಡಿರುವ ಒಂದು ಶ್ಲೋಕವನ್ನು ವಿಚಾರಮಾಡೋಣ. ಅದು ಹೀಗಿದೆ:-

**ನಿಗಮಕಲ್ಪತರೋರ್ಗಲಿತಂ ಫಲಂ**
**ಶುಕಮುಖಾದಮೃತದ್ರವಸಂಯುತಮ್ ।**
**ಪಿಬತ ಭಾಗವತಂ ರಸಮಾಲಯಂ**
**ಮುಹುರಹೋ ರಸಿಕಾ ಭುವಿ ಭಾವುಕಾಃ॥**

**ಶ್ರೀ ಮದ್ಭಾಗವತ 1-1-3**

''ವೇದಸಾಹಿತ್ಯಗಳೆಂಬ ಕಲ್ಪತರುಗಳಿಂದ ಹೊರಬಂದು (ಮರದ ಮೇಲೆಯೇ) ಚೆನ್ನಾಗಿ ಹಣ್ಣಾಗಿದ್ದು ಗಿಳಿಯಿಂದ (ರುಚಿನೋಡಲ್ಪಟ್ಟು) ಅಮೃತಧಾರೆಯನ್ನು ಸುರಿಸುತ್ತಿರುವ ರಸದ ನೆಲೆಬೀಡಾಗಿರುವ ಭಾಗವತವೆಂಬ ಈ ರಸಮಯವಾದ ಹಣ್ಣನ್ನು ಎಲೈ ಭಾವುಕ (ರಸಾಸ್ವಾದ) ನಿಪುಣರುಗಳಿರ, ಸವಿಯಿರಿ'' ಎಂದು ಈ ಶ್ಲೋಕದ ಅಭಿಪ್ರಾಯವು. ಶ್ರೀ ಮದ್ಭಾಗವತದಲ್ಲಿ ನಿರೂಪಿಸಿರುವ ಭಗವಂತನ ಗುಣ-ಕರ್ಮ-ಲೀಲೆಗಳು, ಹಾಗೂ ಭಗವದ್ಭಕ್ತರುಗಳ ಕಥಾಖ್ಯಾನಗಳು, ಆ ಕಥೆಗಳಲ್ಲಿ ಸಂದರ್ಭಾನುಗುಣವಾಗಿ ಭಕ್ತರುಗಳು ಸ್ತುತಿಸಿರುವ ಭಗವಂತನ ದಿವ್ಯಸ್ತೋತ್ರಗಳು, ಋಷಿಮುನಿಗಳ ಪರಮೋಪದೇಶಗಳು, ಭಕ್ತಾಗ್ರಣಿಗಳಾದ ಹಾಗೂ ತಪಸ್ವಿಗಳಾದ ಸಾಧಕರುಗಳು ಸಂದರ್ಭಾನುಸಾರವಾಗಿ ಭಗವಂತನನ್ನು ಹಾಡಿ ಹೊಗಳಿರುವ ಸ್ತೋತ್ರಗಳು, ಭಕ್ತರನ್ನು ಉದ್ಧಾರಮಾಡಿ ಪರಮಗತಿ(ಮುಕ್ತಿ)ಯನ್ನು ದಯಪಾಲಿಸಿರುವ ಭಗವಂತನ ಅಮೃತವಾಣಿಗಳು- ಹೀಗೆ ಇಡಿಯ ಭಾಗವತಪುರಾಣವೆಲ್ಲವೂ ಅಮೃತಸಮುದ್ರವೇ ಆಗಿದೆ. ಆದ್ದರಿಂದ ಭಗವಾನ್ ವೇದವ್ಯಾಸರು ಶ್ರೋತೃಗಳನ್ನು ಕುರಿತು ''ಎಲೈ ಭಾವುಕರಾದ ಸಜ್ಜನರೆ, ಈ ಭಾಗವತಾಮೃತವನ್ನು ಪಾನಮಾಡಿರಿ.

ಇದು ರಸಾಲಯವು. ರಸ-ಎಂದರೆ ಭಗವಂತನು. 'ರಸೋ ವೈ ಸಃ' ಎಂದು ಶ್ರುತಿಯು ಸಾರುತ್ತಿದೆ. ಈ ರಸಪಾನವನ್ನು ಮಾಡಿ ಅಮೃತರಾಗಿರಿ ಎಂದು ಘೋಷಣೆಮಾಡಿರುತ್ತಾರೆ.

## ಭಾಗವತ ಕಥಾರಂಭ

ನೈಮಿಷಾರಣ್ಯದಲ್ಲಿ ವಾಸವಾಗಿದ್ದ ಶೌನಕಾದಿ ಋಷಿಗಳು ಒಮ್ಮೆ ಪುರಾಣಶಿಖಾಮಣಿಗಳಾದ ಸೂತರನ್ನು ಕುರಿತು ಹೀಗೆಂದು ಕೇಳಿದರು. ''ಪೂಜ್ಯರೆ, ತಾವು ವೇದವ್ಯಾಸರ ಶಿಷ್ಯರಾಗಿರುವಿರಿ. ನಿಮ್ಮ ಮುಖದಿಂದ ಅನೇಕ ಪುರಾಣಗಳನ್ನು ಕೇಳಿದೆವು. ಆದರೂ ತೃಪ್ತಿಯಾಗಿಲ್ಲ. ಪುರಾಣಶ್ರವಣದಿಂದ ಐಹಿಕಸಂಸಾರಸುಖ, ಪರಲೋಕಗಳಲ್ಲಿ ಸ್ವರ್ಗಾದಿಪ್ರಾಪ್ತಿ-ಇವುಗಳು ಲಭಿಸುವ ಉಪಾಯಗಳು ತಿಳಿದವು. ಆದರೆ ನಮಗೆ ಇನ್ನೂ ಸಮಾಧಾನವಾಗಿಲ್ಲ. ಶಾಶ್ವತವಾದ ಪರಮಪದವಿಯನ್ನು ಪಡೆದು ಸಂಸಾರಸಾಗರದಿಂದ ಪಾರಾಗಿ ನಿತ್ಯಸುಖಶಾಂತಿಗಳನ್ನು ಪಡೆದು ಭಗವಂತನ ಸ್ವರೂಪವನ್ನು ಅರಿತು ಜ್ಞಾನದಿಂದ ಮುಕ್ತಿಸಾಮ್ರಾಜ್ಯವನ್ನು ಸಂಪಾದಿಸಿ ನಿತ್ಯಾನಂದಸ್ವರೂಪರಾಗಿ ನೆಲೆನಿಲ್ಲಬೇಕಾದರೆ ಆ ಭಗವಂತನ ತತ್ತ್ವವನ್ನು ಅರಿತೇ ಕೃತಾರ್ಥರಾಗಬೇಕಾಗಿದೆ. ಆ ಭಗವಂತನು ತನ್ನ ಪೂರ್ಣರೂಪದಿಂದ ಕೃಷ್ಣಾವತಾರದಲ್ಲಿ ಈ ಭೂಮಿಯಲ್ಲಿ ತೋರಿಕೊಂಡು ಭಕ್ತರನ್ನು ಉದ್ಧಾರಮಾಡಿ ಪುನರಾವೃತ್ತಿಗಳಿಲ್ಲದ ಮೋಕ್ಷಪದವಿಯನ್ನು ಕರುಣಿಸಿರುತ್ತಾನೆ. ಅಂಥ ಭಗವಂತನ ದಿವ್ಯಚರಿತ್ರೆಯನ್ನೂ ಗುಣಕರ್ಮಲೀಲೆಗಳನ್ನೂ ತತ್ತ್ವೋಪದೇಶಗಳನ್ನೂ ತಮ್ಮ ಮುಖದಿಂದ ಕೇಳಿ ನಾವು ಉದ್ಧಾರವಾಗಬೇಕಾಗಿದೆ. ಆದ್ದರಿಂದ ಆ ಶ್ರೀಕೃಷ್ಣ ಭಗವಂತನ ದಿವ್ಯಾವತಾರವನ್ನು ಪ್ರಧಾನವಾಗಿ ಇಟ್ಟುಕೊಂಡು ತಾವು ಜಗತ್‌ಸ್ಥಿತಿಕರ್ತ ನಾದ ಶ್ರೀಮಹಾವಿಷ್ಣುವಿನ ಅವತಾರಲೀಲೆಗಳನ್ನೂ ದುಷ್ಟನಿಗ್ರಹ- ಶಿಷ್ಟಪರಿಪಾಲನೆ ಗಳನ್ನೂ ಧರ್ಮೋಪದೇಶಗಳನ್ನೂ ತತ್ತ್ವೋಪದೇಗಳನ್ನೂ ಅಗತ್ಯವಾದ ಕಥಾಖ್ಯಾನಗಳ ಮೂಲಕ ನಮಗೆ ಉಪದೇಶಿಸೋಣವಾಗಲಿ. ಹಾಗೂ ಸಂಸಾರಬಂಧದಲ್ಲಿ ಸಿಲಕಿರುವ ಈ ಜೀವನು ಅದರಿಂದ ಮುಕ್ತನಾಗಲು ತಿಳಿಯಬೇಕಾದ ವಾಸುದೇವತತ್ತ್ವದ ವಿಚಾರವನ್ನೂ ತಿಳಿಸೋಣವಾಗಲಿ- ಎಂದ ಕೇಳಿದರು. ಆಗ ಸೂತಮಹಾಮುನಿಗಳು ಹೇಳಿದ ಉಪದೇಶಗಳನ್ನು ಇನ್ನು ಮುಂದೆ ವಿವರಿಸಲಾಗುವದು.

* * * * *

# 3. ತಸ್ಯ ನಾಮ ಮಹದ್ಯಶಃ

ತದ್ವಾಗ್ವಿಸರ್ಗೋ ಜನತಾಘ ವಿಪ್ಲವೋ
ಯಸ್ಮಿನ್ ಪ್ರತಿಶ್ಲೋಕಮಬದ್ಧವತ್ಯಪಿ ॥
ನಾಮಾನ್ಯನನ್ತಸ್ಯ ಯಶೋಽಙ್ಕಿತಾನಿ ಯತ್
ಶೃಣ್ವನ್ತಿ ಗಾಯನ್ತಿ ಗೃಣನ್ತಿ ಸಾಧವಃ ॥

ಶ್ರೀ ಮದ್ಭಾಗವತ 1-5-11

ಅನಂತನಾದ ಭಗವಂತನ ಯಶಸ್ಸನ್ನು ಕೊಂಡಾಡುವ, ಹಾಗೂ ಸಾಧು (ಭಕ್ತರು) ಕೇಳುತ್ತಾ, ಗಾನಮಾಡುತ್ತಾ ಉಚ್ಚರಿಸುತ್ತಾ ಇರುವರೋ, ಆ ಮಾತುಗಳ ಉಚ್ಚಾರಣೆಯು ಒಂದು ವೇಳೆ ಅವುಗಳು (ವ್ಯಾಕರಣ) ಬದ್ಧವಲ್ಲದೆ ಹೋದರೂ ಪ್ರತಿಯೊಂದು ಶ್ಲೋಕವೂ ಜನಸಮೂಹದ ಪಾಪಗಳನ್ನೆಲ್ಲ ತೊಳೆದುಬಿಡುವದರಿಂದ ಅದೇ ನಿಜವಾದ ವಾಗ್ವ್ಯಾಪಾರವೆನಿಸಿರುವದು.

**(ಭಗವನ್ನಾಮೋಚ್ಚಾರಣೆಯು ಬಾಲಿಶವಾದ ಭಾಷೆಯಲ್ಲಿದ್ದರೂ ವೃತ್ತ, ಅಲಂಕಾರಗಳಿಲ್ಲದ್ದಾದರೂ, ಆದರೆ ಭಗವದ್ಭಕ್ತರು ಕೇಳುತ್ತಾ ಹಾಡುತ್ತಾ ಸ್ತುತಿಸುತ್ತಾ ಇರುವ ನಾಮವು ನಿಜವಾದ ಮಾತಿನ ಸಾರ್ಥಕತೆಯನ್ನು ಪರಿಪೂರ್ಣಗೊಳಿಸುತ್ತದೆ- ಎಂದು ಅಭಿಪ್ರಾಯ.)**

## ಭಗವನ್ನಾಮದ ಮಹಿಮೆ

ಶೌನಕಾದಿಮಹರ್ಷಿಗಳು ಶ್ರೀ ಸೂತಪುರಾಣಿಕರನ್ನು ಕುರಿತು ಭಗವಂತನ ದಿವ್ಯಮಾಹಾತ್ಮ್ಯಪೂರ್ಣವಾದ ಕಥಾಶ್ರವಣವನ್ನು ಮಾಡಿಸಬೇಕೆಂದು ಕೇಳಿದಾಗ ಅವರು ಹೀಗೆಂದರು : ''ಭಗವದ್ಭಕ್ತರೆ, ಕೇಳಿರಿ. ಒಮ್ಮೆ ವೇದವ್ಯಾಸರು ಬೇಸರಭಾವ ದಿಂದ ಕುಳಿತಿದ್ದಾಗ ನಾರದರು ಬಂದು ಹೀಗೆಂದರು : ''ಪರಾಶರರ ಪುತ್ರರಾದ ವ್ಯಾಸರೆ, ನೀವು ನಾಲ್ಕು ವೇದಗಳು, ಹದಿನೆಂಟುಪುರಾಣಗಳು- ಇತ್ಯಾದಿ ಜಗತ್ತಿಗೆ ಧರ್ಮಬೋಧಕವಾದ ಸಾಹಿತ್ಯವನ್ನೆಲ್ಲ ಸಂಪಾದಿಸಿ ಧಾರೆಯೆರೆದ ಮಹನೀಯ ರಾಗಿರುತ್ತೀರಿ. ಆದರೂ ನಿಮ್ಮನ್ನು ನೋಡಿದರೆ ಏನೋ ಅತೃಪ್ತಿಯನ್ನು ಮನಸ್ಸಿನಲ್ಲಿ ಹೊಂದಿರುವಂತೆ ಕಾಣುವಿರಿ. ಇದಕ್ಕೆ ಕಾರಣವೇನು''? ಎಂದು ಕೇಳಿದರು. ಆಗ

ವೇದವ್ಯಾಸರು ಹೀಗೆಂದರು : ದೇವರ್ಷಿಗಳೆ, ನೀವು ಕೇಳಿದ್ದು ಸರಿಯೆ. ನನಗೆ ಈವರೆಗೆ ಮಾಡಿರುವ ಸತ್ಕಾರ್ಯ- ಸದ್ವಿಚಾರಗಳಿಂದ ಪೂರ್ಣವಾದ ತೃಪ್ತಿಯುಂಟಾಗಿರುವದಿಲ್ಲ. ಇದಕ್ಕೆ ಮೂಲವೇನು? ಎಂಬುದು ತಿಳಿಯದೆ ಇದೆ. ನೀವಾದರೊ, ಮೂರುಲೋಕಗಳಲ್ಲಿಯೂ ಸಂಚರಿಸುತ್ತಾ ಎಲ್ಲರ ಆತ್ಮಸಾಕ್ಷಿಯಾಗಿರುತ್ತೀರಿ. ಆದ್ದರಿಂದ ನನಗೆ ಈಗ ಉಂಟಾಗಿರುವ ಅತೃಪ್ತಿಗೆ ಕಾರಣವೇನೆಂಬುದನ್ನು ಸರ್ವಜ್ಞರಾದ ನೀವೇ ತಿಳಿಸಿಕೊಡಬೇಕು. ಹಾಗೂ ಅದಕ್ಕೆ ಪರಿಹಾರವನ್ನೂ ದಯವಿಟ್ಟು ಹೇಳಬೇಕು'' ಎಂದು ಬಿನ್ನವಿಸಿಕೊಂಡರು.

ಆಗ ನಾರದರು ಹೀಗೆಂದರು : 'ವ್ಯಾಸಮುನಿಗಳೆ, ನೀವು ಈವರೆಗೆ ಮಾಡಿರುವ ಸತ್ಕಾರ್ಯಗಳೆಲ್ಲವೂ ಶ್ರೇಯಸ್ಕರವಾದವುಗಳೇ ಸರಿ. ಆದರೆ ಭಗವಂತನಾದ ಶ್ರೀ ವಾಸುದೇವನ ಗುಣಕರ್ಮಲೀಲೆಗಳನ್ನೂ ಅವನ ಮಹಿಮಾದಿಗಳನ್ನೂ ಪ್ರಧಾನವಾಗಿ ಉಳ್ಳ ಕಥಾಸಾಹಿತ್ಯವನ್ನು ನೀವು ರಚಿಸಿರುವದಿಲ್ಲ. ಶ್ರೀಹರಿಯ ದಿವ್ಯಮಾಹಾತ್ಮ್ಯೆಯನ್ನೇ ಪ್ರಧಾನವಾಗಿ ಉಳ್ಳ ಸಾಹಿತ್ಯಪೂರ್ಣವಾದ ಪುರಾಣಕಥೆಯನ್ನು ಈವರೆಗೆ ನೀವು ರಚಿಸಿರುವದಿಲ್ಲ. ಆದ್ದರಿಂದಲೇ ನಿಮಗೆ ಆತ್ಮತೃಪ್ತಿಯು ಲಭಿಸದೆ ಇದೆ. ವಾಸುದೇವ ಭಗವಂತನ ಗುಣಕರ್ಮಲೀಲೆಗಳನ್ನು ವರ್ಣಿಸದೆ ಇರುವ ಗ್ರಂಥಗಳೆಲ್ಲವೂ ಕಾಗೆಗಳು ನೀರು ಕುಡಿಯುವ ಕೊಳದಂತೆಯೇ ಸರಿ. ಅಲ್ಲಿ ಹಂಸಗಳು ಬರುವದುಂಟೆ? ಆದ್ದರಿಂದ ಈವರೆಗಿನ ನಿಮ್ಮ ಸಾಹಿತ್ಯ (ಪುರಾಣ) ಕೃತಿಗಳು ಮನಶ್ಶಾಂತಿಯನ್ನು ಕೊಡಲಾರವು. ಆದರೆ ವಾಸುದೇವಭಗವಂತನನ್ನೇ ಕೊಂಡಾಡುವಂಥ ಪುರಾಣಸಾಹಿತ್ಯವನ್ನು ಆತನ ಗುಣಕರ್ಮಲೀಲೆಗಳನ್ನೇ ಪ್ರಧಾನವಾಗಿಟ್ಟುಕೊಂಡು ರಚನೆಮಾಡಿರಿ. ಕೇವಲ ಸಂನ್ಯಾಸ, ವಿರಕ್ತಿ, ಜ್ಞಾನ- ಇತ್ಯಾದಿ ವಿಚಾರಗಳಿಂದ ಕೂಡಿದ ಗ್ರಂಥವನ್ನೇ ಬರೆದರೂ ಅದು ಕೂಡ ಶೋಭಿಸಲಾರದು. ಒಂದು ವೇಳೆ ಅಲ್ಪ-ಸ್ವಲ್ಪ ಭಗವಂತನ ಮಹಿಮಾದಿಗಳನ್ನೂ ಗುಣಕರ್ಮಲೀಲೆಗಳನ್ನೂ ನೀವು ನಿಮ್ಮ ಗ್ರಂಥಗಳಲ್ಲಿ ಸೂಚಿಸಿದ್ದರೂ ಅದು ಮನಃಶಾಂತಿಗೆ ಸಾಲದಾಗುವದು. ಆದ್ದರಿಂದ ಭಗವಂತನ ದಿವ್ಯಲೀಲೆಗಳನ್ನೇ ಪ್ರಚುರವಾಗಿ ಉಳ್ಳ ಒಂದು ಗ್ರಂಥವನ್ನು ರಚಿಸಿ ಸಮರ್ಪಿಸಿರಿ. ನಿಜವೇನೆಂದರೆ: ಮಾನವನು ತಾನು ಮಾಡಬಹುದಾದ ತಪಸ್ಸು, ವೇದಾಂತಶ್ರವಣ, ಗ್ರಂಥರಚನೆ ಮುಂತಾದವುಗಳ ಗುರಿಯು ಭಗವಂತನ ಗುಣಕರ್ಮಲೀಲೆಗಳ ವಿಸ್ತಾರವಾದ ರಚನೆಯಿಂದಲೇವ್ಯಾಪಿಸಿರುವಂತೆ ಇರಬೇಕು. ಹಾಗಲ್ಲದೆ ಖ್ಯಾತಿ, ಲಾಭ, ಪೂಜಾದಿಗಳನ್ನು ಜನರಿಂದ ಬಯಸಿ ರಚಿಸುವ ಸಾಹಿತ್ಯವು ಎಂದಿಗೂ

ಭಗವಂತನನ್ನು ತೃಪ್ತಿಗೊಳಿಸಲಾರದು. ಆದ್ದರಿಂದ ಸರ್ವಾತ್ಮನಾದ ಆ ವಾಸುದೇವನನ್ನೇ ಕೇಂದ್ರವಾಗಿರಿಸಿಕೊಂಡು ಎಲ್ಲಾ ಸಂದರ್ಭಗಳಲ್ಲಿಯೂ ಅವನ ಸ್ಮರಣೆ, ಕೀರ್ತನೆ, ಅನುಸಂಧಾನಾದಿಗಳು ವಕ್ತೃವಿಗೂ ಶ್ರೋತೃವಿಗೂ ಲಭಿಸುವಂಥ ಚೌಕಟ್ಟಿನಲ್ಲಿ ಒಂದು ಪುರಾಣಗ್ರಂಥವನ್ನು ರಚಿಸಿರಿ'- ಎಂದು ನಾರದರು ಉಪದೇಶಮಾಡಿದರು.

ಅನಂತರ ನಾರದರು ಮತ್ತೆ ತಮ್ಮ ಆತ್ಮಕಥೆಯನ್ನೂ ಉದಾಹರಿಸಿ ಭಗವಂತನ ಗುಣನಾಮಕೀರ್ತನೆಗಳ ಪ್ರಶಂಸೆಯನ್ನು ಮಾಡಿದರು. ಅದು ಹೀಗಿದೆ: 'ವೇದವ್ಯಾಸಮುನಿಗಳೆ, ನನ್ನ ಆತ್ಮಕಥೆಯನ್ನು ಕೇಳಿರಿ: ನಾನು ಹಿಂದೆ ಕಳೆದುಹೋದ ಯಾವದೋ ಒಂದು ಜನ್ಮದಲ್ಲಿ ವೇದಾಧ್ಯಯನಸಂಪನ್ನರಾದ ಶ್ರೋತ್ರಿಯರಾದ ಒಬ್ಬ ಬ್ರಾಹ್ಮಣರ ಮನೆಯಲ್ಲಿ ಮನೆಗೆಲಸಮಾಡುತ್ತಿದ್ದ ಹೆಂಗಸಿನ ಮಗನಾಗಿ ಹುಟ್ಟಿದ್ದೆನು. ಆಗ ಆ ಗೃಹಸ್ಥನ ಮನೆಗೆ ಒಮ್ಮೆ ಮಳೆಗಾಲದಲ್ಲಿ ಚಾತುರ್ಮಾಸ್ಯವ್ರತಕ್ಕಾಗಿ ಕೆಲವು ಮಹಾತ್ಮರು ಬಂದು ಬಿಡಾರಮಾಡಿದ್ದರು. ನಾನು ಮಗುವಾಗಿದ್ದು ಮುದ್ದಾಗಿ ಅಲ್ಪಸ್ವಲ್ಪ ಮಾತನಾಡುತ್ತಿದ್ದೆನು. ಆಗ ಆ ಋಷಿಗಳು ನನ್ನನ್ನು ಕಂಡು ಕರುಣಾಪೂರ್ಣರಾಗಿ ತಾವು ಊಟಮಾಡಿದ ಅನಂತರ ನನಗೂ ಪ್ರಸಾದರೂಪವಾಗಿ ಆಹಾರವನ್ನು ನೀಡುತ್ತಿದ್ದರು. ಅದರ ಪ್ರಭಾವದಿಂದ ನನಗೆ ಆ ಮಹಾತ್ಮರು ಪ್ರತಿದಿನವೂ ನಡೆಯಿಸುತ್ತಿದ್ದ ಪುರಾಣಶ್ರವಣದಲ್ಲಿ ಆಸಕ್ತಿಯುಂಟಾಗಿ ಭಗವದ್ಭಕ್ತರ ಹಾಗೂ ವಾಸುದೇವಭಗವಂತನ ಗುಣಕರ್ಮಲೀಲೆಗಳನ್ನು ವರ್ಣಿಸುವ ಕಥೆಗಳನ್ನು ಕೇಳುತ್ತಿದ್ದೆನು. ಹೀಗೆ ಚಿಕ್ಕಂದಿನಲ್ಲೇ ಸಾಧುಗಳ ಸಮಾಗಮದಿಂದ ಭಗವಂತನ ದಿವ್ಯಲೀಲಾಕಥೆಗಳಲ್ಲಿ ನನಗೆ ಆಸಕ್ತಿಯುಂಟಾಯಿತು. ಅನಂತರ ನನ್ನ ಮನಸ್ಸಿನಲ್ಲಿ ಆ ಭಗವಂತನ ಸ್ಮರಣೆಯೇ ಬರಲಾರಂಭಿಸಿತು. ಹೀಗೆ ಸಜ್ಜನರ ಸಹವಾಸ, ಅವರ ಉಪದೇಶಗಳು, ಹಾಗೂ ನನ್ನ ವಿಷಯದಲ್ಲಿ ಅವರುಗಳಿಗೆ ಇದ್ದ ಅಪಾರವಾದ ಕರುಣೆ- ಈ ಕಾರಣಗಳಿಂದ ನಾನು ಸತತವಾಗಿ ವಾಸುದೇವಭಗವಂತನಲ್ಲಿ ಭಕ್ತಿಯುಕ್ತನಾಗಿ ಬೆಳೆದೆನು. ಕಡೆಗೆ ಆ ಮಹಾತ್ಮರುಗಳು ತಮ್ಮ ಪ್ರಯಾಣವನ್ನು ಮುಂದುವರೆಸುವಾಗ ನನ್ನನ್ನು ಕರೆದು ಭಗವಾನ್ ನಾರಾಯಣನ ಮಂತ್ರೋಪದೇಶವನ್ನು ಮಾಡಿ ಆತ್ಮಜ್ಞಾನದ ರಹಸ್ಯವನ್ನೂ ತಿಳಿಸಿದರು. ಹೀಗೆ ನನ್ನ ಬಾಲ್ಯದಿಂದಲೂ ಸತ್ಸಂಗ, ಸಜ್ಜನರ ನಡೆವಳಿಕೆಗಳು, ಅವರ ಕೃಪೆ- ಇತ್ಯಾದಿ ಸನ್ನಿವೇಶಗಳಿಂದ ನಾನು ನಾರದನೆಂಬ ಹೆಸರಿನಿಂದ ದೇವರ್ಷಿಯಾದೆನು.'

ಆಗ ವೇದವ್ಯಾಸರು ನಾರದರನ್ನು ಕುರಿತು 'ಪೂಜ್ಯರೆ, ತಾವು ಮುಂದೇನು

ಮಾಡಿದಿರಿ'? ಎಂದು ಕೇಳಲಾಗಿ ನಾರದರು ಇಂತೆಂದರು. 'ವ್ಯಾಸಮುನಿಗಳೆ, ನಾನು ಹೀಗೆ ಆಲೋಚಿಸಿದೆನು. ಏನೆಂದರೆ ನಮ್ಮ ತಾಯಿಗೆ ನಾನೊಬ್ಬನೇ ಮಗನು. ಆದ್ದರಿಂದ ಈಗಲೆ ನಾನು ಆಕೆಯನ್ನು ಬಿಟ್ಟು ಸ್ವತಂತ್ರನಾಗಿ ಹೋಗುವದು ಸರಿಯಲ್ಲ' ಎಂದು ಸುಮ್ಮನಿದ್ದೆನು. ನನಗೇನೋ ಸಂಸಾರದಲ್ಲಿ ಆಸೆಯಿರಲಿಲ್ಲ. ಆದರೆ ದೈವಿಕವಾಗಿ ನಡೆದ ಘಟನೆ ಏನೆಂದರೆ : ಒಮ್ಮೆ ನನ್ನ ತಾಯಿಯು ಹಸುವಿನ ಹಾಲು ಕರೆಯುತ್ತಿದ್ದಾಗ ಆಕೆಯನ್ನು ಒಂದು ಹಾವು ಕಚ್ಚಿತು. ಆಕೆ ಮೃತಳಾದಳು. ಆಗ ನಾನು ಏಕಾಂಗಿಯಾದೆನು. ಇದು ಭಗವಂತನ ಇಚ್ಛೆಯೇ ಸರಿ- ಎಂದು ಭಾವಿಸಿ ಒಬ್ಬನೇ ಹೊರಟು ಒಂದು ವನವನ್ನು ಹೊಕ್ಕು ಅಲ್ಲಿಯೇ ಕುಳಿತು ಭಗವಂತನ ದಿವ್ಯಚರಣಾರವಿಂದಗಳನ್ನು ಧ್ಯಾನಮಾಡುತ್ತಾ ಇದ್ದೆನು. ಆಗ ಭಗವಾನ್ ವಾಸುದೇವನು ನನಗೆ ಪ್ರತ್ಯಕ್ಷನಾಗಿ ಕಾಣಿಸಿಕೊಳ್ಳದೆ ತನ್ನ ಗಂಭೀರವಾದ ಧ್ವನಿಯಿಂದ ಹೀಗೆಂದನು. 'ಎಲೈ ಋಷಿಯೆ, ನೀನು ಇದೇ ಜನ್ಮದಲ್ಲಿ ಪ್ರತ್ಯಕ್ಷವಾಗಿ ನನ್ನನ್ನು ನೋಡಲಾರೆ. ಆದರೆ ನನ್ನಲ್ಲಿ ನಿನಗೆ ಭಕ್ತಿಯು ದೃಢವಾಗಿದೆಯಾಗಿ ಕಾಲಾಂತರದಲ್ಲಿ ನನ್ನನ್ನು ನೋಡುವೆ' ಎಂದು ಹೇಳಿ ಅಂತರ್ಧಾನನಾದನು. ಆ ಸಮಯದಲ್ಲಿಯೇ ಭಗವಂತನು ಒಂದು ವೀಣೆಯನ್ನು ನನಗೆ ಕೊಟ್ಟು ಅನುಗ್ರಹಿಸಿದನು.' ಹೀಗೆ ಸೂತಪುರಾಣಿಕರು ಶೌನಕಾದಿಮುನಿಗಳಿಗೆ ಭಗವಂತನು ನಾರದರಿಗೆ ದರ್ಶನವನ್ನು ಕೊಟ್ಟ ಕಥೆಯನ್ನು ಹೇಳಿದರು.

* * * * *

## 4. ನಿರ್ಗುಣಭಕ್ತಿ

**ಆತ್ಮಾರಾಮಾಽಪಿ ಮುನಯಃ ನಿರ್ಗ್ರನ್ಥಾ ಅಪ್ಯುರುಕ್ರಮೇ ।**
**ಕುರ್ವನ್ತ್ಯಹೈತುಕೀಂ ಭಕ್ತಿಂ ಇತ್ಥಂಭೂತಗುಣೋ ಹರಿಃ ॥**

**ಶ್ರೀಮದ್ಭಾಗವತ 1-7-10**

ತಮ್ಮ ಆತ್ಮಸ್ವರೂಪಾನಂದದಲ್ಲಿಯೇ ಸಂತುಷ್ಟರಾಗಿರುವ ಮಹಾಮುನಿಗಳು ಯಾವ (ಸಂಸಾರ) ಬಂಧವಿಲ್ಲದವರಾಗಿದ್ದರೂ ಏನೊಂದು ಬಯಕೆಯನ್ನೂ ಭಗವಂತನಲ್ಲಿ ಬೇಡಿಕೊಳ್ಳದೆ ಕೇವಲ ಪರಭಕ್ತಿಯನ್ನು ಆಶ್ರಯಿಸಿ ವಾಸುದೇವನನ್ನು

ಸೇವಿಸುವರು. ಏಕೆಂದರೆ ಶ್ರೀಹರಿಯ ಪರಿಪೂರ್ಣವಾದ ಕಲ್ಯಾಣಗುಣಗಳು ಅವರನ್ನು ಸೆಳೆದುಕೊಳ್ಳುವವು.

**(ಶ್ರೀ ಶುಕಮಹಾಮುನಿಗಳು ಶ್ರೀ ವೇದವ್ಯಾಸರ ಪುತ್ರರು. ಅವರು ಪರೀಕ್ಷಿತ್ ರಾಜನಿಗೆ ಭಾಗವತಕಥೆಯನ್ನು- ತಮ್ಮ ತಂದೆಯು ಹೇಳಿದ್ದನ್ನು- ಪೂರ್ಣವಾಗಿ ಅವನಿಗೆ ಶ್ರವಣಮಾಡಿಸಿದರು. ಇದಕ್ಕೆ ಹಿನ್ನೆಲೆ ಏನೆಂದರೆ ಆ ಭಗವಂತನ ಕಲ್ಯಾಣಗುಣಗಳ ಸಂಪತ್ತೇ ಆಗಿರುತ್ತದೆ.)**

## ಭಾಗವತ ಕಥಾಮೃತ

ದೇವರ್ಷಿಗಳಾದ ನಾರದರಿಂದ ಅನುಗೃಹೀತರಾದ ವೇದವ್ಯಾಸಮುನಿಗಳು ಸರಸ್ವತೀನದಿಯ ಪಶ್ಚಿಮತೀರದಲ್ಲಿದ್ದ ಶಮ್ಯಾಪ್ರಾಸ- ಎಂಬ ಆಶ್ರಯದಲ್ಲಿ ಕುಳಿತು ಭಗವದನುಗ್ರಹದಿಂದ ಶ್ರೀ ಮದ್ಭಾಗವತಪುರಾಣವನ್ನು ರಚಿಸಿದರು. ಅನಂತರ ಆ ಮಹಾಪುರಾಣವನ್ನು ತಮ್ಮ ಪುತ್ರನಾದ ಶುಕಮಹರ್ಷಿಗೆ ಉಪದೇಶಿಸಿ ಕಲಿಸಿಕೊಟ್ಟರು. ಅವನಿಂದ ಅದು ಪರೀಕ್ಷಿತ್‌ರಾಜನಿಗೆ ಉಪದೇಶಿಸಲ್ಪಟ್ಟಿತು. ಈ ವಿಷಯವನ್ನು ಶೌನಕರಿಗೆ ಸೂತಪುರಾಣಿಕರು ಹೇಳಿದರು. ಆಗ ಶೌನಕರು 'ಪೂಜ್ಯರೆ, ವೇದವ್ಯಾಸರು ನಿವೃತ್ತಿಧರ್ಮನಿಷ್ಠರು. ಅವರು ಈ ಭಾಗವತ ಕಥೆಯನ್ನು ತಮ್ಮ ಪುತ್ರನಿಗೆ ಹೇಳಿದ್ದು ಹೇಗೆ'? ಎನ್ನಲು ಸೂತಪುರಾಣಿಕರು ಇಂತೆಂದರು: 'ಶೌನಕರೆ, ಕೇಳಿರಿ: ಆತ್ಮಸ್ವರೂಪವನ್ನು ವಿಚಾರಮಾಡಿ ಅದರಲ್ಲಿಯೇ ಮುಳುಗಿರುವ ಮುನಿಗಳು ಪ್ರಾಪಂಚಿಕವಾದ ಯಾವ ವ್ಯವಹಾರದ ಆಸಕ್ತಿಯೂ ಇಲ್ಲದವರಾಗಿದ್ದರೂ ಯಾವ ಉದ್ದೇಶ (ಬಯಕೆ)ಗಳಿಲ್ಲದಿದ್ದರೂ ವಾಸುದೇವಭಗವಂತನಲ್ಲಿ ದೃಢವಾಗಿ ನೆಲೆಗೊಂಡ ಪರಾಭಕ್ತಿಯನ್ನು ಸ್ವಭಾವದಿಂದಲೇ ಹೊಂದಿರುತ್ತಾರೆ. ಇದಕ್ಕೆ ಕಾರಣವೇನೆಂದರೆ: ಶ್ರೀಹರಿಯ ಕಲ್ಯಾಣಗುಣಗಳು. ಅವು ನಿಷ್ಕಾಮರಾದ ಸಾಧಕರನ್ನೂ ಸೆಳೆದುಬಿಡುವವು. ಹೀಗೆ ಭಗವಂತನಲ್ಲಿ ನಿರುಪಾಧಿಕವಾಗಿಯೇ ಭಕ್ತಿಯನ್ನು ಬೆಳೆಯಿಸಿಕೊಂಡಿದ್ದ ವೇದವ್ಯಾಸರು ''ಶ್ರೀಮದ್ಭಾಗವತ'' ಗ್ರಂಥವನ್ನು ರಚಿಸಿ ತಮ್ಮ ಪುತ್ರನಾದ ಶುಕಮಹಾಮುನಿಗೆ ಉಪದೇಶಿಸಿದರು. ಆ ಶುಕರು ಮುಂದೆ ಅದನ್ನು ಪರೀಕ್ಷಿದ್ ರಾಜನಿಗೆ ಉಪದೇಶಿಸಿದರು ಹೀಗೆ ಭಾಗವತಮಹಾಪುರಾಣವು ಅವತಾರಮಾಡಿತು.

ಸನಾತನ ಹಿಂದೂ ಧರ್ಮದಲ್ಲಿ ವೇದ- ಇತಿಹಾಸಪುರಾಣಗಳು ಪೂಜ್ಯವಾದ ಸಾಹಿತ್ಯಗಳಾಗಿವೆ. ವೇದಾರ್ಥವನ್ನು ವಿವರವಾಗಿ ಕಥಾರೂಪದಿಂದ ವಿವರಿಸುವದೇ

ಪುರಾಣಗಳ ಉದ್ದೇಶವಾಗಿದೆ. ಶ್ರೀಮದ್‌ಭಾಗವತವು ಭಾಷೆ, ಪದಪ್ರಯೋಗ, ಕಥಾನಿರೂಪಣೆ, ಅಲ್ಲಿ ಬರುವ ಭಗವತ್‌ಸ್ತೋತ್ರಗಳು, ವಿಶೇಷವಾಗಿ ಕಲಿಯುಗಕ್ಕೆ ಹತ್ತಿರವಾಗಿ ಭಗವಂತನು ಅವತಾರಮಾಡಿದ ಶ್ರೀಕೃಷ್ಣನ ದಿವ್ಯಚರಿತ್ರೆ- ಇತ್ಯಾದಿ ಪರಿಕರಗಳಿಂದ ಕೂಡಿದ್ದು ಉಳಿದ ಪುರಾಣಗಳಿಗಿಂತ ಮಿಗಿಲಾದದ್ದಾಗಿದೆ. ಆದ್ದರಿಂದ ''ವಿದ್ಯಾವತಾಂ ಭಾಗವತೇ ಪರೀಕ್ಷಾ'' ಎಂಬ ನಾಣ್ಣುಡಿಯೂ ಹುಟ್ಟಿರುತ್ತದೆ. ಹೀಗೆ ಭಾಗವತಪುರಾಣವು ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದ್ದು ಭಕ್ತಿಯಿಂದ ಅದನ್ನು ಪಠಿಸುವವರ ಹೃದಯದಲ್ಲಿ ವಾಸುದೇವಭಗವಂತನ ಸಾಕ್ಷಾತ್ಕಾರವೇ ದೊರಕುತ್ತದೆ- ಎಂಬುದರಲ್ಲಿ ಸಂಶಯವೇನೂ ಇರುವದಿಲ್ಲ.

ಈಗ ಕಥೆಯನ್ನು ಉಪಕ್ರಮಮಾಡೋಣ. ಪಾಂಡವರ ವಂಶಸ್ಥನಾದ ಪರೀಕ್ಷಿತನೆಂಬ ರಾಜನು ರಾಜ್ಯಭಾರಮಾಡುತ್ತಿದ್ದಾಗ ಒಮ್ಮೆ ಕಾಡಿನಲ್ಲಿ ಬೇಟೆಯಾಡಿ ಬಳಲಿದವನಾಗಿ ಒಬ್ಬ ಋಷಿಯ ಆಶ್ರಮಕ್ಕೆ ಬಂದು ಬಾಯಾರಿಕೆಯಾದ್ದರಿಂದ ನೀರನ್ನು ಕೇಳಿದನು. ಆಗ ಆ ಋಷಿಯು ಧ್ಯಾನಮಗ್ನನಾಗಿದ್ದುದರಿಂದ ಬಹಿರ್ಮುಖ ನಾಗಲಿಲ್ಲ. ಅತಿಥಿಗೆ ಸತ್ಕಾರವನ್ನೂ ಮಾಡಲಿಲ್ಲ. ಇದರಿಂದ ಕೋಪಗೊಂಡ ರಾಜನು ಆ ಋಷಿಯ ಕೊರಳಿಗೆ ಅಲ್ಲಿಯೇ ಸತ್ತುಬಿದ್ದಿದ್ದ ಹಾವನ್ನು ಮಾಲೆಹಾಕಿ ಹೊರಟು ಹೋದನು. ಸ್ವಲ್ಪಹೊತ್ತಿನಲ್ಲಿಯೇ ಆ ಋಷಿಯ ಮಗನು ಬಂದು ತಂದೆಯ ಕೊರಳಿನಲ್ಲಿದ್ದ ಸತತ ಹಾವನ್ನು ನೋಡಿ ಕೋಪಗೊಂಡು **''ಯಾವನು ಈ ಕೆಲಸವನ್ನು ಮಾಡಿದ್ದಾನೋ ಅವನು ಇನ್ನು ಏಳು ದಿನಗಳೊಳಗಾಗಿ ಹಾವು ಕಡಿದು ಸಾಯಲಿ''** ಎಂದು ಶಾಪವನ್ನು ಕೊಟ್ಟನು. ಇದು ರಾಜನಿಗೆ ತಿಳಿಯಿತು. ತಾನು ಮಾಡಿದ ತಪ್ಪಿಗಾಗಿ ವ್ಯಥೆಗೊಂಡು ರಾಜಭೋಗಗಳನ್ನೆಲ್ಲ ತ್ಯಜಿಸಿ ಪ್ರಾಯೋಪವೇಶವನ್ನು ಮಾಡಿ ಗಂಗಾನದಿಯ ತೀರದಲ್ಲಿ ಭಗವಂತನನ್ನು ಧ್ಯಾನಿಸುತ್ತಾ ಕುಳಿತುಬಿಟ್ಟನು. ರಾಜನ ಈ ಸ್ಥಿತಿಯನ್ನು ಗಮನಿಸಿದ ಅತ್ರಿ, ವಸಿಷ್ಠ, ಚ್ಯವನ, ವಿಶ್ವಾಮಿತ್ರ, ಭಾರದ್ವಾಜಾದಿ ಋಷಿಗಳೆಲ್ಲರೂ ಅಲ್ಲಿಗೆ ಬಂದು ನೆಲೆಸಿದರು. ಆಗ ರಾಜನು ತನ್ನ ವೃತ್ತಾಂತವನ್ನೆಲ್ಲ ಹೇಳಿದನು. ಆ ಸಮಯಕ್ಕೆ ಸರಿಯಾಗಿ ವ್ಯಾಸಮಹರ್ಷಿಗಳ ಪುತ್ರರಾದ ಶ್ರೀಶುಕಮಹಾಮುನಿಗಳು ದಯಮಾಡಿಸಿದರು. ಆಗ ಪರೀಕ್ಷಿತ್‌ರಾಜನು ಶುಕಮಹಾ ಮುನಿಗಳಿಗೆ ಸತ್ಕಾರಮಾಡಿ ನಮಸ್ಕರಿಸಿ ತನ್ನ ಪರಿಸ್ಥಿತಿಯನ್ನು ತಿಳಿಸಿದನು. ಅದನ್ನು ಕೇಳಿ ಮುನಿಗಳು ಹೀಗೆಂದರು: 'ಎಲೈ ರಾಜನೆ, ಈ ಸಂದರ್ಭದಲ್ಲಿ ನೀನು ದುಃಖಿಸ ಬೇಡ. ಹೇಗೂ ಏಳು ದಿನಗಳ ಕಾಲಾವಧಿಯು ಇದ್ದೇ ಇದೆ. ಪ್ರತಿಯೊಬ್ಬ ಮಾನವನ

ಆಯುಷ್ಯವೂ ಅಷ್ಟೇ ಆಗಿದೆ. ಹೇಗೆಂದರೆ ಮನುಷ್ಯಲೋಕದಲ್ಲಿ ಕಾಲಗಣನೆಯಂತೆ ಭಾನುವಾರದಿಂದ ಶನಿವಾರದವರೆಗೆ ಏಳು ದಿನಗಳು ಮಾತ್ರವೇ ಇರುವವು. ಯಾವನು ಮೃತನಾದರೂ ಆ ದಿನವು ಈ ಏಳರಲ್ಲಿ ಒಂದಾಗಿರುತ್ತದೆ. ಹೀಗಿರುವಲ್ಲಿ ನೀನೇಕೆ ಭಯಪಡಬೇಕು? ಖಟ್ವಾಂಗನೆಂಬ ಮಹಾರಾಜನೊಬ್ಬನಿದ್ದನು. ಅವನಿಗೆ ಯಮದೂತರು ಬಂದು ಕೇವಲ ಒಂದೂವರೆ ಮುಹೂರ್ತವೇ ನಿನ್ನ ಆಯುಷ್ಯ-ಎಂದು ತಿಳಿಸಿದಾಗ ಅಷ್ಟೇ ಸಮಯದಲ್ಲಿ ಭಗವಂತನನ್ನು ಸ್ಮರಿಸುತ್ತಾ ಮುಕ್ತಿಯನ್ನು ಪಡೆದನು. ನೀನಾದರೊ, ಏಳು ದಿನಗಳಷ್ಟು ದೀರ್ಘಾಯುಷ್ಯವುಳ್ಳವನಾಗಿದ್ದೀಯೆ. ಈ ಕಾಲವನ್ನು ಪೂರ್ಣವಾಗಿ ಭಗವಂತನ ದಿವ್ಯಕಥಾಮೃತವನ್ನು ಕೇಳುತ್ತಲೇ ಇರುವವನಾಗು. ಆಗ ನೀನು ಮುಕ್ತಿಪದವನ್ನೇ ಪಡೆಯುವೆ ಎಂದು ತಿಳಿಸಿದರು. ಆಗ ರಾಜನು ಶ್ರೀ ಶುಕಮಹಾಮುನಿಗಳನ್ನು ಗೌರವಿಸಿ ಪೂಜಿಸಿ ಅವರನ್ನೇ ತನಗೆ ಭಗವಂತನ ಕಥಾಮೃತವನ್ನು ಶ್ರವಣಮಾಡಿಸಬೇಕೆಂದು ಬೇಡಿಕೊಂಡನು. ಅವರು ಒಪ್ಪಿಕೊಳ್ಳಲಾಗಿ ಪರೀಕ್ಷಿತನು ಪ್ರಶ್ನೆಮಾಡಲಾರಂಭಿಸಿದನು.

''ಪೂಜ್ಯ ಬ್ರಹ್ಮರ್ಷಿಗಳೆ, ಮಾನವನಿಗೆ ಸಾವು ಹತ್ತಿರವಾದಾಗ ಮಾಡತಕ್ಕದ್ದು ಏನಿದೆ? ಹಾಗೂ ಆ ಕಾಲಕ್ಕೆ ಕೇಳಬೇಕಾದ ವಿಚಾರವು ಯಾವದು? ಮತ್ತು ಯಾವ ಮಂತ್ರಜಪವನ್ನು ಮಾಡಬೇಕು? ಹಾಗೂ ಮನಸ್ಸಿನಲ್ಲಿ ಸ್ಮರಿಸುತ್ತಾ ಅನುಸಂಧಾನಮಾಡಬೇಕು''? ಎಂದು ಪರೀಕ್ಷಿತನು ಕೇಳಲಾಗಿ ಶ್ರೀ ಶುಕಮಹಾ ಮುನಿಗಳು ಇಂತೆಂದರು: 'ಅಯ್ಯ ರಾಜನೆ, ಕೇಳು. ಭಗವಂತನಾದ ಶ್ರೀ ಹರಿಯ ಕಥೆಯನ್ನು ಆಲೈಸಿ ಭಕ್ತಿಯಿಂದ ಕೇಳುವದು, ಆ ಮಹಾತ್ಮನ ದಿವ್ಯನಾಮಗಳನ್ನು ಗಟ್ಟಿಯಾಗಿ ಉಚ್ಚರಿಸುವದು, ಅಥವಾ ಮನಸ್ಸಿನಲ್ಲಿಯೇ ನೆನೆಯುವದು-ಇವುಗಳನ್ನೇ ಕೈಗೊಳ್ಳಬೇಕು. ಆ ಭಗವಂತನ ಕಥಾಮೃತ ಶ್ರವಣ, ನಾಮಸ್ಮರಣೆಗಳಿಂದಲೇ ಕೃತಕೃತ್ಯನಾಗಬಹುದು- ಎನ್ನಲಾಗಿ ಪರೀಕ್ಷಿತನು ಶುಕ ಮಹಾಮುನಿಗಳನ್ನು ಕುರಿತು ''ಪೂಜ್ಯ ಮಹರ್ಷಿಗಳೇ, ತಾವೇ ಆ ಭಗವಂತನ ಗುಣಕರ್ಮಲೀಲೆಗಳನ್ನು ತಿಳಿಸುವ ಭಗವತ್‌ಕಥಾಮೃತವನ್ನು ಹೇಳೋಣವಾಗಬೇಕು; ನಾನು ಆಲೈಸಿ ಕೇಳಿ ಕೃತಾರ್ಥ ನಾಗುತ್ತೇನೆ'' ಎಂದನು. ಆಗ ಶ್ರೀ ಶುಕರು ಕಥಾರಂಭ ಮಾಡಿದರು.

* * * * *

## 5. ಕಲಿಕಲ್ಮಷ ಪರಿಹಾರೋಪಾಯ

ಯತ್ ಕೀರ್ತನಂ ಯತ್ ಸ್ಮರಣಂ ಯದೀಕ್ಷಣಂ
ಯದ್ ವಂದನಂ ಯತ್‌ಶ್ರವಣಂ ಯದರ್ಹಣಮ್ ।
ಲೋಕಸ್ಯ ಸದ್ಯೋ ವಿಧುನೋತಿ ಕಲ್ಮಷಂ
ತಸ್ಮೈ ಸುಭದ್ರಶ್ರವಸೇ ನಮೋ ನಮಃ ॥

ಶ್ರೀ ಮದ್ಭಾಗವತ 2-4-15

ಯಾವ ಆ ವಾಸುದೇವಭಗವಂತನ ನಾಮಕೀರ್ತನ, ಸ್ಮರಣ, ದರ್ಶನ, ನಮಸ್ಕಾರ, ಕಥಾಶ್ರವಣ, ಪೂಜೆ (ಅರ್ಚನೆ)- ಇವುಗಳು ಲೋಕದ ಜನರ ಪಾಪವನ್ನು ಕೂಡಲೆ ನಾಶಗೊಳಿಸುವದೋ ಅಂಥ ಮಂಗಳಪ್ರದಾನದ (ಪರಮಾತ್ಮನಿಗೆ) ಮತ್ತೆ ಮತ್ತೆ ನಮಸ್ಕಾರಗಳು.

(ಕಲಿಯುಗದಲ್ಲಿ ಭಗವಂತನ ನಾಮಕೀರ್ತನೆಯಿಂದಲೇ ಮಾನವನು ಉದ್ಧಾರವಾಗುತ್ತಾನೆ. ಹಾಗೆಯೇ ಆ ಮಹಾಮಹಿಮನ ದರ್ಶನ, ಕಥಾಶ್ರವಣಾದಿಗಳೂ ಸಾಧಕನನ್ನು ಕೃತಾರ್ಥನನ್ನಾಗಿ ಮಾಡಬಲ್ಲವು. ಎಲ್ಲಕ್ಕಿಂತ ಮಿಗಿಲಾಗಿ ಆ ಭಗವಂತನ ಸ್ಮರಣೆಯು (ನೆನಪುಮಾಡಿಕೊಳ್ಳುವದು) ಸರಳವಾದ ಸಾಧನವಾಗಿದೆ. ಆದ್ದರಿಂದ ಆ ಭಗವಂತನನ್ನುಎಂದಿಗೂ ಮರೆಯದೆ ಇರುವವರಾಗೋಣ.)

### ಭಾಗವತ ಕಥಾರಂಭ

ಶ್ರೀ ಶುಕಮಹಾಮುನಿಗಳು ಪರೀಕ್ಷಿತ್‌ರಾಜನನ್ನು ಕುರಿತು ಹೀಗೆಂದರು: ''ಎಲೈ ರಾಜನೆ, ಕೇಳು. ಭಗವಂತನ ಗುಣಕರ್ಮಲೀಲೆಗಳನ್ನು ತಿಳಿಸುವೆನು. ಈ ವಿಷಯದಲ್ಲಿ ಹಿಂದೆ ನಾರದರು ಚತುರ್ಮುಖಬ್ರಹ್ಮನನ್ನು ಸಂದರ್ಶಿಸಿ ವಾಸುದೇವಭಗವಂತನ ಗುಣಕರ್ಮಲೀಲೆಗಳನ್ನು ವಿವರಿಸಿ ಹೇಳಬೇಕೆಂದು ಕೇಳಿದಾಗ ಆ ಬ್ರಹ್ಮದೇವನು ನಾರದರಿಗೆ ಏನು ಹೇಳಿದನೋ ಅದನ್ನೇ ನಿನಗೆ ಹೇಳುತ್ತೇನೆ. ಒಮ್ಮೆ ನಾರದರು ಬ್ರಹ್ಮನನ್ನು ಬಳಿಸಾರಿ ಹೀಗೆಂದರು: "ಸೃಷ್ಟಿಕರ್ತನಾದ ಬ್ರಹ್ಮದೇವನೆ, ನೀನು ಈ ಜಗತ್ತನ್ನೆಲ್ಲ ನಾಮರೂಪಾತ್ಮಕವಾಗಿ ವಿಂಗಡಿಸಿ ನಾನಾ ಶರೀರಗಳುಳ್ಳ ಜೀವರುಗಳನ್ನು ಸೃಷ್ಟಿಸಿರುವೆ. ಈ ಮಹತ್ಕಾರ್ಯವು ಎಂಥವರಿಗೂ ಆಶ್ಚರ್ಯವನ್ನುಂಟುಮಾಡುತ್ತಿದೆ.

ಉದಾಹರಣೆಗೆ ಹಸುವು ಕಪ್ಪುಬಣ್ಣದ್ದಾದರೂ ಹಾಲು ಬಿಳುಪಾಗಿಯೇ ಇರುತ್ತದೆ. ಗಿಡವು ಹಸುರಾಗಿದ್ದರೂ ಕಣಗಿಲೆ ಹೂವು ಕೆಂಪಾಗಿರುತ್ತದೆ. ಇದೇ ರೀತಿ ಸೃಷ್ಟಿವೈಚಿತ್ರ್ಯವು ಅಪಾರವಾಗಿದೆ. ಇವುಗಳನ್ನೆಲ್ಲ ಸೃಷಷ್ಟಿಮಾಡಿರುವದರ ರಹಸ್ಯವೇನು? ಇನ್ನು ಪಶುಪ್ರಾಣಿಗಳು, ಗಿಡಮರಗಳು, ಸೂರ್ಯಚಂದ್ರನಕ್ಷತ್ರಗಳು, ಮಾನವನಲ್ಲಿರುವ ಅಂತಃಕರಣ- ಇಂದ್ರಿಯಾದಿಗಳು, ಹೀಗೆ ಸೃಷ್ಟಿಯೆಲ್ಲವೂ ವೈಚಿತ್ರ್ಯದಿಂದ ಕೂಡಿದ್ದು ಚೇತನಾಚೇತನರೂಪವಾಗಿರುತ್ತದೆ. ಸ್ಥಾವರ-ಜಂಗಮ ಭೇದಗಳುಳ್ಳದ್ದಾಗಿದೆ. ಇಂಥ ಜಗತ್ತು ಹೇಗೆ ಉಂಟಾಯಿತೆಂಬುದನ್ನು ಮನಸ್ಸಿನಿಂದ ಯೋಚಿಸಲೂ ಸಹ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಈ ಜಗತ್ತಿನ ಸೃಷ್ಟಿಕರ್ತನೆನಿಸಿರುವ ನೀನು ಇದರ ರಹಸ್ಯವೇನೆಂಬುದನ್ನು ದಯಮಾಡಿ ವಿವರಿಸುವವನಾಗಬೇಕು'' ಎಂದು ಪ್ರಶ್ನೆ ಮಾಡಿದನು.

ಆಗ ಬ್ರಹ್ಮದೇವನು ಇಂತೆಂದನು : ''ಎಲೈ ನಾರದನೆ, ನಿನ್ನ ಪ್ರಶ್ನೆಗಳು ಸಮಂಜಸವಾಗಿವೆ. ಹೇಗೆಂದರೆ ನಿನ್ನ ಪ್ರಶ್ನೆಗಳಿಂದ ಪ್ರಚೋದಿತನಾದ ನಾನು ಭಗವಂತನ ಗುಣಕರ್ಮಲೀಲೆಗಳನ್ನು ಕೊಂಡಾಡುವ ಪುರಾಣಕಥೆಗಳನ್ನು ಹೇಳುವ ಸಂದರ್ಭವು (ನನಗೆ) ಒದಗಿರುತ್ತದೆ. ಆದರೆ ಆ ಭಗವಂತನ ಮಹಿಮೆಯು ಅಪಾರವಾಗಿದ್ದು ನನಗೆ ತಿಳಿದಷ್ಟನ್ನು ನಿನಗೆ ವಿವರಿಸುವೆನು. ಪ್ರಪ್ರಥಮವಾಗಿ ಆ ಭಗವಂತನನ್ನು ಸ್ತುತಿಸಿ ಮುಂದುವರೆಯುವೆನು, ಕೇಳುವವನಾಗು.

**ತಸ್ಮೈ ನಮೋ ಭಗವತೇ ವಾಸುದೇವಾಯ ಧೀಮಹಿ।**
**ಯನ್ಮಾಯಯಾ ದುರ್ಜಯಯಾ ಮಾಂ ಬ್ರುವನ್ತಿ ಜಗದ್ಗುರುಮ್॥**
**ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ।**
**ವಾಸುದೇವಾತ್ ಪರೋ ಬ್ರಹ್ಮನ್ ನ ಚಾನ್ಯೋಽರ್ಥೋಽಸ್ತಿ ತತ್ತ್ವತಃ॥**

''ಆ ಭಗವಂತನಾದ ವಾಸುದೇವನಿಗೆ ನಮಸ್ಕಾರಗಳು. ಹಾಗೂ ಅವನನ್ನು ಧ್ಯಾನಿಸೋಣ. ಆ ಪ್ರಭುವಿನ, ಗೆಲ್ಲಲಸಾಧ್ಯವಾದ ಮಾಯೆ (ಮಹಿಮೆ) ಯಿಂದ ಜೀವರುಗಳೆಲ್ಲರೂ ನನ್ನನ್ನು ಜಗುದ್ಗುರುವೆಂದು ಹೇಳುವರು. (ಆದರೆ) ಸೃಷ್ಟಿಯಲ್ಲಿರುವ ಎಲ್ಲಾ ವಸ್ತುಗಳು, ಕ್ರಿಯೆಗಳು, ಕಾಲ, ಆಯಾ ಜೀವರುಗಳ ಸ್ವಭಾವ, ಎಲ್ಲವೂ ವಾಸುದೇವಭಗವಂತನಿಗಿಂತ ಬೇರೆಯಾದದ್ದು ಯಾವದೂ ಇರುವದಿಲ್ಲ. ಈ

ಸೃಷ್ಟಿಯಲ್ಲಿರುವ ವಿದ್ಯಾಪ್ರಪಂಚದಲ್ಲಿನ ವೇದಗಳೆಲ್ಲವೂ ನಾರಾಯಣನನ್ನು ತಿಳಿಸುತ್ತವೆ; ಹಾಗೂ ಸ್ತುತಿಸುತ್ತವೆ. ಹಾಗೆಯೇ ದೇವತೆಗಳು ನಾರಾಯಣನ ಅಂಶಸಂಭೂತರು. ಲೋಕಗಳೆಲ್ಲವೂ ನಾರಾಯಣನ ಅಧೀನವು. ಯಜ್ಞಾದಿಗಳು ಕೂಡ ನಾರಾಯಣನನ್ನು ಕುರಿತದ್ದಾಗಿವೆ. ಇನ್ನು ಯೋಗ, ತಪಸ್ಸು, ಜ್ಞಾನ, ಇವೆಲ್ಲವೂ ನಾರಾಯಣನನ್ನೇ ಗುರಿಯಾಗಿ ಉಳ್ಳದ್ದಾಗಿರುವವು. ಆದ್ದರಿಂದ ವಾಸುದೇವನಿಗಿಂತ ಬೇರೆಯಾದದ್ದು ಏನೊಂದೂ ನಿಜವಾಗಿ ಇರುವದೇ ಇಲ್ಲ'' ಹೀಗೆಂದು ಬ್ರಹ್ಮದೇವನು ನಾರದರಿಗೆ ಉಪದೇಶಮಾಡಿದನು.

ಈಗ ಪರೀಕ್ಷಿತನು ಶುಕಮಹಾಮುನಿಗಳನ್ನು ಕುರಿತು ಮತ್ತೆ ಪ್ರಶ್ನೆಮಾಡಿದನು. ''ಪೂಜ್ಯರೆ, ಬ್ರಹ್ಮನಾದರೂ ಆ ಭಗವಂತನ ಪರಮತತ್ತ್ವವನ್ನು ಅರಿತುಕೊಂಡದ್ದು ಹೇಗೆ? ಮತ್ತು ಹದಿನಾಲ್ಕು ಲೋಕಗಳನ್ನುಳ್ಳ ವಿಸ್ತಾರವಾದ ಬ್ರಹ್ಮಾಂಡವನ್ನು ಸೃಷ್ಟಿಮಾಡಿದ್ದು ಹೇಗೆ? ತಿಳಿಸೋಣವಾಗಬೇಕು'' ಎಂದು ಕೇಳಿದನು. ಆಗ ಶುಕರು ಇಂತೆಂದರು : ''ಮಹಾರಾಜ, ನಿನ್ನ ಪ್ರಶ್ನೆಯು ಸಮಂಜಸವಾಗಿದೆ. ಆದ್ದರಿಂದ ಉತ್ತರವನ್ನು ಹೇಳುವೆನು, ಕೇಳು''- ಎಂದು ಕಥೆಯನ್ನು ಮುಂದುವರಿಸಿದರು.

ಸೃಷ್ಟಿಯಲ್ಲಿ ಮೊದಲು ಹುಟ್ಟಿದ ಚತುರ್ಮುಖಬ್ರಹ್ಮನಿಗೆ ಅವನೊಬ್ಬನೇ ಆದದ್ದರಿಂದ ಏನೂ ಹೊಳೆಯಲಿಲ್ಲ. ಆಗ ಭಗವಂತನೇ ಬ್ರಹ್ಮನಿಗೆ ಪ್ರೇರಣೆಮಾಡಿ 'ತಪಸ್ಸುಮಾಡು' ಎಂದು ಅಶರೀರವಾಣಿಯಿಂದ ತಿಳಿಸಿದನು. ಅದರಂತೆ ಬ್ರಹ್ಮನು ತಪಸ್ಸು ಮಾಡಲಾಗಿ ಏನೂ ತಿಳಿಯಲಿಲ್ಲ. ಆಗ ಬ್ರಹ್ಮನು ತಪಸ್ಸನ್ನು ಮತ್ತೆ ಮುಂದುವರೆಸಿದನು. ದೇವಲೋಕದ ಅಳತೆಯಿಂದ ಒಂದು ಸಹಸ್ರವರ್ಷಗಳ ಕಾಲ ಬ್ರಹ್ಮನು ತಪಸ್ಸುಮಾಡಲಾಗಿ ಆಗ ಭಗವಂತನು ತನ್ನ ವೈಕುಂಠಲೋಕವನ್ನೇ ಬ್ರಹ್ಮನಿಗೆ ತೋರಿಸಿ ಸಂದರ್ಶನವನ್ನು ನೀಡಿದನು ಮತ್ತು ವರವನ್ನು ಕೊಟ್ಟನು. ಅನಂತರ ಪರಮರಹಸ್ಯವಾದ ಜ್ಞಾನವನ್ನು ಉಪದೇಶಮಾಡಿದನು. ಅದು ನಾಲ್ಕು ಶ್ಲೋಕಗಳಲ್ಲಿ ಅಡಕವಾಗಿದೆ. ಇದನ್ನು 'ಚತುಶ್ಶ್ಲೋಕೀ ಭಾಗವತ'ವೆಂದು ಕರೆಯುತ್ತಾರೆ. ಈ ಶ್ಲೋಕಗಳು ಹೀಗಿವೆ:-

**ಅಹಮೇವಾಸಮೇವಾಗ್ರೇ ನಾನ್ಯದ್ ಯತ್ ಸದಸತ್ ಪರಮ್ ।**
**ಪಶ್ಚಾದಹಂ ಯದೇತಚ್ಚ ಯೋಽವಶಿಷ್ಯೇತ ಸೋಽಸ್ಮ್ಯಹಮ್ ॥**

ಋತೇಽರ್ಥಂ ಯತ್ ಪ್ರತೀಯೇತ ನ ಪ್ರತೀಯೇತ ಚಾತ್ಮನಿ।
ತದ್ವಿದ್ಯಾದಾತ್ಮನೋ ಮಾಯಾಂ ಯಥಾಭಾಸೋ ಯಥಾ ತಮಃ॥
ಯಥಾ ಮಹಾನ್ತಿ ಭೂತಾನಿ ಭೂತೇಷೂಚ್ಚಾವಚೇಷ್ವನು।
ಪ್ರವಿಷ್ಟಾನ್ಯಪ್ರವಿಷ್ಟಾನಿ ತಥಾ ತೇಷು ನ ತೇಷ್ವಹಮ್॥
ಏತಾವದೇವ ಜಿಜ್ಞಾಸ್ಯಂ ತತ್ತ್ವಜಿಜ್ಞಾಸುನಾತ್ಮನಃ।
ಅನ್ವಯವ್ಯತಿರೇಕಾಭ್ಯಾಂ ಯತ್ ಸ್ಯಾತ್ ಸರ್ವತ್ರ ಸರ್ವದಾ॥

(1) ಸೃಷ್ಟಿಗೆ ಮುಂಚೆ ನಾನೊಬ್ಬನೇ (ಬ್ರಹ್ಮ) ಇದ್ದೆನು. ಬೇರೇನೂ ಇರಲಿಲ್ಲ. ಯಾವದು ಇದೆ-ಇಲ್ಲ-ಎಂಬಿವುಗಳಿಗಿಂತ ಮಿಗಿಲಾದದ್ದೋ ಸತ್ತೂ ಅಸತ್ತೂ ಅಲ್ಲದೆ ಅವುಗಳನ್ನು ಮೀರಿದ್ದೋ ಕಡೆಗೆ ಯಾವದು ಉಳಿದದ್ದೋ ಅದೇ ನಾನಾಗಿರುವೆನು. (2) ಪದಾರ್ಥವಿಲ್ಲದಿದ್ದರೂ ಇದ್ದಂತೆ ಯಾವದು ಕಾಣುವದೋ, ಆದರೆ ಆತ್ಮಸ್ವರೂಪದಲ್ಲಿ ಅದು ಇಲ್ಲವೋ ಅದನ್ನು ಕಲ್ಪಿತಹಾವಿನಂತೆ ಅಥವಾ ಕತ್ತಲೆಯಂತೆ ತಿಳಿಯಬೇಕು. (3) ಹೇಗೆ ಆಕಾಶವೇ ಮುಂತಾದ ವಸ್ತುಗಳು ಸೃಷ್ಟಿಯಲ್ಲಿರುವ ಪದಾರ್ಥಗಳಲ್ಲಿ ತಾರತಮ್ಯದಿಂದ ಕಾಣುವವೋ ಹಾಗೆ ಬ್ರಹ್ಮವು ನಾಮರೂಪಗಳುಳ್ಳ ವಸ್ತುಗಳಲ್ಲಿ ಪ್ರವೇಶಿಸಿದಂತೆ ಕಾಣುತ್ತದೆ. ಆದರೆ ಬ್ರಹ್ಮವು ಎಲ್ಲಿಯೂ ನಿಜವಾಗಿ ಪ್ರವೇಶಿಸಿಲ್ಲ (4) ತತ್ತ್ವವಿಚಾರಕನು ತನ್ನಲ್ಲಿಯೇ ತಾನು ವಿಚಾರಮಾಡ ಬೇಕಾದುದು ಇಷ್ಟು ಮಾತ್ರವೇ ಆಗಿರುವದು. ಬ್ರಹ್ಮವಿರುವಲ್ಲಿ ಜಗತ್ತು, ಜಗತ್ತಿಲ್ಲವಾದಾಗಲೂ ಬ್ರಹ್ಮದ ಇರುವಿಕೆ (ಸಾಕ್ಷಿ) ಎನಿಸುವದು. ಹೀಗೆ ಯಾವದು ಎಂದೆಂದಿಗೂ ಎಲ್ಲೆಲ್ಲಿಯೂ ಇದ್ದುಕೊಂಡಿದೆಯೋ ಅದೇ ಆತ್ಮನು. ಅದೇ ತಾನು- ಎಂಬಿದೇ ನಿಶ್ಚಲತತ್ತ್ವವು. ಜ್ಞಾನಿ ವಿಚಾರಮಾಡಿ ಈ ತತ್ತ್ವದಲ್ಲಿ ನೆಲೆನಿಲ್ಲಬೇಕು- ಹೀಗೆಂದು ಪರಮಾತ್ಮನು ಬ್ರಹ್ಮನಿಗೆ ಉಪದೇಶಮಾಡಿರುತ್ತಾನೆ- ಎಂದು ಶುಕಮಹಾ ಮುನಿಗಳು ಪರೀಕ್ಷಿತ್ ರಾಜನಿಗೆ ಉಪದೇಶಿಸಿದರು.

* * * * *

# 6. ಭಗವಂತನ ಮಾಯೆ

ಬ್ರಹ್ಮನ್ ಕಥಂ ಭಗವತಃ ಚಿನ್ಮಾತ್ರಸ್ಯಾವಿಕಾರಿಣಃ।
ಲೀಲಯಾ ಚಾಪಿ ಯುಜ್ಯೇರನ್ ನಿರ್ಗುಣಸ್ಯ ಗುಣಾಃ ಕ್ರಿಯಾಂ॥
ಸೇಯಂ ಭಗವತೋ ಮಯಾ ಯನ್ನಯೇನ ವಿದ್ಧ್ಯುಧತೆ।
ಈಶ್ವರಸ್ಯ ವಿಮುಕ್ತಸ್ಯ ಕಾರ್ಪಣ್ಯಮುತ ಬಂಧನಮ್॥

ಶ್ರೀ ಮದ್ಭಾಗವತ 3-7-2, 9

(ವಿದುರನ ಪ್ರಶ್ನೆ) ''ಪೂಜ್ಯರೆ, ಚಿನ್ಮಾತ್ರಸ್ವರೂಪನೂ ವಿಕಾರರಹಿತನೂ ನಿರ್ಗುಣನೂ ಆಗಿರುವ ಪರಮಾತ್ಮನಿಗೆ ಲೀಲೆಯ ದೃಷ್ಟಿಯಿಂದಲೂ ತ್ರಿಗುಣಗಳ ಕ್ರಿಯೆಗಳು ಹೇಗೆ ಹೊಂದಿಯಾವು?'' (ಮೈತ್ರೇಯರ ಉತ್ತರ) (ಅಯ್ಯ ಕೇಳು) ಆ ಲೀಲೆಯೇ ಭಗವಂತನ 'ಮಾಯೆ'ಯೆನಿಸಿರುತ್ತದೆ. ಆದು ನೀತಿ (ತರ್ಕ)ಗೆ ಹೊಂದುಗಡೆಯಾಗುವಂತಿಲ್ಲ. ಇನ್ನು ನಿತ್ಯಮುಕ್ತನಾದ ಆ ಭಗವಂತನಿಗೆ ಕಾರ್ಪಣ್ಯವಾಗಲಿ ಸಂಸಾರಬಂಧವಾಗಲಿ ಎಲ್ಲಿದ್ದೀತು?

**(ಸೃಷ್ಟಿಯಲ್ಲಿ ಕಂಡುಬರುವ ಗುಣಕರ್ಮಲೀಲೆಗಳಿಗೆ ಭಗವಂತನೇ ಆಧಾರವು. ಆದರೆ ಈ ಸಂಸಾರಸಂಬಂಧವಾದ ಯಾವ ಗುಣಕರ್ಮಗಳೂ ಭಗವಂತನಿಗೆ ಅಂಟಿರುವದಿಲ್ಲ. ಮನುಷ್ಯನ ನೆರಳು ಮನುಷ್ಯನನ್ನು ಆಶ್ರಯಿಸಿಯೇ ಕಂಡುಬಂದರೂ ಅದು ಹೇಗೆ ಅವನಿಗೆ ಅಂಟಿರುವದಿಲ್ಲವೋ ಹಾಗೆಯೇ ಭಗವಂತನ ಆಶ್ರಯದಲ್ಲಿ ತೋರುವ ಗುಣಕರ್ಮಲೀಲೆಗಳೂ ಅವನಿಗೆ ಅಂಟಿರುವದಿಲ್ಲ.)**

## ವಿದುರ- ಉದ್ಧವರ ಸಂವಾದ

ಶ್ರೀ ಶುಕ್ರಮಹಾಮುನಿಗಳು ಪರೀಕ್ಷಿತ್‌ರಾಜನಿಗೆ ತಮ್ಮ ಉಪದೇಶವನ್ನು ಮುಂದುವರೆಸುತ್ತಾ ಹೀಗೆಂದರು: 'ಎಲೈರಾಜನೆ, ಕೇಳು. ಧೃತರಾಷ್ಟ್ರನ ಸೋದರನಾದ ವಿದುರನು ಮಹಾಭಾರತದ ಯುದ್ಧದ ಅನಂತರ ಅವನನ್ನು ಆಗಲಿ ಉದ್ಧವನೆಂಬ ಶ್ರೀಕೃಷ್ಣನ ಭಕ್ತನೊಡನೆ ಸಂಬಂಧವನ್ನು ಬೆಳೆಸಿ ಸ್ವಲ್ಪಕಾಲ ವಿದುರನು ಉದ್ಧವನಿಂದ ಭಗವಂತನ ಗುಣಕಥನವನ್ನು ಶ್ರವಣಮಾಡಿ ಅನಂತರ ಮೈತ್ರೇಯರೆಂಬ ಮಹಾತ್ಮರನ್ನು ಸಂಧಿಸಿ ಪ್ರಶ್ನೆಮಾಡಿದನು: ''ಪೂಜ್ಯರೆ, ಈವರೆಗೆ ನಾನು ಭಗವಂತನ ಮಹಿಮೆಯನ್ನು

ಸ್ವಲ್ಪಮಟ್ಟಿಗೆ ಕೇಳಿದ್ದೇನೆ. ಆದರೂ ನನ್ನ ಕೆಲವು ಸಂಶಯಗಳು ಪರಿಹಾರವಾಗಿಲ್ಲ. ಅವುಗಳನ್ನು ನಿಮ್ಮ ಮುಂದೆ ಇಡಲು ಇಚ್ಛಿಸುತ್ತೇನೆ. ಮೊದಲನೆಯದಾಗಿ ಭಗವಂತನು ಸಚ್ಚಿದಾನಂದಸ್ವರೂಪನೂ ವಿಕಾರಗಳಿಲ್ಲದವನೂ ಆಗಿರುವನೆಂದು ಕೇಳಿದ್ದೇನೆ. ಮತ್ತು ಅವನು ಎಲ್ಲಾ ಜೀವರುಗಳ ಆತ್ಮನೂ ಆಗಿದ್ದಾನೆ. ಆದ್ದರಿಂದ ಆ ಭಗವಂತನಿಗೆ ಕ್ಲೇಶ, ದುಃಖಾದಿಗಳ ಸಂಪರ್ಕಗಳಿರಲಾರವು. ಆದರೆ ಅವನ ಅವತಾರಲೀಲೆಗಳಲ್ಲಿ ಜನಸಾಮಾನ್ಯರಂತೆಯೇ ಕ್ಲೇಶ-ದುಃಖಾದಿಗಳನ್ನು ಪ್ರಕಟಿಸಿರುತ್ತಾನೆ. ಇದು ಹೇಗೆ ಸರಿ? ನನ್ನ ಈ ಸಂಶಯವನ್ನು ತಾವು ಪರಿಹಾರ ಮಾಡಬೇಕು''- ಎಂದು ಪ್ರಾರ್ಥಿಸಿಕೊಂಡನು.

ಆಗ ಮೈತ್ರೇಯಮಹಾಮುನಿಗಳು ಹೀಗೆಂದರು : ' ಎಲೈ ವಿದುರನೆ, ಕೇಳು: ನೀನು ತತ್ತ್ವಜಿಜ್ಞಾಸುವಾಗಿದ್ದು ಈ ಪ್ರಶ್ನೆಯನ್ನು ಕೇಳಿರುತ್ತೀಯೆ. ಆಗಲಿ. ನಿನ್ನ ಪ್ರಶ್ನೆಗೆ ಉತ್ತರವು ಹೀಗಿದೆ :

> ಸೇಯಂ ಭಗವತೋ ಮಾಯಾ ಯನ್ನಯೇನ ವಿರುಧ್ಯತೇ ।
> ಈಶ್ವರಸ್ಯ ವಿಮುಕ್ತಸ್ಯ ಕಾರ್ಪಣ್ಯಮುತ ಬಂಧನಮ್ ॥

ಭಗವಂತನ ಗುಣಕರ್ಮಲೀಲೆಗಳನ್ನುವರ್ಣಿಸುವಾಗ ಅವನಲ್ಲಿಯೂ ಅವಿದ್ಯಾಕಲ್ಪಿತವಾದ ನಾಮರೂಪಾತ್ಮಕವಾದ 'ಮಾಯೆ'ಯನ್ನು ಆಶ್ರಯಿಸಬೇಕಾಗುತ್ತದೆ. ಆದರೆ ಈ ಲೀಲೆಗಳು ಸತ್ಯವಲ್ಲ. ಈ ಗುಟ್ಟನ್ನು ಜ್ಞಾನಿಗಳು ಮಾತ್ರ ಬಿಡಿಸಿಕೊಂಡಿರುತ್ತಾರೆ. ಮಾಯೆಯು ನ್ಯಾಯದ ಚೌಕಟ್ಟಿಗೆ ಒಳಪಡುವದಿಲ್ಲ. ಆದ್ದರಿಂದ ಮಾಯೆಯನ್ನು ಮೀರಿ ನಿಂತಿರುವ ಭಗವಂತನು ಎಂದೆಂದಿಗೂ ನಿತ್ಯಶುದ್ಧಬುದ್ಧಮುಕ್ತಸ್ವಭಾವನೇ ಆಗಿರುತ್ತಾನೆ. ಒಬ್ಬ ಸಾಹುಕಾರನು ನಾಟಕದಲ್ಲಿ ಕಳ್ಳನ ಪಾತ್ರವನ್ನು ಧರಿಸಿ ವ್ಯವಹರಿಸಿದರೆ ಅವನು ಕಳ್ಳನೆನಿಸುತ್ತಾನೇನು? ಎಂದಿಗೂ ಇಲ್ಲ. ಇನ್ನು ಆ ವೇಷದಲ್ಲಿದ್ದಾಗಲೂ ಅವನಿಗೇನೂ ಕಳ್ಳನ ಅಪರಾಧವು ಅಂಟಿರುವದಿಲ್ಲ. ಹಾಗೆಯೇ ಸೃಷ್ಟಿಯಲ್ಲಿ ಭಗವಂತನು ಆಯಾ ಸಂದರ್ಭಕ್ಕೆ ತಕ್ಕಂತೆ ವ್ಯವಹರಿಸಿದರೂ ಅದು ಅವನ ನಿಜಸ್ವರೂಪವೂ ಅಲ್ಲ. ಸ್ವಭಾವವೂ ಅಲ್ಲ. ಆದರೂ ಲೋಕೋದ್ಧಾರಕ್ಕಾಗಿ ಹಾಗೆ ಸಂದರ್ಭಕ್ಕೆ ತಕ್ಕಂತೆ ನಟನೆ ಮಾಡಿರುತ್ತಾನೆ. ಈ ಲೀಲೆಯನ್ನು ಅವನ ನಿಜಸ್ವರೂಪ-ಸ್ವಭಾವಗಳೊಡನೆ ಸಮನ್ವಯಮಾಡಲಾಗುವದಿಲ್ಲ. ಬಿಸಿಲುಕಾಲದಲ್ಲಿ ಹೊರಗೆ ಓಡಾಡುವಾಗ ಮನುಷ್ಯ, ಅವನ ನೆರಳು- ಎರಡೂ ಕಾಣಿಸಿಕೊಂಡು

ವ್ಯವಹರಿಸಲ್ಪಡುತ್ತವೆ. ಆದರೆ ನೆರಳೆಂಬುದು ಎರಡನೆಯದಲ್ಲವೇ ಅಲ್ಲ. ಇದರಂತೆಯೇ ಜಗತ್ತೆಲ್ಲವೂ ಭಗವಂತನ ಸ್ವರೂಪವನ್ನು ಬಿಟ್ಟು ಬೇರೆಯಾಗಿರುವದಿಲ್ಲ ಎಂದು ತಿಳಿಸಿದರು.

ಆಗ ವಿದುರನು ಹೀಗೆಂದನು : ''ಪೂಜ್ಯರೆ, ತಮ್ಮ ಪರಮವಾದ ಉಪದೇಶದಿಂದ ನನ್ನ ಸಂಶಯಗಳು ಪರಿಹಾರವಾದವು. ಲೋಕದಲ್ಲಿ ಏನೂ ತಿಳಿಯದ ಮೂಢನಾಗಲಿ, ಅಥವಾ ಪರಿಪೂರ್ಣವಾಗಿ ಭಗವಂತನ ನಿಜತತ್ತ್ವವನ್ನು ಬಲ್ಲವನಾಗಲಿ- ಇಬ್ಬರೂ ಸುಖಿಗಳೆಂದೇ ಹೇಳಬಹುದು. ಆದರೆ ಅರ್ಧಭಾಗದಷ್ಟು ವಿಚಾರವನ್ನು ಬಲ್ಲವನು ಮಾತ್ರ ಸಂಶಯಕ್ಕೆ ಒಳಗಾಗಿ ಬಹಳ ಕ್ಲೇಶಪಡುತ್ತಾನೆ. ನಾನು ಅಂಥವರಲ್ಲಿ ಒಬ್ಬನಾಗಿದ್ದೇನೆ. ತಾವು ಭಗವಂತನ ಗುಣಕರ್ಮಲೀಲೆಗಳನ್ನೂ ಅವನ ಸೃಷ್ಟ್ಯಾದಿಕರ್ಮಗಳ ಸ್ವರೂಪವನ್ನೂ ಬಲ್ಲವರಾಗಿರುತ್ತೀರಿ. ಆದ್ದರಿಂದ ದಯಮಾಡಿ ನನಗೆ ಆ ಭಗವಂತನ ದಿವ್ಯಲೀಲೆಗಳನ್ನು ಹೇಳೋಣವಾಗಬೇಕು'' ಎಂದು ಪ್ರಶ್ನೆಮಾಡಿದನು.

ಆಗ ಮೈತ್ರೇಯರು ಜಗತ್ತಿನ ಸೃಷ್ಟಿಕಾರ್ಯವನ್ನು ಭಗವಂತನು ಕೈಗೊಂಡ ಕಥೆಯನ್ನು ಹೇಳಲಾರಂಭಿಸಿದರು. ಪುರಾಣಗಳಲ್ಲಿ ಚತುರ್ಮುಖಬ್ರಹ್ಮನನ್ನು ಜಗತ್ತಿನ ಸೃಷ್ಟಿಕರ್ತನೆಂದೂ ವಿಷ್ಣುವನ್ನು ಸ್ಥಿತಿಕರ್ತನೆಂದೂ ರುದ್ರನನ್ನು ಲಯಕರ್ತನೆಂದೂ ವರ್ಣಿಸಲಾಗಿದೆ. ಆದರೆ ಈ ತ್ರಿಮೂರ್ತಿಗಳೂ ನಾರಾಯಣನ ಅಂಶವೇ ಆಗಿದ್ದಾರೆ. ಅಥವಾ ಶ್ರೀಮನ್ನಾರಾಯಣನೇ ಸೃಷ್ಟಿಕರ್ತನಾದಾಗ ಬ್ರಹ್ಮನೆಂದೂ ಸ್ಥಿತಿಕರ್ತನಾದಾಗ ವಿಷ್ಣುವೆಂದೂ ಲಯಕರ್ತನಾದಾಗ ರುದ್ರನೆಂದೂ ವ್ಯವಹರಿಸಲ್ಪಡುತ್ತಾನೆ. ಜಗತ್ತೆಲ್ಲವೂ ನಾರಾಯಣನಲ್ಲಿಯೇ ಅಡಕವಾಗಿದ್ದು ಆ ಭಗವಂತನ ಸತ್ಸಂಕಲ್ಪಕ್ಕೆ ಅನುಗುಣವಾಗಿ ಸೃಷ್ಟಿಕಾಲಕ್ಕೆ ತೋರಿಕೊಳ್ಳುತ್ತದೆ. ಆದ್ದರಿಂದ ನಾರಾಯಣನನ್ನು ಬಿಟ್ಟು ಜಗತ್ತೆಂಬುದಿಲ್ಲವೇ ಇಲ್ಲ. ಆದರೆ ಜೀವರುಗಳ ಕರ್ಮಾನುಗುಣವಾಗಿ ಜಗತ್ತು ಉಂಟಾಗುತ್ತದೆ.

ಸೃಷ್ಟಿಯ ಆರಂಭದಲ್ಲಿ ಶ್ರೀಮನ್ನಾರಾಯಣ ನಾಭಿಕಮಲದಿಂದ ಜಗತ್ಸೃಷ್ಟಿಗೆ ಕಾರಣನಾದ ಚತುರ್ಮುಖಬ್ರಹ್ಮನು ಭಗವಂತನ ಸಂಕಲ್ಪಮಾತ್ರದಿಂದ ಹುಟ್ಟಿದನು. ಅವನ ಹುಟ್ಟು ಎಂದರೆ ಮನುಷ್ಯರಂತೆ ಅಲ್ಲ. ಶ್ರೀಮನ್ನಾರಾಯಣನ ಅಂಶವೇ ಬ್ರಹ್ಮನಾಗಿ ಆವಿರ್ಭವಿಸಿತು. ಆಗ ಆ ಚತುರ್ಮುಖಬ್ರಹ್ಮನು ಶ್ರೀಮನ್ನಾರಾಯಣನನ್ನು ಸ್ತೋತ್ರಮಾಡಿದನು. ಅದರಲ್ಲಿನ ಒಂದು ಶ್ಲೋಕವು ಹೀಗಿದೆ:-

ಯನ್ನಾಭಿಪದ್ಮಭವನಾದಹಮಾಸಮೀಡ್ಯ
ಲೋಕತ್ರಯೋಪಕರಣೋ ಯದನುಗ್ರಹೇಣ ।
ತಸ್ಮೈ ನಮಸ್ತ ಉದರಸ್ಥಭವಾಯ ಯೋಗ-
ನಿದ್ರಾವಸಾನವಿಕಸನ್ನಲಿನೇಕ್ಷಣಾಯ ॥ ಭಾಗವತ 3-9-21

''ಎಲೈ ಸ್ತೋತ್ರಾರ್ಹನಾದ ಭಗವಂತನೆ, ಯಾವ ನಿನ್ನ ನಾಭಿಕಮಲದಿಂದ ನಾನು ಹುಟ್ಟಿಬಂದೆನೋ ಹಾಗೂ ಭೂಲೋಕ, ಭುವರ್ಲೋಕ, ಸುವರ್ಲೋಕಗಳೆಂಬ ಮೂರು ಲೋಕಗಳ ಸೃಷ್ಟಿಗೂ ಸಹಾಯಕವಾದೆನೋ ಮತ್ತು ತನ್ನ ಹೊಟ್ಟೆಯಲ್ಲಿಯೇ (ಜಗತ್ತಿನ ವ್ಯಾಪಾರಗಳ) ಸ್ಥಿತಿಯನ್ನು ಧರಿಸಿರುವನೋ ಮತ್ತು ಯೋಗನಿದ್ರೆಯ ಅಂತ್ಯದಲ್ಲಿ ತೆರೆದ ನವಿಲಿನ ಸೌಂದರ್ಯದ ಕಣ್ಣುಗಳುಳ್ಳವನಾಗಿರುವನೋ ಅಂಥ (ನಿನಗೆ) ನಮಸ್ಕಾರಗಳು'' ಹೀಗೆ ಭಗವಂತನನ್ನು ಸ್ತುತಿಸಿ ಬ್ರಹ್ಮನು ಸುಮ್ಮನಾದನು.

ಆಗ ಭಗವಂತನು ಬ್ರಹ್ಮನನ್ನು ಕುರಿತು ಹೀಗೆಂದನು : ''ಎಲೈ ಹಿರಣ್ಯಗರ್ಭನೆ, ನೀನು ಬೇಸರಪಡಬೇಡ. ಇನ್ನು ಮುಂದೆ ಜಗತ್ತಿನ ಸೃಷ್ಟಿಯನ್ನು ಮಾಡುವವನಾಗು. ಅದಕ್ಕಾಗಿ ಮತ್ತೆ ತಪಸ್ಸುಮಾಡುವವನಾಗು. ಆಗ ನಿನ್ನ ಒಳಗಿನ ಹೃದಯ (ಅಂತಃಕರಣ)ದಲ್ಲಿಯೇ ಈಗ ಮರೆಯಾಗಿರುವ ಲೋಕಗಳನ್ನು ನೋಡುವವನಾಗುವೆ. ಆಗ ನಿನ್ನಲ್ಲಿ ಉಂಟಾಗುವ ಭಗವದ್ಭಕ್ತಿಯಬಲದಿಂದ ಎಲ್ಲಾ ಲೋಕಗಳ ಸೃಷ್ಟಿಕರ್ತನಾಗುವೆ. ಮುಂದೆ ಸೃಷ್ಟಿಯಲ್ಲಿರುವ ಎಲ್ಲಾ ಜೀವರುಗಳಲ್ಲಿಯೂ ನನ್ನನ್ನೇ ಕಾಣುವೆ. ಈಗ ನಾನು ನಿನ್ನ ಭಕ್ತಿಯಿಂದ ಪ್ರೀತನಾಗಿರುವೆನು. ಏಕೆಂದರೆ ನಿರ್ಗುಣನಾದ ನನ್ನನ್ನು ಸಗುಣನನ್ನಾಗಿ ಸ್ತುತಿಮಾಡಿರುತ್ತೀಯೆ. ನಾನು ಎಲ್ಲರ ಆತ್ಮನ ಆತ್ಮನಾಗಿರುವೆನು. ಆದ್ದರಿಂದ ನನ್ನಲ್ಲಿ ಭಕ್ತಿಯುಳ್ಳವನಾಗು. ಹೀಗೆ ಭಗವಂತನು ಸೃಷ್ಟಿಕರ್ತನಾದ ಬ್ರಹ್ಮನಿಗೆ ಅನುಗ್ರಹಮಾಡಿ ಕಣ್ಮರೆಯಾದನು''-ಹೀಗೆಂದು ಮೈತ್ರೇಯರು ವಿದುರನಿಗೆ ತಿಳಿಸಿದರು.

* * * * *

# 7. ಅಧ್ಯಾತ್ಮ ಯೋಗ

**ಯೋಗ ಆಧ್ಯಾತ್ಮಿಕಃ ಪುಂಸಾಂ ಮತೋ ನಿಃಶ್ರೇಯಸಾಯ ಮೇ।**
**ಅತ್ಯಂತೋಪರತಿರ್ಯತ್ರ ದುಃಖಸ್ಯ ಚ ಸುಖಸ್ಯ ಚ ॥**
**ತಮಿಮಂ ತೇ ಪ್ರವಕ್ಷ್ಯಾಮಿ ಯಮವೋಚಂ ಪುರಾನಘೇ।**
**ಋಷೀಣಾಂ ಶ್ರೋತುಕಾಮಾನಾಂ ಯೋಗಂ ಸರ್ವಾಂಗನೈಪುಣಮ್॥**

**ಶ್ರೀ ಮದ್ಭಾಗವತ 3-25-13, 14**

ಕಪಿಲಮಹರ್ಷಿಗಳು ಇಂತೆಂದರು : ಮುಕ್ತಿಗೆ ಸಾಧನವಾಗಿರುವ ಆಧ್ಯಾತ್ಮಯೋಗವು ಹೀಗಿದೆ : ಸುಖ, ಹಾಗೂ ದುಃಖಗಳ ಸಂಪೂರ್ಣವಾದ ವಿಶ್ರಾಂತಿಯು ಯಾವ ಸ್ಥಿತಿಯಲ್ಲಿ ಲಭಿಸುತ್ತದೆಯೋ ಅದೇ ಯೋಗದ ಸ್ವರೂಪವು. ಇದನ್ನು ಹಿಂದೆ ನಾನು ಕೇಳಬಯಸಿದ ಋಷಿಗಳಿಗೆ ಹೇಳಿದ್ದೆನು. ಅದನ್ನೇ ಈಗ ನಿನಗೆ ಹೇಳಲಿದ್ದೇನೆ- (ಎಂದು ಕಪಿಲರು ದೇವಹೂತಿಯನ್ನು ಕುರಿತು ಹೇಳಿದರು.)

**(ದೇವಹೂತಿಯ ಪುತ್ರರೇ ಕಪಿಲರು. ಇವರು ಭಗವಂತನ ಅಂಶಪುರುಷರು. ಕೃತಯುಗದಲ್ಲಿ ಅವತಾರಮಾಡಿದ ಇವರು ಭಗವಂತನ ಪ್ರೇರಣೆಯಂತೆ ಲೋಕಕಲ್ಯಾಣಕ್ಕಾಗಿ ಸಾಂಖ್ಯತತ್ತ್ವ (ಬ್ರಹ್ಮವಿದ್ಯೆ)ವನ್ನು ತಮ್ಮ ತಾಯಿಗೆ ಉಪದೇಶ ಮಾಡಿದರು. ಈ ತತ್ತ್ವವಿಚಾರವು ಮುಕ್ತಿಗೆ ಸಾಧನವಾದ ಮಾರ್ಗವಾಗಿದೆ.)**

## ಕಪಿಲದೇವಹೂತಿ ಸಂವಾದ

ಕೃತಯುಗದಲ್ಲಿ ಭಗವಂತನು ಅಧ್ಯಾತ್ಮತತ್ತ್ವವನ್ನು ಪ್ರಚಾರಮಾಡುವದಕ್ಕಾಗಿ ಕರ್ದಮ-ದೇವಹೂತಿ ಎಂಬ ದಂಪತಿಗಳ ಪುತ್ರನಾಗಿ ಅವತರಿಸಿದನು. ಅವನ ಹೆಸರು ಕಪಿಲನೆಂದು ಪ್ರಸಿದ್ಧವಾಗಿತ್ತು. ಕೃತಯುಗದಲ್ಲಿ ಧರ್ಮವು ನಾಲ್ಕು ಪಾದಗಳಿಂದಲೂ ದೃಢವಾಗಿ ನಿಂತುಕೊಂಡಿತ್ತು. ಆದ್ದರಿಂದ ಆ ಕಾಲದ ಪ್ರಜೆಗಳು ಅತ್ಯಂತ ಧರ್ಮಿಷ್ಠರೂ ಸಾತ್ತ್ವಿಕರೂ ತತ್ತ್ವಜಿಜ್ಞಾಸುಗಳೂ ತಪಸ್ವಿಗಳೂ ಆಗಿರುತ್ತಿದ್ದರು. ಇಂಥ ಆದರ್ಶಪ್ರಜೆಗಳಲ್ಲಿ ದಂಪತಿಗಳಾದ ಕರ್ದಮ-ದೇವಹೂತಿಯರು ಅಗ್ರಗಣ್ಯರಾಗಿದ್ದರು. ಇವರ ಪುತ್ರರೇ ಬ್ರಹ್ಮಜ್ಞಾನಿಗಳಾದ ಕಪಿಲರು. ಇವರ ತಂದೆಯಾದ ಕರ್ದಮರು ಸಕಾಲದಲ್ಲಿ ಗೃಹಸ್ಥಾಶ್ರಮದಿಂದ ವಾನಪ್ರಸ್ಥಾಶ್ರಮಕ್ಕೆ

ತೆರಳಿದರು. ಆಗ ದೇವಹೂತಿಯು ಬ್ರಹ್ಮನು ಸೂಚಿಸಿದ್ದ ಮಾತನ್ನು ನೆನಪುಮಾಡಿಕೊಂಡಳು. ಆಗ ಆಕೆಗೆ ಸಾಕ್ಷಾದ್ ಭಗವಂತನೇ ಲೋಕಕಲ್ಯಾಣಕ್ಕಾಗಿ ತನ್ನ ಮಗನಾಗಿ ಹುಟ್ಟಿದ್ದಾನೆಂದು ತಿಳಿದು ಹೀಗೆಂದು ಪ್ರಶ್ನೆಮಾಡಿದಳು. ''ಪೂಜ್ಯನೆ, ನಾನು ಈಗ ಇಂದ್ರಿಯಗಳನ್ನು ತೃಪ್ತಿಗೊಳಿಸುವ ಪ್ರಯತ್ನದಲ್ಲಿ ತೊಡಗಿದ್ದು ಬೇಸರಗೊಂಡಿದ್ದೇನೆ. ಅಜ್ಞಾನವು ನನ್ನನ್ನು ಆವರಿಸಿದೆ. ನೀನಾದರೊ, ಆದಿಪುರುಷನಾದ ಭಗವಂತನ ಅಂಶಸಂಭೂತನೇ ಆಗಿರುವೆ. ಆದ್ದರಿಂದ ನನ್ನ ಅಜ್ಞಾನವನ್ನು ಪರಿಹರಿಸಲು ನೀನು ಸಮರ್ಥನಾಗಿರುವೆ. ಈಗ ನಾನು ನಿನಗೆ ಶರಣಾಗತಳಾಗಿದ್ದೇನೆ. ನನಗೆ ಅಧ್ಯಾತ್ಮಯೋಗವನ್ನು ಉಪದೇಶಿಸಿ ಕೃತಾರ್ಥಳಾಗುವಂತೆ ಮಾಡು''- ಹೀಗೆಂದು ಕೇಳಿಕೊಂಡಳು.

ಆಗ ಕಪಿಲಮಹಾಮುನಿಯು ತನ್ನ ತಾಯಿಯನ್ನು ಕುರಿತು ಹೀಗೆ ಉಪದೇಶಮಾಡಿದನು. ''ಅಮ್ಮ, ಕೇಳು, ಅಧ್ಯಾತ್ಮಯೋಗವೆಂಬ ಸಾಧನವು ಮುಕ್ತಿಗೆ ಮಾರ್ಗವೆಂಬುದು ನನ್ನ ಅಭಿಪ್ರಾಯವಾಗಿದೆ. ಅದನ್ನು ಅನುಷ್ಠಾನಮಾಡಿದಲ್ಲಿ ಸುಖ-ದುಃಖಗಳೆರಡೂ ಹೇಳಹೆಸರಿಲ್ಲವಾಗುವವು. ಮಾನವನಿಗೆ ಭಗವಂತನು ದಯಪಾಲಿಸಿರುವ ಚಿತ್ತ (ಮನಸ್ಸು) ಎಂಬುದು ಬಂಧಮೋಕ್ಷಗಳಿಗೆ ಮೂಲವಾಗಿದೆ. ಅದು ತ್ರಿಗುಣಗಳ ಸಂಪರ್ಕವನ್ನು ಹೊಂದಿದಾಗ ಜೀವನು ಸಂಸಾರದುಃಖಕ್ಕೆ ವಶನಾಗುತ್ತಾನೆ. ಆದರೆ ಅದೇ ಮನಸ್ಸು ಗುಣಗಳ ಸಂಪರ್ಕದಿಂದ ಬಿಡುಗಡೆ ಹೊಂದಿದರೆ ಮುಕ್ತನಾಗುತ್ತಾನೆ. ಇದಕ್ಕಾಗಿ ಸಾಧುಸಜ್ಜನರ ಸಂಗವನ್ನು ಮಾಡಬೇಕು. ಸಜ್ಜನರು ಹೇಗಿರುತ್ತಾರೆಂಬುದನ್ನು ಹೇಳುವೆನು; ಕೇಳು. ಸತ್ಪುರುಷರು ಶೀತೋಷ್ಣ ರಾಗದ್ವೇಷ, ಮಾನಾಪಮಾನ- ಮುಂತಾದ ದ್ವಂದ್ವಗಳನ್ನು ಸಹಿಸಿಕೊಂಡು ಪ್ರತಿಕ್ರಿಯೆಗೆ ವಶರಾಗದೆ ಇರುತ್ತಾರೆ. ಮತ್ತು ಎಲ್ಲರಲ್ಲಿಯೂ ಸ್ನೇಹಭಾವವನ್ನು ಹೊಂದಿರುತ್ತಾರೆ. ಶಾಂತರಾಗಿರುತ್ತಾರೆ. ಭಗವಂತನಲ್ಲಿ ಅನನ್ಯಭಕ್ತಿಯನ್ನು ಮಾಡಿದವರಾಗಿ ತಮ್ಮ ಕರ್ತವ್ಯಗಳನ್ನೂ ತ್ಯಾಗಮಾಡಿ ನನ್ನ (ಭಗವಂತನ) ಗುಣಕರ್ಮಲೀಲೆಗಳನ್ನೇ ಕೊಂಡಾಡುತ್ತಾ ಇರುತ್ತಾರೆ. ಇಂಥವರನ್ನು ಸಾಧುಗಳೆಂದು ಶಾಸ್ತ್ರವು ತಿಳಿಸುತ್ತದೆ. ಇಂಥ ಮಹಾತ್ಮರ ಸಂಗವು ಶ್ರೇಯಸ್ಸಿಗೆ ದಾರಿಯಾಗಿರುತ್ತದೆ. ಮತ್ತು ಈ ಸತ್ಸಂಗವು ದುಸ್ಸಂಗದ ದೋಷಗಳನ್ನೆಲ್ಲಪರಿಹರಿಸಿ ಶಾಂತಿಸುಖಗಳನ್ನು ಕೊಡುತ್ತದೆ.

ಈಗ ಸತ್ಸಂಗದ ಮಹಿಮೆಯನ್ನು ಕೇಳು. ಮಹಾತ್ಮರ ಸಂಗದಲ್ಲಿದ್ದಾಗ ಭಗವಂತನ ಗುಣಕರ್ಮವೀರ್ಯಗಳನ್ನು ಕೊಂಡಾಡುವ ಹೃದಯಂಗಮವಾದ ಕಥೆಗಳು

ಕೇಳಿಬರುತ್ತವೆ. ಆಗ ಹೃದಯದಲ್ಲಿ ಆನಂದವು ಆವಿರ್ಭವಿಸುತ್ತದೆ. ಆ ಮೂಲಕ ಭಗವಂತನಲ್ಲಿ ಶ್ರದ್ಧೆಯೂ ಭಕ್ತಿಯೂ ಮನಸ್ಸಿನಲ್ಲಿ ಉಂಟಾಗುವದು. ಹೀಗೆಂದು ಕಪಿಲರು ಹೇಳಲಾಗಿ ಮತ್ತೆ ದೇವಹೂತಿಯು ಇಂತೆಂದಳು: ''ವತ್ಸ ನೀನು ಹೇಳಿದ ಭಕ್ತಿಯ ವಿಚಾರ, ಹಾಗೂ ಫಲವೂ ತಿಳಿಯಿತು: ಇನ್ನು ಯೋಗವೆಂದು ತಿಳಿಸಿದ ಸಾಧನವು ಯಾವದು? ಆ ಯೋಗದಿಂದ ತತ್ತ್ವಜ್ಞಾನವುಂಟಾಗುವದಾದರೂ ಹೇಗೆ? ನಾನು ಮಂದಬುದ್ಧಿಯವಳಾಗಿದ್ದೇನೆ. ಆದ್ದರಿಂದ ಸರಳವಾಗಿ ನನಗೆ ತಿಳಿಯುವಂತೆ ಹೇಳುವವನಾಗು. ನಾನು ದಡ್ಡ ಹೆಂಗಸಾದ್ದರಿಂದ ಹೀಗೆ ಕೇಳುತ್ತಿದ್ದೇನೆ'' ಎಂದಳು.

ಆಗ ಕಪಿಲಮಹಾಮುನಿಗಳು ತಮ್ಮ ತಾಯಿಯ ಮಾತುಗಳನ್ನು ಕೇಳಿ ಅರ್ಥಮಾಡಿಕೊಂಡು ತಮಗೆ ಜನ್ಮವನ್ನು ಅನುಗ್ರಹಿಸಿದ ತಾಯಿಗೆ ತತ್ತ್ವವಿಚಾರಗಳನ್ನು ತಿಳಿಸಲು ಹೊರಟವರಾಗಿ ಸಾಂಖ್ಯಯೋಗವೆಂಬ ಹೆಸರಿನ ತತ್ತ್ವವಿಚಾರಸಂದೇಶವನ್ನು ಹೇಳಲಾರಂಭಿಸಿದರು. ''ತಾಯೆ, ಕೇಳು. ಸತ್ತ್ವಗುಣಸಂಪನ್ನರಾದ ದೇವತೆಗಳ- ಎಂದರೆ ಸಾಧಕನ ಮನಸ್ಸಿನಲ್ಲಿ ಮೂಡುವ ಸಾತ್ತ್ವಿಕವೃತ್ತಿಗಳ- ಹಿನ್ನೆಲೆಯಿಂದ ಯಾವ ನಿಮಿತ್ತವೂ (ಅಡ್ಡಿಯೂ) ಇಲ್ಲದೆ ಭಗವದ್ಭಕ್ತಿಯು ಉಂಟಾಗುತ್ತದೆ. ಕನ್ನಡಿಯು ಸ್ವಚ್ಛವಾದಷ್ಟೂ ಪ್ರತಿಬಿಂಬವು ಚೆನ್ನಾಗಿ ಬೀಳುವಂತೆ ಸಾತ್ತ್ವಿಕವೃತ್ತಿಯ ಮನಸ್ಸುಳ್ಳವನಿಗೆ ಭಗವದ್ಭಕ್ತಿಯು ಹೃದಯದಲ್ಲಿ ಮೂಡುತ್ತದೆ. ಆಗ ಸಾಧಕನಿಗೆ ಭಗವಂತನ ಹೊರತು ಮತ್ತಾವುದೂ ಬೇಡವಾಗುತ್ತದೆ. ಅಶೋಕವನದಲ್ಲಿದ್ದ ಸೀತೆಗೆ ಹೇಗೆ ರಾಮನ ಹೊರತು ಬೇರಾವುದೂ ಬೇಡವಾಗಿತ್ತೋ ಹಾಗೆ ಸಾಧಕನಿಗೂ ಭಕ್ತಿಯು ದೃಢವಾದಾಗ ಭಗವತ್ತತ್ತ್ವವನ್ನು ಅನುಸಂಧಾನಮಾಡುವದನ್ನು ಬಿಟ್ಟು ಬೇರಾವುದೂ ಬೇಡವಾಗುತ್ತದೆ. ಹೀಗೆ ಅನನ್ಯವಾದ ಭಕ್ತಿಯು ಅಂತಃಕರಣದಲ್ಲಿ ಮೂಡಿರುವ ಸಾಧಕನನ್ನು ಎಲೈ ದೇವಿ, ನಾನು ಮೃತ್ಯುರೂಪವಾದ ಸಂಸಾರದಿಂದ ಮೇಲೆತ್ತಿ ಕಾಪಾಡುತ್ತೇನೆ. ಯಾವ ಸಾಧಕನಿಗೆ ಭಗವಂತನಾದ ನನಗಿಂತ ಮತ್ತೊಂದೆಂಬುದು ಇಲ್ಲವೆಂಬ ದೃಢಸಂಕಲ್ಪವಿದ್ದು ಸರ್ವವನ್ನೂ ಭಗವನ್ಮಯವಾಗಿ (ಪ್ರಹ್ಲಾದನಂತೆ) ಕಾಣುತ್ತಾನೋ ಅವನು ಸರ್ವವನ್ನೂ ಭಗವಂತನೆಂದೇ ಕಂಡುಕೊಂಡವನಾಗಿ ನೆಲೆನಿಲ್ಲುತ್ತಾನೆ. ನಾನು (ಭಗವಂತ) ಇದ್ದೇನೆ- ಎಂಬುದಕ್ಕೆ ಗುರುತೇನೆಂದರೆ, ನನ್ನ ಭಯದಿಂದಲೇ ಗಾಳಿಯು ಬೀಸುತ್ತದೆ. ಹಾಗೆಯೇ ಸೂರ್ಯನೂ ಉದಯಿಸುತ್ತಾನೆ. ಇನ್ನು ಅಗ್ನಿ ಇಂದ್ರಾದ್ರಿದೇವತೆಗಳೂ ನನ್ನ ಭಯಕ್ಕೆ ಒಳಪಟ್ಟೇ ತಮ್ಮ ತಮ್ಮ ಕರ್ಮಗಳಲ್ಲಿ ತೊಡಗಿರುತ್ತಾನೆ. ಆದ್ದರಿಂದ ಸಾಧಕನು ಜ್ಞಾನ-ವೈರಾಗ್ಯಗಳನ್ನು ಸಂಪಾದಿಸಿಕೊಂಡು

ಸರ್ವಾತ್ಮನಾದ ನನ್ನಲ್ಲಿ ಭಕ್ತಿಯುಕ್ತನಾಗಿ ಧ್ಯಾನಮಾಡಿದರೆ ಅಂಥವನು ಸಂಸಾರಭಯವಿಲ್ಲದ ನನ್ನ ಪಾದಮೂಲವನ್ನೇ ಸೇರುವನು.'' ಹೀಗೆ ಕಪಿಲಮಹರ್ಷಿಗಳು ದೇವಹೂತಿಗೆ ಉಪದೇಶಿಸಿರುತ್ತಾರೆ. ಶ್ರೀ ಕಪಿಲಮಹರ್ಷಿಗಳು ದೇವಹೂತಿಗೆ ಹೇಳಿದ ಒಂದು ಶ್ಲೋಕವನ್ನು ಈಗ ಅನುಸಂಧಾನಮಾಡೋಣ.

ಏತಾನೇವ ಲೋಕೇಽಸ್ಮಿನ್ ಪುಂಸಾಂ ನಿಃಶ್ರೇಯಸೋದಯಃ।
ತೀವ್ರೇಣ ಭಕ್ತಿಯೋಗೇನ ಮನೋಮಯ್ಯರ್ಪಿತಂ ಸ್ಥಿರಮ್ ॥

ಶ್ರೀ ಮದ್ಭಾಗವತ 3-25-44

ತೀವ್ರವಾದ ಭಕ್ತಿಯೋಗದಿಂದ ನನ್ನಲ್ಲಿಯೇ ಸ್ಥಿರವಾಗಿ ಮನಸ್ಸನ್ನು ನೆಲೆಗೊಳಿಸಿದ್ದೇ ಆದರೆ ಮಾನವರ ಪರಮಪುರುಷಾರ್ಥವಾದ ಮುಕ್ತಿಯು ಕೈವಶವಾಗುವದು. ಭಕ್ತಿ-ಜ್ಞಾನ, ಇವುಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಒಂದು ರೂಪಾಯಿ ನಾಣ್ಯದಲ್ಲಿ ಯಾವ ಭಾಗವು ರೂಪಾಯಿ- ಎಂದು ಯಾರೂ ಸಂಶಯಪಡುವದಿಲ್ಲ. ಆದರೆ ಎರಡೂ ಭಾಗಗಳೂ ಸ್ಫುಟವಾಗಿರಬೇಕು. ಆದರಂತೆ ಮಾನವನ ಮನೋಬುದ್ಧಿಗಳ ಸ್ವಚ್ಛತೆಯೇ ಭಕ್ತಿಯೋಗದ ತಳಹದಿಯು.

* * * * *

## 8. ಅಧ್ಯಾತ್ಮ ಯೋಗ

ಸ್ವಧರ್ಮಾಚರಣಂ ಶಕ್ತ್ಯಾ ವಿಧರ್ಮಾಚ್ಚ ನಿವರ್ತನಮ್।
ದೈವಾಲ್ಲಬ್ಧೇನ ಸಂತೋಷಃ ಆತ್ಮವಿಚ್ಚರಣಾರ್ಚನಮ್ ॥ 1 ॥

ಗ್ರಾಮ್ಯಧರ್ಮನಿವೃತ್ತಿಶ್ಚ ಮೋಕ್ಷಧರ್ಮರತಿಸ್ತಥಾ।
ಅಹಿಂಸಾ ಸತ್ಯಮಸ್ತೇಯಂ ಯಾವದರ್ಥಪರಿಗ್ರಹಃ ॥ 2 ॥

ವೈಕುಂಠಲೀಲಾಭಿಧ್ಯಾನಂ ಸಮಾಧಾನಂ ತಥಾತ್ಮನಃ।
ಏತೈರನ್ಯೈಶ್ಚ ಪಥಿಭಿಃ ಬುಧ್ಯಾ ಯಂಜೀತ ಸಾಧಕಃ ॥ 3 ॥

ಶ್ರೀ ಮದ್ಭಾಗವತ 3-28-2, 7

''ತನ್ನ ಯೋಗ್ಯತೆಗೆ ತಕ್ಕಷ್ಟು ಸ್ವಧರ್ಮಾಚರಣೆ, ಪರಧರ್ಮದಿಂದ

ಹಿಂದಿರುಗುವದು, ದೇವರು ಕೊಟ್ಟದ್ದರಲ್ಲಿ ತೃಪ್ತಿ, ಆತ್ಮಜ್ಞಾನಿಗಳ ಪಾದಾರ್ಚನೆ, ಲೌಕಿಕಕ್ರಿಯೆಗಳಿಂದ ಹಿಮ್ಮೆಟ್ಟುವದು, ಮುಕ್ತಿಸಾಧನವಾದ ಧರ್ಮದಲ್ಲಿ ಪ್ರೀತಿ, ಅಹಿಂಸೆ, ಸತ್ಯ, ಪ್ರಾಮಾಣಿಕತೆ, ಅಗತ್ಯವಾದಷ್ಟೇ ಧನಸಂಪಾದನೆ, ವೈಕುಂಠನಾಥನ ಲೀಲೆಗಳನ್ನು ಅನುಸಂಧಾನಮಾಡುವದು, ಮಾನಸಿಕವಾದ ಶಾಂತಿ- ಇವೇ ಮುಂತಾದ ಮಾರ್ಗಗಳಿಂದ ಸಾಧಕನು ತನ್ನ ಬುದ್ಧಿಯನ್ನು ಅಳವಡಿಸಿಕೊಳ್ಳ ಬೇಕು''. ಹೀಗೆಂದು ಕಪಿಲರು ದೇವಹೂತಿಗೆ ಉಪದೇಶಿಸಿದ್ದಾರೆ.

(ಜಾತಿ, ಮತ, ಲಿಂಗ, ವಯಸ್ಸೇ ಮುಂತಾದವುಗಳ ಸಂಪರ್ಕವಿಲ್ಲದ ಸಾರ್ವಜನಿಕವೂ ಶ್ರೇಯಃಪ್ರಾಪ್ತಿಸಾಧನವೂ ಆದ ಅಧ್ಯಾತ್ಮಯೋಗವನ್ನುಇಲ್ಲಿ ವರ್ಣಿಸಿದೆ. ಸಾಧಕರೆಲ್ಲರಿಗೂ ಇದು ಮುಕ್ತಿಪ್ರಾಪ್ತಿಗೆ ರಾಜಮಾರ್ಗವಾಗಿದೆ.)

## ಶ್ರೇಯಃಸಾಧನಗಳು

ಭಗವಾನ್ ಕಪಿಲಮಹರ್ಷಿಗಳು ತಮ್ಮ ತಾಯಿಯಾದ ದೇವಹೂತಿಗೆ ಉಪದೇಶಮಾಡಿರುವ ಶ್ರೇಯಃಸಾಧನಗಳನ್ನು ಕುರಿತು ವಿಚಾರಮಾಡೋಣ. ಮೊದಲನೆಯದಾಗಿ ಸ್ವಧರ್ಮಾಚರಣೆ. ಇದು ಭರತಖಂಡದಲ್ಲಿ ಆಚರಣೆಯಲ್ಲಿರುವ ಚಾತುರ್ವರ್ಣ್ಯಕ್ಕೆ ಒಳಪಟ್ಟು ಅಧಿಕಾರಿಗಳಿಗೆ ಅನ್ವಯಿಸುತ್ತದೆ. ಸನಾತನಧರ್ಮದಲ್ಲಿ ವರ್ಣಾಶ್ರಮಪದ್ಧತಿಯು ಪ್ರಧಾನವಾಗಿದ್ದು ಆಯಾ ವರ್ಣದವರಿಗೆ ಆಯಾ ಧರ್ಮಗಳನ್ನು ಬೋಧಿಸಿರುತ್ತದೆ. ಭಗವದ್ಗೀತೆಯಲ್ಲಿಯೂ ಇದರ ಪರಾಮರ್ಶೆವಿದೆ. ಮತ್ತು ಆಯಾ ವರ್ಣದವರು ಆಯಾ ವಿಹಿತಧರ್ಮವನ್ನೇ ಅನುಷ್ಠಾನಮಾಡಬೇಕೆಂದು ವಿಂಗಡಿಸಿ ತಿಳಿಸಲಾಗಿದೆ. ಆದ್ದರಿಂದ ಅವರವರ ಧರ್ಮಗಳನ್ನೇ ಅವರವರು ಆಚರಿಸಬೇಕು. ಸ್ವಧರ್ಮಾಚರಣೆಯೇ ಶ್ರೇಯಃಪ್ರಾಪ್ತಿಸಾಧನವೆಂದೂ ಪರಧರ್ಮವು ಭಯಕಾರಣವೆಂದೂ ಗೀತೆಯಲ್ಲಿ ತಿಳಿಸಿದೆ. ಆದ್ದರಿಂದ ಈ ವಿಚಾರದಲ್ಲಿ ಕಪಿಲಮಹರ್ಷಿಗಳು ದೇವಹೂತಿಗೆ ಉಪದೇಶಿಸಿದ ಸಾರ್ವತ್ರಿಕವಾದ ಸಾಮಾನ್ಯ ಧರ್ಮಗಳನ್ನು ಈಗ ವಿಚಾರಮಾಡೋಣ. ಇವು ಮಾನವರೆಲ್ಲರಿಗೂ ಅನ್ವಯಿಸುತ್ತದೆ.

ಭರತಖಂಡದಲ್ಲಿ ಹುಟ್ಟಿದ ಪ್ರತಿಯೊಬ್ಬ ಮಾನವನೂ ಈ ಧರ್ಮವನ್ನು (ಸ್ವಧರ್ಮ) ಪರಿಪಾಲಿಸಬೇಕು. ಇದು ಅವನವನ ಯೋಗ್ಯತೆಗೂ ಶಕ್ತಿಗೂ ಒಳಪಟ್ಟಿರುತ್ತದೆ. ಇದಕ್ಕೆ ಆಧಾರವು ವೇದ-ಇತಿಹಾಸ-ಪುರಾಣ ಹಾಗೂ ಶಿಷ್ಟಾಚಾರಗಳು. ಇವುಗಳನ್ನು ಗೌರವಿಸಿ ಪ್ರತಿಯೊಬ್ಬನೂ ತನ್ನ ಧರ್ಮವು ಹಾಗೂ

ಆಚಾರವು ಯಾವದೆಂದು ತಿಳಿದು ತನ್ನ ಹಿರಿಯರು ನಡೆದುಕೊಂಡಂತೆ ತಾನೂ ಅನುಷ್ಠಾನವಮಾಡಬೇಕು. ಜೀವನೋಪಾಯಕ್ಕಾಗಿ ಯಾವ ಉದ್ಯೋಗವನ್ನೇ ಮಾಡಲಿ-ಸ್ವಧರ್ಮವನ್ನು ಕೈಬಿಡಬಾರದು. ಮತ್ತು ತನಗೆ ಅವಕಾಶವಿರುಷ್ಟನ್ನಾದರೂ ಅವಶ್ಯವಾಗಿ ಆಚರಿಸಬೇಕು. ಇದು ಧರ್ಮದ ಕಟ್ಟಾಜ್ಞೆಯು. ಅನಂತರ ಪರಧರ್ಮಗಳಿಂದ ಹಿಮ್ಮೆಟ್ಟಬೇಕು- ಎಂದರೆ ಬೇರೊಬ್ಬರ ಆಚರಣೆಗಳನ್ನು ಅನುಸರಿಸಬಾರದು. ಇನ್ನು ದೇವರು ಕೊಟ್ಟಷ್ಟು ಸಂಪತ್ತಿನಿಂದಲೇ ತೃಪ್ತನಾಗಿರಬೇಕು. ಧರ್ಮಾಚರಣೆಗೆ ಬಡವ-ಬಲ್ಲಿದನೆಂಬ ಭೇದವಿರುವದಿಲ್ಲ. ಇನ್ನು ತನಗೆ ಗುರುಗಳು. ಜ್ಞಾನಿಗಳು ದೊರೆತಾಗ ಅಂಥವರನ್ನು ಗೌರವಿಸಿ ಪೂಜಿಸಬೇಕು. ಈ ಸಾಧನಗಳಿಂದ ಮನಸ್ಸು ಪರಿಶುದ್ಧವಾದಾಗ ಹಿಂದಿನ ದುರಾಚಾರಗಳೆಲ್ಲವೂ ಬಿಟ್ಟುಹೋಗುವವು. ಹಾಗೂ ಭಗವಂತನನ್ನು ಪಡೆಯುವ ಪ್ರೇಮ(ಭಕ್ತಿ)ವುಂಟಾಗಿ ಮುಕ್ತಿಯನ್ನು ಹೊಂದುವ ಬಯಕೆಯುಂಟಾಗುವದು. ಹೀಗೆ ಮನಸ್ಸು ಪಕ್ವವಾಗಬೇಕಾದರೆ ಶಾಸ್ತ್ರನಿಷಿದ್ಧವಾದ ಆಹಾರಗಳನ್ನು ತ್ಯಜಿಸಿ ಹಿತಮಿತವಾದ ಆಹಾರವನ್ನೇ ಸೇವಿಸಬೇಕು. ಊಟಮಾಡುವಾಗ ಅರ್ಧಹೊಟ್ಟೆತುಂಬುಷ್ಟು ಆಹಾರ, ಅನಂತರ ಕಾಲುಭಾಗ ನೀರುಕುಡಿದು ಇನ್ನುಳಿದ ಕಾಲುಭಾಗವನ್ನು ಖಾಲಿಬಿಡಬೇಕು. ಅನಂತರ ಭಗವಂತನ ಸ್ಮರಣೆ ಮಾಡುತ್ತಾ ಏಕಾಂತ(ತಾನೊಬ್ಬನೇ)ದಲ್ಲಿರಬೇಕು.

ಈಗ ಕೆಲವು ಅಂತರಂಗಸಾಧನಗಳನ್ನೂ ತಿಳಿಸಲಾಗುವದು. ಮೊದಲನೆಯದಾಗಿ ಅಹಿಂಸೆ- ಎಂದರೆ ಯಾರಿಗೂ, ಯಾವ ಪ್ರಾಣಿಗೂ ಹಿಂಸೆ ಮಾಡಬಾರದು. ಮತ್ತು ತಾನು ಯಾವಾಗಲೂ ನಿಜವನ್ನೇ ನುಡಿಯಬೇಕು. ಬೇರೊಬ್ಬರ ಪದಾರ್ಥಕ್ಕಾಗಿ ತಾನು ಮನಸ್ಸಿನಲ್ಲಿಯೂ ಚಿಂತಿಸಬಾರದು. ಹಣವನ್ನು ತನಗೆ ಅಗತ್ಯವಿದ್ದಷ್ಟನ್ನು ಮಾತ್ರ ಸ್ವೀಕರಿಸಬೇಕು. ಕೂಡಿಡಬಾರದು. ಇನ್ನು ಬ್ರಹ್ಮಚರ್ಯೆ- ಎಂದರೆ ಸ್ತ್ರೀಸಂಪರ್ಕವಿಲ್ಲದಿರುವದು, ತಪಸ್ಸು- ಎಂದರೆ ಮನಸ್ಸು ಹಾಗೂ ಇಂದ್ರಿಯಗಳನ್ನು ಚಾಂಚಲ್ಯದಿಂದ ಬಿಡಿಸಿ ಏಕಾಗ್ರವಾಗಿಡುವದು, ತ್ರಿಕರಣಗಳಿಂದಲೂ ಪರಿಶುದ್ಧನಾಗಿರುವದು, ಮತ್ತು ವೇದಾಧ್ಯಯನ, ಅಥವಾ ಪುರಾಣ- ಇತಿಹಾಸಗಳನ್ನು ಪಠನಮಾಡುವದು, ಭಗವಂತನನುನ ನಿತ್ಯವೂ ಪೂಜಿಸುವದು (ದೇವತಾರ್ಚನೆ), ಸಾಧ್ಯವಿದ್ದಷ್ಟೂ ಮೌನದಿಂದಿರುವದು, ಕುಳಿತಲ್ಲಿಯೇ ಕೆಲವು ಕಾಲ ಹಾಗೆಯೇ ದೃಢವಾಗಿ ನೆಲೆಸುವದು, ಮನಸ್ಸನ್ನು ಅಲ್ಲಾಡದಂತೆ ನೆಲೆಗೊಳಿಸುವದು, ಅನಂತರ ಉಸಿರಾಟವನ್ನು ತಡೆಹಿಡಿಯುವದು, ಹಾಗೂ ಸಾಕಷ್ಟು ದೀರ್ಘಕಾಲ

ನೆಲೆಗೊಳಿಸುವದು, ಮನಸ್ಸಿನಿಂದ ಇಂದ್ರಿಯಗಳನ್ನು ಸೆಳೆದು ಚಾಂಚಲ್ಯವಿಲ್ಲದೆ ಇರುವದು, ಭಗವಂತನೂ ವೈಕುಂಠಾಧಿಪನೂ ಆದ ನಾರಾಯಣನನ್ನೇ ಚಿಂತಿಸಿ ನೆನೆಯುತ್ತಿರುವದು- ಹೀಗೆಯೇ ಕೆಲವು ಅಧ್ಯಾತ್ಮಸಾಧನಗಳ ಸಹಾಯದಿಂದ ಚಂಚಲವಾದ ಮನಸ್ಸನ್ನು ಬಿಗಿಹಿಡಿದು ಪಳಗಿಸಿ ಭಗವಂತನಲ್ಲಿಯೇ ನೆಲೆನಿಲ್ಲುವಂತೆ ಸಾಧನೆಯನ್ನು ಮುಂದುವರೆಸಬೇಕು.

ಈಗ ಭಗವಂತನನ್ನು ಧ್ಯಾನಮಾಡುವ ಕ್ರಮವನ್ನು ವಿಚಾರಮಾಡೋಣ. ಇದು ಸಗುಣಧ್ಯಾನವು. ನಿರ್ಗುಣಧ್ಯಾನವು ನಿದಿಧ್ಯಾಸವನೆನಿಸುತ್ತದೆ. ಅದು ಉತ್ತಮ ಸಾಧಕರಿಗೆ ಮಾತ್ರ ಸಾಧ್ಯವಾಗುತ್ತದೆ. ಗೀತೆಯಲ್ಲಿ ಹೇಳಿರುವಂತೆ ಆತ್ಮನಲ್ಲಿಯೇ ಮನಸ್ಸನ್ನು ನೆಲೆಗೊಳಿಸಿ ಮನಸ್ಸಿನ ವ್ಯಾಪಾರಗಳನ್ನೆಲ್ಲ ತ್ಯಜಿಸುವದೇ ನಿರ್ಗುಣ ಧ್ಯಾನವು. ಸಾಧಕರಲ್ಲಿ ಬಹಳ ಜನರು ಮಂದಾಧಿಕಾರಿಗಳೇ ಆಗಿರುತ್ತಾರೆ. ಆದ್ದರಿಂದ ಅಂಥವನಿಗೆ ಸಗುಣ-ಸಾಕಾರವಾದ ಶ್ರೀವಿಷ್ಣುಭಗವಂತನ ಸ್ವರೂಪಧ್ಯಾನವನ್ನು ಹೇಳಿದೆ. ಅದರ ವರ್ಣನೆಯು ಹೀಗಿದೆ :

ಪ್ರಸನ್ನವದನಾಂಭೋಜಂ ಪದ್ಮಗರ್ಭಾರುಣೇಕ್ಷಣಮ್ ।
ನಿಲೋತ್ಪಲದಲಶ್ಯಾಮಂ ಶಂಖಚಕ್ರಗದಾಧರಮ್
ಲಸತ್ಪಂಕಜ ಕಿಂಜಲ್ಕಪೀತಕೌಶೇಯವಾಸಸಮ್ ।
ಶ್ರೀ ವತ್ಸವಕ್ಷಸಂ ಭ್ರಾಜತ್ಕೌಸ್ತುಭಾಮುಕ್ತಕಂಧರಮ್ ॥
ಅಪೀಚ್ಯದರ್ಶನಂ ಶಶ್ವತ್ ಸರ್ವಲೋಕನಮಸ್ಕೃತಮ್
ಧ್ಯಾಯೇದ್ದೇವಂ ಸಮಗ್ರಾಂಗಂ ಯಾವನ್ನ ಚ್ಯವತೇ ಮನಃ ॥

ಭಗವಂತನ ಮುಖವು ಪ್ರಸನ್ನವದನವಾಗಿರುತ್ತದೆ. ಅವನ ಕಣ್ಣುಗಳು ತಾವರೆಹೂವಿನ ಒಳಭಾಗದಂತೆ ನಸುಗೆಂಪಾಗಿರುತ್ತದೆ. ಶರೀರವು ಕನ್ನೈದಿಲೆ ಹೂವಿನಂತೆ ನೀಲವರ್ಣವಾಗರುವದು. ಅವನು ಕೈಗಳಲ್ಲಿ ಶಂಖಚಕ್ರಗದೆಗಳನ್ನು ಧರಿಸಿರುತ್ತಾನೆ. ಅವನು ಧರಿಸಿರುವ ವಸ್ತ್ರವು ರೇಷ್ಮೆಯದಾಗಿದ್ದು ಅರಳಿದ ತಾವರೆಯ ಬಣ್ಣದಂತೆ ಇರುವದು. ಇನ್ನು ಆ ಭಗವಂತನು ಎದೆಯಲ್ಲಿ ಶ್ರೀವತ್ಸವೆಂಬ ಆಭರಣವನ್ನೂ ಕಂಠದಲ್ಲಿ ಕೌಸ್ತುಭವೆಂಬ ಕಂಠೀಹಾರವನ್ನೂ ಧರಿಸಿದ್ದಾನೆ. ಹೀಗೆ ಆ ಭಗವಂತನು ಸರ್ವಾಂಗ ಸುಂದರನಾಗಿದ್ದು ನೋಡುವವರ ಮನಸ್ಸನ್ನು ಸೂರೆಗೊಂಡಿರುತ್ತಾನೆ. ಇಂಥ

ಶ್ರೀಮಂತನೂ ಸುಂದರನೂ ಶಾಂತನೂ ಭಕ್ತಾನುಗ್ರಹತತ್ಪರನೂ ಆದ ಭಗವಾನ್ ನಾರಾಯಣನನ್ನು ಸಾಧಕನು ತನ್ನ ಅಂತಃಕರಣದಲ್ಲಿ ತಂದುಕೊಂಡು ಚಾಂಚಲ್ಯರಹಿತನಾಗಿ ಧ್ಯಾನಮಾಡಬೇಕು. ಮುಂದುವರೆದು ಭಗವಂತನ ಪಾದಗಳನ್ನೂ ಧ್ಯಾನಮಾಡಬೇಕು. ಹೀಗೆಂದು ಕಪಿಲಮಹರ್ಷಿಗಳು ದೇವಹೂತಿಗೆ ಉಪದೇಶಮಾಡಿರುತ್ತಾರೆ. ಭಗವಂತನ ಈ ಸಗುಣಸಾಕಾರರೂಪವನ್ನು ನಿಶ್ಚಲ ಮನಸ್ಸಿನಿಂದ ಅನುಸಧಾನಮಾಡುತ್ತಾ ಸಾಧಕನು ಕೃತಾರ್ಥನಾಗಬೇಕು.

* * * * *

# 9. ಅಧ್ಯಾತ್ಮ ಯೋಗ

ಮದ್ಗುಣಶ್ರುತಿಮಾತ್ರೇಣ ಮಯಿ ಸರ್ವಗುಹಾಶಯೇ ।
ಮನೋಗತಿರವಿಚ್ಛಿನ್ನಾ ಯಥಾ ಗಂಗಾಂಭಸೋಽಮ್ಬುಧೌ

ಲಕ್ಷಣಂ ಭಕ್ತಿಯೋಗಸ್ಯ ನಿರ್ಗುಣಸ್ಯ ಹ್ಯುದಾಹೃತಮ್ ।
ಅಹೈತುಕ್ಯವ್ಯವಹಿತಾ ಯಾವ ಭಕ್ತಿಃ ಪುರುಷೋತ್ತಮೇ

ಸ ಏವ ಭಕ್ತಿಯೋಗಾಖ್ಯಃ ಆತ್ಯನ್ತಿಕ ಉದಾಹೃತಃ ।
ಯೇನಾತಿವ್ರಜ್ಯ ತ್ರಿಗುಣಂ ಮದ್ಭಾವಾಯೋಪಪದ್ಯತೇ

ಶ್ರೀ ಮದ್ಭಾಗವತ **3-29-11, 12, 14**

ಸರ್ವಪ್ರಾಣಿ (ಜೀವರು)ಗಳಲ್ಲಿಯೂ ಒಳಹೊಕ್ಕು ಹೃದಯ ದಲ್ಲಿದ್ದು ಕೊಂಡಿರುವ ನನ್ನನ್ನು (ಯಾರು) ಅಡೆತಡೆಗಳಿಲ್ಲದ ಮನೋವೃತ್ತಿಗಳಿಂದ- ಎಂದರೆ ಗಂಗಾಪ್ರವಾಹವು ಅವಿಚ್ಛಿನ್ನವಾಗಿ ಹರಿದು ಸದಾಕಾಲವೂ ಸಮುದ್ರದಲ್ಲಿ ಒಂದಾಗುತ್ತಿರುವಂತೆ- ಭಗವಂತನನ್ನು ಅನುಸಂಧಾನಮಾಡುವಿಕೆಯೇ ಅತ್ಯಂತ ಮಿಗಿಲಾದ ನಿರ್ಗುಣಭಕ್ತಿಯೋಗವೆನಿಸುತ್ತದೆ. ಇದು ಯಾವ ಫಲದ ಆಸೆಯೂ ಇಲ್ಲದ್ದು. ಇದರಿಂದ ತ್ರಿಗುಣಗಳನ್ನೂ ದಾಟಿ ಸಾಧಕನು ನನ್ನನ್ನೇ ಸೇರಿ ಒಂದಾಗಿ ಬಿಡುವನು.

(ಭಗವಂತನ ಚಿಂತನೆಯಲ್ಲಿಯೇ ಮುಳುಗಿದ್ದು ಯಾವ ಫಲವನ್ನೂ ಬಯಸದೆ

ನಿರಂತರವಾಗಿ ಧ್ಯಾನಿಸುತ್ತಾ ಭಕ್ತ- ಭಗವಂತ- ಎಂಬ ಭೇದವನ್ನೇ ಮರೆತು ಕೇವಲ ಧ್ಯಾನದಲ್ಲಿ ನೆಲೆನಿಂತುಬಿಟ್ಟಿರುವವನು ಆ ಭಗವಂತನಲ್ಲಿಯೇ ಒಂದಾಗಿಬಿಡುವನಾದ್ದರಿಂದ ಈ ಸ್ಥಿತಿಯನ್ನು ಆತ್ಯನ್ತಿಕಭಕ್ತಿಯೋಗವೆಂದು ಕರೆದಿದೆ.)

## ಭಕ್ತಿಮೀಮಾಂಸೆ

ಶ್ರೀಮದ್ಭಾಗವತದಲ್ಲಿ ಭಕ್ತಿಯ ವಿಷಯವಾಗಿ ವಿಸ್ತಾರವಾದ ಉಪದೇಶಗಳಿವೆ. ಮತ್ತು ಉಪಾಖ್ಯಾನ್ಯಗಳೂ ಇವೆ. ಆದ್ದರಿಂದ ಭಕ್ತಿಜ್ಞಾನಗಳ ಮಜಲನ್ನು ಮುಟ್ಟುವ ಕಾಲಕ್ಕೆ ಅವು ಭಗವಂತನಲ್ಲಿಯೇ ನೆಲೆನಿಂತುಬಿಡುತ್ತವೆ. ಹೀಗೆ ಭಕ್ತಿ - ಜ್ಞಾನ ಇವೆರಡನ್ನೂ ಸಾಧನಗಳಾಗಿಯೂ ಉಪಯೋಗಿಸಿ ಕಡೆಯಲ್ಲಿ ಪರಮಾತ್ಮನಲ್ಲಿ ಸಾಧಕನು ನೆಲೆನಿಂತು ಸಿದ್ಧನಾಗುತ್ತಾನೆ. ಆಗ ಯಾವ ಸಾಧ್ಯಸಾಧನಭೇದಗಳೂ ಇರುವದಿಲ್ಲ. ಶ್ರೀಮದ್ಭಾಗವತದಲ್ಲಿ ಭಕ್ತಿಯನ್ನೇ ಪ್ರಚುರವಾಗಿಟ್ಟುಕೊಂಡು ವಿಚಾರಮಾಡಲಾಗಿದೆ. ಇದಕ್ಕಾಗಿ ಉಪಾಖ್ಯಾಗಳನ್ನೂ ಗುರುಶಿಷ್ಯಸಂವಾದಗಳನ್ನೂ ಬಳಸಲಾಗಿದೆ. ಆದ್ದರಿಂದ ಈ ಭಕ್ತಿಜ್ಞಾನಗಳ ತತ್ತ್ವವನ್ನು ಸ್ವಲ್ಪ ವಿಚಾರಮಾಡೋಣ.

ವ್ಯವಹಾರದೃಷ್ಟಿಯಿಂದ ಭಕ್ತ-ಭಜನೀಯ ಎಂಬ ಭೇದವನ್ನಿಟ್ಟುಕೊಂಡು ಭಕ್ತಿಮೀಮಾಂಸೆಯು ಹೊರಟಿದೆ. ಹಾಗೆಯೇ ಜ್ಞಾನದ ಕ್ಷೇತ್ರದಲ್ಲಿ ಜ್ಞಾತೃ-ಜ್ಞೇಯ- ಎಂಬ ಭೇದವಿದೆ. ಆದರೆ ತತ್ತ್ವನಿರ್ಧಾರಣೆಯಾಗುವವರೆಗೆ ಈ ಭೇದಗಳು ಅನಿವಾರ್ಯವಾಗಿರುತ್ತವೆ. ತತ್ತ್ವವು ಅನುಭವಗಮ್ಯವಾದ ಅನಂತರ ಈ ದ್ವೈತಕಲ್ಪನೆ ಇಲ್ಲವಾಗುತ್ತದೆ. ಉದಾಹರಣೆಗೆ ನಮ್ಮ ಅನುಭವವನ್ನೇ ಪರಿಶೀಲಿಸೋಣ. ವ್ಯವಹಾರಕಾಲಕ್ಕೆ ಎಚ್ಚರದಲ್ಲಿ ಒಬ್ಬನೇ ಇರುವಾಗ ಭಯವಾಗುತ್ತದೆ. ಆದರೆ ಮಲಗಿ ನಿದ್ರೆಮಾಡುವಾಗ ಅಲ್ಲಿ ಜೊತೆಗಾರರು ಯಾರೂ ಇರುವದಿಲ್ಲ. ಆದರೆ ಆ ಸ್ಥಿತಿಯಲ್ಲಿ ಭಯಾದಿಗಳೂ ಇರುವದೇ ಇಲ್ಲ. ಈ ಅದ್ವೈತಾನುಭವವು ಪ್ರತಿಯೊಬ್ಬನಿಗೂ ಸಮಾನವಾಗಿದೆ. ಇದರಿಂದ ತಿಳಿಯಬೇಕಾದದ್ದೇನೆಂದರೆ : ನಮ್ಮ ನಿಜಸ್ವರೂಪವು ಅದ್ವೈತವೇ. ಅದನ್ನು ಅನುಭವದಿಂದಲೂ ನಾವು ತಿಳಿದಿದ್ದೇವೆ. ಆದ್ದರಿಂದ ಅನುಭವ ಕ್ಷೇತ್ರದಲ್ಲಿರುವಾಗ ಜ್ಞಾನ-ಭಕ್ತಿ ಎಂಬ ಸಾಧನಭೇದಗಳೇನೂ ಉಳಿದಿರುವದಿಲ್ಲ. ಹೀಗಿರುವದರಿಂದ ಭಕ್ತಿಜ್ಞಾನಗಳನ್ನು ಒಂದುಗೂಡಿಸಿ ಪರಮಪುರುಷಾರ್ಥವನ್ನು ಹೊಂದಬಹುದಾಗಿದೆ. ಶ್ರೀಮದ್‌ಭಾಗವತದಲ್ಲಿ ಭಕ್ತಿಯನ್ನೇ ಪ್ರತಿಪಾದಿಸಿರುವದರಿಂದ ದ್ವೈತಭಕ್ತಿಯನ್ನು ಪ್ರಾರಂಭದಲ್ಲಿ ಅಂಗೀಕರಿಸಿ ಭಗವಂತನ ಸಾಕ್ಷಾತ್ಕಾರವಾದಾಗ

ಅದನ್ನು ಭಗವಂತನದಲ್ಲಿಯೇ ಅಡಕವಮಾಡಿ ಅದ್ವೈತಾನುಭವದಲ್ಲಿ ನೆಲೆನಿಲ್ಲ ಬಹುದಾಗಿದೆ.

ಈಗ ಭಕ್ತಿಯು ಮಾನವನ ಅಂತಃಕರಣದಲ್ಲಿ ನೆಲಸುವದಕ್ಕೆ ಕೆಲವು ಸಾಧನಗಳನ್ನು ಕಪಿಲಮಹರ್ಷಿಗಳು ದೇವಹೂತಿಗೆ ಉಪದೇಶಿಸಿರುವದನ್ನು ಪರಿಶೀಲಿಸೋಣ. ಮೊದಲನೆಯದಾಗಿ ಭಗವಂತನ ಕಲ್ಯಾಣಗುಣಗಳನ್ನು ಇತಿಹಾಸಪುರಾಣಗಳ ಮೂಲಕ ಕೇಳಿ ತಿಳಿದುಕೊಳ್ಳುವದು. ಇದನ್ನು ಶ್ರವಣಭಕ್ತಿ- ಎನ್ನುತ್ತಾರೆ. ಹೀಗೆ ಕೇಳುವಾಗ ಏಕಾಗ್ರತೆ, ಪ್ರೇಮ, ಮನಸ್ಸಿನ ಸ್ಥಿರತೆ- ಇತ್ಯಾದಿಗಳಿರ ಬೇಕು. ಇದಕ್ಕಾಗಿ ಭಗವಂತನ ವಾಸಸ್ಥಾನ- ಎಂದರೆ ಮನೆಯಲ್ಲಿರುವ ದೇವಪೂಜಾಗೃಹ, ದೇವಾಲಯಗಳು, ಅಲ್ಲಿ ನಡೆಯುವ ಭಗವದಾರಾಧನೆಗಳು, ಭಗವಂತನ ಪ್ರತೀಕವಾದ ವಿಗ್ರಹಗಳ ದರ್ಶನ, ಪೂಜಾಭಿಷೇಕ- ಅಲಂಕಾರಾದಿಗಳು, ಅರ್ಚಕರು ನಡೆಯಿಸುವ ಉಪಚಾರಗಳು, ವೇದಪಠನ, ಸಹಸ್ರನಾಮಾರ್ಚನ, ಮಂಗಲಾರತಿ, ಮಂತ್ರಪುಷ್ಪಾದಿಸೇವೆಗಳು- ಇವುಗಳನ್ನು ಭಕ್ತಿಯಿಂದ ನೋಡುತ್ತಾ ಮನಸ್ಸಿನಲ್ಲಿ ನೆನೆಯಬೇಕು. ಹಾಗೆಯೇ ಭಗವಂತನನ್ನೇ ವಿವಿಧ ನಾಮರೂಪ ಗಳಲ್ಲಿಯೂ ತೋರಿಕೊಂಡಿರುತ್ತಾನೆಂದು ಭಾವಿಸಿಕೊಳ್ಳಬೇಕು. ಆಯಾ ಸಂದರ್ಭಕ್ಕೆ ತಕ್ಕಂತೆ ಭಗವಂತನನ್ನು ಸ್ತುತಿಸುವದು, ಪೂಜಿಸುವದು, ನಮಸ್ಕರಿಸುವದು- ಇತ್ಯಾದಿ ಉಪಚಾರಗಳಿಂದ ಅವನಲ್ಲಿಯೇ ಮನಸ್ಸನ್ನು ನೆಲೆಗೊಳಿಸಬೇಕು, ಭಗವಂತನು ಜಗತ್ತಿನಲ್ಲಿರುವ ಎಲ್ಲಾ ಚರಾಚರವಸ್ತುಗಳಲ್ಲಿಯೂ ಇರುತ್ತಾನೆ. ಆದ್ದರಿಂದ ಚೇತನಾಚೇತನವಾದ ಯಾವ ವಸ್ತುಗಳನ್ನು ಕಂಡರೂ ಅವುಗಳಲ್ಲಿ ಭಗವಂತನು ಇದ್ದಾನೆಂದು ಭಾವಿಸಿ ಅನುಸಂಧಾನಮಾಡಬೇಕು. ಹೀಗೆ ಮಾಡುತ್ತಿರುವಲ್ಲಿ ಯಾವಾಗ ತನ್ನ ಹೃದಯದಲ್ಲಿಯೂ ಆ ಭಗವಂತನೇ ಇರುತ್ತಾನೆಂದು ಭಾವನೆಯುಂಟಾಗು ವದೋ ಆಗ ಸಾಧಕನಿಗೆ ಸರ್ವವೂ ಭಗವಂತನೇ ಎಂಬ ಅನುಸಂಧಾನವು ಉಂಟಾಗುವದು. ಇನ್ನು ಹೀಗೆ ಸರ್ವಪದಾರ್ಥಗಳಲ್ಲಿಯೂ ಸರ್ವಜೀವರುಗಳಲ್ಲಿಯೂ ಭಗವದ್ಭಾವನೆಯೇ ಮನಸ್ಸಿನಲ್ಲಿ ದೃಢವಾದಾಗ ಭಕ್ತಿಯಿಂದ ಹಿರಿಯರು, ವಿದ್ಯಾವಂತರು, ಗುರುಗಳು, ತಪಸ್ವಿಗಳು ಪರಮಹಂಸರು- ಮುಂತಾದವರಲ್ಲಿ ಯಾರನ್ನಾದರೂ ಸಮೀಪಿಸಿದಾಗ ಕೂಡಲೆ ನಮಸ್ಕಾರ, ದಾನ, ಪೂಜಾ,ವಂದನಾದಿ ಉಪಚಾರಗಳಿಂದ ಗೌರವಿಸಿ ಅವರಲ್ಲೆಲ್ಲ ಭಗವಂತನನ್ನೇ ಕಾಣಬೇಕು. ಜೀವರುಗಳೆಲ್ಲರೂ ಭಗವಂತನ ಪ್ರತಿನಿಧಿಗಳೇ ಆದರೂ ನಾಲ್ಕು ಕಾಲಿನ ಪ್ರಾಣಿಗಳಿಗಿಂತ

ಮನುಷ್ಯರು ಅವರಲ್ಲಿ ಉತ್ತಮವರ್ಣದವರೂ ಅವರಲ್ಲಿಯೂ ವೇದಾಧ್ಯಯನ ಸಂಪನ್ನರೂ ಅವರಲ್ಲಿಯೂ ವೇದಾರ್ಥವನ್ನು ಬಲ್ಲವರೂ ಅವರಲ್ಲಿಯೂ ಯಜ್ಞ ಯಾಗಾದಿಗಳನ್ನು ಅನುಷ್ಠಾನ ಮಾಡಿದವರೂ ಶ್ರೇಷ್ಠರೆಂದು ತಿಳಿದು ಪೂಜಿಸಿ ಗೌರವಿಸಬೇಕು. ಭಗವಂತನು ಸಮಸ್ತ ಚರಾಚರಜೀವರುಗಳಲ್ಲಿ ಯಾವಾಗಲೂ ಇದ್ದೇ ಇರುತ್ತಾನೆ. ಸಾಧಕನು ಈ ಅನುಸಂಧಾನವನ್ನು ಅಳವಡಿಸಿಕೊಳ್ಳಬೇಕು. ಆದರೆ ಈ ಭಾವನೆಯನ್ನು ಕೈಬಿಟ್ಟು ಅಹಂಕಾರದಿಂದ ತಾನು ಎಲ್ಲರಿಗಿಂತ ಹೆಚ್ಚಿನ ಭಕ್ತನೆಂದೂ ಭಗವಂತನು ತನಗೆ ಅಧೀನನೆಂದೂ ತನ್ನಂಥ ಭಕ್ತನು ಬೇರೊಬ್ಬನಿಲ್ಲವೆಂದೂ ಭಾವಿಸಿದ್ದರೆ ಅದು ಭಗವಂತನ ಪೂಜೆಯ ಅನುಕರಣವಾಗಿ ಕೇವಲ ವಿಡಂಬನೆ ಯಾಗುತ್ತದೆ. ಆದ್ದರಿಂದ ಅಹಂಕಾರವನ್ನು ಪೂರ್ಣವಾಗಿ ಕೈಬಿಟ್ಟು ತೋರಿಕೆಯ ಆಚರಣೆಗಳನ್ನು ಕೈಗೊಳ್ಳದೆ ಅಂತಃಕರಣದಲ್ಲಿ ಭಗವಂತನನ್ನೇ ನೆನೆಯುತ್ತಾ ಅವನ ಗುಣಕರ್ಮಲೀಲೆಗಳನ್ನು ಅನುಸಂಧಾನಮಾಡುತ್ತಾ ಅವನನ್ನು ಸಮೀಕ್ಷಿಸಿ ಪ್ರಪಂಚವನ್ನು ಮರೆಯಬೇಕು.

ಈಗ ಕಪಿಲರು ದೇವಹೂತಿಗೆ ಉಪದೇಶಿಸುತ್ತಿರುವ ಭಕ್ತಿಯ ಪರಾಕಾಷ್ಠೆಯ ಉಪದೇಶವು ಹೀಗಿದೆ. ''ತಾಯೆ, ಕೇಳು, ನಾನು ಎಲ್ಲಾ ಜೀವರುಗಳಲ್ಲಿಯೂ ಇದ್ದೇನೆ. ಇದನ್ನು ಮನಸ್ಸಿಗೆ ತಂದುಕೊಳ್ಳುವವಳಾಗು. ಆಗ ನೀನು ಕಂಡದ್ದೆಲ್ಲವೂ ಕೇಳಿದ್ದೆಲ್ಲವೂ ಭಗವಂತನ ಆರಾಧನೆಯೇ ಆಗಿಬಿಡುತ್ತದೆ. ಮತ್ತು ನೀನು ಮಾಡುವ ಎಲ್ಲಾ ಕಾರ್ಯಗಳೂ ಅವನ ಪೂಜೆಯೇ ಆಗುತ್ತದೆ. ಅನಂತರ ಜಗತ್ತಿನ ಯಾವ ಸ್ಥಾವರಜಂಗಮಪ್ರಾಣಿಗಳನ್ನು ನೋಡಿದಾಗಲೂ ಮನಸ್ಸಿನಲ್ಲಿ ಭಗವಂತನ ನೆನಪು ಉಂಟಾಗಿ 'ಈಶ್ವರನೇ ಜೀವರೂಪ(ಕಲೆ)ದಿಂದ ಈ ಎಲ್ಲಾ ಸ್ಥಾವರಜಂಗಮ ಗಳಲ್ಲಿಯೂ ಒಳಹೊಕ್ಕಿರುತ್ತಾನೆ' ಎಂಬ ಭಾವನೆಯುಂಟಾಗುವದು. ಈ ಅನುಸಂಧಾನ ವನ್ನು ನಿರಂತರವಾಗಿ ಮಾಡುವವಳಾಗು'' ಎಂದು ಉಪದೇಶಿಸಿದರು.

ಆಗ ದೇವಹೂತಿಯು ಸಂತುಷ್ಟಳಾಗಿ ಭಗವಂತನನ್ನು ತನ್ನ ಮಗನೆಂಬುದನ್ನು ಕೈಬಿಟ್ಟು ಅವನೇ ಸರ್ವಾತ್ಮನೂ ಸರ್ವಜ್ಞನೂ ಆದ ಪರಬ್ರಹ್ಮನೆಂದು ಅರಿತುಕೊಂಡು ಅವನ ಅನುಗ್ರಹದಿಂದ ಮೋಹಪಾಶದಿಂದ ಬಿಡುಗಡೆಹೊಂದಿದಳು. ಇದರಿಂದ ಭಗವಂತನು ತನ್ನ ಕಪಿಲಾವತಾರದ ಕಾರ್ಯವು ಪೂರ್ಣವಾಯಿತೆಂದು ಭಾವಿಸಿ ತಾಯಿಯಾದ ದೇವಹೂತಿಗೆ (ವ್ಯವಹಾರದೃಷ್ಟಿಯಿಂದ) ನಮಸ್ಕರಿಸಿ ಆಕೆಯ

ಅಪ್ಪಣೆಯನ್ನು ಪಡೆದು ಹೊರಟುಹೋದನು. ಈ ಉಪಾಖ್ಯಾನವನ್ನು ಪರೀಕ್ಷಿತನಿಗೆ ಶುಕಮಹಾಮುನಿಗಳು ಉಪದೇಶಮಾಡಿದರು. ಈ ಕಥೆಯನ್ನು ಕೇಳಿದವರೂ ಭಗವದ್ಭಕ್ತರಾಗಿ ಶ್ರೀವಿಷ್ಣುವಿನ ಪರಂಧಾಮವನ್ನು ಹೊಂದುವರೆಂದು ಶ್ರೀ ಶುಕರು ತಿಳಿಸುತ್ತಾರೆ.

* * * * *

## 10. ಅಂತರ್ಯಾಮಿ ಭಗವಂತನ ಸ್ತುತಿ

**ಯೋಽನ್ತಃಪ್ರವಿಶ್ಯ ಮಮ ವಾಚಮಿಮಾಂ ಪ್ರಸುಪ್ತಾಂ**
**ಸಂಜೀವಯತ್ಯಖಿಲಶಕ್ತಿಧರಃ ಸ್ವಧಾಮ್ನಾ।**
**ಅನ್ಯಾಂಶ್ಚ ಹಸ್ತಚರಣಶ್ರವಣತ್ವಗಾದೀನ್**
**ಪ್ರಾಣಾನ್ನಮೋ ಭಗವತೇ ಪುರುಷಾಯ ತುಭ್ಯಮ್॥**

**ಶ್ರೀ ಮದ್ಭಾಗವತ 4-9-6**

(ಧ್ರುವನಿಂತೆಂದನು:) ಸೃಷ್ಟಿಯಲ್ಲಿರುವ ಸಮಸ್ತಶಕ್ತಿಗಳಿಗೂ ಆಧಾರನಾದ (ಭಗವಂತನು) ನನ್ನನ್ನು ಒಳಹೊಕ್ಕು ಅಲ್ಲಿಯೇ ಲೀನವಾಗಿದ್ದ (ಸ್ತುತಿರೂಪವಾದ) ಮಾತನ್ನು ಸಂಜೀವನಗೊಳಿಸಿ ತನ್ನ ಸಾನ್ನಿಧ್ಯದಿಂದ (ನನ್ನ) ಪ್ರಾಣಗಳು, ಕೈ, ಕಾಲು, ಕಿವಿ ಚರ್ಮವೇ ಮುಂತಾದ (ಕರ್ಮೇಂದ್ರಿಯ- ಜ್ಞಾನೇಂದ್ರಿಯಗಳನ್ನು) ಎಬ್ಬಿಸಿ ಸ್ತೋತ್ರಮಾಡುವಂತೆ ಪ್ರೇರೇಪಿಸಿದನೋ ಆ ಪರಮಪುರುಷನೂ ಭಗವಂತನೂ ಆದ (ನಾರಾಯಣನೆಂಬ) ನಿನಗೆ ನಮಸ್ಕಾರಗಳು.

**(ಧ್ರುವನು ಕೇವಲ ಐದು ವರ್ಷಗಳ ಬಾಲಕ. ಆದರೆ ನಾರದರ ಉಪದೇಶದಿಂದ ಭಗವಂತನನ್ನು ಸ್ತುತಿಸಲು ಆರಂಭಿಸಿ ಸ್ತೋತ್ರ ಮಾಡಿ ಸಾಕ್ಷಾತ್ಕಾರಿಸಿಕೊಂಡು ಆ ಭಗವಂತನ ಸನ್ನಿಧಿಯಲ್ಲಿ ಭಕ್ತಿಯಿಂದ ಹೀಗೆ ವಿಜ್ಞಾಪಿಸಿಕೊಂಡಿರುತ್ತಾನೆ.)**

### ಧ್ರುವೋಪಾಖ್ಯಾನ

ಶ್ರೀಮದ್ಭಾಗವತದಲ್ಲಿರುವ ಅನೇಕ ಕಥೆಗಳಲ್ಲಿ ಧ್ರುವೋಪಾಖ್ಯಾನವೂ ಒಂದಾಗಿದೆ. ಇದನ್ನು ಈಗ ಅನುಸಂಧಾನಮಾಡೋಣ. ಸ್ವಾಯಂಭುವಮನುವಿನ

ಪತ್ನಿಯಾದ ಶತರೂಪಾ- ಎಂಬುವಳಿಗೆ ಪ್ರಿಯವ್ರತ, ಉತ್ತಾನಪಾದ- ಎಂಬ ಇಬ್ಬರು ಗಂಡುಮಕ್ಕಳಿದ್ದರು. ಉತ್ತಾನಪಾದನಿಗೆ ಸುನೀತಿ, ಸುರುಚಿ- ಎಂಬ ಇಬ್ಬರು ಪತ್ನಿಯರಿದ್ದರು. ಸುನೀತಿಯ ಮಗನೇ ಧ್ರುವನು. ಒಮ್ಮೆ ಉತ್ತಾನಪಾದನು ಸಿಂಹಾಸನದಲ್ಲಿ ಕುಳಿತು ಸುರುಚಿಯ ಮಗನನ್ನು ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡಿದ್ದನು. ಇದನ್ನು ಕಂಡು ಧ್ರುವನಿಗೂ ಸಿಂಹಾಸನದ ಮೇಲೆ ಕುಳಿತುಕೊಳ್ಳಲು ಆಸೆಯಾಯಿತು. ಆದರೆ ಸುರುಚಿಯು ಧ್ರುವನಿಗೆ ಅವಕಾಶವನ್ನು ನೀಡಲಿಲ್ಲ. ರಾಜನೂ ಇಷ್ಟಪಡಲಿಲ್ಲ. ಆಗ ಧ್ರುವನು ತನ್ನ ತಾಯಿಯ ಬಳಿಗೆ ಬಂದು ತನಗಾದ ಅಪಮಾನವನ್ನು ಹೇಳಿಕೊಂಡನು. ಸುನೀತಿಯು ''ಮಗು, ನೀನು ನನ್ನ ಸವತಿಯಾದ ಸುರುಚಿಯ ಮಗನಲ್ಲ. ಆದ್ದರಿಂದ ನೀನು ರಾಜನಾಗಬೇಕಾದರೆ ತಪಸ್ಸುಮಾಡಿ ಆಕೆಯ ಮಗನಾಗಿ ಜನಿಸುವವನಾಗು'' ಎಂದು ಹೇಳಿದಳು. ಇದರಿಂದ ಧ್ರುವನಿಗೆ ಬಹಳ ದುಃಖವಾಯಿತು. ಅವನನ್ನು ಸಮಾಧಾನಗೊಳಿಸುತ್ತಾ ಸುನೀತಿಯು ಹೀಗೆಂದಳು : ''ಮಗು, ನೀನು ರಾಜಪದವಿಯನ್ನೇ ಬಯಸುವವನಾಗಿದ್ದಲ್ಲಿ ಭಗವಂತನೂ ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸುವವನೂ ಆದ ಶ್ರೀಮನ್ನಾರಾಯಣನನ್ನು ಕುರಿತು ತಪಸ್ಸು ಮಾಡು. ಆ ಭಗವಂತನ ಹೊರತು ಬೇರೆ ಯಾರೂ ನಿನ್ನ ದುಃಖಾಪಮಾನಗಳನ್ನು ಪರಿಹರಿಸಿ ಸಿಂಹಾಸನಾರೂಢನನ್ನಾಗಿ ಮಾಡುವವರು ಇಲ್ಲ'' ಎಂದು ಹೇಳಿದಳು. ಇದನ್ನು ಕೇಳಿ ಧ್ರುವನು ತನ್ನೊಳಗೆ ಸಮಾಧಾನವನ್ನು ತಂದುಕೊಂಡು ತಪಸ್ಸು ಮಾಡುವದಕ್ಕಾಗಿ ರಾಜಧಾನಿಯನ್ನು ಬಿಟ್ಟು ವನಕ್ಕೆ ಹೊರಟೇಬಿಟ್ಟನು.

ಧ್ರುವನು ಹೀಗೆ ತಪಸ್ಸಿಗೆ ಹೊರಡು ವನವನ್ನು ಪ್ರವೇಶಿಸಿದಾಗ ದೇವಮುನಿಗಳಾದ ನಾರದರು ಭೇಟಿಯಾದರು. ಚಿಕ್ಕವಯಸ್ಸಿನ ಈ ರಾಜಕುಮಾರನನ್ನು ಗುರುತಿಸಿ ನಡೆಸ ಸಂಗತಿಯನ್ನೆಲ್ಲ ತಿಳಿದುಕೊಂಡರು. ಧ್ರುವನನ್ನು ಕುರಿತು ಹೀಗೆಂದರು. ''ಮಗು, ನಿನ್ನ ವೃತ್ತಾಂತವೆಲ್ಲ ತಿಳಿಯಿತು. ನಿನ್ನ ಬಲತಾಯಿಯು ಹೇಳಿದ್ದೆಲ್ಲವೂ ನಿನ್ನ ಶ್ರೇಯಸ್ಸಿಗೇ ಕಾರಣವಾಗಿದೆ. ಈಗ ನಿನು ಜಗತ್ತಿನ ಸ್ಥಿತಿಕಾರಕನೂ ಭಕ್ತಾನುಗ್ರಹತತ್ಪರನೂ ಆದ ವಾಸುದೇವಭಗವಂತನನ್ನು ಕುರಿತು ತಪಸ್ಸುಮಾಡುವವನಾಗು. ಅದಕ್ಕಾಗಿ ಯಮುನಾನದಿಯ ದಡದಲ್ಲಿರುವ 'ಮಧುವನ'ವೆಂಬ ತಪೋವನಕ್ಕೆ ಹೋಗಿ ವಾಸುದೇವನನ್ನು ಸ್ಮರಿಸುತ್ತಾ ತಪಸ್ಸನ್ನು ಮುಂದುವರಿಸುವವನಾಗು. ಪ್ರಾಣಾಯಾಮದಿಂದ ಮನಸ್ಸನ್ನು ಸ್ಥಿರಗೊಳಿಸಿಕೊಂಡು ಶ್ರೀವತ್ಸವೆಂಬ ಗುರುತುಳ್ಳವನೂ ನೀಲಮೇಘಶ್ಯಾಮನೂ, ವನಮಾಲೆಯನ್ನು ಧರಿಸಿರುವವನೂ ಕಿರೀಟಕುಂಡಲಾದಿಗಳಿಂದ

ಅಲಂಕೃತನೂ ಕೌಸ್ತುಭವೆಂಬ ಆಭರಣವನ್ನು ಧರಿಸಿರುವವನೂ ಆದ ಭಗವಂತನನ್ನು ನೆನೆಯುತ್ತಾ '**ಓಂ ನಮೋ ಭಗವತೇ ವಾಸುದೇವಾಯ**' ಎಂಬ ದ್ವಾದಶಾಕ್ಷರ ಮಂತ್ರವನ್ನು ಜಪಿಸುತ್ತಾ ತಪಸ್ಸನ್ನು ಮುಂದುವರೆಸುವವನಾಗು ಎಂದು ಉಪದೇಶಿಸಿ ಹೊರಟುಹೋದರು.

ಆಗ ಧ್ರುವನು ನಾರದರ ಉಪದೇಶದಂತೆಯೇ ಶ್ರೀಮನ್ನಾರಾಯಣನನ್ನು ಕುರಿತು ತಪಸ್ಸುಮಾಡುತ್ತಾ ಪ್ರಾರಂಭದಲ್ಲಿ ಮೂರು ದಿನಗಳಿಗೊಮ್ಮೆ ಬೇಲದಹಣ್ಣು ಮತ್ತು ಇತರ ಹಣ್ಣುಗಳನ್ನು ಆಹಾರವಾಗಿ ಸ್ವೀಕರಿಸುತ್ತಾ ತಪಸ್ಸನ್ನು ಮುಂದುವರೆಸಿದನು. ಈ ನಡುವೆ ನಾರದರು ಧ್ರುವನ ತಂದೆಯನ್ನೂ ಸಂದರ್ಶಿಸಿ, ಅವನ ತಪೋನಿಷ್ಠೆಯನ್ನು ತಿಳಿಸಿ ಸಮಾಧಾನಮಾಡಿದರು. ಇತ್ತ ಧ್ರುವನು ತನ್ನ ತಪಸ್ಸನ್ನು ಮತ್ತಷ್ಟು ತೀವ್ರಗೊಳಿಸಿದನು. ಇದರ ಪರಿಣಾಮವಾಗಿ ಮೂರು ಲೋಕಗಳೂ ಅಲ್ಲಾಡಿದವು. ಆಗ ದೇವತೆಗಳು ಶ್ರೀನಾರಾಯಣನ ಬಳಿಗೆ ಬಂದು ಧ್ರುವನ ತಪಸ್ಸಿನ ಪರಿಣಾಮವನ್ನು ತಿಳಿಸಿ ಶರಣಾಗತರಾದರು. ಆಗ ಶ್ರೀಮನ್ನಾರಾಯಣನು ದೇವತೆಗಳನ್ನು ಕುರಿತು 'ಹೆದರಬೇಡಿರಿ; ನಿಮ್ಮ ಸ್ಥಳಗಳಿಗೆ ಹಿಂದಿರುಗಿರಿ. ಧ್ರುವನನ್ನು ನಾನು ಅನುಗ್ರಹಿಸಿ ಲೋಕಕಲ್ಯಾಣವನ್ನು ಉಂಟುಮಾಡುತ್ತೇನೆ' ಎಂದು ಸಮಾಧಾನಪಡಿಸಿದರು.

ಭಗವಾನ್ ವಾಸುದೇವನು ಧ್ರುವನನ್ನು ಅನುಗ್ರಹಿಸುವದಕ್ಕಾಗಿ ಗರುಡಾರೂಢನಾಗಿ ಬಂದು ಧ್ರುವನ ಮುಂದೆ ನಿಂತುಕೊಂಡನು. ಆದರೆ ಧ್ರುವನು ಕಣ್ಣುಬಿಟ್ಟುನೋಡಲಿಲ್ಲ. ಏಕೆಂದರೆ ತನ್ನ ಹೃದಯದಲ್ಲಿಯೇ (ಧ್ರುವನು) ಭಗವಂತನನ್ನು ಸಾಕ್ಷಾತ್ತಾಗಿ ನೋಡುತ್ತಾ ಧ್ಯಾನಿಸುತ್ತಿದ್ದನು. ಇದನ್ನರಿತ ಭಗವಂತನು ಧ್ರುವನ ಹೃದಯದಲ್ಲಿ ಕಾಣಿಸಿಕೊಳ್ಳುತ್ತಿದ್ದ ತನ್ನ ರೂಪವನ್ನು ಮರೆಮಾಡಿಬಿಟ್ಟನು. ಕೂಡಲೆ ಧ್ರುವನು ಗಾಬರಿಯಿಂದ ಕಣ್ಣುತೆರೆದು ಹೊರಗೆ ನೋಡಲಾಗಿ ಭಗವಂತನು ಅಲ್ಲಿಯೇ ತನ್ನ ದರ್ಶನವನ್ನು ಕರುಣಿಸಿದನು. ಮತ್ತು ಕೇವಲ ಐದು ವರ್ಷಗಳ ಬಾಲಕನಾದ ಧ್ರುವನಿಗೆ ಸ್ತೋತ್ರಮಾಡುವ ಪ್ರಜ್ಞೆಯುಂಟಾಗುವಂತೆ ಅನುಗ್ರಹಿಸಿದನು. ಆಗ ಧ್ರುವನು ಹೀಗೆ ಸ್ತೋತ್ರಮಾಡಿದನು :

**ಯೋಽನ್ತಃಪ್ರವಿಶ್ಯ ಮಮ ವಾಚಮಿಮಾಂ ಪ್ರಸುಪ್ತಾಂ**
**ಸಂಜೀವಯತ್ಯಖಿಲಶಕ್ತಿಧರಃ ಸ್ವಧಾಮ್ನಾ ।**

ಅನ್ಯಾಂಶ್ಚ ಹಸ್ತಚರಣಶ್ರವಣತ್ವಗಾದೀನ್
ಪ್ರಾಣಾನ್ನಮೋ ಭಗವತೇ ಪುರುಷಾಯ ತುಭ್ಯಮ್ ॥

''ಯಾವ ಅಂತರ್ಯಾಮಿಯಾದ ಭಗವಂತನು ನನ್ನನ್ನು ಒಳಹೊಕ್ಕು ಮರೆಯಾಗಿದ್ದ ನನ್ನ ಮಾತುಗಳನ್ನು ಸಂಜೀವನಗೊಳಿಸಿದನೋ ಮತ್ತು ನನ್ನ ಕೈ-ಕಾಲು-ಕಿವಿ-ಪ್ರಾಣಾದಿಗಳನ್ನು ಎಚ್ಚರಿಸಿದನ ಅಂಥ ಭಗವಂತನಾದ ನಿನಗೆ ನಮಸ್ಕಾರಗಳು.''

ಹೀಗೆ ಸ್ತುತಿಮಾಡಿದ ಅನಂತರ ಭಗವಂತನು ''ಎಲೈ ರಾಜಕುಮಾರನೆ, ನಿನ್ನ ಮನಸ್ಸಿನಲ್ಲಿರುವ ರಾಜಪದವಿಯ ವಿಚಾರವು ತಿಳಿದಿದೆ. ಅದರಂತೆ ಮೂವತ್ತಾರು ಸಹಸ್ರವರ್ಷಗಳ ಕಾಲ ನೀನು ರಾಜ್ಯಾಧಿಪತ್ಯವನ್ನು ನಡೆಯಿಸಿ ಎಲ್ಲಾ ರಾಜಭೋಗಗಳನ್ನೂ ಅನುಭವಿಸಿ ಕೊನೆಯಲ್ಲಿ ನನ್ನನ್ನು ಸ್ಮರಿಸಿಕೊಳ್ಳುತ್ತೀಯೆ. ಆಗ ನೀನು ಋಷಿಗಳ ಲೋಕಕ್ಕೂ ಮೇಲಿರುವ ಹಾಗೂ ಹಿಂದಿರುಗಿ ಬರಲಾಗದ ಶಾಶ್ವತವಾದ ದಿವ್ಯಲೋಕವನ್ನು ಪಡೆಯುವೆ'' ಎಂದು ಅನುಗ್ರಹಿಸಿ ಅಂತರ್ಧಾನನಾದನು. ಅದರಂತೆಯೇ ಧ್ರುವನು ಭಗವಂತನು ಅನುಗ್ರಹಿಸಿದ ದಿವ್ಯಲೋಕದಲ್ಲಿ ಸಾವಿರಾರು ವರ್ಷಗಳ ಕಾಲ ರಾಜ್ಯಭಾರವನ್ನು ನಡೆಸಿ ಕಡೆಯಲ್ಲಿ ಭಗವಂತನು ಕರುಣಿಸಿದ ಧ್ರುವಲೋಕದಲ್ಲಿ ಈಗಲೂ ವಿರಾಜಮಾನನಾಗಿರುತ್ತಾನೆ.

ಈ ಕಥೆಯ ಮೂಲಕ ನಾವು ತಿಳಿಯಬಹುದಾದದ್ದೇನೆಂದರೆ : ಚಿಕ್ಕ ವಯಸ್ಸಿನಿಂದಲೇ ಭಗವಂತನ ಪರಿಚಯವನ್ನು ಮಾಡಿಕೊಳ್ಳುತ್ತಾ ಅವನ ದಿವ್ಯನಾಮವನ್ನು ಭಜಿಸುತ್ತಾ ಹಾಗೂ ಚಿಂತಿಸುತ್ತಾ ದುರ್ಲಭವಾದ ಮಾನುಷಜನ್ಮವನ್ನು ಸಾರ್ಥಕಪಡಿಸಿಕೊಳ್ಳಬೇಕು. ನಮ್ಮ ವಿದ್ಯಾಭ್ಯಾಸದ ಚೌಕಟ್ಟಿನಲ್ಲಿ ಭಗವಂತನ ನಾಮಕೀರ್ತನೆ-ಚಿಂತನೆಗಳು ಇರಬೇಕು. ಇದಕ್ಕಾಗಿ ಸಜ್ಜನರ ಸಹವಾಸ ಹಾಗೂ ಸದ್ಗ್ರಂಥಗಳ ಪಠನವನ್ನೂ ಮಾಡುತ್ತಿರಬೇಕು. ಇಂಥ ಪ್ರಯತ್ನಕ್ಕೆ ಶ್ರೀಮದ್ಭಾಗವತವು ತೆರೆದ ದ್ವಾರವಾಗಿದೆ.

* * * * *

# 11. ಸರ್ವಾತ್ಮನಾದ ಭಗವಂತನ ಸ್ವರೂಪ

**ತತ್ ತ್ವಂ ನರೇಂದ್ರ ಜಗತಾಮಥ ತಸ್ಥುಷಾಂ ಚ**
**ದೇಹೇಂದ್ರಿಯಾಸು ಧಿಷಣಾತ್ಮಭಿರಾವೃತಾನಾಮ್।**
**ಯಃ ಕ್ಷೇತ್ರವಿತ್ತಪತಯಾ ಹೃದಿ ವಿಷ್ವಗಾವಿಃ**
**ಪ್ರತ್ಯಕ್ ಚಕಾಸ್ತಿ ಭಗವಾನ್ ತಮವೇಹಿ ಸೋಽಸ್ಮಿ॥**

**ಶ್ರೀ ಮದ್ಭಾಗವತ 4-22-37**

ಎಲೈ ರಾಜನೆ, ದೇಹ, ಇಂದ್ರಿಯ, ಪ್ರಾಣ, ಬುದ್ಧಿ ಹಾಗೂ ಅಹಂಕಾರಗಳಿಂದ ಆವರಿಸಲ್ಪಟ್ಟಿರುವ ಎಲ್ಲಾ ಸ್ಥಾವರಜಂಗಮಪ್ರಾಣಿಗಳ ಹೃದಯದಲ್ಲಿಯೂ ಜೀವಕ್ಕೆ ನಿಯಾಮಕನಾಗಿ ಅಂತರ್ಯಾಮಿಯಾಗಿ ಆತ್ಮರೂಪದಿಂದ ಎಲ್ಲೆಲ್ಲಿಯೂ ಬೆಳಗುತ್ತಿರುವ ಯಾವ ಭಗವಂತನಿರುವನೋ ಅವನನ್ನು ನೀನು 'ಸೋಽಸ್ಮಿ' 'ಆ ಪರಮಾತ್ಮನೇ ನಾನಾಗಿದ್ದೇನೆ' ಎಂದು ತಿಳಿಯುವವನಾಗು.

**(ಜಗತ್ತಿನಲ್ಲಿ ಒಬ್ಬನೇ ಸೂರ್ಯನು ಹೇಗೋ ಹಾಗೆಯೇ ಸೃಷ್ಟಿಯಲ್ಲಿರುವ ಸ್ಥಾವರಜಂಗಮಪ್ರಾಣಿಗಳೆಲ್ಲಕ್ಕೂ ಆತ್ಮನು ಒಬ್ಬನೇ ಆಗಿದ್ದಾನೆ. ಅವನೇ ವಾಸುದೇವನು ಭುವನತ್ರಯಗಳನ್ನೂ ವ್ಯಾಪಿಸಿಕೊಂಡಿರುವವನು. ಅವನಿಗಿಂತ ಬೇರೆಯಾಗಿ ಯಾವದೂ ಇಲ್ಲ. ಹೀಗೆ ಆ ಭಗವಂತನೇ ಎಲ್ಲರ ಆತ್ಮನೇ ಆಗಿದ್ದು ಅವನೇ ನಾನು- ಎಂದು ತಿಳಿದಾಗ ಮಾನವನು ಕೃತಾರ್ಥನಾಗುವನು.)**

## ವಾಸುದೇವತತ್ತ್ವಪ್ರಾಪ್ತಿಸಾಧನ

ಶ್ರೀಮದ್ಭಾಗವತದಲ್ಲಿರುವ ವಂಶಾನುಚರಿತೆಯಲ್ಲಿ ಪೃಥುಮಹಾರಾಜನ ಚರಿತ್ರೆಯನ್ನು ಈಗ ವಿಚಾರಮಾಡೋಣ. ಇವನು ಧ್ರುವನ ಮೊಮ್ಮಗನು. ಧ್ರುವನ ಪುತ್ರನಾದ ವೇನ- ಎಂಬವನು ದುರಾಚಾರನೂ ರಾಜ್ಯದ ಆಡಳಿತಕ್ಕೆ ಅನರ್ಹನೂ ಆಗಿದ್ದನಾದ್ದರಿಂದ ಋಷಿಗಳು ಅವನನ್ನು ರಾಜಪದವಿಯಿಂದ ತೆಗೆದುಹಾಕಿ ಅವನ ಪುತ್ರನಾದ ಪೃಥುಮಹಾರಾನಿಗೆ ರಾಜ್ಯಪಟ್ಟಾಭಿಷೇಕವನ್ನು ಮಾಡಿದರು. ವೇನನ ತೊಡೆಯನ್ನು ಋಷಿಗಳು ಮಥನಮಾಡಿದಾಗ ಪೃಥುವು ಹುಟ್ಟಿದನು. ಇವನು ತನ್ನ ಪಿತಾಮಹನಾದ ಧ್ರುವನಂತೆಯೇ ಭಗವದ್ಭಕ್ತನೂ ಪರಮಭಾಗವತನೂ ಆಗಿದ್ದನು. ಆದ್ದರಿಂದ ಪ್ರಜೆಗಳಿಗೆ ಸುಖಶಾಂತಿಗಳು ಲಭಿಸಿದ್ದವು.

ಒಮ್ಮೆ ಬ್ರಹ್ಮನ ಮಾನಸಪುತ್ರರೂ ಅಧ್ಯಾತ್ಮತತ್ತ್ವಜ್ಞಾನಿಗಳೂ ಆದ ಸನಕ, ಸನಂದನ, ಸನತ್ಕುಮಾರ, ಸನತ್ಸುಜಾತ- ಎಂಬ ನಾಲ್ವರು ಬ್ರಹ್ಮರ್ಷಿಗಳು ಪೃಥುಮಹಾರಾಜನ ಸಭೆಗೆ ಬಂದರು. ಆಗ ರಾಜನು ಎದ್ದುನಿಂತು ಭಕ್ತಿಯಿಂದ ಆ ಮಹಾತ್ಮರುಗಳನ್ನು ಬರಮಾಡಿಕೊಂಡು ಚಿನ್ನದ ಸಿಂಹಾಸನಗಳಲ್ಲಿ ಕುಳ್ಳಿರಿಸಿ ಗೌರವಿಸಿದನು. ಅನಂತರ ಆ ಮಹಾತ್ಮರನ್ನು ಕುರಿತು ಹೀಗೆಂದನು : ''ಪೂಜ್ಯರಾದ ದೇವರ್ಷಿಗಳೆ, ನಿಮಗೆ ಸುಸ್ವಾಗತ. ಯಾರಿಗೆ ಬ್ರಾಹ್ಮಣರು ಸಂತುಷ್ಟರಾಗಿ ಅನುಗ್ರಹಿಸುತ್ತಾರೆಯೋ ಅವರಿಗೇ ಭಗವಾನ್ ಶ್ರೀ ಮಹಾವಿಷ್ಣುವೂ ತೃಪ್ತನಾಗಿ ಭೋಗಮೋಕ್ಷಗಳನ್ನು ದಯಪಾಲಿಸುತ್ತಾನೆ.'' ಆಗ ಋಷಿಗಳು ಸಂತುಷ್ಟರಾಗಿ ''ಮಹಾರಾಜ, ಬಹಳ ಸಂತೋಷ. ನೀನು ಎಲ್ಲವನ್ನೂ ತಿಳಿದಿದ್ದೀಯೆ. ಆದರೆ ಸಮಸ್ತರಿಗೂ ಒಳ್ಳೆಯದಾಗಲಿ- ಎಂಬ ದೃಷ್ಟಿಯಿಂದ ಕೆಲವು ಹಿತವಚನಗಳನ್ನು ಹೇಳುತ್ತೇವೆ'' ಎಂದು ತಿಳಿಸುತ್ತಾ ಶ್ರೀ ಸನತ್‌ಕುಮಾರಋಷಿಗಳು ಹೀಗೆಂದರು :

''ರಾಜೇಂದ್ರನೆ ನಿನಗೆ ಭಗವಾನ್ ನಾರಾಯಣನ ಅಡಿದಾವರೆಗಳ ಗುಣಗಳನ್ನು ವರ್ಣಿಸುವದರಲ್ಲಿಯೇ ಪೂರ್ಣವಾದ ಮತ್ತು ಸ್ಥಿರವಾದ ಭಕ್ತಿಯಿದೆ. ಇದು ಸುಲಭವಾಗಿ ಲಭ್ಯವಾಗುವದಿಲ್ಲ. ಆದರೂ ಭಾಗ್ಯವಶದಿಂದ ಅದು ದೊರಕಿದ್ದೇ ಆದರೆ- ಬೇರಾವ ಉಪಾಯದಿಂದಲೂ ಬಿಟ್ಟುಹೋಗದೆ ಇರುವ ಹೃದಯಸ್ಥವಾದ ವಾಸನೆಯೆಂಬ ಮಲವನ್ನು ಅದು ಸಂಪೂರ್ಣವಾಗಿ ನಾಶಮಾಡಿಬಿಡುವದು. ಜೀವರಿಗೆ ಕಲ್ಯಾಣಮಾರ್ಗವು ಯಾವದೆಂದರೆ : ಆತ್ಮನಲ್ಲದ, ಅನಾತ್ಮವೆನಿಸುವ ದೇಹವೇ ಮುಂತಾದವುಗಳಲ್ಲಿ ವೈರಾಗ್ಯವುಂಟಾಗುವದೇ ಸಾಧನವೆಂದು ನಿಶ್ಚಯಮಾಡಲಾಗಿದೆ. ಗುರುಗಳ ಮತ್ತು ಶಾಸ್ತ್ರಗಳ ವಚನಗಳಲ್ಲಿ ನಂಬಿಕೆಯನ್ನಿಡುವದು, ಭಾಗವತಧರ್ಮಗಳನ್ನು ಆಚರಿಸುವದು, ತತ್ತ್ವವನ್ನು ತಿಳಿದುಕೊಳ್ಳುವ ಬಯಕೆಯನ್ನೂ ಜ್ಞಾನಯೋಗನಿಷ್ಠೆಯನ್ನೂ ಹೊಂದಿರುವದು, ಯೋಗೇಶ್ವರನಾದ ಶ್ರೀಹರಿಯನ್ನು ಉಪಾಸನೆಮಾಡುವದು, ಹಣ ಹಾಗೂ ಇಂದ್ರಿಯಭೋಗಗಳಲ್ಲಿ ನಿರತರಾಗಿರುವವರ ಗೋಷ್ಠಿಯನ್ನು ಆಶ್ರಯಿಸದೆ ಇರುವದು, ಭಗವದ್ಗುಣಾಮೃತವನ್ನು ಪಾನಮಾಡುವ ಕಾಲವನ್ನು ಹೊರತುಪಡಿಸಿ ಉಳಿದ ಸಮಯಗಳಲ್ಲಿಯೂ ಆತ್ಮಚಿಂತನೆಯಲ್ಲೇ ತೊಡಗುತ್ತಾ ಏಕಾಂತವಾಗಿ ಇರುವದು, ನಿವೃತ್ತಿಧರ್ಮದಲ್ಲಿ ನಿಷ್ಠೆಯನ್ನು ಹೊಂದಿರುವದು, ಆತ್ಮಹಿತವನ್ನೇ ಅನುಸಂಧಾನಮಾಡುತ್ತಿರುವದು, ಶ್ರೀಹರಿಯ ಪವಿತ್ರಚರಿತ್ರೆಗಳನ್ನು ಅಮೃತದಂತೆ ಸವಿಯುತ್ತಿರುವದು, ನಿಷ್ಕಾಮಭಾವದಿಂದ ಯಮನಿಯಮಾದಿ

ಸಾಧನಗಳನ್ನು ಪಾಲಿಸುತ್ತಿರುವದು, ಎಂದಿಗೂ ಯಾರನ್ನೂ ನಿಂದಿಸದೆ ಇರುವದು, ಭಗವಂತನಲ್ಲಿ ದೃಢನಂಬಿಕೆಯನ್ನಿಟ್ಟು ಯೋಗಕ್ಷೇಮಗಳ ಬಗೆಗೆ ಪ್ರಯತ್ನಿಸದೆ ಇರುವದು. ಶೀತೋಷ್ಣಗಳೇ ಮುಂತಾದವನ್ನು ಸಹಿಸಿಕೊಳ್ಳುವದು, ಭಕ್ತಜನರಿಗೆ ಸುಖವನ್ನುಂಟುಮಾಡುವ ಶ್ರೀಹರಿಯ ಗುಣಗಳನ್ನು ಮತ್ತೆ ಮತ್ತೆ ವರ್ಣಿಸುತ್ತಿರುವದು, ಮತ್ತು ಭಕ್ತಿಭಾವವನ್ನು ಬೆಳೆಯಿಸಿಕೊಳ್ಳುವದು- ಇವುಗಳಿಂದ ಸಾಧಕನಿಗೆ ಕಾರ್ಯಕಾರಣರೂಪವಾದ ಇಡಿಯ ಜಗತ್ತಿನ ವಿಷಯದಲ್ಲಿ ವೈರಾಗ್ಯವುಂಟಾಗುವದು.

ಪರಬ್ರಹ್ಮದಲ್ಲಿ ದೃಢವಾದ ಪ್ರೇಮವುಂಟಾದರೆ ಸಾಧಕರು ಅದರ ಪ್ರಾಪ್ತಿಗಾಗಿ ಸದ್ಗುರುವನ್ನು ಶರಣುಹೊಂದುತ್ತಾನೆ. ಜ್ಞಾನ, ವೈರಾಗ್ಯಗಳ ಪ್ರಬಲವಾದ ವೇಗದಿಂದ ವಾಸನಾಶೂನ್ಯವಾಗಿ ಅವಿದ್ಯೆ, ಅಸ್ಮಿತಾ, ರಾಗ, ದ್ವೇಷ, ಅಭಿನಿವೇಶ- ಎಂಬ ಐದು ಕ್ಲೇಶಗಳಿಂದ ಕೂಡಿದ ಅಹಂಕಾರರೂಪವಾದ ತನ್ನ ಲಿಂಗಶರೀರವನ್ನು- ಅಗ್ನಿಯು ಕಟ್ಟಿಗೆಯಿಂದ ಪ್ರಕಟವಾಗಿ ಆ ಕಟ್ಟಿಗೆಗಳನ್ನೇ ಸುಟ್ಟುಹಾಕುವಂತೆ- ನಾಶಪಡಿಸಿ ಕೊಳ್ಳುವನು. ಹೀಗೆ ಲಿಂಗಶರೀರವು ನಷ್ಟವಾಗಲು ಆತನನ್ನು ಕರ್ತೃತ್ವವೇ ಮುಂತಾದ ಗುಣಗಳು ಬಿಟ್ಟುತೊಲಗುವವು. ಕನಸಿನಲ್ಲಿ ಬಗೆಬಗೆಯ ಪದಾರ್ಥಗಳನ್ನು ಕಂಡರೂ ಎಚ್ಚರವಾದಾಗ ಅವುಗಳಾವುವೂ ಕಾಣಿಸುವದಿಲ್ಲವಷ್ಟೆ. ಹಾಗೆಯೇ ಆತನಿಗೆ ಮನುಷ್ಯನ ಶರೀರದ ಹೊರಗೆ ಕಾಣಿಸುವ ಮಡಕೆಯೇ ಮುಂತಾದ ಪದಾರ್ಥಗಳೂ, ಒಳಗಡೆಯಲ್ಲಿ ಅನುಭವಕ್ಕೆ ಬರುವ ಸುಖ, ದುಃಖ- ಮುಂತಾದವುಗಳೂ ಕಾಣಿಸದೆಹೋಗುವವು. ಈ ಸ್ಥಿತಿಯು ಬರುವದಕ್ಕೆ ಮೊದಲು ಈ ಪದಾರ್ಥಗಳೇ ಜೀವಾತ್ಮ-ಪರಮಾತ್ಮರ ಮಧ್ಯದಲ್ಲಿ ಅಡ್ಡಗೋಡೆಯಂತೆ ಇದ್ದವು.

ಅಂತಃಕರಣವೆಂಬ ಉಪಾಧಿಯು ಎಲ್ಲಿಯವರೆಗೆ ಇರುವದೋ ಅಲ್ಲಿಯವರೆಗೆ ಮಾತ್ರವೇ ಜೀವಾತ್ಮ, ಶಬ್ದಸ್ಪರ್ಶಗಳೇ ಮುಂತಾದ ಇಂದ್ರಿಯವಿಷಯಗಳು ಮತ್ತು ಇವೆರಡಕ್ಕೂ ಸಂಬಂಧವನ್ನುಂಟುಮಾಡುವ ಅಹಂಕಾರದ ಅನುಭವವೂಂಟಾಗುವದು, ಅನಂತರ ಇರುವದಿಲ್ಲ. ಹೊರಗಿನ ಪ್ರಪಂಚದಲ್ಲಿಯೂ ಕೂಡ ನೀರು, ಕನ್ನಡಿಗಳು - ಮುಂತಾದ ನಿಮಿತ್ತಗಳು ಇದ್ದಾಗ ಮಾತ್ರ ಬಿಂಬ ಪ್ರತಿಬಿಂಬ ಭೇದಗಳು ಕಾಣಿಸುತ್ತವೆಯಲ್ಲವೆ? ವಿಷಯಚಿಂತನೆಯಲ್ಲಿಯೇ ಯಾರು ಆಸಕ್ತರಾಗಿರುವರೋ- ಅವರ ಇಂದ್ರಿಯಗಳು ವಿಷಯಗಳಲ್ಲಿ ಸಿಕ್ಕಿಹಾಕಿಕೊಂಡು ಮನಸ್ಸನ್ನೂ ತಮ್ಮ ಕಡೆಗೆ ಸೆಳೆದುಕೊಳ್ಳುವವು. ಹೀಗಾದ ಅನಂತರ ಏನಾಗುವದೆಂದರೆ : ಯಾವದಾದರೂ

ಜಲಾಶಯತೀರದಲ್ಲಿ ಬೆಳೆದಿರುವ ದರ್ಭೆಯೇ ಮುಂತಾದ ಹುಲ್ಲುಗಳು ತಮ್ಮ ಬೇರುಗಳಿಂದ ಅದರ ನೀರನ್ನು ಸೆಳೆಯುವಂತೆ- ಆ ಇಂದ್ರಿಯಾಸಕ್ತವಾದ ಮನಸ್ಸು ಬುದ್ಧಿಯ ವಿಚಾರಶಕ್ತಿಯನ್ನು ಕಸಿದುಕೊಳ್ಳುವದು. ವಿಚಾರಶಕ್ತಿಯು ನಷ್ಟವಾದರೆ ಹಿಂದು ಮುಂದಿನ ಸಂಗತಿಗಳ ನೆನಪು ಹೊರಟುಹೋಗುವದು ಹೀಗೆ ಸ್ಮೃತಿಯು ನಾಶಹೊಂದಲಾಗಿ ಜ್ಞಾನವು ನಷ್ಟವಾಗುವದು. ಈ ಜ್ಞಾನನಾಶವನ್ನೇ ಪಂಡಿತರು ''ತಾನು ತನ್ನನ್ನೇ ಕಸಿದುಕೊಳ್ಳುವಿಕೆ, ತಾನು ತನ್ನನ್ನೇ ಹತ್ಯೆಮಾಡಿಕೊಳ್ಳುವಿಕೆ'' ಎಂಬುದಾಗಿ ಕರೆಯುವರು. ಇತರ ಪದಾರ್ಥಗಳಲ್ಲಿ ಯಾವದಕ್ಕೋಸ್ಕರ 'ಇದು ಪ್ರಿಯ' ಎಂಬ ಭಾವನೆ ಯುಂಟಾಗುತ್ತದೆಯೋ ಆಗ ಆ ಆತ್ಮವು ತನಗೆ ತಾನೇ ನಷ್ಟವಾಗುವದರಿಂದ ಸ್ವಾರ್ಥಹಾನಿ ಯಾದಂತಾಗುತ್ತದೆ. ಸ್ವಾರ್ಥಹಾನಿಗಿಂತಲೂ ದೊಡ್ಡಹಾನಿಯು ಜೀವಕ್ಕೆ ಯಾವದಿದೆ?

ಹೀಗೆ ಆತ್ಮತತ್ತ್ವದ ಉಪದೇಶವನ್ನು ಪಡೆದು ಪೃಥುಮಹಾರಾಜನು ಋಷಿಗಳನ್ನು ಗೌರವಿಸುತ್ತಾ ತನ್ನ ಕೃತಜ್ಞತೆಗಳನ್ನು ಸಮರ್ಪಿಸಿದನು. ಈ ಪೃಥುಮಹಾ ರಾಜನ ಚರಿತ್ರೆಯನ್ನು ಆದರದಿಂದ ಕೇಳುವವನು ಶ್ರೀಹರಿಯಲ್ಲಿ ದೃಢವಾದ ಭಕ್ತಿಯನ್ನು ಸಂಪಾದಿಸುವನು.

* * * * *

## 12. ರುದ್ರಗೀತೆ

**ಯೋ ಮಾಯಯೇದಂ ಪುರುರೂಪಯಾಸೃಜ-**
**ದ್ಬಿಭರ್ತಿ ಭೂಯಃ ಕ್ಷಪಯತ್ಯವಿಕ್ರಿಯಃ ।**
**ಯದ್ಭೇದಬುದ್ಧಿಃ ಸದಿವಾತ್ಮದುಃಸ್ಥಯಾ**
**ತಮಾತ್ಮತನ್ತ್ರಂ ಭಗವನ್ ಪ್ರತೀಮಹಿ ॥**

**ಶ್ರೀ ಮದ್ಭಾಗವತ 4-24-61**

ಎಲೈ ಭಗವಂತನೆ, ನಾನಾರೂಪಗಳನ್ನು ಧರಿಸಿರುವ ನೀನು ಈ ಜಗತ್ತನ್ನು ಸೃಷ್ಟಿಸಿ, ಸಲಹಿ, ಸಂಹರಿಸುತ್ತಿದ್ದರೂ ನೀನು ಯಾವ ವಿಕಾರಕ್ಕೂ ಒಳಪಡದವನಾಗಿರುವೆ. ಭೇದಬುದ್ಧಿಯನ್ನು ಉಂಟುಮಾಡಿ ಜಗತ್ತಿನಲ್ಲಿ ಎಲ್ಲರ ಮೇಲೂ ಪ್ರಭಾವವನ್ನು ಬೀರುತ್ತಿರುವ ಆ ಮಾಯೆಯು ನಿನ್ನ ವಿಷಯದಲ್ಲಿ ಮಾತ್ರ ತನ್ನ ಪ್ರಭಾವವನ್ನು ಬೀರಲಾರದು. ಏಕೆಂದರೆ ನೀನು ಪರಮಸ್ವತಂತ್ರನು.

(ಅಧ್ಯಾತ್ಮಕ್ಷೇತ್ರದಲ್ಲಿ ತ್ರಿಮೂರ್ತಿಗಳೆಲ್ಲರೂ ಪರಬ್ರಹ್ಮನ ಅಂಶಭೂತರೇ ಆಗಿದ್ದಾರೆ. ಜಗತ್ತಿನ ಸೃಷ್ಟಿ-ಸ್ಥಿತಿ-ಲಯ-ಕಾರ್ಯಗಳ ನಿಮಿತ್ತ ಬ್ರಹ್ಮ-ವಿಷ್ಣು-ರುದ್ರ-ಎಂಬ ಹೆಸರುಗಳು ಭಗವಂತನೊಬ್ಬನಿಗೇ ಉಪಯೋಗಿಸಲ್ಪಟ್ಟಿವೆ. ಭಾಷಾಭೇದದಿಂದ ಜಲ, ನೀರು, ತಣ್ಣಿ-ಎಂದಂತೆ ಒಬ್ಬನೇ ಆದ ಭಗವಂತನನ್ನು ಹೀಗೆ ಶ್ರೀ ರುದ್ರನು ಸ್ತುತಿಸಿರುತ್ತಾನೆ.)

## ರುದ್ರನು ಉಪದೇಶಿಸಿದ ವಾಸುದೇವತತ್ತ್ವ

ಶ್ರೀ ಶುಕಮುನಿಗಳು ಪರೀಕ್ಷಿತಮಹಾರಾಜನಿಗೆ ವಾಸುದೇವತತ್ತ್ವವನ್ನು ಪ್ರಖ್ಯಾತರಾದ ರಾಜರ್ಷಿಗಳ ಪರಂಪರೆಯುಳ್ಳ ಕಥೆಗಳ ಮೂಲಕ ತಿಳಿಸುತ್ತಾ ಭಗವದ್ಭಕ್ತರಲ್ಲಿ ಅಗ್ರಗಣ್ಯರಾದ ಪ್ರಚೇತಸರನ್ನು ಕುರಿತು ಶ್ರೀ ರುದ್ರಭಗವಂತನೇ ವಾಸುದೇವತತ್ತ್ವವನ್ನು ಉಪದೇಶಮಾಡಲಾರಂಭಿಸಿದನು- ಎಂದು ಕಥೆಯನ್ನು ಮುಂದುವರೆಸುತ್ತಾರೆ. ಈ ತತ್ತ್ವೋಪದೇಶವನ್ನು ಮನನಮಾಡೋಣ. ಭಗವಾನ್ ಶ್ರೀ ರುದ್ರನು ಹೀಗೆಂದನು. ''ಎಲೈ ಪ್ರಚೇತಸರೆ, ಸಾವಧಾನರಾಗಿ ಕೇಳಿರಿ; ಜಗತ್ತಿಗೆ ಆಧಾರವಾಗಿರುವ ಪದ್ಮವನ್ನು ನಾಭಿಯಲ್ಲಿ ಹೊಂದಿದವನಾಗಿ ಪಂಚಭೂತಗಳಿಗೂ ಪಂಚತನ್ಮಾತ್ರೆಗಳಿಗೂ ಇಂದ್ರಿಯಗಳಿಗೂ ನಿಯಾಮಕನಾಗಿ, ಪ್ರಶಾಂತನಾಗಿ ಎಲ್ಲಕ್ಕೂ ಮಿಗಿಲಾಗಿ ಶಿಖರಸ್ಥಾನದಲ್ಲಿರುವ ಮೂಲಪುರುಷನಾದ ಸ್ವಯಂಪ್ರಕಾಶನಾದ ವಾಸುದೇವನಿಗೆ ವಂದನೆಗಳು. ಅವ್ಯಕ್ತರೂಪನೂ ಅಂತರಹಿತನೂ ಸರ್ವಸಂಹಾರಕನೂ ಆಗಿರುವ ಸಂಕರ್ಷಣರೂಪನಾದ ದೇವನಿಗೆ ನಮಸ್ಕಾರಗಳು. ಹಾಗೂ ಇಂದ್ರಿಯಗಳಿಗೆ ಒಡೆಯನಾಗಿ ಅವುಗಳಿಗೆ ಆತ್ಮನಾಗಿದ್ದು ನಿಶ್ಚಲನಾಗಿರುವ ಸ್ವಯಂಪ್ರಕಾಶನಾದ ನಾರಾಯಣನಿಗೆ ವಂದನೆಗಳು. ಜಗತ್ತನ್ನು ಚೇತನಗೊಳಿಸಿ ಜೀವರುಗಳಲ್ಲಿ ಅಂತರ್ಯಾಮಿಯಾಗಿದ್ದುಕೊಂಡು ಇಂದ್ರಿಯಗಳಿಗೆ ಶಕ್ತಿಯನ್ನು ನೀಡಿ ಸ್ವರ್ಗ-ಮೋಕ್ಷಗಳೆಂಬ ಪುರುಷಾರ್ಥಗಳನ್ನು ಸಾಧಕರಿಗೆ ಕೊಡುವವನೂ ಆದ ಭಗವಂತನಿಗೆ ವಂದನೆಗಳು. ಚಾತುರ್ಮಾಸ್ಯವೇ ಮುಂತಾದ ಯಜ್ಞಗಳಿಗೆ ಸಾಧನವಾಗಿದ್ದು ಅವುಗಳನ್ನು ವಿಸ್ತರಿಸುವವನೂ ಅಗ್ನಿದೇವತಾರೂಪನೂ ಆದ ದೇವನಿಗೆ ನಮಸ್ಕಾರಗಳು. ಮತ್ತು ವೇದಗಳಿಗೆ ಒಡೆಯನಾಗಿದ್ದು ವೇದೋಕ್ತವಾದ ಯಜ್ಞಗಳ ಅಧಿಪತಿಯಾದವನಿಗೆ ನಮಸ್ಕಾರಗಳು. ಮೂರುಲೋಕಗಳ ಪಾಲಕನೂ ದೇಹೇಂದ್ರಿಯಪ್ರಾಣಮನಆದಿಗಳಿಗೆ ಶಕ್ತಿಯನ್ನು ನೀಡಿರುವ ಪರಮಪುರುಷನಿಗೂ ವಂದನೆಗಳು. ಇಂದ್ರಿಯಗಳಿಗೆ ಗೋಚರನಾಗದೆ ಇಂದ್ರಿಯವಿಷಯಗಳಿಂದ ಊಹಿಸಿ ತಿಳಿಯಲ್ಪಟುವವನೂ ಒಳಗೂ ಹೊರಗೂ ಎಲ್ಲೆಲ್ಲಿಯೂ ವ್ಯಾಪಿಸಿರುವವನೂ

ಮಹಾತೇಜೋಮಯನೂ ಪರಮಮುಕ್ತಿಸ್ವರೂಪನೂ ಪುಣ್ಯದರ್ಶನನೂ ಜ್ಞಾನಾಕಾಶರೂಪನೂ ಆದವನಿಗೆ ವಂದನೆಗಳು. ಪ್ರವೃತ್ತಿ-ನಿವೃತ್ತಿರೂಪವಾದ ಧರ್ಮಗಳಿಗೆ ಆಶ್ರಯನೂ ಧರ್ಮಾಧರ್ಮಗಳೆರಡಕ್ಕೂ ನಿಯಾಮಕನೂ ಆದ ದೇವಶ್ರೇಷ್ಠನಿಗೆ ವಂದನೆಗಳು.''

''ಭಕ್ತರ ಕಾಮನೆ(ಬಯಕೆ)ಗಳನ್ನು ಪೂರ್ಣಗೊಳಿಸುವವನೂ ಮಂತ್ರರೂಪನೂ ಮಹಾಧರ್ಮಸ್ವರೂಪನೂ ಅಪರಿಮಿತವಾದ, ಕುಂದದೆ ಇರುವ ಮೇಧಾಶಕ್ತಿಯುಳ್ಳವನೂ ಪುರಾಣಪುರುಷನೂ ಸಾಂಖ್ಯಯೋಗಸಾಧನಗಳಿಗೆ ಪ್ರಭುವೂ ಪರಾ, ಪಶ್ಯನ್ತೀ, ಮಧ್ಯಮಾ, ವೈಖರೀ ಎಂಬ ನಾಲ್ಕು ಬಗೆಯ ಶಬ್ದಗಳ ಸ್ವರೂಪನೂ ಆಗಿರುವ ದೇವದೇವನಿಗೆ ಸಾಷ್ಟಾಂಗ ವಂದನೆಗಳು.''

''ನಿನ್ನ ದಿವ್ಯಮಂಗಳವಿಗ್ರಹವನ್ನು ನೋಡಬೇಕೆಂದು ಹಂಬಲಿಸುತ್ತಿರುವ ನಮಗೆ- ಭಾಗವತಶ್ರೇಷ್ಠರಿಂದ ಪೂಜಿಸಲ್ಪಟ್ಟು ಆತ್ಮೀಯ ಭಕ್ತರಾಗಿರುವವರಿಗೆ ಅತ್ಯಂತ ಪ್ರಿಯತಮನಾಗಿ ಎಲ್ಲಾ ಇಂದ್ರಿಯಗಳಿಗೂ ತೃಪ್ತಿಯನ್ನುಂಟುಮಾಡುವ ಗುಣಗಳಿಂದ ಸಂಪನ್ನನಾಗಿರುವ ನಿನ್ನ ದರ್ಶನವನ್ನು ದಯಪಾಲಿಸುವವನಾಗು, ಆ ನಿನ್ನ ದಿವ್ಯಮಂಗಳವಿಗ್ರಹ (ಶರೀರ)ವಾದರೊ, ಕಾರ್ಮುಗಿಲಿನಂತೆ ತೇವದ ಹೊಳಪಿನಿಂದಲೂ ನೀಲವರ್ಣದಿಂದಲೂ ಕಂಗೊಳಿಸುತ್ತಾ ಸಮಸ್ತಸೌಂದರ್ಯದ ಸಾರಸಂಗ್ರಹವಾಗಿದೆ. ಮನೋಹರವಾದ ನಾಲ್ಕು ನಿಡುದೋಳುಗಳು, ಚೆಲುವಿನ ನೆಲೆಮನೆಯಾದ ಮುಖಾರವಿಂದ, ಕಮಲದಳದಂತಹ ಕಣ್ಣುಗಳು, ಸುಂದರವಾದ ಹುಬ್ಬುಗಳು, ಎಸಳಾದ ಮೂಗು, ಮೋಹಕವಾದ ಸುಲಿಹಲ್ಲುಗಳು, ಕಮನೀಯವಾದ ಕೆನ್ನೆಗಳು, ಮತ್ತು ನಗೆಮೊಗ, ಸಮವಾಗಿ ಶೋಭಿಸುತ್ತಿರುವ ಎರಡು ಕಿವಿಗಳಲ್ಲಿ ಧರಿಸಿರುವ ಆಭರಣಗಳು, ಪ್ರೀತಿಯಿಂದ ನಗುವನ್ನು ಸೂಸುವಂತಿರುವ ಕಡೆಗಣ್ಣಿನ ನೋಟಗಳು, ಮೆರೆಯುತ್ತಿರುವ ಮುಂಗುರುಳುಗಳು, ಕಮಲಪುಷ್ಪದ ಕೇಸರಗಳಂತೆ ಕಾಂತಿಕಿರಣಗಳನ್ನು ಚೆಲ್ಲುತ್ತಿರುವ ಪೀತಾಂಬರ, ಥಳಥಳಿಸುವ ಕುಂಡಲಗಳು, ಮಿರುಗುತ್ತಿರುವ ಕಿರೀಟ, ಕಂಕಣ, ಹಾರ, ಕಾಲಂದುಗೆ, ಒಡ್ಯಾಣಗಳೇ ಮುಂತಾದ ಚಿತ್ರವಿಚಿತ್ರವಾದ ಬಗೆಬಗೆಯ ಆಭರಣಗಳು, ಮತ್ತು ಶಂಖ, ಚಕ್ರ, ಗದಾ, ಪದ್ಮ ವನಮಾಲೆ, ಮತ್ತು ಕೌಸ್ತುಭಮಣಿ- ಇವುಗಳು ಅಪೂರ್ವವಾದ ಕಾಂತಿಯಿಂದ ಕಂಗೊಳಿಸುತ್ತಿವೆ. ಸಿಂಹದ ಹೆಗಲನ್ನು ಹೋಲುವ ಉಬ್ಬಿದ ಹೆಗಲಿನ ಸೊಗಸು, ಸುಂದರವಾದ ಕೊರಳಿನಲ್ಲಿ ಹೊಳೆಯುತ್ತಿರುವ ಹಾರ, ಮತ್ತು ಕೌಸ್ತುಭಮಣಿಗಳ ಕಾಂತಿ, ಶ್ರೀಲಕ್ಷ್ಮೀದೇವಿಗೆ

ನಿತ್ಯನಿವಾಸಮಂದಿರವಾಗಿ ಶ್ರೀವತ್ಸಚಿಹ್ನೆಯಿಂದ ಮಿನುಗುತ್ತಿರುವ ವಿಶಾಲವಾದ ವಕ್ಷಸ್ಥಲವು ಕಣ್ಣುಗಳಿಗೆ ಹಬ್ಬವಾಗಿದೆ. ಉಚ್ಛ್ವಾಸನಿಃಶ್ವಾಸಗಳ ಏರಿಳಿತಗಳಿಂದ ಚಲಿಸುತ್ತಿರುವ ತ್ರಿವಳಿಗಳಿಂದ ಒಪ್ಪುತ್ತಿರುವ ತೆಳುವಾದ ಹೊಟ್ಟೆಯಲ್ಲಿ ತನ್ನಿಂದ ಹೊರಬಂದ ವಿಶ್ವವನ್ನು ಮತ್ತೆ ತನ್ನಲ್ಲಿಯೇ ಲಯಗೊಳಿಸಿಕೊಂಡಿದೆಯೋ ಎಂಬಂತಿರುವ ಆಳವಾದ ಸುಳಿನಾಭಿಯು ಶೋಭಿಸುತ್ತಿದೆ. ಶ್ಯಾಮಲವಾದ ನಡುವಿನಲ್ಲಿ ಪೀತಾಂಬರವೂ ಉಡಿದಾರವೂ ಶೋಭಿಸುತ್ತಿದೆ. ಪರಸ್ಪರ ಸಮನಾಗಿರುವ ಸುಂದರವಾದ ಪಾದಗಳು, ಮೇಗಾಲು, ಮೊಣಕಾಲು ಮತ್ತು ತೊಡೆಗಳಿಂದ ರಮಣೀವಾಗಿರುವ ಶ್ರೀದೇಹ, ಮತ್ತು ಶರತ್‌ಕಾಲದ ಕಮಲದಳದ ಕಾಂತಿಯನ್ನು ನಾಚಿಸುವ ಅಡಿದಾವರೆಗಳು, ಅದರಲ್ಲಿ ರಾರಾಜಿಸುತ್ತಿರುವ ಕಾಲುಂಗುರಗಳಿಂದ ಹೊರಹೊಮ್ಮುತ್ತಿರುವ ಪ್ರಕಾಶವು ಜೀವರುಗಳ ಹೃದಯದ ಕತ್ತಲೆಯನ್ನು ತೊಡೆದುಹಾಕುತ್ತಿದೆ. ಭಕ್ತರ ಭಯವನ್ನು ನೀಗಿಸಿ ಅವರಿಗೆ ಆಶ್ರಯಸ್ವರೂಪವಾಗಿರುವ ಇಂಥ ನಿನ್ನ ದಿವ್ಯರೂಪದ ದರ್ಶನವನ್ನು ದಯಪಾಲಿಸು, ಮಹಾದೇವ! ಜಗದ್ಗುರುವೆ! ಅಜ್ಞಾನದ ಇರುಳಿನಲ್ಲಿ ದಾರಿಗಾಣದೆ ತತ್ತರಿಸುತ್ತಿರುವ ನಮ್ಮಂಥ ಬಡಜೀವಿಗಳಿಗೆ ದಾರಿತೋರಿಸುವ ಗುರು ನೀನೇ ಅಲ್ಲವೆ?

ಆತ್ಮಶುದ್ಧಿಯನ್ನು ಬಯಸುವವನು ಇಂಥ ನಿನ್ನ ದಿವ್ಯಮೂರ್ತಿಯನ್ನೇ ಧ್ಯಾನಿಸಬೇಕು. ಇದರಲ್ಲಿ ನೆಲೆಗೊಂಡ ಭಕ್ತಿಯೋಗವು ಸ್ವಧರ್ಮಾಚರಣೆಯನ್ನು ಮಾಡುವವರಿಗೆ ತಾನೇ ಅಭಯವನ್ನು ನೀಡುವದು. ಇತರ ಎಲ್ಲಾ ದೇಹಿಗಳಿಗೂ ದುರ್ಲಭನಾಗಿದ್ದರೂ ನೀನು ಭಕ್ತರಿಗೆ ಸುಲಭವಾಗಿ ದೊರೆಯುತ್ತೀಯೆ. ಸ್ವರ್ಗರಾಜ್ಯದಲ್ಲಿರುವ ಇಂದ್ರಾದಿಗಳೂ ನಿನ್ನನ್ನು ಬಯಸುವರು. ಏಕಾಂತಭಾವವುಳ್ಳ ಆತ್ಮಜ್ಞರಿಗೆ ನೀನೇ ಗತಿಯಲ್ಲವೆ? ಸತ್ಪುರುಷರುಗಳಿಗೂ ದುರ್ಲಭನಾಗಿರುವ ನಿನ್ನನ್ನು ಅನನ್ಯವಾದ ಮತ್ತು ಏಕಾಂತವಾದ ಭಕ್ತಿಯಿಂದ ಪ್ರಸನ್ನಗೊಳಿಸಿಕೊಂಡ ಬಳಿಕ ನಿನ್ನ ಪಾದಕಮಲಗಳನ್ನು ಬಿಟ್ಟು ಬೇರಾವುದನ್ನು ಯಾವನಾದರೂ ತಾನೆ ಬಯಸಿಯಾನು? ವೀರ್ಯಶೌರ್ಯಗಳಿಂದ ಕೂಡಿದ, ಆದುರುತ್ತಿರುವ ತನ್ನ ಹುಬ್ಬಿನಾಟಗಳಿಂದಲೇ ಇಡಿಯ ಜಗತ್ತನ್ನು ಸಂಹಾರಮಾಡುವ ಯಮನು ಕೂಡ ನಿನ್ನ ಅಡಿದಾವರೆಗಳಲ್ಲಿ ಶರಣುಹೊಂದಿರುವ ಪ್ರಾಣಿಗಳ ಮೇಲೆ ತನ್ನ ಅಧಿಕಾರವನ್ನು ನಡೆಸಲಾರನು.'' ಹೀಗೆ ಶ್ರೀರುದ್ರನು ಪ್ರಚೇತಸರಿಗೆ ಉಪದೇಶಿಸಿದನು. ಅನಂತರ ಅವರ ಭಕ್ತಿಪೂರ್ವಕವಾದ ಪೂಜೆಯನ್ನು ಸ್ವೀಕರಿಸಿ ಅಂತರ್ಧಾನನಾದನು.

* * * * *

## 13. ಜೀವಬ್ರಹ್ಮರ ಐಕ್ಯೋಪದೇಶ

**ಅಹಂ ಭವಾನ್ ನ ಚಾನ್ಯಸ್ತ್ವಂ ತ್ವಮೇವಾಹಂ ವಿಚಕ್ಷ್ವಭೋಃ।**
**ನ ನೌ ಪಶ್ಯನ್ತಿ ಕವಯಃ ಛಿದ್ರಂ ಜಾತು ಮನಾಗಪಿ**

**ಯಥಾ ಪುರುಷ ಆತ್ಮಾನಂ ಏಕಮಾದರ್ಶಚಕ್ಷುಷೋಃ।**
**ದ್ವಿಧಾ ಭೂತಮವೇತ ತಥೈವಾನ್ತರಮಾವಯೋಃ**

ಶ್ರೀ ಮದ್ಭಾಗವತ **4-28-62-63**

ನಾರದರು ಹೀಗೆಂದರು : ''ಎಲೈ ರಾಜನೆ, ಕೇಳು ನಾನು ನೀನಾಗಿರುವೆ; ನೀನೇ ನಾನಾಗಿರುವೆನು. ಬೇರೆಯಲ್ಲ. ಇದನ್ನು ವಿಚಾರಮಾಡು. ಜ್ಞಾನಿಗಳು ಸ್ವಲ್ಪವೂ ನನ್ನ ಹಾಗೂ ನಿನ್ನಲ್ಲಿ ಭೇದವನ್ನು ಕಾಣುವದಿಲ್ಲ. ಹೇಗೆ ಮನುಷ್ಯನು ತನ್ನ ಎರಡು ಕಣ್ಣುಗಳನ್ನು ಕನ್ನಡಿಯಲ್ಲಿ ನೋಡಿಕೊಂಡಾಗ ಎರಡರ ಜೊತೆಗೆ ಮತ್ತೆರಡು ಕಣ್ಣುಗಳು ಕಾಣಿಸುವವೋ, ಆದರೆ ಪ್ರತಿಬಿಂಬದ ಕಣ್ಣುಗಳು ಬಿಂಬದ ಕಣ್ಣುಗಳಿಗಿಂತ ಬೇರೆಯಲ್ಲವೋ ಹಾಗೆ ನಾನು, ನೀನು ಜ್ಞಾನದೃಷ್ಟಿಯಿಂದ ಇಬ್ಬರಲ್ಲ. ಈ ತತ್ತ್ವವನ್ನು ವಿಚಾರಮಾಡಿ ಕೃತಾರ್ಥನಾಗು.'' ಹೀಗೆ ನಾರದರು ಪ್ರಾಚೀನಬರ್ಹಿರಾಜನಿಗೆ ತತ್ತ್ವೋಪದೇಶವನ್ನು ಮಾಡಿದರು.

**(ಪರಮಾರ್ಥ (ಜ್ಞಾನ) ದೃಷ್ಟಿಯಲ್ಲಿ ದ್ವೈತವು ಇಲ್ಲವಾಗಿದ್ದು ಜೀವಪರಮಾತ್ಮ ಭೇದವು ಅಜ್ಞಾನದಿಂದ ಕಲ್ಪಿತವಾಗಿದೆ- ಎಂದಭಿಪ್ರಾಯ.)**

### ಪುರಂಜನೋಪಾಖ್ಯಾನದ ತಾತ್ಪರ್ಯ

ನಾರದಮಹರ್ಷಿಗಳು ಹೀಗೆಂದರೆ : ''ಎಲೈ ಪ್ರಾಚೀನಬರ್ಹಿಮಹಾರಾಜನೆ, ಕೇಳು : ಪುರಂಜನ ಎಂದರೆ ಪುರವನ್ನು ನಿರ್ಮಿಸುವವನು- ಎಂದರ್ಥ. ಜೀವನು ತನ್ನ ಕರ್ಮಗಳಿಗೆ ತಕ್ಕಂತೆ ಶರೀರವೆಂಬ ಪುರವನ್ನು ನಿರ್ಮಿಸುವದರಿಂದ ಅವನನ್ನು ಪುರಂಜನನೆಂದು ಕರೆಯಲಾಗಿದೆ. ಆತನ ಗೆಳೆಯನಾದ 'ಅವಿಜ್ಞಾತ' ಎಂಬವನು ಈಶ್ವರನೇ ಆಗಿದ್ದಾನೆ. ಆತನನ್ನು ಹೆಸರು, ಗುಣ, ಕರ್ಮಗಳಿಂದ ಯಾವನೂ ಸಂಪೂರ್ಣವಾಗಿ ತಿಳಿಯಲಾರನು. ಶರೀರವೆಂಬ ಪುರದಲ್ಲಿಯೇ ಅವನು ಜೀವನೊಡನೆಯೇ ಇದ್ದರೂ ಜೀವನು ಆತನನ್ನು ತಿಳಿಯಲಾರನು. ಆದ್ದರಿಂದ ಅವನು

'ಅವಿಜ್ಞಾತ'ನೆನಿಸಿರುತ್ತಾನೆ. ಜೀವನು ಪ್ರಾಕೃತವಿಷಯಗಳನ್ನು ಭೋಗಿಸಲು ಒಂಭತ್ತು ದ್ವಾರಗಳುಳ್ಳ ಶರೀರವನ್ನು ರಚಿಸಿಕೊಂಡನು. ಪುರಂಜನೀ ಎನ್ನುವದೇ ಬುದ್ಧಿ ಅಥವಾ ವಿದ್ಯೆಯು. ಈ ಬುದ್ಧಿನಿಮಿತ್ತದಿಂದಲೇ ಶರೀರಾದಿಗಳಲ್ಲಿ ಮಾನವನಿಗೆ 'ನಾನು' ಎಂಬ ಅಹಂಕಾರ-ಮಮಕಾರಗಳುಂಟಾಗಿವೆ. ಆಗ ಅವನು ಇಂದ್ರಿಯಗಳ ಮೂಲಕ ವಿಷಯಗಳನ್ನು ಅನುಭವಿಸುತ್ತಾನೆ. ಹತ್ತು ಇಂದ್ರಿಯಗಳ ಒಡೆಯನಾದ ಮನಸ್ಸೆಂಬಾತನು ಮಹಾಬಲಶಾಲಿಯಾದ ಭಟನು. ಶಬ್ದವೇ ಮುಂತಾದ ಐದು ವಿಷಯಗಳೇ ಪಾಂಚಾಲದೇಶ. ಅದರ ಮಧ್ಯದಲ್ಲಿ ಈ ನವದ್ವಾರಗಳ ಪುರ(ಶರೀರ)ವು ಶೋಭಿಸುತ್ತಿದೆ. ಜೀವನು ತನ್ನ ಹತ್ತು ಇಂದ್ರಿಯಗಳ ದ್ವಾರಗಳಿಂದ ವಿಷಯಗಳಲ್ಲಿ ಅನುರಕ್ತನಾಗುವನು. ಇದೇ ಸಂಸಾರವು.

ಶಬ್ದಾದಿವಿಷಯಗಳ ರೂಪವಾದ ಪ್ರವೃತ್ತಿಯಿಂದ ಜೀವನು ಕರ್ಮಕಾಂಡದಲ್ಲಿ ತೊಡಗಿದಾಗ ಪ್ರವೃತ್ತಿಧರ್ಮನಿಷ್ಠನೆನಿಸುವನು. ಮನಃಪ್ರಧಾನವಾದ ಕರ್ಮಗಳೂ ಉಪಾಸನೆ- ಎಂಬ ಹೆಸರಿನಿಂದ ಜೀವಾತ್ಮನ ಸದ್ಗತಿಗೆ ಕಾರಣವಾಗುವವು. ಆಗ ಪಿತೃಯಾಣ, ದೇವಯಾನ- ಎಂಬ ಮಾರ್ಗಗಳಿಂದ ಜೀವನು ಸ್ವರ್ಗಲೋಕ, ಬ್ರಹ್ಮಲೋಕಗಳವರೆಗೂ ಹೋಗುವವನಾಗು ಕರ್ಮಫಲಗಳನ್ನು ಬಹುಕಾಲ ಅನುಭವಿಸುವನು. ಪುಣ್ಯವು ಕ್ಷಯವಾದಾಗ ಮತ್ತೆ ಮನುಷ್ಯಲೋಕವನ್ನೇ ಸೇರುವನು. ವೇದೋಕ್ತಕರ್ಮಗಳು ಇದಕ್ಕಿಂತ ಹೆಚ್ಚಿನ ಸದ್ಗತಿಯನ್ನು ಉಂಟುಮಾಡಲಾರವು.

ನಾರದಮಹರ್ಷಿಗಳು ತಮ್ಮ ಉಪದೇಶಗಳನ್ನು ಹೀಗೆ ಮುಂದುವರಿಸಿದರು. ''ಎಲೈ ರಾಜನೆ, ಕೇಳು ಕರ್ಮದಿಂದಲೇ ಕರ್ಮವನ್ನೂ ಕರ್ಮಫಲಗಳನ್ನೂ ಆತ್ಯಂತಿಕವಾಗಿ ನಾಶಗೊಳಿಸಲಾಗುವದಿಲ್ಲ. ಮಾನವನಿಗೆ ಒಂದು ಕನಸು ಬಿದ್ದಾಗ ಅದರಲ್ಲಿಯೇ ಇನ್ನೊಂದು ಕನಸಾಗಬಹುದು. ಹೇಗೆಂದರೆ : ಒಂದು ಕನಸಿನಲ್ಲಿ ರಾಜನಾದವನಿಗೆ ಮತ್ತೊಂದು ಕನಸಿನಲ್ಲಿ ಯುದ್ಧದಲ್ಲಿ ಪರಾಜಯವಾಗಿ ರಾಜ್ಯಭ್ರಷ್ಟನಾಗಬಹುದು. ಆದರೆ ಅವೆರಡೂ ಮಿಥ್ಯೆಯೇ (ಸುಳ್ಳೇ) ಆಗಿದ್ದು ಅವನಿಗೆ ಅಂಟಿರುವದಿಲ್ಲ. ಆಗ ಜೀವನಿಗೆ ರಾಜನಾದದ್ದಾಗಲಿ, ತಿರುಕನಾದದ್ದಾಗಲಿ- ಯಾವದೂ ನಿಜವಲ್ಲವೆಂದು ಗೊತ್ತಾಗುವದು. ಇದರ ಕೊನೆಯ ತೀರ್ಮಾನವೇನೆಂದರೆ: ಕರ್ಮಫಲವೂ ಹೀಗೆಯೇ ಜೀವನನ್ನು ಆಕ್ರಮಿಸಿ ನಷ್ಟವಾದರೂ ಜೀವತ್ವದಿಂದ ಬಿಡುಗಡೆಯಾಗುವದಿಲ್ಲ. ಆದ್ದರಿಂದ ಕರ್ಮದಿಂದ ಸಂಸಾರದುಃಖವನ್ನು

ಜೀವತ್ವವನ್ನೂ ನಾಶಗೊಳಿಸಿಕೊಳ್ಳುವದು ಸಾಧ್ಯವೇ ಇಲ್ಲವೆಂದು ತೀರ್ಮಾನವಾಯಿತು.''

ಈಗ ನಾರದಮಹರ್ಷಿಗಳು ಮುಂದುವರೆದು ಹೀಗೆ ತಿಳಿಸುತ್ತಾರೆ : ''ಎಲೈ ರಾಜನೆ, ಕೇಳು, ಕರ್ಮಫಲರೂಪವಾದ ಅನರ್ಥಪರಂಪರೆಯ ಮೂಲವನ್ನು ವಿಚಾರಮಾಡುವವನಾಗು. ಬಲ್ಲವರು ಅದನ್ನು 'ಅವಿದ್ಯೆ' ಎಂದು ಕರೆಯುತ್ತಾರೆ. ಈ ದೋಷವು ಪೂರ್ಣವಾಗಿ ನಾಶವಾಗುವವರೆಗೂ ಜನನಮರಣರೂಪವಾದ ಸಂಸಾರದಿಂದ ಬಿಡುಗಡೆಯು ಆಗಲಾರದು. ಈ ಅವಿದ್ಯೆಯನ್ನು ಕಳೆಯಲು- ಕತ್ತಲೆಯನ್ನು ಕಳೆಯಲು ಬೆಳಕೇ ಬೇಕಾಗುವಂತೆ- ವಿದ್ಯೆಯೇ ಬೇಕಾಗಿರುತ್ತದೆ. ಈ ಆತ್ಮವಿದ್ಯೆಯೇ ಮಾನವನನ್ನು ಸಂಸಾರಬಂಧದಿಂದ ಬಿಡುಗಡೆಮಾಡಿ ಅವನನ್ನು ಕೃತಾರ್ಥನನ್ನಾಗಿ ಮಾಡಬಲ್ಲದು. ಆತ್ಮನೆಂದರೆ ಪರಮಾತ್ಮನೇ ಆಗಿರುತ್ತಾನೆ. ಆವನು ಎಲ್ಲರ ಹೃದಯದಲ್ಲಿಯೂ ಯಾವಾಗಲೂ ಇದ್ದೇ ಇರುತ್ತಾನೆ. 'ಅವನೇ ನಾನು' (ಸೋಽಹಂ) ಎಂಬ ಅನುಭವವನ್ನು ಸಂಪಾದಿಸಿಕೊಳ್ಳುವವನಾಗು'' ಎಂದು ಪ್ರಾಚೀನಬರ್ಹಿಮಹಾರಾಜನಿಗೆ ಉಪದೇಶಿಸಿದರು. ಪುನಃ ಮುಂದುವರೆದು ನಾರದರು ಹೀಗೆಂದರು :-

**ಸ ವೈ ಪ್ರಿಯತಮಶ್ಚಾತ್ಮಾ ಯತೋ ನ ಭಯಮಣ್ವಪಿ ।**
**ಇತಿ ವೇದ ಸ ವೈ ವಿದ್ವಾನ್ ಯೋ ವಿದ್ವಾನ್ ಸ ಗುರುರ್ಹರಿಃ ॥**

''ಆತ್ಮನೆಂದರೆ ಯಾರು? ಎಂದರೆ, ಯಾವದರಿಂದ ಯಾರಿಗೂ ಎಳ್ಳಷ್ಟೂ ಭಯವುಂಟಾಗುವದಿಲ್ಲವೋ ಅದೇ ಎಲ್ಲರಿಗೂ ಪ್ರಿಯತಮವಾಗಿರುವ ಆತ್ಮನು- ಎಂಬುದಾಗಿ ಯಾವನು ಅರಿತಿರುತ್ತಾನೋ- ಆತನೇ ಆತ್ಮಜ್ಞಾನಿಯು. ಆತನೇ ಗುರುವು. ಮತ್ತು ಸಾಕ್ಷಾತ್ ಶ್ರೀಹರಿಯೂ ಆತನೇ ಆಗಿರುವನು''- ಎಂದು ನಾರದರು ಪ್ರಾಚೀನಬರ್ಹಿಮಹಾರಾಜನಿಗೆ ಉಪದೇಶಿಸಿದರು.

ಪುನಃ ನಾರದರು ಪ್ರಾಚೀನಬರ್ಹಿರಾಜನನ್ನು ಕುರಿತು ತಮ್ಮ ಉಪದೇಶವನ್ನು ಮುಂದುವರರೆಸಿದರು. ''ಎಲೈ ರಾಜನೆ, ಕೇಳು. ಸಂಸ್ಕಾರರೂಪದಲ್ಲಿ ಮನಸ್ಸಿನಲ್ಲಿ ನೆಲೆಗೊಂಡಿರುವ ಅನೇಕ ಜನ್ಮಗಳ ವಿಷಯಗಳು ಜೀವನ ಅದೃಷ್ಟಕ್ಕೆ ಅನುಗುಣವಾಗಿ ಕ್ರಮವಾಗಿ ಅನುಭವಕ್ಕೆ ಬರುವವು. ಎಲ್ಲರಿಗೂ ಮನಸ್ಸು ಇರುವದೇ ಇದಕ್ಕೆ ಕಾರಣವು.

ಎಲ್ಲಾ ಕರ್ಮವಾಸನೆಗಳಿಗೂ ಮನಸ್ಸೇ ಭಂಡಾರವು. ಅವುಗಳು ಯಾವ ಕ್ರಮದಲ್ಲಿ ಅನುಭವಕ್ಕೆ ಬರಬೇಕೆಂಬುದಕ್ಕೆ ಆ ಜೀವರ ಅದೃಷ್ಟವೇ ನಿಯಾಮಕವು. ಮನಸ್ಸು ಶುದ್ಧಸತ್ತ್ವದಲ್ಲಿ ನೆಲೆಸಿದಾಗ ಸಮಸ್ತವಾಸನೆಗಳೂ ಏಕಕಾಲದಲ್ಲಿ ತೋರುವದೂ ಉಂಟು. ಇದು ಯೋಗಿಪ್ರತ್ಯಕ್ಷದ ವಿಷಯ. ಗುಣಗಳ ಪರಿಣಾಮರೂಪವಾದ ಲಿಂಗಶರೀರವು ಎಲ್ಲಿಯವರೆಗೆ ಇರುವದೋ ಅಲ್ಲಿಯವರೆಗೂ ಜೀವನಲ್ಲಿ ನಾನು, ನನ್ನದು- ಎಂಬ ಭಾವವು ನಾಶಹೊಂದುವದಿಲ್ಲ. ಸ್ಥೂಲಶರೀರದ ಅಭಿಮಾನವು ಇರುವವರೆಗೂ ಸಂಸಾರನಿವೃತ್ತಿಯಾಗುವದಿಲ್ಲ. ಜಿಗಣೆಹುಳುವು ಒಂದು ಹುಲ್ಲುಕಡ್ಡಿಯಿಂದ ಮತ್ತೊಂದು ಕಡ್ಡಿಯನ್ನು ಬಲವಾಗಿ ಹಿಡಿದುಕೊಳ್ಳುವವರೆಗೂ ಹಿಂದಿನ ಕಡ್ಡಿಯನ್ನು ಬಿಡುವದಿಲ್ಲ. ಹಾಗೆಯೇ ಜೀವನೂ ಮತ್ತೊಂದು ಶರೀರವು ಸಿಗುವವರೆಗೆ ಹಿಂದಿನ ದೇಹದ ಅಭಿಮಾನವನ್ನು ಬಿಡುವದಿಲ್ಲ. ಇದೇ ಸಂಸಾರವು. ಆದ್ದರಿಂದ ಅವಿದ್ಯೆಯನ್ನೂ ಕರ್ಮಸಂಕೋಲೆಯನ್ನೂ ಕಳೆದುಕೊಳ್ಳುವದಕ್ಕಾಗಿ ಶ್ರೀಹರಿಯನ್ನು ಸರ್ವಭಾವದಿಂದಲೂ ಆರಾಧಿಸುವವನಾಗು. ವಿಶ್ವವೆಲ್ಲವೂ ಭಗವದಾತ್ಮಕವೆಂದು ಭಾವಿಸು.'' ಹೀಗೆಂದು ನಾರದಮಹರ್ಷಿಗಳು ಪ್ರಾಚೀನ ಬರ್ಹಿಮಹಾರಾಜನಿಗೆ ಉಪದೇಶಮಾಡಿ ಸಿದ್ಧಲೋಕಕ್ಕೆ ದಯಮಾಡಿಸಿದರು.

ದೇವರ್ಷಿಶ್ರೇಷ್ಠರಾದ ನಾರದರ ಮುಖಪದ್ಮದಿಂದ ಹೊರಬಂದ, ಶ್ರೀಮುಕುಂದನ ಕೀರ್ತನೆಯಿಂದ ಕೂಡಿರುವ- ಈ ಆತ್ಮಜ್ಞಾನವು ಪರಮಪದವನ್ನು ಪ್ರಕಾಶಗೊಳಿಸುವದು. ಇದನ್ನು ಹೇಳಿದವನು, ಕೇಳಿದವನು- ಎಲ್ಲಾ ಬಂಧನಗಳಿಂದಲೂ ಬಿಡುಗಡೆ ಹೊಂದುವನು.

* * * * *

## 14. ಋಷಭದೇವನು ಪುತ್ರರಿಗೆ ಮಾಡಿದ ಉಪದೇಶ

ಮಹತ್ಸೇವಾಂ ದ್ವಾರಮಾಹುರ್ವಿಮುಕ್ತೇಃ
ತಮೋದ್ವಾರಂ ಯೋಷಿತಾಂ ಸಂಗಿಸಂಗಮ್ ।
ಮಹಾನ್ತಸ್ತೇ ಸಮಚಿತ್ತಾಃ ಪ್ರಶಾನ್ತಾಃ
ವಿಮನ್ಯವಃ ಸುಹೃದಃ ಸಾಧವೋ ಯೇ ॥

ಶ್ರೀ ಮದ್ಭಾಗವತ 5-5-7

ಮಹಾಪುರುಷರ ಸೇವೆಯು ಮುಕ್ತಿಗೆ ದ್ವಾರವೆಂದೂ ಸ್ತ್ರೀಲಂಪಟರಾದ ಕಾಮುಕರ ಸಂಗವು ನರಕಕ್ಕೆ ದ್ವಾರವೆಂದೂ ಶಾಸ್ತ್ರಗಳು ಹೇಳುತ್ತವೆ. ಮಹಾಪುರುಷರು ಯಾರೆಂದರೆ : ಸಮಸಚಿತ್ತರೂ ಪ್ರಶಾಂತರೂ ಕೋಪವಿಲ್ಲದವರೂ ಸರ್ವರಿಗೂ ಹಿತವನ್ನು ಚಿಂತಿಸುವವರೂ ಸದಾಚಾರಸಂಪನ್ನರೂ ಆಗಿರುವವರು.

**('ಸಾಧ್ನೋತಿ ಪರಾರ್ಥಾನ್ ಇತಿ ಸಾಧುಃ'- ಎಂಬ ವಿವರಣೆಯಂತೆ ಬೇರೊಬ್ಬರ ಹಿತವನ್ನು ಬಯಸಿ ಉಪಕಾರಮಾಡುವವರು ಸಾಧುಗಳೆನಿಸುತ್ತಾರೆ. ಅವರಿಗೆ ಸ್ವಾರ್ಥಬುದ್ಧಿಯಿರುವದಿಲ್ಲ. ಹಾಗೂ ಪ್ರತ್ಯುಪಕಾರವನ್ನೂ ಅವರು ಬಯಸುವದಿಲ್ಲ. ಅವರಿಗೆ ಬೇರೊಬ್ಬರ ಸುಖಸಂತೋಷಗಳೇ ಇಷ್ಟವಾಗಿರುತ್ತವೆ. ಹೀಗೆ ಪರರ ಹಿತವನ್ನೇ ಬಯಸುವ ಹಾಗೂ ಉದಾರವಾದ ಮನಸ್ಸುಳ್ಳ ನಿಗರ್ವಿಗಳಾದ ಸಾಧುಗಳು ಭಗವಂತನ ವಿಭೂತಿಗಳೇ ಆಗಿರುತ್ತಾರೆ.)**

## ಮಹಾಪುರುಷರ ದಿವ್ಯಜೀವನ

ಋಷಭದೇವರು ತಮ್ಮ ಪುತ್ರರಿಗೆ ಮಾಡಿದ ದಿವ್ಯೋಪದೇಶವನ್ನು ಶುಕಮಹಾಮುನಿಗಳು ಪರೀಕ್ಷಿತನಿಗೆ ತಿಳಿಸುತ್ತಾರೆ. ''ಎಲೈ ರಾಜನೆ ಕೇಳು, ಋಷಭದೇವನು ತನ್ನ ಸುಪುತ್ರರಿಗೆ ಬ್ರಹ್ಮರ್ಷಿಗಳ ಮಹಾಸಭೆಯಲ್ಲಿ ಎಲ್ಲಾ ಪ್ರಜೆಗಳಿಗೂ ಕೇಳುವಂತೆ ಪಿತೃಭಕ್ತಿಸಂಪನ್ನರಾದ ತನ್ನ ಪುತ್ರರನ್ನು ಕುರಿತು ಹೀಗೆ ಉಪದೇಶ ಮಾಡಿದರು'':

''ಎಲೈ ಪುತ್ರರೆ, ಈ ಮನುಷ್ಯಶರೀರವು ದೇಹಿಗಳಿಗೆ ವಿಷಯಸುಖಗಳನ್ನು ಅನುಭವಿಸುವದಕ್ಕೆ ಮಾತ್ರವೇ ಇದೆಯೆಂದು ತಿಳಿಯಬೇಡಿರಿ. ಆ ಭೋಗಗಳನ್ನು ಪ್ರಾಣಿಗಳೂ ಅನುಭವಿಸುತ್ತವೆ. ಆದ್ದರಿಂದ ಮನುಷ್ಯಶರೀರವು ಅಂತಃಕರಣ ಶುದ್ಧಿಯನ್ನು ಪಡೆಯಲು ದಿವ್ಯವಾದ ತಪಸ್ಸನ್ನು ಆಚರಿಸುವದಕ್ಕಾಗಿ ಇರುತ್ತದೆ. ಅದರಿಂದಲೇ ಅನಂತವಾದ ಬ್ರಹ್ಮಾನಂದವು ದೊರೆಯುವದು. ಮಹಾಪುರುಷರ ಸೇವೆಯು ಮುಕ್ತಿಗೆ ದ್ವಾರವೆಂದೂ ಕಾಮುಕರ ಸಂಗವು ನರಕಕ್ಕೆ ದ್ವಾರವೆಂದೂ ಶಾಸ್ತ್ರಗಳು ಹೇಳುತ್ತವೆ. ಮಹಾಪುರುಷರು ಯಾರು? ಎಂದರೆ : ಸಮಚಿತ್ತರೂ ಪ್ರಶಾಂತರೂ ಕೋಪಾದಿಗಳಿಲ್ಲದವರೂ ಸರ್ವರಿಗೂ ಹಿತವನ್ನು ಚಿಂತಿಸುವವರೂ ಸದಾಚಾರ ಸಂಪನ್ನರೂ ಆಗಿರುವ ಸಾಧುಗಳು.

ಆ ಸಾಧುಮಹಾತ್ಮರು ಸರ್ವೇಶ್ವರನಾಗಿರುವ ಭಗವಂತನಲ್ಲಿ ಮಾಡುವ ಪ್ರೇಮ (ಭಕ್ತಿ) ವನ್ನೇ ಏಕೈಕ ಪುರುಷಾರ್ಥವಾಗಿ ಭಾವಿಸಿರುವರು. ದೇಹಾಭಿಮಾನಿಗಳಲ್ಲಿಯೂ ಹೆಂಡಿರುಮಕ್ಕಳು, ಹಣ-ಮುಂತಾದ ಸಾಮಗ್ರಿಗಳಿಂದ ಕೂಡಿರುವ ಗೃಹಸ್ಥರ ಮನೆಗಳಲ್ಲಿಯೂ ಅವರಿಗೆ ಇಷ್ಟವಿರುವದಿಲ್ಲ. ತಮ್ಮ ಶರೀರಯಾತ್ರೆಗೆ ಅಗತ್ಯವಿದ್ದಷ್ಟು ಮಾತ್ರ ಲೌಕಿಕದಲ್ಲಿ ಅವರು ತೊಡಗುವರು. ಇಂದ್ರಿಯಗಳನ್ನು ತೃಪ್ತಿಪಡಿಸುವದರಲ್ಲಿ ಮಾತ್ರವೇ ಆಸಕ್ತಿಯನ್ನು ಹೊಂದಿರುವವರನ್ನು ಅವರು ತ್ಯಜಿಸಿರುತ್ತಾರೆ. ಹಾಗಾದರೆ ಕೆಟ್ಟಕರ್ಮಗಳನ್ನು ಮಾಡಬಾರದು- ಎಂದಾದರೆ ಪುಣ್ಯಕರ್ಮಗಳನ್ನೇ ಮಾಡುತ್ತಿದ್ದರೆ ಸಾಕೆ? ಆ ಪುಣ್ಯಕರ್ಮಗಳ ಆಚರಣೆಯಿಂದಲೇ ಪರಮಪುರುಷಾರ್ಥವು ಸಿದ್ಧಿಸುವದೆ?- ಎಂದರೆ ಹಾಗೂ ಇಲ್ಲ. ಜೀವನು ಎಲ್ಲಿಯವರೆಗೆ ಆತ್ಮತತ್ತ್ವವನ್ನು ತಿಳಿಯಲು ಬಯಸಿ ಅದಕ್ಕಾಗಿ ಪ್ರಯತ್ನಿಸುವದಿಲ್ಲವೋ ಅಲ್ಲಿಯವರೆಗೂ ಆತನು ಅಜ್ಞಾನಕ್ಕೆ ವಶನಾಗಿರುತ್ತಾನೆ. ಆತ್ಮವು ಅವನಿಗೆ ಮರೆಯಾಗಿರುತ್ತದೆ. ಆತನು ಪುಣ್ಯಕರ್ಮಗಳನ್ನು ಮಾಡಿದರೂ ಆತನ ಮನಸ್ಸು ಕರ್ಮಗಳಲ್ಲಿಯೇ ಆಸಕ್ತವಾಗಿರುವದು. ಆತ್ಮಜ್ಞಾನದ ಕಡೆಗೆ ಅವನು ಇಣುಕಿ ಕೂಡ ನೋಡುವದಿಲ್ಲ. ಕರ್ಮದ ವಾಸನೆಗಳೇ ಆತನ ಮನಸ್ಸಿನಲ್ಲಿ ಅಂಟಿಕೊಂಡಿರುತ್ತವೆ. ಆದ್ದರಿಂದ ಆತನಿಗೆ ಅನಿಷ್ಟವಾದ ಶರೀರಬಂಧನವು ಬಂದೇ ಬರುವದು. ಹೀಗೆ ಅವಿದ್ಯೆಯಿಂದ ಆತ್ಮಸ್ವರೂಪವು ಮುಚ್ಚಿಹೋಗುವದರಿಂದ ಕರ್ಮವಾಸನೆಗಳಿಗೆ ವಶವಾದ ಮನುಷ್ಯನ ಚಿತ್ತವು ಆತನನ್ನು ಮತ್ತೆ ಕರ್ಮಗಳಲ್ಲಿಯೇ ತೊಡಗಿಸುವದು. ಆದ್ದರಿಂದ ವಾಸುದೇವನಾದ ನನ್ನಲ್ಲಿ ಭಕ್ತಿಯೋಗವು ಎಲ್ಲಿಯವರೆಗೆ ಉಂಟಾಗುವದಿಲ್ಲವೋ- ಅಲ್ಲಿಯವರೆಗೂ ಮನುಷ್ಯನಿಗೆ ದೇಹಯೋಗವು ತಪ್ಪುವದಿಲ್ಲ. ತ್ರಿಗುಣಗಳ ವ್ಯಾಪಾರವು ಅವಿದ್ಯೆಯಿಂದ ಬಂದದ್ದು. ಅದು ಅಸಾಧುವಾದುದು- ಎಂದು ತಿಳಿಯಬೇಕು.

ಪ್ರತಿ ಮನುಷ್ಯನಿಗೂ ದೇಹಾಭಿಮಾನವೆಂಬ ಸೂಕ್ಷ್ಮವಾದ ಗುಂಟು ಇರುತ್ತದೆ. ಸ್ತ್ರೀಪುರುಷರ ದಾಂಪತ್ಯಭಾವವೆಂಬುದು ಅವರ ಹೃದಯಗಳನ್ನು ಸೇರಿಸುವ ಮತ್ತೊಂದು ಸ್ಥೂಲವಾದ ಹಾಗೂ ಕತ್ತರಿಸಲಾಗದ ಗಂಟು. ಮೊದಲನೆಯ ಗಂಟಿನ ಜೊತೆಗೆ ಮನೆ, ಮಠ, ಮಡದಿ, ಮಕ್ಕಳು, ಹಣ- ಮುಂತಾದವುಗಳಲ್ಲಿ 'ನಾನು- ನನ್ನದು'- ಎಂಬ ಮೋಹವೂ ಸೇರಿಕೊಳ್ಳುವದು. ಕರ್ಮವಾಸನೆಗಳಿಂದ ಉಂಟಾದ ಈ ದೃಢವಾದ ಹೃದಯದ ಗಂಟು ಯಾವಾಗ ಸಡಿಲವಾಗುವದೋ ಆಗ ಈ ದಾಂಪತ್ಯ ಭಾವದಿಂದುಂಟಾದ ಅಭಿಮಾನವೂ ತೊಲಗುವದು. ಮತ್ತು ಸಂಸಾರಕಾರಣವಾಗಿರುವ

(ಶರೀರಾತ್ಮಭಾವವೆಂಬ) ಅಹಂಕಾರವನ್ನು ತೊರೆದು ಜೀವನು ಎಲ್ಲಾ ಬಂಧನಗಳನ್ನೂ ಕಳೆದುಕೊಂಡು ಪರಮಪದವನ್ನು ಪಡೆಯುವನು. ಅನಂತರ ಸಂಸಾರಕ್ಕೆ ಪುನರಾವೃತ್ತಿಯು ಇರುವದಿಲ್ಲ.

ಎಲೈ ಪುತ್ರರೆ, ಸಂಸಾರಸಾಗರವನ್ನು ದಾಟುವರದಲ್ಲಿ ಕುಶಲನಾಗಿ ಧೈರ್ಯ, ಉದ್ಯಮ ಮತ್ತು ಸತ್ತ್ವಗುಣಗಳಿಂದ ಕೂಡಿ ಮನುಷ್ಯನು ಅಹಂಕಾರರೂಪವಾದ ಲಿಂಗಶರೀರವನ್ನು ತೊರೆಯಬೇಕು. ಯಾವ ಯಾವ ಸಾಧನಗಳಿಂದ ಆ ಲಿಂಗಶರೀರ ವನ್ನು ಆತನು ಲಯಗೊಳಿಸಲು ಸಾಧ್ಯವಾದೀತು? ಎಂದರೆ : ಸರ್ವಜ್ಞನಾಗಿ ಸರ್ವರ ಆತ್ಮನೂ ಅವಿದ್ಯೆಯ ಸಂಬಂಧವೇ ಇಲ್ಲದೆ ಹಂಸಸ್ವರೂಪಿಯಾಗಿ ಸರ್ವರಿಗೂ ಹಿತೋಪದೇಶಕನಾಗಿ ಆದಿಗುರುವಾಗಿರುವ ನನ್ನಲ್ಲಿ ಭಕ್ತಿಯಿಟ್ಟು ನನ್ನಲ್ಲಿಯೇ ನೆಲೆನಿಂತವನಾಗುವದರಿಂದ, ಹಾಗೂ ಆಸೆಯನ್ನು ಬಿಟ್ಟು ವೈರಾಗ್ಯವನ್ನು ಅಳವಡಿಸಿಕೊಳ್ಳುವದರಿಂದ, ಸುಖದುಃಖಗಳೇ ಮುಂತಾದ ದ್ವಂದ್ವವನ್ನು ಸಹಿಸಿಕೊಳ್ಳುವದರಿಂದ, ಜೀವನು ಪ್ರತಿಯೊಂದು ಯೋನಿಯಲ್ಲಿಯೂ ದುಃಖವನ್ನೇ ಅನುಭವಿಸಬೇಕಾಗುವದು- ಎಂಬುದನ್ನು ಪರಿಶೀಲನೆಮಾಡುವದರಿಂದ; ಹಾಗೂ ತತ್ತ್ವಜಿಜ್ಞಾಸೆಯಿಂದ; ತಪಸ್ಸಿನಿಂದ ಕಾಮ್ಯಕರ್ಮಗಳನ್ನು ತ್ಯಜಿಸುವದರಿಂದ, ಭಗವಂತನ ಪ್ರೀತಿಗಾಗಿಯೇ ಕರ್ಮಗಳನ್ನು ಆಚರಿಸುವದರಿಂದ, ಭಗವಂತನ ಕಥೆಗಳನ್ನೇ ಆಲೈಸಿ ಕೇಳುವದರಿಂದ, ಭಕ್ತರ ಸಹವಾಸದಿಂದ ಗುಣಕೀರ್ತನೆಗಳನ್ನು ಮಾಡುವದ ರಿಂದ, ಅಧ್ಯಾತ್ಮಯೋಗವನ್ನು ಅನುಸಂಧಾನಮಾಡುವದರಿಂದ- ಇವೇ ಮುಂತಾದ ಸಾಧನಗಳಿಂದ ಹೃದಯದ ಗಂಟಿನಲ್ಲಿರುವ ಅಜ್ಞಾನವನ್ನು ನಾಶಗೊಳಿಸಿಕೊಳ್ಳಬೇಕು.

ಎಲೈ ವಿಪ್ರರೆ, ಜನರು ಶ್ರದ್ಧಾಪೂರ್ವಕವಾಗಿ ಬ್ರಾಹ್ಮಣರಿಗೆ ಸಮರ್ಪಿಸುವ ಅನ್ನವೇ ಮುಂತಾದ ಆಹುತಿಯನ್ನು ನಾನು ಅತ್ಯಂತ ಪ್ರಸನ್ನತೆಯಿಂದ ಸ್ವೀಕರಿಸುತ್ತೇನೆ. ಯಾರು ಈ ಲೋಕದಲ್ಲಿ ಪುರಾತನವೂ ಸುಂದರವೂ ಆದ ವೇದವೆಂಬ ನನ್ನ ಮೂರ್ತಿಯನ್ನು ಅಧ್ಯಯನವೇ ಮುಂತಾದವುಗಳ ಮೂಲಕ ಧರಿಸಿಕೊಂಡಿದ್ದಾರೆಯೋ ಮತ್ತು ಪರಮಪವಿತ್ರವಾದ ಸತ್ತ್ವಗುಣ, ಶಮ, ದಮ, ತಪಸ್ಸು ತಾಳ್ಮೆ ಮತ್ತು ಜ್ಞಾನಾನುಭವವೆಂಬ ಗುಣಗಳಿಂದ ಸಂಪನ್ನರಾಗಿರುವರೋ ಅಂಥ ಬ್ರಾಹ್ಮಣರೇ ಶ್ರೇಷ್ಠರು; ಹಾಗೂ ನನ್ನ ಭಕ್ತರು. ಇಂಥ ಸಾಧಕರಿಗೆ ನಾನು ಸ್ವರ್ಗ-ಮೋಕ್ಷಗಳನ್ನು

ಯಥಾಯೋಗ್ಯವಾಗಿ ಕೊಡುವೆನು. ಜಾತಿಯಲ್ಲಿ ಯಾವದಾದರೂ ನೀತಿಯಲ್ಲಿ ಪರಿಪೂರ್ಣರಾಗಿದ್ದು ನನ್ನನು ಆರಾಧಿಸುವವರು ಎಂದಿಗೂ ನಷ್ಟರಾಗುವದಿಲ್ಲ. 'ನ ಮೇ ಭಕ್ತಃ ಪ್ರಣಶ್ಯತಿ' ಎಂದು ನಾನು ಅರ್ಜುನನಿಗೂ ಉಪದೇಶಿಸಿರುತ್ತೇನೆ. ಆದ್ದರಿಂದ ನೀವುಗಳು ಈ ಉಪದೇಶಗಳನ್ನು ಮನನಮಾಡಿ ಅನಂತರ ಅನುಷ್ಠಾನಮಾಡಿ ಕೃತಾರ್ಥರಾಗಿರಿ'' ಎಂದು ಋಷಭದೇವನು ತನ್ನ ಪುತ್ರರನ್ನು ನೆಪಮಾಡಿಕೊಂಡು ಮಾನವರೆಲ್ಲರಿಗೂ ಮುಕ್ತಿಮಾರ್ಗವನ್ನು ಬೋಧಿಸುತ್ತಾ ಮತ್ತೆ ಹೀಗೆ ಹೇಳಿರುತ್ತಾನೆ.

ಮತ್ಕರ್ಮಭಿರ್ಮತ್ಕಥಯಾ ಚ ನಿತ್ಯಂ
ಮದ್ದೇವಸಂಗಾತ್ ಗುಣಕೀರ್ತನಾನ್ಮೇ।
ನಿರ್ವೈರಸಾಮ್ಯೋಪಶಮೇನ ಪುತ್ರಾ
ಜಿಹಾಸಯಾ ದೇಹಗೇಹಾತ್ಮ ಬುದ್ಧೇಃ॥

(ಋಷಿಭದೇವನಿಂತೆಂದನು : ನನ್ನನ್ನು ಕುರಿತ) ಕರ್ಮಗಳಿಂದ ಕಥಾಶ್ರವಣ ದಿಂದ (ನನ್ನಲ್ಲಿಯ) ದೇವತೆಗಳ ಸಹವಾಸದಿಂದ ಹಾಗೂ ನನ್ನ ಗುಣಕರ್ಮಗಳ ಕೀರ್ತನದಿಂದ ಮತ್ತು ದ್ವೇಷದಿಂದ ದೂರವಾದ ಮನಸ್ಸಿನಿಂದ ಹಾಗೂ ವೈರಾಗ್ಯದಿಂದ (ಸಾಧಕನು) ನನ್ನಲ್ಲಿಯೇ ಒಂದಾಗಿ ಮುಕ್ತನಾಗುವನು.

* * * * *

## 15. ರಹೂಗಣರಾಜನಿಗೆ ಭರತಮುನಿಯ ಉಪದೇಶ

ಕ್ಷೇತ್ರಜ್ಞ ಆತ್ಮಾ ಪುರುಷಃ ಪುರಾಣಃ
ಸಾಕ್ಷಾತ್ ಸ್ವಯಂಜ್ಯೋತಿರಜಃ ಪರೇಶಃ।
ನಾರಾಯಣೋ ಭಗವಾನ್ ವಾಸುದೇವಃ
ಸ್ವಮಾಯಯಾತ್ಮನ್ಯವಧೀಯಮಾನಃ॥

ಶ್ರೀ ಮದ್ಭಾಗವತ 5-11-13

ಈ ಕ್ಷೇತ್ರಜ್ಞನು ಪುರಾಣಪುರುಷನೂ ಸ್ವಯಂಪ್ರಕಾಶನೂ ಜನ್ಮರಹಿತನೂ ಪರಮೇಶ್ವರನೂ ಸರ್ವವ್ಯಾಪಕನೂ ಸರ್ವನಿಯಾಮಕನೂ, ತನ್ನ ಮಾಯಾಶಕ್ತಿಯಿಂದ

ಎಲ್ಲರಲ್ಲಿಯೂ ಒಳಹೊಕ್ಕು ಎಲ್ಲರಿಗೂ ಆಶ್ರಯನೂ ಆಗಿರುವ ಭಗವಂತನಾದ ಸಾಕ್ಷಾತ್ ನಾರಾಯಣವಾಸುದೇವನೇ ಆಗಿದ್ದಾನೆ.

(ಭಗವಂತನು ಜೀವಾತ್ಮರೂಪದಿಂದ ಜಗತ್ತಿನಲ್ಲಿರುವ ಎಲ್ಲಾ ಚರಾಚರವಸ್ತುಗಳನ್ನೂ ವ್ಯಾಪಿಸಿದ್ದು ಆಯಾ ಜೀವರುಗಳ ಆತ್ಮನೇ ಆಗಿದ್ದು ಬ್ರಹಾಂಡವನ್ನೆಲ್ಲ ಒಳಹೊಕ್ಕಿರುತ್ತಾನೆ. ಸೃಷ್ಟಿಯಲ್ಲಿರುವ ಎಲ್ಲಾ ಜೀವರುಗಳೂ ಅವನ ಅಂಶವೇ ಆಗಿದ್ದು ಅವನಿಗಿಂತ ಬೇರೊಂದು ಇಲ್ಲವೇ ಇಲ್ಲವಾಗಿದೆ. ಹೀಗೆಂದು ತಿಳಿದವನೇ ಜ್ಞಾನಿಯೂ ಮುಕ್ತನೂ ಆಗಿರುವನು.)

## ಭರತಮುನಿಯ ಜ್ಞಾನೋಪದೇಶ

ಶ್ರೀ ಶುಕಮಹಾಮುನಿಗಳು ಪರೀಕ್ಷಿತ್‌ರಾಜನಿಗೆ ಉಪದೇಶಮಾಡುತ್ತಿರುವ ಸಂದರ್ಭದಲ್ಲಿ ಈಗ ಭರತಮುನಿಗಳು ರಹೂಗಣಮಹಾರಾಜನಿಗೆ ಮಾಡಿದ ತತ್ತ್ವೋಪದೇಶವನ್ನು ವಿವರಿಸುತ್ತಾರೆ. ''ಎಲೈ ರಾಜನೆ, ಕೇಳು, ನೀನು ಪಂಡಿತನಲ್ಲದಿದ್ದರೂ ಪಂಡಿತರಂತೆ ಪ್ರೌಢವಾದ ವಾದವಿವಾದಗಳ ಮಾತುಗಳನ್ನು ಆಡುತ್ತಿರುವೆ. ತತ್ತ್ವಜ್ಞಾನಿಗಳು ವ್ಯವಹಾರದ ವಿಷಯವನ್ನು ಪರಮಾರ್ಥದೊಡನೆ ಸೇರಿಸಿ ಹೇಳುವದಿಲ್ಲ.''

ರಾಜೇಂದ್ರನೆ, ಮನಸ್ಸು ತ್ರಿಗುಣಗಳನ್ನು ದಾಟುವವರೆಗೂ ಮನುಷ್ಯನಿಗೆ ತತ್ತ್ವಜ್ಞಾನವು ಉಂಟಾಗುವದಿಲ್ಲ. ಕರ್ಮಬಂಧನಗಳಿಗೆಲ್ಲ ಮನಸ್ಸೇ ಕಾರಣವು. ಅದು ಎಲ್ಲಿಯವರೆಗೆ ಸತ್ತ್ವ-ರಜಸ್ಸು-ತಮೋಗುಣಗಳಿಗೆ ಅಧೀನವಾಗಿರುವದೋ ಅಲ್ಲಿಯವರೆಗೂ ಮಾನವನ ಜ್ಞಾನೇಂದ್ರಿಯ-ಕರ್ಮೇಂದ್ರಿಯಗಳು ಶುಭಾಶುಭ ಕರ್ಮಗಳನ್ನು ಮಾಡುತ್ತಲೇ ಇರುವವು. ಈ ಮನಸ್ಸೆಂಬುದು ಭೂತಗಳು, ಇಂದ್ರಿಯಗಳು- ಎಂಬ ಹದಿನಾರು ಕಲೆಗಳಲ್ಲಿ ಅತಿ ಮುಖ್ಯವಾದದುದು. ಇದು ಧರ್ಮ, ಅಧರ್ಮಗಳೆಂಬ ವಾಸನೆಗಳಿಂದ ಕೂಡಿ ವಿಷಯಗಳಲ್ಲಿ ಆಸಕ್ತವಾಗಿ ತ್ರಿಗುಣಗಳ ಪ್ರವಾಹಕ್ಕೆ ತಕ್ಕಂತೆ ವಿಕಾರಗೊಳ್ಳುವದು. ಬಗೆಬಗೆಯ ಹೆಸರುಗಳಿಂದ ದೇವತೆಗಳು, ಮನುಷ್ಯರು- ಮುಂತಾದ ರೂಪಗಳನ್ನು ಪಡೆದು ಶರೀರಭೇದದಿಂದ ಜೀವನದಲ್ಲಿ ಉಚ್ಚನೀಚಭಾವನೆಗಳನ್ನು ತೋರ್ಪಡಿಸುವದು.

ಮಾಯಾಮಯವಾದ ಮನಸ್ಸೇ ಈ ಸಂಸಾರಚಕ್ರಕ್ಕೆ ಮೂಲವಾಗಿದೆ. ತನ್ನ

ದೇಹದಲ್ಲಿ ಅಭಿಮಾನವುಳ್ಳ ಜೀವನೊಡನೆ ಸೇರಿಕೊಂಡು ಆಯಾ ಕಾಲಕ್ಕನುಗುಣವಾಗಿ ಅವಶ್ಯವಾಗಿ ಬರುವ ಸುಖವನ್ನಾಗಲಿ ದುಃಖವನ್ನಾಗಲಿ ಜೀವನಿಗೆ ಉಂಟುಮಾಡುವದು. ಮನಸ್ಸು ತ್ರಿಗುಣಗಳೊಡನೆ ಸೇರಿದಾಗ ಸಂಸಾರವನ್ನುಂಟುಮಾಡುವದು. ತ್ರಿಗುಣಗಳ ಸಂಬಂಧವನ್ನು ತೊರೆದಾಗ ತ್ರಿಗುಣಾತೀತವಾದ ಮೋಕ್ಷವನ್ನು ಉಂಟುಮಾಡುವದು. ಆದ್ದರಿಂದ ಬಂಧ, ಮೋಕ್ಷ ಇವೆರಡಕ್ಕೂ ಮನಸ್ಸೇ ಕಾರಣವೆಂದು ಜ್ಞಾನಿಗಳು ಹೇಳುವರು.

ದೀಪವು ತುಪ್ಪದ ಬತ್ತಿಯಲ್ಲಿ ಹತ್ತಿಕೊಂಡು ಉರಿಯುವಾಗ ಹೊಗೆಯಿಂದ ಕೂಡಿದ ಜ್ವಾಲೆಗಳನ್ನು ಉಗುಳುವದು. ಬೇರೆ ಸಮಯದಲ್ಲಿ ಉಗುಳದೆ ಸ್ವಸ್ವರೂಪವನ್ನು ತೋರುವದಲ್ಲವೆ? ಹಾಗೆಯೇ ಪ್ರಾಣಿಗಳ ಮನಸ್ಸು ತ್ರಿಗುಣಗಳೆಂಬ ಬತ್ತಿಯ ಕಾರ್ಯವಾದ ಪುಣ್ಯ, ಪಾಪಗಳಿಂದ ಕಲುಷಗೊಂಡು ಕಾಮಕ್ರೋಧಗಳೇ ಮುಂತಾದ ವೃತ್ತಿಗಳನ್ನು ಪಡೆದು ಬಂಧನವನ್ನು ಉಂಟುಮಾಡುವದು. ಆ ತ್ರಿಗುಣಗಳಿಗೆ ಒಳಗಾಗದೆ ಇರುವಾಗ ಶುದ್ಧಸತ್ತ್ವಮಯವಾಗಿ ಕ್ಷೇಮರೂಪದಿಂದ ಮೋಕ್ಷಪದವಿಯನ್ನು ಉಂಟುಮಾಡುವದು.

ಐದು ಕರ್ಮೇಂದ್ರಿಯಗಳು, ಐದು ಜ್ಞಾನೇಂದ್ರಿಯಗಳು ಮತ್ತು ಅಹಂಕಾರ-ಎಂಬ ಹನ್ನೊಂದೂ ಮನಸ್ಸಿನ ವೃತ್ತಿಗಳು. ಐದು ಬಗೆಯ ಕರ್ಮಗಳು, ಐದು ತನ್ಮಾತ್ರೆಗಳು ಮತ್ತು ಶರೀರ- ಎಂಬ ಹನ್ನೊಂದೂ ಆವೃತ್ತಿಗಳಿಗೆ ಆಧಾರವಾಗಿರುವ ವಿಷಯಗಳೆಂದು ಹೇಳಲ್ಪಡುತ್ತವೆ. ಇವುಗಳಲ್ಲಿ ಯಾವ ಯಾವದು ಯಾವ ಯಾವದಕ್ಕೆ ವಿಷಯ? ಎಂದರೆ ಗಂಧ, ರೂಪ, ಸ್ಪರ್ಶ, ರಸ, ಶಬ್ದ- ಎಂಬಿವು ಕ್ರಮವಾಗಿ ಗುದ, ಉಪಸ್ಥ, ಪಾದ, ನಾಲಗೆ, ಹಸ್ತ- ಎಂಬ ಐದು ಕರ್ಮೇಂದ್ರಿಯ ವಿಷಯಗಳು, ಹಾಗೆಯೇ ಶರೀರವನ್ನು ''ಇದು ನನ್ನದು'' -ಎಂದು ಅಭಿಮಾನಪಡುವದು, ಅಹಂಕಾರಾದ ವಿಷಯವು. ಕೆಲವರು ಅಹಂಕಾರವನ್ನು ಮನಸ್ಸಿನ ಹನ್ನೊಂದನೆಯ ವೃತ್ತಿಯೆಂದೂ ಮತ್ತು ಅದಕ್ಕೆ ಆಶ್ರಯವಾದ ಶರೀರವನ್ನು ಹನ್ನೆರಡನೆಯ ವೃತ್ತಿಯೆಂದೂ ತಿಳಿದಿದ್ದಾರೆ.

ಮನಸ್ಸಿನ ಹನ್ನೊಂದು ವೃತ್ತಿಗಳೂ ದ್ರವ್ಯ (ವಿಷಯ) ಸ್ವಭಾವ, ಆಶಯ (ಸಂಸ್ಕಾರ), ಕರ್ಮ ಮತ್ತು ಕಾಲಗಳ ಮೂಲಕ ನೂರಾರು, ಸಾವಿರಾರು ಮತ್ತು ಕೋಟ್ಯಂತರ ಭೇದಗಳಾಗಿ ಪರಿಣಾಮವನ್ನು ಹೊಂದುತ್ತವೆ. ಆದರೆ ಇವುಗಳಿಗೆ

ಕ್ಷೇತ್ರಜ್ಞನಾದ ಆತ್ಮನ ಇರುವಿಕೆಯಿಂದಲೇ ಇರುವಿಕೆಯೇ ಹೊರತು- ಸ್ವತಃ ಇರುವಿಕೆಯಿಲ್ಲ. ತಮ್ಮ ಪರಸ್ಪರವಾದ ಸೇರುವಿಕೆಯಿಂದಲೇ ಇರುವಿಕೆಯಲ್ಲ. ಈ ವೃತ್ತಿಗಳು ಕೆಲವೊಮ್ಮೆ (ಎಚ್ಚರದವಸ್ಥೆಯಲ್ಲಿ) ಪ್ರಕಟಗೊಳ್ಳುತ್ತವೆ. ಕೆಲವೊಮ್ಮೆ (ಸುಷುಪ್ತಿಯಲ್ಲಿ) ಮರೆಯಾಗುತ್ತವೆ. ಆದರೆ ಪ್ರವಾಹರೂಪದಲ್ಲಿ ನಿತ್ಯವಾಗಿರುತ್ತವೆ. ಹೀಗಿದ್ದರೂ ನಿತ್ಯಶುದ್ಧನಾಗಿರುವ ಕ್ಷೇತ್ರಜ್ಞನಿಗೆ ಸ್ವತಃ ಸೇರಿದವುಗಳಲ್ಲ. ಮಾಯಾರಚನೆಯುಳ್ಳವನಾಗಿ ಅಶುದ್ಧವಾದ ಕಾರ್ಯಗಳಲ್ಲಿಯೇ ಸಾಮಾನ್ಯವಾಗಿ ತೊಡಗಿರುವ ಜೀವನಿಗೆ ಸೇರಿದ ಮನಸ್ಸಿನ ವಿಭೂತಿಗಳಿವು. ಪರಿಶುದ್ಧನೂ ಜ್ಞಾನಸ್ವರೂಪನೂ ಆದ ಕ್ಷೇತ್ರಜ್ಞ ಪರಮಾತ್ಮನು ಜೀವನ ಈ ಮನೋವೃತ್ತಿಗಳನ್ನು ಸಾಕ್ಷಿಯಾಗಿ ನೋಡುತ್ತಿರುತ್ತಾನೆ. ವಾಯುದೇವನು ಇಡಿಯ ಸ್ಥಾವರಜಂಗಮಪ್ರಾಣಿಗಳಲ್ಲಿ ಪ್ರಾಣರೂಪದಿಂದ ಒಳಹೊಕ್ಕು ಅವುಗಳನ್ನು ಪ್ರೇರಿಸುತ್ತಿರುವಂತೆಯೇ ಪರಮೇಶ್ವರನಾದ ವಾಸುದೇವ ಭಗವಂತನು ಪರಮಾತ್ಮಸ್ವರೂಪನಾಗಿ ಈ ಇಡಿಯ ವಿಶ್ವವನ್ನು ಒಳಹೊಕ್ಕು ಕ್ಷೇತ್ರಜ್ಞರೂಪದಿಂದ ಎಲ್ಲರಿಗೂ ಸಾಕ್ಷಿಯಾಗಿ ಎಲ್ಲವನ್ನೂ ನಿಯಮಿಸುತ್ತಿದ್ದಾನೆ.

ಎಲೈ ರಾಜೇಂದ್ರನೆ, ಈ ಮನೆಸ್ಸೇ ಸಂಸಾರಕ್ಕೆ ಮೂಲವೆಂದು ತಿಳಿದು ಮಾಯಾಮೋಹವನ್ನು ತ್ಯಜಿಸಿ ಆತ್ಮತತ್ತ್ವವನ್ನು ತಿಳಿಯಬೇಕು. ಮನುಷ್ಯನು ಎಲ್ಲಿಯವರೆಗೆ ಜ್ಞಾನೋದಯದಿಂದ ಈ ಮಾಯೆಯನ್ನು ತಿರಸ್ಕರಿಸಿ ಎಲ್ಲಾ ಆಸಕ್ತಿಗಳನ್ನೂ ತೊರೆದು, ಕಾಮಕ್ರೋಧಗಳೇ ಮುಂತಾದ ಆರು ಶತ್ರುಗಳನ್ನೂ ಜಯಿಸಿ ಪರಮಾತ್ಮತತ್ತ್ವವನ್ನು ತಿಳಿಯುವದಿಲ್ಲವೋ- ಆತ್ಮಕ್ಕೆ ಗುರುತಾಗಿರುವ ಈ ಮನಸ್ಸನ್ನು ಸಂಸಾರದುಃಖದ ಕ್ಷೇತ್ರವೆಂದು ತಿಳಿಯುವದಿಲ್ಲವೋ- ಅಲ್ಲಿಯವರೆಗೂ ಆತನು ಈ ಸಂಸಾರದಲ್ಲಿ ತೊಳಲಾಡುತ್ತಿರುತ್ತಾನೆ. ಏಕೆಂದರೆ ಈ ಚಿತ್ತವು ಆತನಿಗೆ ಶೋಕ, ಮೋಹ, ರೋಗ, ಲೋಭ- ಮತ್ತು ವೈರಗಳೇ ಮುಂತಾದ ಸಂಸಾರಗಳನ್ನೂ ಮತ್ತು ಮಮತೆಯನ್ನೂ ವೃದ್ಧಿಪಡಿಸುತ್ತಲೇ ಇರುತ್ತದೆ.

**ಭ್ರಾತೃವ್ಯಮೇನಂ ತದದಭ್ರವೀರ್ಯ-**
**ಮುಪೇಕ್ಷಯಾಧ್ಯೇಧಿತಮಪ್ರಮತ್ತಃ।**
**ಗುರೋರ್ಹರೇಶ್ಚರಣೋಪಾಸನಾಸ್ತ್ರೋ**
**ಜಹಿ ವ್ಯಲೀಕಂ ಸ್ವಯಮಾತ್ಮಮೋಷಮ್॥**

**ಭಾಗವತ 5-11-17**

ಎಲ್ಲೈ ವೀರನೆ, ಆತ್ಮಸ್ವರೂಪವನ್ನು ಮರೆಮಾಚುತ್ತಿರುವ ಈ ಮನಸ್ಸೆಂಬ ಕಳ್ಳನು ಮಹಾಬಲಶಾಲಿಯಾದ ನಿನ್ನ ಶತ್ರುವು. ನೀನು ಉಪೇಕ್ಷೆಮಾಡಿದ್ದರಿಂದ ಈತನ ಶಕ್ತಿಸಾಮರ್ಥ್ಯಗಳು ಮತ್ತೂ ಹೆಚ್ಚಿಬಿಟ್ಟಿವೆ. ಆದ್ದರಿಂದ ನೀನು ಸಾವಧಾನನಾಗಿದ್ದು ಶ್ರೀಗುರಿವಿನ ಮತ್ತು ಶ್ರೀಹರಿಯ ಉಪಾಸನೆಯೆಂಬ ಆಸ್ತ್ರದಿಂದ ಈತನನ್ನು ಸಂಹರಿಸಿಬಿಡಬೇಕು.

* * * * *

## 16. ಭಗವನ್ನಾಮದ ಮಹತ್ವ

**ಸಾಂಕೇತ್ಯಂ ಪಾರಿಹಾಸ್ಯಂ ವಾ ಸ್ತೋಭಂ ಹೇಲನಮೇವ ವಾ।**
**ವೈಕುಂಠನಾಮಗ್ರಹಣಮಶೇಷಾಘಹರಂ ವಿದುಃ**
**ಪತಿತಃ ಸ್ಖಲಿತೋ ಭಗ್ನಃ ಸಂದಷ್ಟಸ್ತಪ್ತ ಆಹತಃ।**
**ಹರಿರಿತ್ಯವಶೇನಾಹ ಪುಮಾನ್ ನಾರ್ಹತಿ ಯಾತನಾಮ್**

**ಶ್ರೀ ಮದ್ಭಾಗವತ 6-2-14, 15**

(ಪರಮಾತ್ಮನನ್ನು ಕುರಿತದ್ದಲ್ಲದೆ) ಬೇರೊಬ್ಬರ ಸಂಕೇತದ ಹೆಸರೆಂಬ ಕಾರಣದಿಂದಾಗಲಿ, ಪರಿಹಾಸ್ಯಕ್ಕಾಗಿಲಿ, ವೃಥಾ ಉಚ್ಚರಿಸಿದರಾಗಲಿ ಅಣಕಿಸುವದಕ್ಕಾಗಲಿ, ಯಾವದೇ ಕಾರಣದಿಂದ ನಾಮವನ್ನು ಉಚ್ಚರಿಸಿದರೂ ಆದು ಭಗವಂತನ ನಾಮವಾಗಿದ್ದಲ್ಲಿ ಪಾಪವನ್ನು ತೊಲಗಿಸಿಬಿಡುತ್ತದೆ. ಇನ್ನು ಮಾನವನು ತನ್ನ (ವ್ಯವಹಾರಕಾಲಕ್ಕೆ) ಕಾಲುಜಾರಿ ಎಡವಿದಾಗ, ಜಾರಿಬಿದ್ದಾಗ ವಿಷಜಂತುವಿನಿಂದ ಕಚ್ಚಲ್ಪಟ್ಟಾಗ, ಬಿಸಿಲು ಬೆಂಕಿಗಳಿಂದ ತಪ್ತನಾದಾಗ (ಯಾವ ಸ್ಥಿತಿಯಲ್ಲಾದರೂ) ತನ್ನ ಪ್ರಯತ್ನವೇ ಇಲ್ಲದೆ ತಾನಾಗಿ ಹರಿನಾಮವನ್ನು ಉಚ್ಚರಿಸಿದರೂ ಸರಿಯೆ, ಆ ಮನುಷ್ಯನು ಯಮಯಾತನೆಗೆ ಪಾತ್ರನಾಗುವದಿಲ್ಲ.

(ಭಗವನ್ನಾಮದ ಮಹಿಮೆ ಎಂಥದ್ದು- ಎಂದರೆ ವ್ಯವಹಾರಕಾಲದಲ್ಲಿ ಯಾವದಾದರೂ ನಿಮಿತ್ತದಿಂದ ಮಾನವನು ಪರಮಾತ್ಮನ ದಿವ್ಯನಾಮವನ್ನು ಉಚ್ಚರಿಸಿದರೂ ನಾಮಮಹಿಮೆಯ ಪ್ರಭಾವದಿಂದ ಅವನು ಸದ್ಗತಿಯನ್ನು ಪಡೆಯುತ್ತಾನೆ. ಭಗವನ್ನಾಮಮಹಿಮೆಯು ಇಷ್ಟು ಪ್ರಬಲವಾದದ್ದು- ಎಂದಭಿಪ್ರಾಯ.)

## ಅಜಾಮಿಳೋಪಾಖ್ಯಾನ

ಅಜಾಮಿಳನ ಕಥೆಯ ನೆಪದಿಂದ ಶ್ರೀ ಶುಕಮಹಾಮುನಿಗಳು ಪರೀಕ್ಷಿದ್ರಾಜನಿಗೆ 'ನಾರಾಯಣ'ನೆಂಬ ದಿವ್ಯನಾಮದ ಮಹತ್ತ್ವವನ್ನು ತಿಳಿಸುತ್ತಿದ್ದಾರೆ. ಅಜಾಮಿಳನು ಪಾಪಿಯೇ ಆಗಿದ್ದನಾದರೂ ತನ್ನ ಜೀವನದ ಅಂತ್ಯಕಾಲದಲ್ಲಿ ನಾರಾಯಣನಾಮವನ್ನು ಉಚ್ಚರಿಸಿದನು. ಏಕೆಂದರೆ ಅವನು ತನ್ನ ವೇಶ್ಯಾಪುತ್ರನಿಗೆ ನಾರಾಯಣನೆಂದು ಹೆಸರಿಟ್ಟಿದ್ದನು ಮತ್ತು ಆ ಮಗನ ಮೇಲೆ ಅಪಾರವಾದ ಪ್ರೀತಿಯುಳ್ಳವನಾಗಿದ್ದನು. ಅವನಿಗೆ ಮರಣಕಾಲವು ಪ್ರಾಪ್ತವಾದಾಗ ಅವನನ್ನು ನರಕಕ್ಕೆ ಕೊಂಡೊಯ್ಯಲು ಯಮದೂತರು ಬಂದರು. ಅವರುಗಳನ್ನು ನೋಡಿ ಭಯಗೊಂಡವನಾಗಿ ತನ್ನ ಮಗನ ಮೇಲಿದ್ದ ವ್ಯಾಮೋಹದಿಂದ, ಹಾಗೂ ಯಮಭಟರ ದರ್ಶನದಿಂದಾದ ಗಾಬರಿಯಿಂದ ''ನಾರಾಯಣ, ನಾರಾಯಣ'' ಎಂದು ಉಚ್ಚರಸಿದನು. ಕೂಡಲೆ ಅವನಿದ್ದಲ್ಲಿಗೆ ಶ್ರೀಮನ್ನಾರಾಯಣನ ಕಡೆಯವರಾದ ದೇವದೂತರೂ ಬಂದರು. ಅವರುಗಳು ಶ್ರೀ ಮಹಾವಿಷ್ಣುವಿನಿಂದ ಆಜ್ಞಪ್ತರಾಗಿ ಬಂದಿದ್ದರು. ಆಗ ಯಮದೂತರಿಗೂ ವಿಷ್ಣುದೂತರಿಗೂ ಸಂವಾದವು ಹೀಗೆ ನಡೆಯಿತು.

''ಎಲೈ ಯಮದೂತರೆ, ಈ ಅಜಾಮಿಳನು ಕೋಟಿ ಕೋಟಿ ಜನ್ಮಗಳಲ್ಲಿ ಮಾಡಿದ್ದ ಪಾಪಗಳಿಗೆಲ್ಲ ಪೂರ್ಣವಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಂಡಿರುತ್ತಾನೆ. ಹೇಗೆಂದರೆ : ಬೇರಾವುದೋ ವ್ಯಾಮೋಹದಿಂದಲೇ ಆದರೂ ಈತನು ಶ್ರೀಹರಿಯ ಪರಮಕಲ್ಯಾಣಮಯವಾದ ನಾಮವನ್ನು ಉಚ್ಚಾರಣೆಮಾಡಿದ್ದಾನೆ. 'ನಾರಾಯಣ' ಎಂಬ ನಾಲ್ಕು ಅಕ್ಷರಗಳನ್ನು ಉಚ್ಚರಿಸಿದ್ದರಿಂದಲೇ ಈತನು ಮಾಡಿದ್ದ ಎಲ್ಲಾ ಪಾಪಗಳಿಗೂ ಪ್ರಾಯಶ್ಚಿತವು ಆಗಿಹೋಯಿತು. ಕಳ್ಳನಾಗಲಿ, ಮದ್ಯಪಾನಿಯಾಗಲಿ, ಮಿತ್ರದ್ರೋಹಿಯಾಗಲಿ, ಬ್ರಹ್ಮಹತ್ಯೆ, ಗುರುಪತ್ನೀಗಮನ, ಸ್ತ್ರೀಹತ್ಯೆ, ಗೋಹತ್ಯೆ-ಇತ್ಯಾದಿ ಯಾವ ಪಾಪಗಳನ್ನೇ ಮಾಡಿರಲಿ, ಎಲ್ಲಾ ಪಾಪಗಳಿಗೂ ನಾರಾಯಣ ನಾಮವನ್ನು ಉಚ್ಚರಿಸುವದೇ ಮುಖ್ಯವಾದ ಪ್ರಾಯಶ್ಚಿತ್ತವು. ನಾರಾಯಣನಾಮದ ಉಚ್ಚಾರಣೆಯಿಂದ ಪಾಪಗಳು ನಿರ್ಮೂಲವಾಗುವಂತೆ ಪ್ರಾಯಶ್ಚಿತ್ತಗಳಿಂದ ಆಗುವದಿಲ್ಲ. ಪಾಪಗಳು ಬುಡಸಹಿತವಾಗಿ ನಾಶಹೊಂದಬೇಕಾದರೆ ಮರಣಸಮಯ ದಲ್ಲಿ ನಾರಾಯಣನಾಮವನ್ನುಚ್ಚರಿಸಿ ಪ್ರಾಯಶ್ಚಿತ್ತವನ್ನು ಮಾಡಿಕೊಂಡಿರುತ್ತಾನೆ.''

''ಈ ಅಜಾಮಿಳನು ನಾರಾಯಣನಾಮವನ್ನು ಭಗವಂತನ ಹೆಸರು- ಎಂದು

ತಿಳಿದು ಉಚ್ಚರಿಸಲಿಲ್ಲ. ತನ್ನ ಮಗನನ್ನು ಕರೆಯುವ ನೆಪದಲ್ಲಿ ಉಚ್ಚರಿಸಿದ್ದಾನೆ. ಆದರೂ ಅಂತ್ಯಕಾಲದಲ್ಲಿ ಯಾವನದರೂ ತನ್ನ ಇಚ್ಛೆ, ಪ್ರಯತ್ನಗಳಿಲ್ಲದೆ 'ಹರಿ' ಎಂದು ಉಚ್ಚರಿಸಿದರೂ ಸಾಕು. ಆತನು ಯಮನ ಯಾತನೆಗೆ ಪಾತ್ರನಾಗುವದಿಲ್ಲ. ಭಗವಂತನ ಸ್ಮರಣೆಯನ್ನು ತಿಳಿದೊ, ತಿಳಿಯದೆಯೊ ಹೇಗೇ ಮಾಡಿದರೂ - ಬೆಂಕಿಯು ಕಟ್ಟಿಗೆಯನ್ನು ಸುಟ್ಟುಹಾಕುವಂತೆ- ಪಾಪಗಳನ್ನು ನಾಶಮಾಡುತ್ತದೆ.''

''ಮಹರ್ಷಿಗಳು ಪಾಪಗಳ ಸ್ವರೂಪವನ್ನು ಪರಿಶೀಲನೆಮಾಡಿ ದೊಡ್ಡಪಾಪಗಳಿಗೆ ದೊಡ್ಡಪ್ರಾಯಶ್ಚಿತ್ತವನ್ನೂ ಸಣ್ಣಪಾಪಗಳಿಗೆ ಸಣ್ಣಪ್ರಾಯಶ್ಚಿತ್ತವನ್ನೂ ವಿಧಿಸಿರುತ್ತಾರೆ. ತಪಸ್ಸು, ದಾನ, ಮುಂತಾದ ಪ್ರಾಯಶ್ಚಿತ್ತಗಳು ಆಯಾ ಪಾಪಗಳನ್ನು ಕಳೆದುಹಾಕುತ್ತವೆ. ಆದರೆ ಅವು ಮಲಿನವಾದ ಹೃದಯವನ್ನು ಶುದ್ಧಪಡಿಸಲಾರವು. ಭಗವಂತನ ಚರಣಗಳ ಸೇವೆಯು ಮಾತ್ರ ಶುದ್ಧಪಡಿಸಬಲ್ಲದು. ತಿಳಿದೊ, ತಿಳಿಯದೆಯೊ- ಭಗವಂತನ ನಾಮವನ್ನು ಹೇಗೆ ಉಚ್ಚಾರಮಾಡಿದರೂ ಅದು ಎಲ್ಲಾ ಪಾಪಗಳನ್ನೂ ಸುಟ್ಟು ಬೂದಿಮಾಡುವದು. ಅಮೃತದ ಮಹತ್ತ್ವವನ್ನು ತಿಳಿಯದೆ ಒಬ್ಬನು ಅದನ್ನು ಸೇವಿಸಿದರೂ ಅದು ಅವನನ್ನು ಅಮರನನ್ನಾಗಿ ಮಾಡುವದಲ್ಲವೆ? ಹಾಗೆಯೇ ಭಗವನ್ನಾಮವು ತಿಳಿಯದೆ ಉಚ್ಚಾರಮಾಡಿದವನನ್ನೂ ಉದ್ಧಾರಮಾಡುತ್ತದೆ.''

ಹೀಗೆ ವಿಷ್ಣುದೂತರು ಅಜಾಮಿಳನನ್ನು ಯಮದೂತರ ಬಂಧನದಿಂದ ಬಿಡಿಸಿದರು. ಅಜಾಮಿಳನು ಅವರಿಗೆ ತಲೆಬಾಗಿ ನಮಸ್ಕರಿಸಿದನು. ಅವನು ನೋಡುತ್ತಿದ್ದಂತೆಯೇ ಅವರು ಕಣ್ಮರೆಯಾಗಿಬಿಟ್ಟರು. ಆಗ ಅಜಾಮಿಳನು ಭಗವಂತನ ಪಾರ್ಷದರನ್ನು (ದ್ವಾರಪಾಲಕರನ್ನು) ಪರಿಶುದ್ಧವಾದ ಧರ್ಮದಸ್ವರೂಪವನ್ನು ಕುರಿತು ಕೇಳಿದನು. ಅವರುಗಳು ಮತ್ತೊಮ್ಮೆ ಅಜಾಮಿಳನಿಗೆ ಧರ್ಮವನ್ನು ಉಪದೇಶಿಸಿದರು. ಆಗ ಅವನಿಗೆ ಅಂತಃಕರಣಶುದ್ಧಿಯಾಗಲು ಪಶ್ಚಾತ್ತಾಪವುಂಟಾಯಿತು. ಅದು ಹೀಗಿದೆ: ''ಅಯ್ಯೋ, ನಾನು ಇಂದ್ರಿಯಗಳಿಗೆ ಎಂಥ ಗುಲಾಮನಾಗಿಬಿಟ್ಟೆನು? ಈ ದಾಸಿಯ ಗರ್ಭದಲ್ಲಿ ಪುತ್ರರನ್ನು ಪಡೆದು ನನ್ನ ಬ್ರಾಹ್ಮಣ್ಯವನ್ನು ಕಳೆದುಕೊಂಡೆನು. ನನ್ನ ಕುಲಕ್ಕೇ ಕಳಂಕವನ್ನು ತಂದುಕೊಂಡ ಪಾತಕಿಯಾದೆನು. ಕಿರುವಯಸ್ಸಿನಲ್ಲಿಯೇ ಸಾಧ್ವಿಯಾದ ಪತ್ನಿಯನ್ನು ತೊರೆದು ಕುಲಟೆಯ ಸಹವಾಸಮಾಡಿ ಭ್ರಷ್ಟನಾದೆನು. ಎಂಥ ನೀಚನು ನಾನು? ಆದರೆ ಈಗ ನಾನು ಒಂದು ಅದ್ಭುತವಾದ ದೃಶ್ಯವನ್ನು ನೋಡಿದೆನು. ಕೈಯಲ್ಲಿ ಪಾಶಗಳನ್ನು ಹಿಡಿದುಕೊಂಡು ನನ್ನನ್ನು ಭೂಮಿಗೆ ಕೆಳಗಡೆಗೆ ಸೆಳೆದುಕೊಂಡು

ಹೋಗುತ್ತಿದ್ದರು. ಆಗ ಅತ್ಯಂತ ಸುಂದರವಾದ ನಾಲ್ಕು ಮಂದಿ ಸಿದ್ಧರು ನನ್ನನ್ನು ಬಿಡುಗಡೆಮಾಡಿದರು. ನಾನು ಈ ಜನ್ಮದಲ್ಲಿ ಮಹಾಪಾಪಿಯಾಗಿದ್ದರೂ ಹಿಂದಿನ ಜನ್ಮಗಳಲ್ಲಿ ಶುಭಕರ್ಮಗಳನ್ನು ಮಾಡಿರಬೇಕು. ಆದ್ದರಿಂದಲೇ ಸಾಯುತ್ತಿರುವ ಸಮಯದಲ್ಲಿ ಪವಿತ್ರವಾದ ಭಗವಂತನ ನಾಮದ ಉಚ್ಚಾರಣೆಯಾಯಿತು. ನಾನು ಧನ್ಯನಾದೆನು. ಇನ್ನು ಮುಂದೆ ನಾನು ಪಾಪಕರ್ಮಗಳನ್ನು ಮಾಡೆನು. ಆತ್ಮಗುಣಸಂಪನ್ನನಾಗುವೆ. ಸಮಸ್ತಪ್ರಾಣಿಗಳಿಗೂ ಹಿತವನ್ನು ಆಚರಿಸುವೆನು. ವಾಸನೆಗಳನ್ನು ಶಮನಗೊಳಿಸುವೆನು. ಎಲ್ಲರೊಡನೆಯೂ ಮೈತ್ರಿಯಿಂದಿರುವೆನು. ಶ್ರೀ ಭಗವಂತನ ದಿವ್ಯನಾಕೀರ್ತನಾದಿಗಳಿಂದ ಮನಸ್ಸನ್ನು ಶುದ್ಧಗೊಳಿಸಿಕೊಂಡು ಅದನ್ನು ಶ್ರೀಭಗವಂತನಲ್ಲಿ ನೆಲೆಗೊಳಿಸುವೆನು'' ಎಂದು ಅನುಸಂಧಾನಮಾಡಿಕೊಂಡನು.

ಹೀಗೆ ಅಜಾಮಿಳನು ಕ್ಷಣಕಾಲ ಒದಗಿದ ಸತ್ಸಂಗ ಸನ್ನಿವೇಶದಿಂದಲೇ ತೀವ್ರವೈರಾಗ್ಯವನ್ನು ಪಡೆದು ಸಂಸಾರದ ವ್ಯಾಮೋಹವನ್ನು ತೊರೆದವನಾಗಿ ಹರಿದ್ವಾರಕ್ಕೆ ತೆರಳಿದನು. ಅಲ್ಲಿ ಯೋಗಾಸನದಲ್ಲಿ ಕುಳಿತು ಇಂದ್ರಿಯಗಳನ್ನು ಒಳಕ್ಕೆ ಸೆಳೆದುಕೊಂಡು ಮನಸ್ಸನ್ನು ಬುದ್ಧಿಯಲ್ಲಿ ಅಡಕಮಾಡಿ ಆತ್ಮಚಿಂತನೆಮಾಡುತ್ತಾ ಶ್ರೀ ಭಗವಂತನಲ್ಲಿ ಮನಸ್ಸನ್ನು ಸೇರ್ಪಡಿಸಿದನು. ಆಗ ಶ್ರೀ ಭಗವಂತನ ನಾಲ್ಕು ಮಂದಿ ಪಾರ್ಷದರ ದರ್ಶನವಾಯಿತು. ಅವರಿಗೆ ತಲೆಬಗ್ಗಿ ನಮಸ್ಕಾರಮಾಡಿದನು. ಗಂಗೆಯ ದಡದಲ್ಲಿ ಶರೀರವನ್ನು ತ್ಯಜಿಸಿ ಕೂಡಲೆ ಶ್ರೀಭಗವಂತನ ಪಾರ್ಷದರ ಸ್ವರೂಪವನ್ನು ಪಡೆದುಕೊಂಡನು. ಅವರೊಡನೆ ಸೇರಿ ಸ್ವರ್ಣಮಯವಾದ ವಿಮಾನವನ್ನೇರಿ ಆಕಾಶಮಾರ್ಗದಿಂದ ಶ್ರೀಪತಿಯಾದ ನಾರಾಯಣನ ಧಾಮವನ್ನು ಸೇರಿಕೊಂಡನು.

ಅಜಾಮಿಳನಂಥ ಪಾಪಿಯು ಸಾಯುವ ಸಮಯದಲ್ಲಿ ತನ್ನ ಮಗನನ್ನು ಕರೆಯುವ ನೆಪದಲ್ಲಿ ಭಗವನ್ನಾಮವನ್ನು ಉಚ್ಚರಿಸಿದನು. ಆತನಿಗೆ ವೈಕುಂಠಲೋಕಪ್ರಾಪ್ತಿ ಯಾಯಿತು. ಇನ್ನು ಶ್ರದ್ಧಾಭಕ್ತಿಗಳಿಂದ ಭಗವನ್ನಾಮವನ್ನು ಉಚ್ಚರಿಸುವವರ ವಿಷಯದಲ್ಲಿ ಹೇಳತಕ್ಕದ್ದೇನಿದೆ?

* * * * *

# 17. ಯಮಧರ್ಮರಾಜನ ಸಂದೇಶ

**ಪರೋಮದನ್ಯೋ ಜಗತಃ ತಸ್ಥುಷಶ್ಚ**
**ಓತಂ ಪ್ರೋತಂ ಪಟವದ್ ಯತ್ರ ವಿಶ್ವಮ್ ।**
**ಯದಂಶತೋಽಸ್ಯ ಸ್ಥಿತಿಜನ್ಮನಾಶಾಃ**
**ನಸ್ಯೋತವದ್ ಯಸ್ಯ ವಶೇ ಚ ಲೋಕಾಃ ॥**

**ಶ್ರೀ ಮದ್ಭಾಗವತ 6-3-12**

ಎಲೈ ನನ್ನ ಪ್ರೀತಿಯ ದೂತರೆ, ಈ ಜಗತ್ತಿಗೆಲ್ಲ ಮಹಾಪ್ರಭುವಾದವನು ನನಗಿಂತಲೂ ಬೇರೊಬ್ಬನಿದ್ದಾನೆ. ಆತನಲ್ಲಿಯೇ ಈ ಇಡಿಯ ಜಗತ್ತು ದಾರದಲ್ಲಿ ಬಟ್ಟೆಯು ಹಾಸುಹೊಕ್ಕಾಗಿ ಪೋಣಿಸಲ್ಪಟ್ಟಿರುವಂತೆ- ಹೆಣೆಯಲ್ಪಟ್ಟಿದೆ. ದೇವತೆಗಳೆಲ್ಲರೂ (ನಾನು) ಆತನ ವಶವರ್ತಿಗಳಾಗಿಯೇ ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳನ್ನು ನಡೆಸುತ್ತಿರುವರು. ಹೀಗೆ ಜಗತ್ತು-ಮೂಗುದಾರವನ್ನು ಹಾಕಿರುವ ಗೂಳಿಯಂತೆ- ಆ ಜಗನ್ನಾಯಕನ ಸಂಪೂರ್ಣ ಅಧೀನದಲ್ಲಿದೆ.

**(ಯಮಧರ್ಮರಾಜನು, ತಾನು ಹಾಗೂ ಉಳಿದ ಜಗತ್ತೆಲ್ಲವೂ ಶ್ರೀಮನ್ನಾರಾಯಣನ ಅಧೀನದಲ್ಲಿಯೇ ಇದ್ದು, ಇದರ ಸೃಷ್ಟಿಸ್ಥಿತಿಲಯಗಳು ಆ ಮಹಾಮಹಿಮನ ಸಂಕಲ್ಪಾನುಸಾರವಾಗಿ ದೇವತೆಗಳ ಮೂಲಕ ನಡೆಯುತ್ತಿವೆ- ಎಂದು ತನ್ನ ದೂತರಿಗೆ ತಿಳಿಸಿರುತ್ತಾನೆ.)**

## ಯಮದೇವನು ತನ್ನ ದೂತರಿಗೆ ಮಾಡಿದ ಉಪದೇಶ

ಎಲೈ ನನ್ನ ವಿಧೇಯರಾದ ದೂತರೆ, ಈ ಚರಾಚರಪ್ರಪಂಚಕ್ಕೆಲ್ಲ ಮಹಾಪ್ರಭುವಾದವನು ಬೇರೊಬ್ಬನಿರುವನು. ದಾರದಲ್ಲಿ ಬಟ್ಟೆಯು ಹೆಣೆಯಲ್ಪಟ್ಟಿರುವಂತೆ ಇಡಿಯ ಜಗತ್ತೇ ಆತನಲ್ಲಿ ಹೆಣೆಯಲ್ಪಟ್ಟಿದೆ. ಆತನ ವಶವರ್ತಿಗಳಾಗಿಯೇ ದೇವತೆಗಳು ಈ ಜಗತ್ತಿನ ಸೃಷ್ಟಿ-ಸ್ಥಿತಿ-ಲಯ-ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ. ಮೂಗುದಾರ ಹಾಕಲ್ಪಟ್ಟ ಗೂಳಿಯಂತೆ ಈ ಜಗತ್ತು ಆ ಭಗವಂತನ ಸಂಪೂರ್ಣ ಅಧೀನದಲ್ಲಿದೆ.

''ರೈತನು ತನ್ನ ಎತ್ತುಗಳನ್ನು ಮೊದಲು ಸಣ್ಣ ಹಗ್ಗಗಳಲ್ಲಿ ಕಟ್ಟಿ ಅನಂತರ ಒಂದು

ದೊಡ್ಡ ಹಗ್ಗಕ್ಕೆ ಕಟ್ಟುವಂತೆ, ಭಗವಂತನು ಬ್ರಾಹ್ಮಣಾದಿವರ್ಣಗಳನ್ನೂ ಬ್ರಹ್ಮಚರ್ಯವೇ ಮುಂತಾದ ಆಶ್ರಮಗಳನ್ನೂ ನಾಮಧೇಯವೆಂಬ ಸಣ್ಣ ಹಗ್ಗದಲ್ಲಿ ಕಟ್ಟಿ ಅನಂತರ ವೇದವಾಣಿಯೆಂಬ ದೊಡ್ಡಹಗ್ಗದಲ್ಲಿ ಕಟ್ಟಿಹಾಕಿರುತ್ತಾನೆ. ಹೀಗೆ ಸಮಸ್ತಜೀವರುಗಳೂ ನಾಮ ಮತ್ತು ಕರ್ಮಗಳೆಂಬ ಬಂಧನದಲ್ಲಿ ಕಟ್ಟಲ್ಪಟ್ಟವರಾಗಿ ಭಯಗ್ರಸ್ಥರಾಗಿ ಆ ಮಹಾಪ್ರಭುವಿಗೆ ತಮ್ಮ ಸರ್ವಸ್ವವನ್ನೂ ಪೂಜಾಕಾಣಿಕೆಯಾಗಿ ಸಮರ್ಪಿಸುತ್ತಿದ್ದಾರೆ. ನಾನು, ಮಹೇಂದ್ರನು, ನಿರ್‌ಋತಿಯು, ವರುಣನು, ಶ್ರೀ ಶಂಕರನು, ವಾಯುವು, ಅಷ್ಟವಸುಗಳು, ಮರುದ್ದೇವತೆಗಳು, ಇವರೆಲ್ಲರೂ ಸತ್ತ್ವಗುಣಪ್ರಧಾನರು. ಹೀಗಿದ್ದರೂ ಇವರೆಲ್ಲರೂ ಶ್ರೀ ಭಗವಂತನ ಮಾಯೆಗೆ ಅಧೀನರಾಗಿರುವರು. ಆ ಭಗವಂತನು ಯಾವ ರೂಪದಿಂದ ಯಾವ ಕಾರ್ಯವನ್ನು ಮಾಡುತ್ತಾನೆಂಬುದನ್ನು ಅರಿಯರು. ಹೀಗಿರುವಲ್ಲಿ ಇತರರ ಮಾತೇನಿದ್ದೀತು?

ಎಲ್ಲೆ ದೂತರೆ, ಮಡಕೆ, ಬಟ್ಟೆಗಳೇ ಮುಂತಾದವುಗಳನ್ನು ಪ್ರಕಾಶಪಡಿಸುವದು ಕಣ್ಣು. ಆದರೆ ಆ ಪದಾರ್ಥಗಳು ಕಣ್ಣನ್ನು ನೋಡಲಾರವಲ್ಲವೆ? ಹಾಗೆಯೇ ಅಂತಃಕರಣದಲ್ಲಿ ಸಾಕ್ಷಿಯಾಗಿರುವ ಆ ಪರಮಾತ್ಮನನ್ನು ಯಾವದೇ ಪ್ರಾಣಿಯೂ ಇಂದ್ರಿಯ, ಮನಸ್ಸು, ಪ್ರಾಣ, ಹೃದಯ, ಅಥವಾ ವಾಣಿ (ಮಾತು)ಯೇ ಮುಂತಾದ ಯಾವದೇ ಸಾಧನದಿಂದಲೂ ತಿಳಿಯಲಾಗದು. ಸರ್ವರಿಗೂ ಒಡೆಯನಾಗಿ ಸರ್ವಸ್ವತಂತ್ರನಾಗಿ ಮಾಯೆಗೆ ಅಧಿಪತಿಯಾಗಿರುವ ಆ ಪುರುಷೋತ್ತಮನ ದೂತರೂ ಆತನಂತೆಯೇ ಪರಮಸುಂದರವಾದ ರೂಪ, ಗುಣ ಮತ್ತು ಸ್ವಭಾವಗಳಿಂದ ಸಂಪನ್ನರಾಗಿ ಈ ಲೋಕದಲ್ಲಿ ಸಾಮಾನ್ಯವಾಗಿ ಸಂಚರಿಸುತ್ತಿರುವರು. ಶ್ರೀ ಭಗವಂತನಾದ ವಿಷ್ಣುವಿನ ಭಕ್ತರಾದ ಆ ಪಾರ್ಷದರ ದರ್ಶನವು ಅತ್ಯಂತ ದುರ್ಲಭವಾದುದು. ಅವರು ಶ್ರೀ ಭಗವಂತನ ಭಕ್ತಜನರನ್ನು ಶತ್ರುಗಳ ದೆಸೆಯಿಂದಲೂ ನನ್ನ (ಯಮನ) ದೆಸೆಯಿಂದಲೂ ಅಗ್ನಿಯೇ ಮುಂತಾದ ಸಕಲವಿಪತ್ತುಗಳ ದೆಸೆಯಿಂದಲೂ ಯಾವಾಗಲೂ ಸಂರಕ್ಷಣೆಮಾಡುತ್ತಿರುವರು. ಭಗವಂತನೇ ನಿರ್ಮಾಣಮಾಡಿರುವ ಧರ್ಮದ ಮರ್ಯಾದೆಯನ್ನು ಋಷಿಗಳಾಗಲಿ, ದೇವತೆಗಳಾಗಲಿ ಯಾರೂ ಅರಿಯರು.

ಶ್ರೀ ಭಗವಂತನು ನಿರ್ಮಿಸಿರುವ ''ಭಾಗವತಧರ್ಮ''ವು ಅತ್ಯಂತ ಪರಿಶುದ್ಧವೂ ಗೋಪ್ಯವೂ ಆದುದು. ಅದನ್ನು ತಿಳಿದುಕೊಂಡವರು ಶ್ರೀ ಭಗವಂತನ

ಸಾರೂಪ್ಯವನ್ನೇ ಹೊಂದುವರು. ಭಾಗವತಧರ್ಮದ ರಹಸ್ಯವನ್ನು (1) ಬ್ರಹ್ಮ (2) ನಾರದ (3) ಶಿವ (4) ಸನತ್ಕುಮಾರ (5) ಕಪಿಲ (6) ಸ್ವಾಯಂಭುವಮನು (7) ಪ್ರಹ್ಲಾದ (8) ಜನಕ (9) ಭೀಷ್ಮ (10) ಬಲಿರಾಜ (11) ಶುಕಮುನಿ (12) ಯಮನಾದ ನಾನು- ಈ ಹನ್ನೆರಡು ಮಹಾತ್ಮರುಗಳು ಮಾತ್ರವೇ ತಿಳಿದಿರುವರು. ಈ ಜಗತ್ತಿನಲ್ಲಿ ಜೀವರುಗಳ ಕರ್ತವ್ಯವೂ ಪರಮಧರ್ಮವೂ ಯಾವದು? ಎಂದರೆ, ನಾಮಸಂಕೀರ್ತನೆಯೇ ಮುಂತಾದ ಉಪಾಯಗಳಿಂದ ಭಗವಂತನ ಪಾದಾರವಿಂದ ಗಳಲ್ಲಿ ಭಕ್ತಿಯನ್ನು ಸಂಪಾದಿಸಿಕೊಳ್ಳುವದು- ಎಂದು ಬಲ್ಲವರು ಹೇಳುತ್ತಾರೆ. ಕೆಲವರು ಆಕರ್ಷಕವಾದ ವೇದವಾಣಿಯ ಕರೆಗೆ ಮರುಳಾಗಿ ಯಜ್ಞಯಾಗಾದಿರೂಪವಾದ, ದೊಡ್ಡ ದೊಡ್ಡ ಕರ್ಮಗಳಲ್ಲಿಯೇ ಆಸಕ್ತರಾಗಿರುತ್ತಾರೆ. ಪರಮಫಲವನ್ನು ಕೊಡುವ ಅತ್ಯಂತ ಸುಗಮವಾದ ಈ ಭಗವನ್ನಾಮಮಹಿಮೆಗೆ ಗಮನವನ್ನು ಕೊಡುವದೇ ಇಲ್ಲ. ಎಂಥ ಶ್ರೇಷ್ಠವಾದ ಪರಿಪೂರ್ಣವಾದ ಹಾಗೂ ಶಾಸ್ತ್ರಾನುಸಾರಿಯಾದ ಸತ್ಕರ್ಮಗಳನ್ನು ಮಾಡಿದರೂ ಅದರ ಫಲವು ಅನಿತ್ಯವೇ- ಎಂಬುದು ಇವರಿಗೆ ತಿಳಿದಿರುವದಿಲ್ಲ. ಆದರೆ ಫಲಾಶೆಯನ್ನು ಕೈಬಿಟ್ಟು ''ಭಗವಂತನು ಉಪದೇಶಿಸಿರುವ 'ಕರ್ಮಣ್ಯೇವಾಧಿ ಕಾರಸ್ತೇ' ಎಂಬ ಕರ್ಮಯೋಗವನ್ನು ಅನುಸರಿಸಿದರೆ ಅದು ಮುಕ್ತಿಗೆ ದಾರಿಯಾಗುವದು.'' ಹೀಗೆಂದು ಯಮದೇವನು ತನ್ನ ದೂತರಿಗೆ ಹೇಳಿದ ಭಗವನ್ನಾಮಮಹಿಮೆಯನ್ನು ಶುಕಮಹರ್ಷಿಗಳು ಪರೀಕ್ಷಿತನಿಗೆ ಉಪದೇಶಿಸಿದರು.

ಮತ್ತೊಮ್ಮೆ ಶ್ರೀ ಶುಕಮಹರ್ಷಿಗಳು ಮುಂದುವರೆದು ಪರೀಕ್ಷಿತನನ್ನು ಕುರಿತು ಹೀಗೆ ಹೇಳುತ್ತಾರೆ. ''ಎಲೈ ರಾಜೇಂದ್ರನೆ, ಶ್ರೀ ಭಗವಂತನ ಗುಣಗಳನ್ನೂ ಲೀಲೆಗಳನ್ನೂ ಮತ್ತು ಅವನ ದಿವ್ಯನಾಮಗಳನ್ನೂ ಕೀರ್ತನಮಾಡುತ್ತಿರುವದೇ ಸಮಸ್ತ ಮಹಾಪಾತಕಗಳಿಗೂ ಸರ್ವೋತ್ತಮವಾದ ಪ್ರಾಯಶ್ಚಿತವು. ಇದು ಸಮಸ್ತ ಸಂಸಾರವಾಸನೆಗಳನ್ನೂ ನಾಶಮಾಡಬಲ್ಲದು. ಶ್ರೀ ಭಗವಂತನ ಉದಾರವೂ ಕೃಪಾಪೂರ್ಣವೂ ಆಗಿರುವ ಚರಿತ್ರೆಗಳ ಶ್ರವಣ, ಸಂಕೀರ್ತನೆಗಳನ್ನು ಮತ್ತೆ ಮತ್ತೆ ಮಾಡುತ್ತಿರುವಲ್ಲಿ ಪರಮಪ್ರೇಮ ರೂಪವಾದ ಭಕ್ತಿಯು ಹುಟ್ಟುವದು, ಇಂಥ ಭಕ್ತಿಯಿಂದ ಉಂಟಾಗುವ ಆತ್ಮಶುದ್ಧಿಯು ಪ್ರಾಯಶ್ಚಿತ್ತಗಳಿಂದ ಉಂಟಾಗುವದಿಲ್ಲ. ಆದ್ದರಿಂದ ನೀನು ಭಗವಂತನ ದಿವ್ಯನಾಮ ಸ್ಮರಣೆಯಲ್ಲಿ ನಿಲ್ಲುವವನಾಗು. ಆಗ ಕೃತಾರ್ಥನಾಗುವೆ. ಮತ್ತು ಜನನ ಮರಣ ದುಃಖಗಳಿಂದ ಬಿಡುಗಡೆಯನ್ನು ಹೊಂದಿ ಮುಕ್ತಿಯನ್ನು ಪಡೆಯುವೆ''- ಎಂದು ಉಪದೇಶಮಾಡಿದರು.

ಅನಂತರ ಪರೀತನು ಶ್ರೀ ಶುಕಮಹಾಮುನಿಗಳನ್ನು ಕುರಿತು ಮತ್ತೆ ಹೀಗೆ ಪ್ರಶ್ನೆಮಾಡಿದನು : ''ಮಹರ್ಷಿಗಳೆ, ಯಮದೂತರು ಅಜಾಮಿಳನ ವೃತ್ತಾಂತವನ್ನು ತಮ್ಮ ಒಡೆಯನಾದ ಯಮನಿಗೆ ನಿವೇದಿಸಿದಾಗ ಯಮನು ಅವರಿಗೆ (ದೂತರಿಗೆ) ಏನು ಹೇಳಿದನು? ತಿಳಿಸೋಣವಾಗಲಿ'' ಎಂದು ಕೇಳಿದಾಗ ಯಮನು ಹೀಗೆಂದನು: ''ಎಲೈ ದೂತರೆ, ಈ ಚರಾಚರಜಗತ್ತಿಗೆಲ್ಲ ಮಹಾಪ್ರಭುವಾದವನು ನನಗಿಂತಲೂ ಬೇರೊಬ್ಬನಿದ್ದಾನೆ. ಆತನಲ್ಲಿಯೇ ಈ ಇಡಿಯ ಜಗತ್ತು- ದಾರದಲ್ಲಿ ಬಟ್ಟೆಯು ಹಾಸು ಹೊಕ್ಕಾಗಿ ಪೋಣಿಸಲ್ಪಟ್ಟಿರುವಂತೆ- ಹೆಣೆಯಲ್ಪಟ್ಟಿದೆ. ಆತನ ವಶವರ್ತಿಗಳಾಗಿಯೇ ಈ ಪ್ರಪಂಚದ ಸೃಷ್ಟಿ-ಸ್ಥಿತಿ-ಲಯಗಳನ್ನು ಮಹಾದೇವತೆಗಳು ನಡೆಸುತ್ತಿದ್ದಾರೆ. ಶ್ರೀ ಭಗವಂತನಲ್ಲಿಯೇ ಸಂಪೂರ್ಣಶರಣಾಗತರಾದ ಮಹಾತ್ಮರುಗಳು ನಮ್ಮ ಆಳ್ವಿಕೆಗೆ ಒಳಪಟ್ಟವರಲ್ಲ. ಆದ್ದರಿಂದ ಇನ್ನು ಮುಂದೆ ಆ ಕೃಷ್ಣಭಗವಂತನ ಪಾದಾರವಿಂದಗಳಿಗೆ ಯಾರು ನಮಸ್ಕರಿಸಿ ಶರಣರಾಗುವದಿಲ್ಲವೋ ಅಂಥವರನ್ನು ಮಾತ್ರ ನಮ್ಮಲ್ಲಿಗೆ ಕರೆತನ್ನಿರಿ'' ಎಂದು ಹೇಳಿ ದೂತರನ್ನು ಕ್ಷಮಿಸಿ ಕಳುಹಿಸಿದನು. ಆದ್ದರಿಂದ ಸರ್ವಾಂತರ್ಯಾಮಿಯಾದ ಭಗವಂತನ ಭಕ್ತರಿಗೆ ಯಮನ ಭಯವಿರುವದಿಲ್ಲ- ಎಂದು ಸಿದ್ಧವಾಯಿತು. ಹೀಗೆಂದು ಶುಕಮಹಾಮುನಿಗಳು ಪರೀಕ್ಷಿತನಿಗೆ ಅಜಾಮಿಳನ ಕಥೆಯನ್ನು ನೀರೂಪಿಸಿದರು.

* * * * *

## 18. ಪ್ರಹ್ಲಾದನ ಉಪದೇಶ

**ನ ಹ್ಯಚ್ಯುತಂ ಪ್ರೀಣಯತೋ ಬಹ್ವಾಯಾಸೋಽಸುರಾತ್ಮಜಾಃ ।**
**ಆತ್ಮತ್ವಾತ್ ಸರ್ವಭೂತಾನಾಂ ಸಿದ್ಧತ್ವಾದಿಹ ಸರ್ವತಃ ॥**
**ತಸ್ಮಾತ್ ಸರ್ವೇಷು ಭೂತೇಷು ದಯಾಂ ಕುರುತ ಸೌಹೃದಮ್ ।**
**ಆಸುರಂ ಭಾವಮುನ್ಮುಚ್ಯ ಯಯಾ ತುಷ್ಯತ್ಯಧೋಕ್ಷಜಃ ॥**

**ಶ್ರೀ ಮದ್ಭಾಗವತ 7-6-19, 24**

ಎಲೈ ಅಸುರಬಾಲಕರೆ, ಅಚ್ಯುತಭಗವಂತನನ್ನು ಸಂತೋಷಗೊಳಿಸಲು ಹೆಚ್ಚಿನ ಶ್ರಮವೇನೂ ಇರುವದಿಲ್ಲ. (ಏಕೆಂದರೆ) ಅವನು ಎಲ್ಲಾ ಜೀವರುಗಳ ಆತ್ಮನೇ

ಆಗಿರುತ್ತಾನೆ. ಮತ್ತು ಅವನು ಯಾವಾಗಲೂ ಎಲ್ಲರಿಗೂ ಪ್ರಸನ್ನನಾಗಿಯೇ ಇರುತ್ತಾನೆ. (ಅವನನ್ನು ಕಂಡುಕೊಳ್ಳಲು) ಎಲ್ಲಾ ಪ್ರಾಣಿಗಳಲ್ಲಿಯೂ ಮನಃಪೂರ್ವಕವಾಗಿ ದಯೆ (ಪ್ರೇಮ)ವನ್ನು ಮಾಡಿರಿ. (ಮತ್ತು) ಆಸುರಬುದ್ಧಿಯನ್ನು ಕೈಬಿಟ್ಟು ಆ ಭಗವಂತನನ್ನು ಸಂತೋಷಗೊಳಿಸಿರಿ.''

(ದಯೆ, ಸತ್ಯ, ಧರ್ಮ, ಪ್ರಾಮಾಣಿಕತೆ- ಇತ್ಯಾದಿ ಸದ್ಗುಣಗಳಿಂದ ಶ್ರೀಮನ್ನಾರಾಯಣನನ್ನು ಒಲಿಸಿ ಆ ಮಹಾಮಹಿಮನ ಕೃಪೆಗೆ ಪಾತ್ರರಾಗಿ ಜನ್ಮಸಾರ್ಥಕ್ಯವನ್ನು ಪಡೆಯಿರಿ- ಎಂದು ಭಕ್ತಶಿರೋಮಣಿಯಾದ ಪ್ರಹ್ಲಾದನು ತನ್ನ ಮಿತ್ರರಾದ ದೈತ್ಯಬಾಲಕರಿಗೆ ಉಪದೇಶವನ್ನು ಮಾಡಿರುತ್ತಾನೆ.)

## ದೈತ್ಯಬಾಲಕರಿಗೆ ಪ್ರಹ್ಲಾದನ ಉಪದೇಶ

ಶ್ರೀ ಶುಕಮಹಾಮುನಿಗಳು ಪರೀಕ್ಷಿತರಾಜನಿಗೆ ಭಾಗವತಕಥೆಗಳನ್ನು ಹೇಳುತ್ತಾ ಭಗವಂತನ ದಿವ್ಯಲೀಲೆಗಳ ನೆಪದಲ್ಲಿ ನಾರಾಯಣನು ನರಸಿಂಹಾವತಾರಮಾಡಿ ಹಿರಣ್ಯಕಶಿಪುವನ್ನು ಸಂಹಾರಮಾಡಿದ ಉಪಾಖ್ಯಾನವನ್ನು ಮುಂದುವರೆಸಿ ಹೇಳುತ್ತಾರೆ. ''ಎಲೈ ಪರೀಕ್ಷಿತನೆ, ಕೇಳು. ಹಿರಣ್ಯಕಶಿಪುವಿನ ಪುತ್ರನಾದ ಪ್ರಹ್ಲಾದನು ತನ್ನ ಜೊತೆಗಾರರಾದ ದೈತ್ಯಬಾಲಕರಿಗೆ ಭಗವಂತನನ್ನು ಒಲಿಸಿಕೊಳ್ಳಲು ಸಾಧನವಾಗಿರುವ ಭಕ್ತಿಯ ನಿರೂಪಣೆಯನ್ನು ಹೀಗೆ ಮಾಡುತ್ತಿದ್ದಾನೆ. ''ಎಲೈ ಬಾಲಕರೆ, ಕೇಳಿರಿ. ಶ್ರೀಮನ್ನಾರಾಯಣನನ್ನು ಒಲಿಸಿಕೊಳ್ಳಬೇಕಾದರೆ ಚಿಕ್ಕಂದಿನಲ್ಲಿಯೇ ಭಾಗವತ ಧರ್ಮಗಳ ಅನುಷ್ಠಾನವನ್ನು ಪ್ರಾರಂಭಿಸಬೇಕು. ಏಕೆಂದರೆ ಆ ಮಹಾಮಹಿಮನು ಎಲ್ಲಾ ಜೀವರುಗಳ ಆತ್ಮನೂ ಒಡೆಯನೂ ಆಗಿರುತ್ತಾನೆ. ಮಾನವನು ಇಂದ್ರಿಯ ಸುಖವನ್ನು ಬಯಸುವದು ಸರಿಯಷ್ಟೆ. ಆದರೆ ಅದು ಎಲ್ಲರಿಗೂ ದೈವಸಂಕಲ್ಪದಂತೆ ದೊರಕುತ್ತದೆ. ಜೀವನಿಗೆ ದುಃಖವು ತಾನಾಗಿಯೇ ಒದಗುವಂತೆ ಇಂದ್ರಿಯಸುಖವೂ ಲಭಿಸುತ್ತದೆ. ಆದ್ದರಿಂದ ಸುಖಕ್ಕಾಗಿ ಶ್ರಮಪಡುವದು ಸರಿಯಲ್ಲ. ಮನುಷ್ಯನಿಗೆ ದೇವರು ದಯಪಾಲಿಸಿರುವ ಒಂದುನೂರು ವರ್ಷಗಳ ಆಯುಷ್ಯದಲ್ಲಿ ಐವತ್ತರಲ್ಲಿ ಇಪ್ಪತ್ತು ವರ್ಷಗಳು ಬಾಲ್ಯ-ಕೌಮಾರ ಅವಸ್ಥೆಗಳಲ್ಲಿ ಸವೆದುಹೋಗುತ್ತವೆ. ಇನ್ನು ಕೊನೆಯ ಇಪ್ಪತ್ತೈದು ವರ್ಷಗಳ ಆಯುಷ್ಯದಲ್ಲಿ ಇಂದ್ರಿಯಗಳ ಶಕ್ತಿಯು ಕುಗ್ಗಿದ್ದು ಮುದಿತನದಿಂದ ಏನೂ ಮಾಡಲಾಗದೆ ಬೇಸರವುಂಟಾಗಿರುತ್ತದೆ. ಹೀಗೆ ಜೀವನವು ಸಾಗಿದಂತೆಲ್ಲ ಬಯಕೆಗಳು ಮಾತ್ರ ಬೆಳೆಯುತ್ತಲೇ ಇದ್ದು ಯಾವ ಪ್ರಯೋಜನವೂ

ಆಗದೆ ಬೇಸರವುಂಟಾಗುತ್ತದೆ. ಆದ್ದರಿಂದ ಜಾಣನಾದವನು ತನ್ನ ಪ್ರಾಯದ ವಯಸ್ಸಿನಲ್ಲಿಯೇ ಆತ್ಮೋದ್ಧಾರಕ್ಕಾಗಿ ಪ್ರಯತ್ನಮಾಡುತ್ತಾ ಮುಂದುವರೆಯಬೇಕು. ಇಂದ್ರಿಯಗಳು ಪುಷ್ಟವಾಗಿರುವಾಗಲೇ ವಿವೇಕವನ್ನು ಹೊಂದಿ ಭಗವಂತನ ಕಡೆಗೆ ಜೀವನವನ್ನು ತಿರುಗಿಸಿಕೊಳ್ಳಬೇಕು. ಇಂದ್ರಿಯಭೋಗಗಳ ಸೆಳೆತಕ್ಕೆ ಮನಸ್ಸನ್ನು ಹರಿಯಬಿಡಬಾರದು.

ಈಗ ಭಗವಂತನ ಕಡೆಗೆ ತಿರುಗುವದಕ್ಕೆ ಮಾಡಬೇಕಾದ ಸಾಧನಗಳನ್ನು ಕುರಿತು ವಿಚಾರಮಾಡೋಣ ಎಂದು ಪ್ರಹ್ಲಾದನ ಉಪದೇಶವನ್ನು ಹೀಗೆ ಮುಂದುವರೆಸಿದನು. ''ಅಚ್ಯುತಭಗವಂತನನ್ನು ಸಂತೋಷಗೊಳಿಸಲು ಹೆಚ್ಚಿನ ಆಯಾಸವೇನೂ ಇರುವದಿಲ್ಲ. ಏಕೆಂದರೆ ಅವನು ಎಲ್ಲಾ ಜೀವರುಗಳ ಆತ್ಮನೇ ಆಗಿರುತ್ತಾನೆ. ಅವನು ಸೃಷ್ಟಿಯಲ್ಲಿರುವ ಸ್ಥಾವರಜಂಗಮಾತ್ಮಕವಾದ ಸಮಸ್ತಜೀವರಾಶಿಗಳಲ್ಲಿಯೂ ವ್ಯಾಪಿಸಿದ್ದು ಯಾವಾಗಲೂ ನಿತ್ಯನೂ ವರ್ತಮಾನಸ್ವರೂಪನೂ ಆಗಿರುತ್ತಾನೆ. ಅವನಿಗೆ ಜೀವರುಗಳ ಸ್ಥಾವರ-ಜಂಗಮಶರೀರಗಳ ಭೇದವೂ ಇರುವದಿಲ್ಲ. ಆದ್ದರಿಂದ ಸೃಷ್ಟಿಯಲ್ಲಿರುವ ಅತ್ಯಂತ ಕೀಳಾದ ಕ್ರಿಮಿಗಳ ಶರೀರದಲ್ಲಿಯೂ ಅತ್ಯಂತಶ್ರೇಷ್ಠರಾದ ದೇವತೆಗಳ ಶರೀರದಲ್ಲಿಯೂ ಸಮನಾಗಿಯೇ ಇದ್ದಾನೆ. ಹೀಗೆಂದು ಅರ್ಜುನನಿಗೆ ಭಗವಂತನೇ ಗೀತೆಯಲ್ಲಿ ''ಈಶ್ವರಃ ಸರ್ವಭೂತಾನಾಮ್'' - ಎಂಬ ಶ್ಲೋಕದಲ್ಲಿ ಹೇಳಿದ್ದಾನೆ- ಎಂಬುದಾಗಿ ಪ್ರಹ್ಲಾದನು ದೈತ್ಯಬಾಲಕರಿಗೆ ಉಪದೇಶಮಾಡಿರುತ್ತಾನೆ.

ಮತ್ತೊಮ್ಮೆ ಪ್ರಹ್ಲಾದನು ದೈತ್ಯಬಾಲಕರನ್ನು ಕುರಿತು ತನ್ನ ಉಪದೇಶವನ್ನು ಮುಂದುವರೆಸಿದನು. ಅದು ಹೀಗಿದೆ : ''ಬಾಲಕರೆ, ಆತ್ಮನನ್ನು ಶರೀರದಿಂದಲೂ ಪ್ರಕೃತಿಯಿಂದಲೂ ಬೇರ್ಪಡಿಸಿಕೊಳ್ಳದಿರುವದೇ ಈ ಗುಣಕರ್ಮಗಳಿಂದ ಉಂಟಾಗುವ ಹುಟ್ಟು-ಸಾವುಗಳ ಚಕ್ರಕ್ಕೆ ಕಾರಣವಾಗಿರುವದು. ಆದ್ದರಿಂದ ನೀವು ಎಲ್ಲಕ್ಕೂ ಮೊದಲು ಗುಣಗಳಿಗೆ ಅನುಸಾರವಾಗಿ ಆಗುವ ಈ ಕರ್ಮಗಳ ಬೀಜವನ್ನೇ ನಾಶಪಡಿಸಿಬಿಡಬೇಕು. ಇದರಿಂದ ಬುದ್ಧಿವೃತ್ತಿಗಳ ಪ್ರವಾಹವು ನಿಂತುಹೋಗುವದು. ಇದನ್ನೇ 'ಯೋಗ' (ಪರಮಾತ್ಮನೊಡನೆ ಸಂಯೋಗ) ಎಂದು ಕರೆಯುತ್ತಾರೆ. ಈ ತ್ರಿಗುಣಾತ್ಮಕವಾದ ಕರ್ಮಗಳನ್ನು ಬುಡಸಹಿತವಾಗಿ ಕಿತ್ತುಹಾಕುವದಕ್ಕೆ ಅಥವಾ ಬುದ್ಧಿವೃತ್ತಿಗಳ ಪ್ರವಾಹಗಳನ್ನು ತಡೆಗಟ್ಟುವದಕ್ಕೆ ಸಾಕಷ್ಟು ಉಪಾಯಗಳಿವೆ. ಆದರೆ ಯಾವದು ಸರ್ವೇಶ್ವರನಾಗಿರುವ ಶ್ರೀ ಭಗವಂತನಲ್ಲಿ ಸ್ವಾಭಾವಿಕವಾದ ರತಿಯನ್ನು

ಉಂಟುಮಾಡುವದೋ ಅದೇ ಇವುಗಳಲ್ಲಿ ಸರ್ವಶ್ರೇಷ್ಠವಾದ ಉಪಾಯವು. ಈ ಆಶಯವನ್ನು ಭಗವಂತನೇ ಅಪ್ಪಣೆಕೊಡಿಸಿದ್ದಾನೆ. ಭಕ್ತಿಯಿಂದ ಗುರುಶುಶ್ರೂಷೆ ಮಾಡುವದು, ತನಗೆ ದೊರೆತ ಎಲ್ಲಾ ವಸ್ತುಗಳನ್ನೂ ಪರಮಪ್ರೇಮದಿಂದ ಪರಮಾತ್ಮನಿಗೆ ಸಮರ್ಪಣೆಮಾಡುವದು, ಭಗವದ್ಭಕ್ತರಾದ ಮಹಾತ್ಮರ ಸತ್ಸಂಗದಲ್ಲಿರುವದು, ಶ್ರೀ ಭಗವಂತನ ಆರಾಧನೆಯನ್ನು ಮಾಡುವದು, ಶ್ರದ್ಧಾಭಕ್ತಿಗಳಿಂದ ಆ ಮಹಾಮಹಿಮನ ಕಥೆಗಳನ್ನೂ ಕಲ್ಯಾಣಗುಣಗಳನ್ನೂ ಲೀಲೆಗಳನ್ನೂ ಕೀರ್ತನೆಮಾಡುವದು, ಆತ್ನ ಅಡಿದಾವರೆ(ಪಾದ)ಗಳನ್ನು ಧ್ಯಾನಮಾಡುವದು, ಆತನ ಪ್ರತಿನಿಧಿಗಳಾಗಿ ಭಾವಿಸಿ ದೇವರ ಮೂರ್ತಿಗಳು, ವಿಗ್ರಹಗಳನ್ನು ಭಕ್ತಿಯಿಂದ ಪೂಜಿಸುವದು, ನಮಸ್ಕರಿಸುವದು- ಮುಂತಾದ ಸಾಧನಗಳಿಂದ ಭಗವಂತನಲ್ಲಿ ಭಕ್ತಿಯುಂಟಾಗುವದು. ''ಸರ್ವೇಶ್ವರನಾದ ಶ್ರೀಹರಿಯು ಎಲ್ಲಾ ಪ್ರಾಣಿಗಳಲ್ಲಿಯೂ ಬೆಳಗುತ್ತಿದ್ದಾನೆ''- ಎಂಬ ಭಾವನೆಯಿಂದ ಯಥಾಶಕ್ತಿಯಾಗಿ ಎಲ್ಲಾ ಪ್ರಾಣಿಗಳ ಇಷ್ಟಾರ್ಥಗಳನ್ನೂ ಈಡೇರಿಸಬೇಕು. ಮತ್ತು ಅವುಗಳನ್ನು ಪೂಜ್ಯಭಾವದಿಂದ ಕಾಣಬೇಕು.

ಶ್ರೀ ಭಗವಂತನು ತನ್ನ ಅವತಾರಲೀಲೆಗಳಲ್ಲಿ ದಿವ್ಯಮಂಗಳವಿಗ್ರಹಗಳ (ಶರೀರಗಳ) ರೂಪದಿಂದ ತೋರಿದ ಪರಮಾದ್ಭುತಪರಾಕ್ರಮಗಳನ್ನೂ ಆತನ ಅನುಪಮವಾದ ಗುಣಗಳನ್ನೂ ಮತ್ತು ಚರಿತ್ರೆಗಳನ್ನೂ ಕೇಳಿದ ಮನುಷ್ಯನಿಗೆ ರೋಮಾಂಚನವುಂಟಾಗಿ ಆನಂದದಿಂದ ಕಣ್ಣೀರು ಸುರಿಸಿ, ಸಂಕೋಚವನ್ನು ಬಿಟ್ಟು ಗಟ್ಟಿಯಾಗಿ ಹಾಡುತ್ತಾ ಕುಣಿಯತೊಡಗುವನೋ ಆಗ ಅವನ ಹೃದಯವೂ ಭಗವದಾಕಾರವಾಗಿ ಭಗವನ್ಮಯವೇ ಆಗಿಬಿಡುವದು.

ಆದ್ದರಿಂದ ನಿಷ್ಕಾಮಭಾವದಿಂದ ಶ್ರೀಹರಿಯನ್ನು ಭಜಿಸಿರಿ ಅವನ ಇಚ್ಛೆಯಿಲ್ಲದೆ ಯಾವ ಫಲವೂ ದೊರೆಯಲಾರದು. ಶ್ರೀಹರಿಯೇ ನಮ್ಮೆಲ್ಲರ ಆತ್ಮನು. ಧರ್ಮಾರ್ಥಕಾಮಮೋಕ್ಷಗಳೆಂಬ ಪರಮಪುರುಷಾರ್ಥಗಳೆಲ್ಲವೂ ಅವನನ್ನೇ ಆಶ್ರಯಿಸಿರುತ್ತವೆ. ಭಗವಂತನಿಗೆ ದೇವತೆಗಳು, ಮಾನವರು, ಅಸುರರು- ಇತ್ಯಾದಿ ಯಾವ ಜೀವಭೇದಗಳೂ ಇರುವದಿಲ್ಲ. ಅವನು ಎಲ್ಲರಿಗೂ ಸರಿಸಮನು. ''ಸಮಂ ಸರ್ವೇಷು ಭೂತೇಷು ತಿಷ್ಠಂತಂ ಪರಮೇಶ್ವರಮ್'' ಎಂದು ಭಗವಂತನೇ ಅರ್ಜುನನಿಗೆ ಉಪದೇಶಿಸಿರುತ್ತಾನೆ. ಆತನಿಗೆ ಭಕ್ತರಲ್ಲಿಯೇ ಪ್ರೇಮವಿರುತ್ತದೆ. ಜೀವನು ಸಾಧಿಸ ಬೇಕಾದ ದೊಡ್ಡ ಸ್ವಾರ್ಥ-ಪರಮಾರ್ಥಗಳು ಯಾವವೆಂದರೆ ಭಗವಂತನಲ್ಲಿಡಬೇಕಾದ

ಅನನ್ಯಭಕ್ತಿ. ಇದನ್ನು ಪಡೆಯುವದಕ್ಕಾಗಿ ಆತನನ್ನೇ ಮೊರೆಹೋಗೋಣ. ಪ್ರಪಂಚದಲ್ಲಿ ಹೊಂದಲು ಈ ಮಾನವಜನ್ಮದಿಂದಲೇ ಸಾಧ್ಯ. ಇಂತಹ ಜನ್ಮವು ಯಾವಾಗ ನಾಶವಾಗಿಬಿಡುವದೋ ಹೇಳಲು ಸಾಧ್ಯವಾಗುವದಿಲ್ಲ. ಆದ್ದರಿಂದ ವಿವೇಕಿಯಾದವನು ಮುಪ್ಪುಬರುವವರೆಗೂ ಕಾಯದೆ ಪ್ರಾಯದ (ತಾರುಣ್ಯ) ವಯಸ್ಸಿನಲ್ಲಿಯೇ ಶ್ರೀ ಭಗವಂತನನ್ನು ದೊರಕಿಸುವ ಭಗವತ್ ಧರ್ಮಗಳನ್ನು ಅನುಷ್ಠಾನಮಾಡಬೇಕು.

ಈ ಮನುಷ್ಯಜನ್ಮದಲ್ಲಿ ಆ ಭಗವಂತನ ಪಾದಾರವಿಂದಗಳನ್ನು ಶರಣು ಹೋಗುವದೇ ಜೀವನಕ್ಕೆ ಸಫಲತೆಯೆನಿಸುತ್ತದೆ. ಸಮಸ್ತ ಪ್ರಾಣಿಗಳಿಗೂ ಸ್ವಾಮಿಯೂ ಸ್ನೇಹಿತನೂ ಪ್ರಿಯತಮನೂ ಆತ್ಮನೂ ಭಗವಂತನೇ ಆಗಿದ್ದಾನೆ. ದೇಹದಲ್ಲಿ ಆರೋಗ್ಯ ಮತ್ತು ಶಕ್ತಿಗಳು ಇರುವಾಗಲೇ ಭಗವದನುಗ್ರಹದಿಂದ ಮೋಕ್ಷರೂಪವಾದ ಕ್ಷೇಮವನ್ನು ಪಡೆಯಲು ಪ್ರಯತ್ನಿಸಬೇಕು. ಹೀಗೆಂದು ರಾಜಕುಮಾರನಾದ ಪ್ರಹ್ಲಾದನು ತನ್ನ ಜೊತೆಗಾರರಿಗೆ ಉಪದೇಶಮಾಡಿರುತ್ತಾನೆ.

* * * * *

## 19. ನೃಸಿಂಹಾವತಾರ

**ಸತ್ಯಂ ವಿಧಾತುಂ ನಿಜಭೃತ್ಯಭಾಷಿತಂ**
**ವ್ಯಾಪ್ತಿಂ ಚ ಭೂತೇಷ್ವಖಿಲೇಷು ಚಾತ್ಮನಃ।**
**ಅದೃಶ್ಯತಾತ್ಯದ್ಭುತರೂಪಮುದ್ವಹನ್**
**ಸ್ತಂಭೇ ಸಭಾಯಾಂ ನ ಮೃಗಂ ನ ಮಾನುಷಮ್ ॥**

**ಶ್ರೀ ಮದ್ಭಾಗವತ 7-8-18**

ಶ್ರೀಮನ್ನಾರಾಯಣನು ಭಕ್ತನಾದ ಪ್ರಹ್ಲಾದನ ವಾಣಿಯು ಸತ್ಯವಾಗಿದೆಯೆಂಬುದನ್ನು ದೃಢಗೊಳಿಸುವದಕ್ಕಾಗಿ, ಮತ್ತು ಸಕಲಜೀವರುಗಳಲ್ಲಿಯೂ ತಾನು ವ್ಯಾಪಿಸಿರುವದನ್ನು ಸ್ಫುಟಗೊಳಿಸುವದಕ್ಕಾಗಿ ಮೃಗವೂ ಅಲ್ಲದ, ಮನುಷ್ಯನೂ ಅಲ್ಲದ (ಅರ್ಧಭಾಗ ಮನುಷ್ಯ, ಅರ್ಧಭಾಗ ಮೃಗ) ರೂಪದಿಂದ ಸಭೆಯಲ್ಲಿದ್ದ ಕಂಬದಿಂದ ಉದ್ಭವಿಸಿದನು (ಕಾಣಿಸಿಕೊಂಡನು).

(ಸೃಷ್ಟಿಯಲ್ಲಿರುವ ಯಾವ ಜೀವರುಗಳ ಪೂರ್ಣರೂಪವನ್ನೂ ಆಶ್ರಯಿಸದೆ, ಎರಡು ಕಾಲಿನದೂ ಅಲ್ಲದ, ಹಾಗೂ ನಾಲ್ಕು ಕಾಲಿನದೂ ಅಲ್ಲದ, ಅದ್ಭುತರೂಪದಿಂದ ಶ್ರೀಮನ್ನಾರಾಯಣನು ಸಭಾಮಂಟಪದ ಕಂಬದಿಂದ ಆವಿರ್ಭವಿಸಿ ತೋರಿಕೊಂಡನು- ಎಂದು ಅಭಿಪ್ರಾಯ.)

## ಪ್ರಹ್ಲಾದಕೃತ ಭಗವತ್‌ಸ್ತುತಿ

ಶ್ರೀಶುಕಮಹಾಮುನಿಗಳು ಪರೀಕ್ಷಿತರಾಜನಿಗೆ ಪ್ರಹ್ಲಾದನ ಚರಿತ್ರೆಯನ್ನು ಮುಂದುವರೆಸಿ ಹೀಗೆಂದರು : ''ಎಲೈ ರಾಜನೆ, ಕೇಳು. ಪ್ರಹ್ಲಾದನ ಉಪದೇಶದಿಂದ ಅವನ ಸ್ನೇಹಿತರೆಲ್ಲರೂ ಶ್ರೀಮನ್ನಾರಾಯಣನ ಭಕ್ತರಾಗಿ ಪರಿವರ್ತನೆಗೊಂಡರು. ಆಗ ಶಂಡಾಮರ್ಕಗುರುಗಳಿಗೆ ಗಾಬರಿಯಾಗಿ ಹಿರಣ್ಯಕಶಿಪುವಿಗೆ ಈ ವಿಚಾರವನ್ನು ತಿಳಿಸಿದರು. ವಿಷ್ಣುದ್ವೇಷಿಯಾದ ಅವನು ಪ್ರಹ್ಲಾದನ ಬಳಿಗೆ ಬಂದು ಅವನನ್ನು ಗದರಿಸಿ ಕೋಪಾವೇಶದಿಂದ 'ನಿನ್ನ ನಾರಾಯಣನು ಎಲ್ಲಿದ್ದಾನೆ?' ಎಂದು ಕೇಳಲಾಗಿ ಪ್ರಹ್ಲಾದನು ''ತಂದೆಯೆ, ಆ ಭಗವಂತನು ಸರ್ವವ್ಯಾಪಕನು; ಅವನು ಎಲ್ಲಾ ವಸ್ತುಗಳಲ್ಲಿಯೂ ಇದ್ದಾನೆ. ಮತ್ತು ನಿನ್ನಲ್ಲಿಯೂ ನನ್ನಲ್ಲಿಯ ಇದ್ದಾನೆ'' ಎಂದು ಹೇಳಿದನು. ಆದರಿಂದ ಕುಪಿತನಾದ ಹಿರಣ್ಯಕಶಿಪುವು ''ಹಾಗಾದರೆ ಈ ಕಂಬದಲ್ಲಿದ್ದಾನೆಯೊ?'' ಎಂದು ಕೇಳಲು ಪ್ರಹ್ಲಾದನು ''ಹೌದು, ಆದರಲ್ಲಿಯೂ ಇದ್ದಾನೆ'' ಎಂದು ಉತ್ತರಿಸಿದನು. ಆಗ ಕೋಪದಿಂದ ಹಿರಣ್ಯಕಶಿಪುವು ಕಂಬವನ್ನು ಮುಷ್ಟಿಯಿಂದ ಗುದ್ದಿದನು. ಭಕ್ತನಾದ ಪ್ರಹ್ಲಾದನ ಮಾತನ್ನು ಸಾರ್ಥಕಗೊಳಿಸುವದಕ್ಕಾಗಿ ಕಂಬವನ್ನು ಸೀಳಿಕೊಂಡು ತನ್ನ ಶರೀರವನ್ನು ಅರ್ಧಮಾನವ, (ನರ) ಉಳಿದರ್ಧ ಮೃಗ (ಸಿಂಹ) ರೂಪದಿಂದ ಭಯಂಕರನಾಗಿ ಭಗವಂತನು ಆವಿರ್ಭವಿಸಿದನು. ಆಗ ಭೂಮಿಯು ನಡುಗಿತು. ಕೂಡಲೆ ನರಸಿಂಹರೂಪಿಯಾದ ಭಗವಂತನು ಹಿರಣ್ಯಕಶಿಪುವನ್ನು ಎತ್ತಿಕೊಂಡುಹೋಗಿ ತನ್ನ ತೊಡೆಯ ಮೇಲೆ ಮಲಗಿಸಿಕೊಂಡು ತನ್ನ ಉಗ್ರವಾದ ಕೈ ಉಗುರುಗಳಿಂದ ಸೀಳಿಹಾಕಿದನು. ಈ ಘಟನೆಯಿಂದ ಮೂರು ಲೋಕಗಳೂ ನಡುಗಿಹೋದವು.

ಆಗ ಚತುರ್ಮುಖಬ್ರಹ್ಮಾದಿದೇವತೆಗಳೂ ಋಷಿಮುನಿಗಳೂ ಸಿದ್ಧಚಾರಣರೂ ಗಂಧರ್ವಾದಿಗಳೂ ಭಯಪಟ್ಟವರಾಗಿ ಭಗವಂತನ ಬಳಿಗೆ ಬಂದು ಶರಣಾಗತರಾಗಿ ಆ ಮಹಾತ್ಮನನ್ನು ಸಾಂತ್ವನಗೊಳಿಸಲು ನಾನಾ ಬಗೆಯಿಂದ ಸ್ತೋತ್ರಮಾಡ

ಲಾರಂಭಿಸಿದರು. ಆದರೆ ಭಗವಂತನಿಗೆ ಕೋಪವು ಇಳಿಯಲಿಲ್ಲ. ಕಡೆಗೆ ಅವರೆಲ್ಲರೂ ಪ್ರಹ್ಲಾದನನ್ನೇ ಮೊರೆಹೊಕ್ಕು ಭಗವಂತನನ್ನು ಶಾಂತಗೊಳಿಸಬೇಕೆಂದು ಪ್ರಾರ್ಥಿಸಿದರು. ಆಗ ಪ್ರಹ್ಲಾದನು ಭಗವಂತನನ್ನು ಕುರಿತು ಹೀಗೆಂದು ಸ್ತುತಿಸಿದನು.

ಬ್ರಹ್ಮಾದಯಃ ಸುರಗಣಾ ಮುನಯೋಽಥ ಸಿದ್ಧಾಃ
ಸತ್ತ್ವೈಕತಾನಮತಯೋ ವಚಸಾಂ ಪ್ರವಾಹೈಃ।
ನಾರಾಧಿತುಂ ಪುರುಗುಣೈರಧುನಾಪಿ ಪಿಪ್ರುಃ
ಕಿಂ ತೋಷ್ಟುಮರ್ಹತಿ ಸ ಮೇ ಹರಿರುಗ್ರಜಾತೇಃ ॥ 1 ॥

ಮನ್ಯೇ ಧನಾಭಿಜನರೂಪತಪಃ ಶ್ರುತೌಜಃ
ತೇಜಃ ಪ್ರಭಾವಬಲಪೌರುಷಬುದ್ಧಿಯೋಗಾಃ।
ನಾರಾಧನಾಯ ಹಿ ಭವನ್ತಿ ಪರಸ್ಯ ಪುಂಸಃ
ಭಕ್ತ್ಯಾ ತುತೋಷ ಭಗವಾನ್ ಗಜಯೂಥಪಾಯ ॥ 2 ॥

ಚತುರ್ಮುಖಬ್ರಹ್ಮನೇ ಮೊದಲಾದ ದೇವತೆಗಳು, ಮನನಶೀಲರಾದ ಋಷಿಗಳು, ಭಗವಂತನಿಗೇ ತಮ್ಮನ್ನು ಅರ್ಪಿಸಿಕೊಂಡಿರುವ ಸಿದ್ಧರು- ಮುಂತಾದ ಭಕ್ತರುಗಳು ಕೇವಲ ಸತ್ತ್ವಗುಣದಿಂದ ಕೂಡಿದವರಾಗಿ ಏಕಾಗ್ರತೆಯಿಂದ ತಮ್ಮ (ಸ್ತುತಿರೂಪವಾದ) ವಾಕ್ಕುಗಳ ಪ್ರವಾಹದಿಂದ ಭಗವಾನ್ ಶ್ರೀಮನ್ನಾರಾಯಣನನ್ನು ಸ್ತೋತ್ರಮಾಡಿದರಾದರೂ ಈವರೆಗೂ ಆ ಮಹಾಮಹಿಮನನ್ನು ಆರಾಧಿಸಿ ಸಂತೋಷಗೊಳಿಸಲು ಅವರುಗಳು ಸಮರ್ಥರಾಗಲಿಲ್ಲ. (ಹೀಗಿರುವಲ್ಲಿ) ಅಸುರ ಜಾತಿಯಲ್ಲಿ ಹುಟ್ಟಿದವನಾದವನು ಆ ಶ್ರೀಹರಿಯನ್ನು ಸ್ತುತಿಸಲು ಹೇಗೆ ತಾನೆ ಅರ್ಹನಾದಾನು? (ಎಂದು ಭಗವಂತನನ್ನು ಸ್ತುತಿಸಲಾರಂಭಿಸಿದನು.)

ಜೀವನದಲ್ಲಿ ಹಣ, ನೆಂಟರು, (ಶರೀರ) ಸೌಂದರ್ಯ, ತಪಸ್ಸು, ವಿದ್ಯೆ, ರೂಪ (ಲಾವಣ್ಯ), ಶಕ್ತಿ, ಬಲ, ಪೌರುಷ, ಜಾಣತನ- ಇವುಗಳಾವವೂ ಪರಮಪುರುಷನಾದ ಭಗವಂತನ ಆರಾಧನೆ(ಪೂಜೆ)ಗೆ ಉಪಯೋಗವಾಗಲಾರವು. ಭಕ್ತಿಯೊಂದು ಮಾತ್ರವೇ ಭಗವಂತನ ಆರಾಧನೆಗೆ ತಕ್ಕದ್ದಾಗಿದೆ. ಹೇಗೆಂದರೆ ಗಜರಾಜನ ಭಕ್ತಿಯು ಭಗವಂತನನ್ನು ಸಂತೋಷಗೊಳಿಸಿತು.

**ಜಿಹ್ವೈಕತೋಽಚ್ಯುತ ವಿಕರ್ಷತಿ ಮಾ ವಿತೃಪ್ತಾ**
**ಶಿಶ್ನೋಽನ್ಯತಸ್ತ್ವಗುದರಂ ಶ್ರವಣಂ ಕುತಶ್ಚಿತ್ ।**
**ಘ್ರಾಣೋಽನ್ಯತಶ್ಚಪಲದೃಕ್ ಕ್ವಚ ಕರ್ಮಶಕ್ತಿಃ**
**ಬಹ್ವ್ಯಃ ಸಪತ್ನ್ಯ ಇವ ಗೇಹಪತಿಂ ಲುನನ್ತಿ ॥ 3 ॥**

ಪ್ರಭೋ ಅಚ್ಯುತನೆ, ಐದು ಜ್ಞಾನೇಂದ್ರಿಯಗಳುಳ್ಳ ಈ ದೇಹಧಾರಿಯಾದ ಜೀವಾತ್ಮನಿಗೆ ನಾಲಗೆಯು ಚಾಪಲ್ಯದಿಂದ ಒಂದು ಕಡೆಗೆ ಚಲಿಸುತ್ತದೆ. (ಹಾಗೆಯೇ) ಮೂತ್ರೇಂದ್ರಿಯವು ಬೇರೊಂದು ಜಾಗಕ್ಕೆ- ಮತ್ತು ಚರ್ಮ, ಹೊಟ್ಟೆ, ಕಿವಿ, ಉಸಿರಾಟ, ಚಾಂಚಲ್ಯವುಳ್ಳ ಕಣ್ಣು-ಇವುಗಳು ತಮ್ಮ ತಮ್ಮ ಚಾಪಲ್ಯಕ್ಕೆ ತಕ್ಕಂತೆ ಬೇರೆ ಬೇರೆಯ ವಿಷಯಗಳ ಕಡೆಗೆ ಎಳೆಯುವವಾಗಿದ್ದು- ಒಬ್ಬ ಗೃಹಸ್ಥನಿಗೆ ಅಧಿಕಸಂಖ್ಯೆಯ ಪತ್ನಿಯರಿದ್ದು ಅವರುಗಳು ತಮ್ಮ ತಮ್ಮ ಕಡೆಗೆ ಎಳೆದಾಡುವಂತೆ- ಈ ಜೀವಾತ್ಮನನ್ನು ಪಂಚೇಂದ್ರಿಯಗಳೂ ಗೋಳಾಡಿಸುತ್ತಿವೆ.

ಹೀಗೆ ನಾನಾಪ್ರಕಾರದಿಂದ ಸ್ತೋತ್ರಮಾಡಿದ ಪ್ರಹ್ಲಾದನಿಗೆ ಭಗವಂತನು ಅನುಗ್ರಹಿಸಿ ''ಎಲೈ ಭಕ್ತಾಗ್ರಣಿಯಾದ ಬಾಲಕನೆ, ನಿನಗೆ ಮಂಗಳವಾಗಲಿ; ನಿನಗೆ ಏನು ಬೇಕೆನಿಸಿದೆಯೋ ಆ ವರವನ್ನು ಕೇಳು. ನಾನು ಭಕ್ತನ ಇಷ್ಟಾರ್ಥವನ್ನು ನೆರವೇರಿಸುವವನಾಗಿರುತ್ತೇನೆ'' ಎಂದನು. ಆಗ ಪ್ರಹ್ಲಾದನು ಹೀಗೆಂದನು.

**ಯದಿ ರಾಸೀಶ ಮೇ ಕಾಮಾನ್ ವರಾನ್ ತ್ವಂ ವರದರ್ಷಭ ।**
**ಕಾಮಾನಾಂ ಹೃದ್ಯಸಂರೋಹಂ ಭವತಸ್ತು ವೃಣೇ ವರಮ್ ॥**

''ಎಲೈ ಪ್ರಭುವೆ, ನೀನು ನನಗೆ ವರವನ್ನು ನೀಡಲು ಇಚ್ಛಿಸಿ ಕೊಡುವೆಯಾದರೆ ನನ್ನ ಮನಸ್ಸಿನಲ್ಲಿ ಯಾವ ಬಯಕೆಯೂ ಉಂಟಾಗದಂತೆ ಅನುಗ್ರಹಿಸುವವನಾಗು'' ಎಂದನು. ಆಗ ಭಗವಂತನು ''ತಥಾಸ್ತು'' (ಹಾಗೆಯೇ ಆಗಲಿ) ಎಂದನು. ಆದರೂ ಭಗವಂತನಿಗೆ ತೃಪ್ತಿಯಾಗಲಿಲ್ಲ. ಪ್ರಹ್ಲಾದನನ್ನು ಕುರಿತು ಮತ್ತೆ ಹೀಗೆಂದನು. ''ಪ್ರಹ್ಲಾದ, ನೀನು ಮತ್ತೊಮ್ಮೆ ವರವನ್ನು ಕೇಳು. ಏಕೆಂದರೆ ನನಗೆ ತೃಪ್ತಿಯಾಗಲಿಲ್ಲ'' ಎಂದನು.

ಆಗ ಪ್ರಹ್ಲಾದನು ''ಪ್ರಭೋ, ನನ್ನ ತಂದೆಯು ನಿನ್ನನ್ನು ಬಹಳವಾಗಿ ನಿಂದಿಸಿರುತ್ತಾನೆ. ಆದ್ದರಿಂದ ಅವನಿಗೆ ಸದ್ಗತಿಯಾಗಲಾರದು. ಭಗವಂತನಾದ ನೀನು

ಕೃಪೆಮಾಡಿ ನನ್ನ ತಂದೆಗೆ ಸದ್ಗತಿಯಾಗುವಂತೆ ಅನುಗ್ರಹಿಸು. ಇದೇ ನಾನು ಕೇಳುತ್ತಿರುವ ವರ'' ಎಂದು ಭಗವಂತನಲ್ಲಿ ವಿಜ್ಞಾಪಿಸಿಕೊಂಡನು.

ಆಗ ಭಗವಂತನು ಹೀಗೆಂದನು : ''ಎಲೈ ಪಾಪರಹಿತನಾದ ಕುಮಾರನೆ, ನಿನ್ನ ತಂದೆಯಾದ ಕಾರಣದಿಂದ ಹಿರಣ್ಯಕಶಿಪುವು ಈಗಾಗಲೆ ಪವಿತ್ರನಾಗಿದ್ದಾನೆ. ಪ್ರಪಂಚದಲ್ಲಿ ಯಾರು ನಿನ್ನ ಅನುಯಾಯಿಗಳಾಗುವರೋ ಅವರೂ ನನ್ನ ಭಕ್ತರಾಗಿಬಿಡುವರು. ನನ್ನ ಅಂಗಗಳ ಸ್ಪರ್ಶದಿಂದ ನಿನ್ನ ತಂದೆಯು ಪೂರ್ಣವಾಗಿ ಪವಿತ್ರನಾಗಿಬಿಟ್ಟಿದ್ದಾನೆ. ಆದರೂ ನೀನು ಈತನಿಗೆ ಅಂತ್ಯೇಷ್ಟಿಕರ್ಮವನ್ನು ಮಾಡು. ಅನಂತರ ನೀನು ನಿನ್ನ ತಂದೆಯ ಸ್ಥಾನದಲ್ಲಿ ಪಟ್ಟಾಭಿಷಿಕ್ತನಾಗು; ಮತ್ತು ವೇದವಾದಿಗಳಾದ ಋಷಿಗಳ ಆಜ್ಞೆಯಂತೆ ನನ್ನನ್ನು ಶರಣುಹೊಂದಿ ನನಗೋಸ್ಕರವಾಗಿಯೇ ಸರ್ವಕರ್ಮಗಳನ್ನೂ ಮಾಡುತ್ತಿರು'' ಎಂದು ಹೇಳಿ ಭಗವಂತನು ಅಂತರ್ಧಾನವನ್ನು ಹೊಂದಿದನು. ಅನಂತರ ಬ್ರಹ್ಮಾದಿದೇವತೆಗಳು ಪ್ರಹ್ಲಾದನನ್ನು ಅಭಿನಂದಿಸಿ ಆತನ ಪೂಜೆಯನ್ನು ಸ್ವೀಕಾರಮಾಡಿ ತಮ್ಮ ತಮ್ಮ ಲೋಕಗಳಿಗೆ ತೆರಳಿದರು.

* * * * *

## 20. ಗಜೇಂದ್ರನು ಮಾಡಿದ ನಾರಾಯಣಸ್ತುತಿ

**ಆತ್ಮಾತ್ಮಜಾಪ್ತಗೃಹವಿತ್ತಜನೇಷು ಸಕ್ತೈಃ**
**ದುಷ್ಪ್ರಾಪಣಾಯ ಗುಣಸಂಗವಿವರ್ಜಿತಾಯ।**
**ಮುಕ್ತಾತ್ಮಭಿಃ ಸ್ವಹೃದಯೇ ಪರಿಭಾವಿತಾಯ**
**ಜ್ಞಾನಾತ್ಮನೇ ಭಗವತೇ ನಮ ಈಶ್ವರಾಯ॥**

**ಶ್ರೀ ಮದ್ಭಾಗವತ 8-3-18**

ತಾನು, ತನ್ನ ಮಕ್ಕಳು, ಆಪ್ತರು (ತನ್ನ) ಮನೆ, ಹಣಕಾಸು, ನೆಂಟರು, ಮುಂತಾದವರಲ್ಲಿ ಆಸಕ್ತರಾದ ಜನರಿಗೆ ಪಡೆಯಲಸಾಧ್ಯನಾದ, (ಮತ್ತು) ಸತ್ತ್ವ, ರಜಸ್ಸು- ಮುಂತಾದ ಗುಣಸಂಗಗಳಿಲ್ಲದವನಾದ, ಮುಕ್ತಿಯನ್ನು ಪಡೆದುಕೊಂಡಿರುವವರ ಹೃದಯದಲ್ಲಿಯೇ ನೆಲೆಸಿರುವವನಾದ ಜ್ಞಾನಸ್ವರೂಪನಾದ, ಜಗದೊಡೆಯನಾದ ಭಗವಂತನಿಗೆ ನಮಸ್ಕಾರಗಳು.

(ಇಂದ್ರದ್ಯುಮ್ನನೆಂಬ ರಾಜನು ವಿರಕ್ತನಾಗಿ ಮಲಯಪರ್ವತದಲ್ಲಿ ತಪಸ್ಸು ಮಾಡುತ್ತಾ ಮೌನವಾಗಿದ್ದಾಗ ಅಗಸ್ತ್ಯಮಹರ್ಷಿಗಳು ಬಂದು ದರ್ಶನವನ್ನಿತ್ತರೂ ರಾಜನು ಸತ್ಕರಿಸದೆ ಇದ್ದಾಗ ಋಷಿಗಳು ಅವನಿಗೆ ಆನೆಯ ಜನ್ಮವು ಬರಲೆಂದು ಶಾಪವನ್ನು ಕೊಟ್ಟದ್ದರಿಂದ ರಾಜನು ಆನೆಯಾಗಿ ಹುಟ್ಟಿ ಪೂರ್ವಜನ್ಮದ ಸಂಸ್ಕಾರಬಲದಿಂದ ಶ್ರೀಮನ್ನಾರಾಯಣನನ್ನು ಕುರಿತು ಸ್ತೋತ್ರಮಾಡಿ ಭಗವಂತನ ಕೃಪೆಗೆ ಪಾತ್ರನಾದನು)

## ಗಜೇಂದ್ರಮೋಕ್ಷ

ಶ್ರೀ ಶುಕಮಹಾಮುನಿಗಳು ಪರೀಕ್ಷಿತ್‌ರಾಜನಿಗೆ ಭಗವಾನ್ ನಾರಾಯಣನ ಗುಣ-ಮಹಿಮಾದಿಗಳನ್ನೂ ಭಕ್ತರ ಉದ್ಧಾರವನ್ನೂ ವರ್ಣಿಸಿ ಉಪದೇಶ ಮಾಡುತ್ತಿರುವ ಸಂದರ್ಭದಲ್ಲಿ ಇಂದ್ರದ್ಯುಮ್ನನೆಂಬ ರಾಜನ ಕಥೆಯನ್ನು ಹೇಳುತ್ತಾರೆ. ಆ ಉಪಾಖ್ಯಾನವನ್ನು ಅನುಸಂಧಾನಮಾಡೋಣ.

''ಎಲೈ ಪರೀಕ್ಷಿತರಾಜನೆ, ಕೇಳು. ಶ್ರೀಮನ್ನಾರಾಯಣನು ಜಗತ್‌ಸೃಷ್ಟಿಯ ಸಂದರ್ಭದಲ್ಲಿ ಹರಿಣಿ-ಎಂಬ ಮಾತೆಯ ಗರ್ಭದಲ್ಲಿ ಅವತಾರಮಾಡಿದನು. ಆಗ ''ಹರಿ'' ಎಂದು ಪ್ರಸಿದ್ಧನಾಗಿದ್ದನು. ಅವನು ಗಜೇಂದ್ರನನ್ನು ಕಾಪಾಡಿ ಉದ್ಧಾರ ಮಾಡಿದನು'' ಎಂದು ಹೇಳಲಾಗಿ ಪರೀಕ್ಷಿತನು ''ಪೂಜ್ಯರೆ, ಗಜೇಂದ್ರನ ಉಪಾಖ್ಯಾನವನ್ನು ನನಗೆ ದಯಮಾಡಿ ವಿವರವಾಗಿ ಹೇಳೋಣವಾಗಲಿ'' ಎಂದು ಕೇಳಿಕೊಂಡಾಗ ಶುಕಮಹಾಮುನಿಗಳು ಹೀಗೆಂದರು.

''ಇಂದ್ರದ್ಯುಮ್ನನೆಂಬ ರಾಜನು ವಿಷ್ಣುಭಕ್ತನಾಗಿದ್ದು ರಾಜ್ಯವನ್ನು ಆಳುತ್ತಿದ್ದನು. ಒಮ್ಮೆ ಅವನು ಪೂಜೆಯ ಸಮಯದಲ್ಲಿದ್ದಾಗ ಅಗಸ್ತ್ಯಮಹರ್ಷಿಗಳು ಅಲ್ಲಿಗೆ ಬಂದರು. ರಾಜನು ಆ ಋಷಿಗಳನ್ನು ಸ್ವಾಗತಿಸಿ ಗೌರವಿಸಲಿಲ್ಲ. ಇದರಿಂದ ಕೋಪಗೊಂಡ ಅಗಸ್ತ್ಯರು ಆನೆಯಾಗಿ ಹುಟ್ಟುವಂತೆ ರಾಜನಿಗೆ ಶಾಪವನ್ನು ಕೊಟ್ಟರು. ಋಷಿಗಳ ಶಾಪದಂತೆ ರಾಜನು ಆನೆಯಾಗಿ ಜನ್ಮವೆತ್ತಿದನು. ವಿಶಾಲವಾದ ಕಾಡಿನಲ್ಲಿ ಆನೆಗಳ ಒಡೆಯನಾಗಿದ್ದನು. ಒಮೆ ಗಜರಾಜನು ನೀರು ಕುಡಿಯಲು ಒಂದು ಸರೋವರಕ್ಕೆ ಬಂದು ನೀರಿನಲ್ಲಿ ಇಳಿದನು. ಆಗ ನೀರಿನಲ್ಲಿದ್ದ ಮೊಸಳೆಯು ಗಜೇಂದ್ರನ ಕಾಲನ್ನು ಹಿಡಿದು ನೀರಿಗೆ ಎಳೆಯಲಾರಂಬಿಸಿತು. ಗಜೇಂದ್ರನು ನೀರಿನಿಂದ ಹೊರಬರಲು ಪ್ರಯತ್ನಮಾಡುತ್ತಾ ಇದ್ದನು. ಬಹಳ ಸಮಯದ ಅನಂತರವೂ ಮೊಸಳೆಯ ಸೆಳೆತದಿಂದ

ಬಿಡುಗಡೆ ಯಾಗಲಿಲ್ಲ. ಆಗ ಗಜೇಂದ್ರನು ಹಿಂದಿನ ಜನ್ಮದ ಪುಣ್ಯವಿಶೇಷದಿಂದ ಶ್ರೀಮನ್ನಾರಾಯಣ ನನ್ನು ಸ್ಮರಿಸುತ್ತಾ ಭಗವಂತನನ್ನು ಕುರಿತು ಸ್ತೋತ್ರಮಾಡ ಲಾರಂಭಿಸಿದನು. ಆ ಸ್ತೋತ್ರದ ಕೆಲವು ಶ್ಲೋಕಗಳನ್ನು ಅನುಸಂಧಾನಮಾಡೋಣ.

**ನಮೋ ಭಗವತೇ ತಸ್ಮೈ ಯತ ಏತಚ್ಚಿದಾತ್ಮಕಮ್ ।**
**ಪುರುಷಾಯಾದಿಬೀಜಾಯ ಪರೇಶಾಯಾಭಿಧೀಮಹಿ ।**
**ಯಸ್ಮಿನ್ ಇದಂ ಯತಶ್ಚೇದಂ ಯೇನೇದಂ ಯ ಇದಂ ಸ್ವಯಮ್ ।**
**ಯೋಽಸ್ಮಾತ್ ಪದಸ್ಮಾಚ್ಚಪರಃ ತಮ ಪ್ರಪದ್ಯೇ ಸವಯಂಭುವಮ್ ॥**

''ಭಗವಂತನಿಗೆ ನಮಸ್ಕಾರಗಳು. ಈ ಜಗತ್ತು ಯಾವ ಆ ಚೈತನ್ಯಪುರುಷನಿಂದ ವ್ಯಾಪಿಸಲ್ಪಟ್ಟು ಚೇತನವೆನಿಸಿದೆಯೋ, ಅಂಥ ಜಗನ್ಮೂಲನಾದ ಪರಮಪುರುಷನಿಗೆ ನಮ್ಮ ಧ್ಯಾನರೂಪವಾದ ವಂದನೆಗಳು. ಆದರೆ ಆ ಪುರುಷನು (ಈ ಜಗತ್ತಿಗಿಂತ) ಮಿಗಿಲಾದ (ಅವ್ಯಕ್ತತತ್ತ್ವಕ್ಕೂ) ಮಿಗಿಲಾದವನಾಗಿರುತ್ತಾನೆ. ಮತ್ತು ಯಾವನಿಂದ ಈ ಜಗತ್ತು ಹೊರಬಂದು ಯಾವನಲ್ಲಿಯೇ ಅಡಕವಾಗಿದೆಯೋ ಮತ್ತು ಯಾವ ಪುರುಷನು ತಾನೇ ಈ ನಾಮರೂಪಾತ್ಮಕ ಪ್ರಪಂಚವಾಗಿ ತೋರುತ್ತಿರುವನೋ, ಹೀಗಿದ್ದರೂ ಈ ಪ್ರಪಂಚವೆಲ್ಲದರ ಚೌಕಟ್ಟನ್ನೂ ಮೀರಿ, ಅನಂತರವೂ ಅತ್ಯಂತ ಮಿಗಿಲಾದವನಾಗಿರುವನೋ ಆ ಸ್ವಯಂಭುವಾದ (ನಾರಾಯಣನನ್ನು) ಶರಣು ಹೋಗುವೆನು.''

''ಕಾಲವಶವಾಗಿರುವ, ಈ ಸೃಷ್ಟಿಯಲ್ಲಿರುವ ಲೋಕಪಾಲಕರು ಮುಂತಾದವ ರಿಂದ ಕೂಡಿರುವ ಈ ಪ್ರಪಂಚವು ಪ್ರಲಯದಲ್ಲಿ ಕಣ್ಮರೆಯಾಗಲಾಗಿ ಕಗ್ಗತ್ತಲೆಯು ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಾಗ, ಆ ಕಗ್ಗತ್ತಲೆಯಿಂದಲೂ ಆಚೆಗೆ ಭಗವಂತನು ವಿರಾಜಮಾನನಾಗಿ ಸ್ವಯಂಭುವಾಗಿ ಇರುತ್ತಾನೆ. ಇಂಥ ಪರಮಾತ್ಮನ ಸ್ವರೂಪವನ್ನು ದೇವತೆಗಳಾಗಲಿ, ಋಷಿಗಳಾಗಲಿ ತಿಳಿಯಲಾರರು. ಹೀಗಿರುವಲ್ಲಿ ಪ್ರಾಣಿವರ್ಗಕ್ಕೆ ಸೇರಿದ ನಾನು (ಗಜರಾನು) ಆ ಭಗವಂತನನ್ನು ಹೇಗೆ ತಾನೆ ತಿಳಿಯಲಾದೀತು? ಆ ಮಹಾತ್ಮನು ಈ ಪ್ರಪಂಚವೆಂಬ ನಾಟಕದಲ್ಲಿ ತನ್ನ ಪಾತ್ರವನ್ನು ನಿರ್ವಹಿಸಿ ಆಟವಾಡುವವನಾಗಿರುತ್ತಾನೆ. ಇಂಥ ದುರತ್ಯಯನಾದ (ಯಾರಿಂದಲೂ ತಿಳಿಯಲಸಾಧ್ಯನಾದ) ಆ ಭಗವಂತನು ನನ್ನನ್ನು ಕಾಪಾಡಲಿ''- ಎಂದು ಆರ್ತನಾಗಿ ಗಜರಾಜನು ಭಗವಾನ್ ನಾರಾಯಣನನ್ನು ಸ್ತುತಿಸಿದನು.

ಆಗ ಗಜೇಂದ್ರನು ಸ್ತುತಿಸಿದ ರೀತಿಯಲ್ಲಿ ದೇವತೆಗಳು ಯಾರೊಬ್ಬರೂ ತಮ್ಮನ್ನು ಕುರಿತು ಮಾಡಿದ ಸ್ತೋತ್ರವು ಇದಲ್ಲವೆಂದು ಭಾವಿಸಿ ಗಜರಾಜನಿಗೆ ಪ್ರತ್ಯಕ್ಷರಾಗಿ ದರ್ಶನವನ್ನು ನೀಡಲಿಲ್ಲ. ಆಗ ಭಕ್ತಪರಾಧೀನನಾದ ನಾರಾಯಣಭಗವಂಗತನು ಪ್ರತ್ಯಕ್ಷನಾಗಿ ಜಗರಾಜನಿಗೆ ದರ್ಶನವನ್ನು ಕೊಟ್ಟನು. ಆ ಸರೋವರದಲ್ಲಿದ್ದ ಮೊಸಳೆಯು ಶ್ರೀಮನ್ನಾರಾಯಣನ ಚಕ್ರಾಯುಧದಿಂದ ನಾಶವನ್ನು ಹೊಂದಿತು. ಹೀಗೆ ಮೊಸಳೆಯ ಬಾಯಿಯಿಂದ ಗಜೇಂದ್ರನು ಬಿಡುಗಡೆಹೊಂದಿದನು.

ಆಗ ದೇವತೆಗಳು, ಈ ಸನ್ನಿವೇಶವನ್ನು ತಿಳಿದು ಭಗವಂತನ ದರ್ಶನಕ್ಕಾಗಿ ಸರೋವರದ ಬಳಿಗೆ ಬಂದರು. ಗಜರಾಜನು ದೇವತೆಗಳು ಮಾಡುತ್ತಿದ್ದ ಸ್ತುತಿಗಳನ್ನು ಕೇಳಿ ತಾನೂ ಭಗವಂತನನ್ನು ಸ್ತೋತ್ರ ಮಾಡಿದನು. ಆಗ ಶ್ರೀಮನ್ನಾರಾಯಣನು ಗಜರಾಜನನ್ನು ಹೀಗೆ ಅನುಗ್ರಹಿಸಿದನು. 'ಎಲೈ ರಾಜನೆ, ಕೇಳು. ನೀನು ನನ್ನ ಭಕ್ತನಾಗಿದ್ದೀಯೆ. ಇನ್ನು ಯಾರು ನಿನ್ನನ್ನು, ನನ್ನನ್ನು, ಈ ಸರೋವರವನ್ನು ಬೆಟ್ಟ ಕಾಡು, ಪೊದೆಗಳು, ಬೆಟ್ಟದ ತುದಿಯಲ್ಲಿರುವ ಶೃಂಗಗಳು- ಇವುಗಳನ್ನು ಮತ್ತು ಕ್ಷೀರಸಮುದ್ರ, ಶ್ವೇತದ್ವೀಪ, (ನಾರಾಯಣನಾದ ನಾನು ಧರಿಸಿರುವ) ಶ್ರೀವತ್ಸವೆಂಬ ಒಡವೆ, ಕೌಸ್ತುಭವೆಂಬ ರತ್ನ ವನಮಾಲೆ, ಕೌಮೋದಕಿ- ಎಂಬ ನನ್ನ ಗದೆ, ಪಾಂಚಜನ್ಯವೆಂಬ ಶಂಖ, ಸುದರ್ಶನವೆಂಬ ಚಕ್ರ- ಇತ್ಯಾದಿ ವಸ್ತುಗಳನ್ನೂ, ಶ್ರೀಮಹಾಲಕ್ಷ್ಮಿ, ಬ್ರಹ್ಮ, ನಾರದ ಋಷಿ, ಈಶ್ವರ (ಶಿವ) ಭಕ್ತನಾದ ಪ್ರಹ್ಲಾದ, ಹಾಗೂ ನಾನು ಕಾಲಕಾಲಕ್ಕೆ ಧರಿಸಿದ ಮತ್ಸ್ಯ, ಕೂರ್ಮ, ವರಾಹದ್ಯವತಾರಗಳು, ಓಂಕಾರ ಗೋವುಗಳು, ವಿಪ್ರರು, ಚಂದ್ರ, ಸಪ್ತರ್ಷಿಗಳು ಗಂಗಾ-ಸರಸ್ವತ್ಯಾದಿ ನದಿಗಳು. ದುರ್ಗಾದೇವಿ- ಇತ್ಯಾದಿ ಪುಣ್ಯವಸ್ತುಗಳು ಹಾಗೂ ದೇವತೆಗಳು ಮತ್ತು ಭಗವದ್ಭಕ್ತರುಗಳನ್ನು- ಸ್ಮರಣೆಮಾಡುತ್ತಾರೋ ಹಾಗೂ ಸ್ತೋತ್ರಮಾಡುತ್ತಾರೋ, ಅಂಥವರಿಗೆ ಪ್ರಾಣವಿಯೋಗಸಮಯಕ್ಕೆ ನಾನು ಪವಿತ್ರವಾದ ಸ್ಥಾನವನ್ನು ಅನಗುಗ್ರಹಿಸುವೆನು- ''ಹೀಗೆಂದು ಶ್ರೀಮನ್ನಾರಾಯಣನು ವಾಗ್ದಾನಮಾಡಿ ಅಂತರ್ಧಾನನಾದನು.

* * * * *

# 21. ಬ್ರಹ್ಮದೇವನು ಮಾಡಿದ ವಿಷ್ಣುಸ್ತುತಿ

**ಅವಿಕ್ರಿಯಂ ಸತ್ಯಮನನ್ತಮಾದ್ಯಂ**
**ಗುಹಾಶಯಂ ನಿಷ್ಕಲಮಪ್ರತರ್ಕ್ಯಮ್।**
**ಮನೋऽಗ್ರಯಾನಂ ವಚಸಾ ನಿರುಕ್ತಂ**
**ನಮಾಮಹೇ ದೇವವರಂ ವರೇಣ್ಯಮ್॥**

**ಶ್ರೀ ಮದ್ಭಾಗವತ 8-5-26**

(ಬ್ರಹ್ಮನು ಶ್ರೀಮಹಾವಿಷ್ಣುವನ್ನು ಕುರಿತು ಹೀಗೆ ಸ್ತೋತ್ರ ಮಾಡಿದನು.) ನಿರ್ವಿಕಾರನೂ ಸತ್ಯಸ್ವರೂಪವನೂ ಅನಂತನೂ ಆದಿಪುರುಷನೂ ಎಲ್ಲರ ಹೃದಯದಲ್ಲಿಯೂ ಅಂತರ್ಯಾಮಿರೂಪದಿಂದ ವಿರಾಜಿಸುತ್ತಿರುವವನೂ ಉಪಾಧಿ ರಹಿತನೂ ಊಹಿಸಲು ಅಸಾಧ್ಯನಾದವನೂ ಮನಸ್ಸಿಗಿಂತಲೂ ವೇಗವಾದ ಗಮನವುಳ್ಳವನೂ ಮಾತಿನಿಂದ ವಿವರಿಸಲು ಅಶಕ್ಯನಾದವನೂ ದೇವತೆಗಳಲ್ಲಿ ಶ್ರೇಷ್ಠನಾದವನೂ ಸರ್ವೋತ್ತಮನೂ ಆಗಿರುವ- ಶ್ರೀ ಭಗವಂತನಾದ ನಿನಗೆ ನಮಸ್ಕರಿಸುತ್ತೇವೆ.

**(ಚತುರ್ಮುಖಬ್ರಹ್ಮನು ದೇವತೆಗಳೊಡಗೂಡಿ ಅಸುರರೊಡನೆ ಸಂಧಾನಮಾಡಿಕೊಂಡು ಅಮೃತಮಂಥನಕ್ಕಾಗಿ ಸಿದ್ಧನಾಗುವವನಾದಾಗ ಶ್ರೀ ಹರಿಯನ್ನು ಕುರಿತು ಸ್ತುತಿಸಿದ ದಿವ್ಯವಾದ ಸ್ತೋತ್ರಮಾಲೆಯ ಶ್ಲೋಕವಿದು.)**

## ಬ್ರಹ್ಮಕೃತ-ನಾರಾಯಣ ಸ್ತುತಿ

ಶ್ರೀ ಶುಕಮಹರ್ಷಿಗಳು ಪರೀಕ್ಷಿತತಮಹಾರಾಜನಿಗೆ ಭಗವಂತನ ದಿವ್ಯಲೀಲಾ ಉಪಾಖ್ಯಾನಗಳನ್ನು ಹೇಳುತ್ತಿರುವ ಸಂದರ್ಭದಲ್ಲಿ ಚತುರ್ಮುಖಬ್ರಹ್ಮನು ಶ್ರೀಮಹಾವಿಷ್ಣುವನ್ನು ಸ್ತೋತ್ರಮಾಡಿದ ಉಪಾಖ್ಯಾನವನ್ನು ಹೀಗೆ ಹೇಳಿದರು :

''ಎಲೈ ಪರೀಕ್ಷಿತನೆ, ಕೇಳು ಹಿಂದೊಮ್ಮೆ ಅಸುರರು ದೇವತೆಗಳನ್ನು ಸೋಲಿಸಿ ಸ್ವರ್ಗಲೋಕವನ್ನು ಆಕ್ರಮಿಸಿಕೊಂಡರು. ಆಗ ದೇವತೆಗಳು ಬ್ರಹ್ಮನ ಬಳಿಗೆ ಹೋಗಿ ತಮ್ಮ ದುರ್ದಶೆಯನ್ನು ಬಿನ್ನವಿಸಿಕೊಂಡರು. ಆಗ ಬ್ರಹ್ಮನು ಮನಸ್ಸನ್ನು ಏಕಾಗ್ರಗೊಳಿಸಿ ಕೊಂಡು ಪರಮಪುರುಷನಾದ ಶ್ರೀ ಭಗವಂತನನ್ನು ಸ್ಮರಿಸಿಕೊಂಡನು. ಭಗವಂತನ

ಆಜ್ಞೆಯಂತೆ ಬ್ರಹ್ಮನು ದೇವತೆಗಳೆಲ್ಲರನ್ನೂ ಜೊತೆಗೂಡಿ ವೈಕುಂಠಲೋಕಕ್ಕೆ ಹೋದರನು. ಅಲ್ಲಿ ಭಗವಂತನನ್ನು ಕಾಣಲಾಗಲಿಲ್ಲ. ಆಗ ಬ್ರಹ್ಮನು ಏಕಾಗ್ರಚಿತ್ತನಾಗಿ ವೇದವಾಣಿಯ ಮೂಲಕ ವೇದಗಮ್ಯನಾದ ಶ್ರೀಮನ್ನಾರಾಯಣನನ್ನು ಸ್ತೋತ್ರಮಾಡಲಾರಂಭಿಸಿದನು. ಆ ಸ್ತೋತ್ರದ ಕೆಲವು ಶ್ಲೋಕಗಳನ್ನು ಅನುಸಂಧಾನಮಾಡೋಣ.

ಅವಿಕ್ರಿಯಂ ಸತ್ಯಮನಂತಮಾದ್ಯಂ
ಗುಹಾಶಯಂ ನಿಷ್ಕಲಮಪ್ರತರ್ಕ್ಯಮ್ ।
ಮನೋಽಗ್ರಯಾನಂ ವಚಸಾ ನಿರುಕ್ತಂ
ನಮಾಮಹೇ ದೇವವರಂ ವರೇಣ್ಯಮ್ ॥

''ದೇವದೇವನೆ, ನೀನು ನಿರ್ವಿಕಾರನೂ ಸತ್ಯಸ್ವರೂಪನೂ ಅನಂತನೂ ಆದಿಪುರುಷನೂ ಎಲ್ಲರ ಹೃದಯದ ಅಂತರ್ಯಾಮಿಯೂ ಉಪಾಧಿರಹಿತನೂ ಊಹಿಸಲು ಅಸಾಧ್ಯನಾದವನೂ ಮನಸ್ಸಿಗಿಂತಲೂ ವೇಗವಾದ ಗಮನವುಳ್ಳವನೂ ಮಾತಿನಿಂದ ವಿವರಿಸಲಸಾಧ್ಯವಾದವನೂ ದೇವತೆಗಳಲ್ಲಿ ಶ್ರೇಷ್ಠನೂ ಸರ್ವೋತ್ತಮನೂ ಆಗಿರುವೆ. ಭಗವಂತನಾದ ನಿನಗೆ ನಮಸ್ಕಾರಗಳು.

ವಿಪಶ್ಚಿತಂ ಪ್ರಾಣಮನೋಧಿಯಾತ್ಮನಾ-
ಮರ್ಥೇಂದ್ರಿಯಾಭಾಸಮನಿದ್ರಮವ್ರಣಮ್ ।
ಛಾಯಾತಪೌ ಯತ್ರ ನ ಗೃಧ್ರಪಕ್ಷೌ
ತಮಕ್ಷರಂ ಖಂ ತ್ರಿಯುಗಂ ವ್ರಜಾಮಹೇ ॥

''ಮಹಾನುಭಾವನೆ, ನೀನು ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರಗಳನ್ನು ತಿಳಿದವನಾಗಿರುವೆ. ಇಂದ್ರಿಯಗಳು ಮತ್ತು ವಿಷಯಗಳು ನಿನ್ನ ಮೂಲಕವಾಗಿಯೇ ಪ್ರಕಾಶಗೊಳ್ಳುವವು. ಅಜ್ಞಾನವು ನಿನ್ನನ್ನು ಮುಟ್ಟಲು ಕೂಡ ಸಮರ್ಥವಾಗಿಲ್ಲ. ಪ್ರಕೃತಿಯ ವಿಕಾರವಾದ ಜನನ-ಮರಣಗಳಿಂದ ಕೂಡಿದ ಶರೀರದಿಂದಲೂ ನೀನು ರಹಿತನಾಗಿರುವೆ. ಜೀವರುಗಳ ಎರಡು ರೆಕ್ಕೆಗಳಾದ ವಿದ್ಯೆಯಾಗಲಿ, ಅವಿದ್ಯೆಯಾಗಲಿ-ನಿನ್ನಲ್ಲಿರುವದಿಲ್ಲ. ನೀನು ಅವಿನಾಶಿಯೂ ಸುಖಸ್ವರೂಪನೂ ಆಗಿರುವೆ. ಸರ್ವವ್ಯಾಪಿಯಾದರೂ ನೀನು ಆಕಾಶದಂತೆ ನಿರ್ಮಲನಾಗಿರುವೆ. ಸತ್ಯ-ತ್ರೇತಾ-ದ್ವಾಪರಯುಗಗಳಲ್ಲಿ ನೀನು ಅವತರಿಸಿರುವೆ. ಇಂಥ ನಿನ್ನನ್ನು ಶರಣುಹೊಂದಿರುತ್ತೇವೆ.

ಅಜಸ್ಯ ಚಕ್ರಂ ತ್ವಜಯೇರ್ಯಮಾಣಂ
ಮನೋಮಯಂ ಪಂಚದಶಾರಮಾಶು।
ತ್ರಿಣಾಭಿ ವಿದ್ಯುಚ್ಚಲಮಷ್ಟನೇಮಿ-
ಯದಕ್ಷಮಾಹುಸ್ತಮೃತಂ ಪ್ರಪದ್ಯೇ ॥

ಈ ಶರೀರವು ಜೀವನದ ಒಂದು ಮನೋಮಯಚಕ್ರವಾಗಿದೆ. ಆ ಚಕ್ರಕ್ಕೆ ದಶೇಂದ್ರಿಯಗಳೆಂಬ ಮತ್ತು ಪಂಚಪ್ರಾಣಗಳೆಂಬ ಹದಿನೈದು ಅರೆಕಾಲುಗಳಿವೆ. ಸತ್ತ್ವ, ರಜಸ್ಸು, ತಮಸ್ಸೆಂಬ ಮೂರು ಗುಣಗಳು ಆ ಚಕ್ರಕ್ಕೆ ನಾಭಿಪ್ರದೇಶವಾಗಿವೆ. ನೆಲ-ನೀರು- ಬೆಳಕು- ಗಾಳಿ- ಆಕಾಶಗಳೂ, ಮನಸ್ಸು, ಬುದ್ಧಿ, ಅಹಂಕಾರಗಳೂ ಈ ಎಂಟು- ಚಕ್ರದ (ಪಟ್ಟೆ) ಅಂಚಾಗಿವೆ. ಮಾಯೆಯೇ ಈ ಚಕ್ರವನ್ನು ನಡೆಸುತ್ತದೆ. ಇದಕ್ಕೆ ಮಿಂಚಿಗಿಂತಲೂ ಶೀಘ್ರವಾದ ತೀವ್ರಗತಿಯುಂಟು. ಆ ಚಕ್ರಕ್ಕೆ ಅಚ್ಚಿನಮರವು ಸ್ವಯಂ ಪರಮಾತ್ಮನೇ ಆಗಿರುತ್ತಾನೆ. ಏಕಮಾತ್ರ ಏಕಸ್ವರೂಪನಾದ ಅವನಿಗೆ ನಾನು ಶರಣಾಗುತ್ತೇನೆ.

ಯ ಏಕವರ್ಣಂ ತಮಸಃ ಪರಂ ತತ್ ।
ಅಲೋಕಮವ್ಯಕ್ತಮನನ್ತಪಾರಮ್ ।
ಆಸಾಂಚಕಾರೋಪಸುಪರ್ಣಮೇನ-
ಮುಪಾಸತೇ ಯೋಗರಥೇನ ಧೀರಾಃ ॥

ಯಾವನು ಏಕಮಾತ್ರ ಜ್ಞಾನಸ್ವರೂಪನೋ, ಪ್ರಕೃತಿಯ ಆಚೆಗೆ ಇದ್ದು ಅದೃಶ್ಯನಾಗಿರುವನೋ ನಿರ್ವಿಕಲ್ಪನಾಗಿರುವನೋ. ದೇಶಕಾಲಗಳಿಗೆ ಒಳಪಡದಿರುವನೋ, ಜೀವರುಗಳ ಹೃದಯದಲ್ಲಿರುವ ಅಂಥ ಪರಬ್ರಹ್ಮಪರಮಾತ್ಮನನ್ನು ಧೀರರಾದ ಯೋಗಿಗಳು ಭಕ್ತಿಯೋಗವೆಂಬ ಸಾಧನದ ಮೂಲಕವಾಗಿ ಉಪಾಸನೆ ಮಾಡುತ್ತಾರೆ.

ನ ಯಸ್ಯ ಕಶ್ಚಾತಿತಿತರ್ತಿ ಮಾಯಾಂ
ಯಯಾ ಜನೋ ಮುಹ್ಯತಿ ವೇದ ನಾರ್ಥಮ್ ।
ತಂ ನಿರ್ಜಿತಾತ್ಮಾತ್ಮಗುಣಂ ಪರೇಶಂ
ನ ಮಾಮ ಭೂತೇಷು ಸಮಂ ಚರನ್ತಮ್ ॥

ಯಾವ ಮಾಯೆಯಿಂದ ವಿಮೋಹಿತನಾಗಿ ಜೀವನು ತನ್ನ ಪರಮಗುರಿಯನ್ನು ಮತ್ತು ಸ್ವಸ್ವರೂಪವನ್ನು ಮರೆತುಬಿಟ್ಟಿರುವನೋ ಅಂಥ ಮಾಯೆಯು ಅವನದೇ ಆಗಿದೆ. ಯಾರೂ ಕೂಡ ಅವನ ಮಾಯೆಯನ್ನು ದಾಟಲಾರರು. ಆದರೆ ಶಕ್ತಿಸಂಪನ್ನನಾದ ಭಗವಂತನು ತನ್ನ ಆ ಮಾಯೆಯನ್ನೂ ಅದರ ಗುಣಗಳನ್ನೂ ತನ್ನ ವಶದಲ್ಲಿಟ್ಟುಕೊಂಡು ಸಮಸ್ತ ಪ್ರಾಣಿಗಳ ಹೃದಯದಲ್ಲಿಯೂ ಸರ್ವಸಮಭಾವದಿಂದ ಸಂಚರಿಸುತ್ತಿರುತ್ತಾನೆ. ಅಂಥ ಪರಮಾತ್ಮನಿಗೆ ನಮಸ್ಕರಿಸೋಣ.

**ನಮೋಽಸ್ತು ತಸ್ಮೈ ಉಪಶಾಂತಶಕ್ತಯೇ**
**ಸ್ವಾರಾಜ್ಯಲಾಭಪ್ರತಿಪೂರಿತಾತ್ಮನೇ ।**
**ಗುಣೇಷು ಮಾಯಾರಚಿತೇಷು ವೃತ್ತಿಭಿಃ**
**ನ ಸಜ್ಜಮಾನಾಯ ನಭಸ್ವದೂತಯೇ ॥**

ಯಾವ ಶ್ರೀ ಭಗವಂತನು ಜಗತ್ ಸ್ವರೂಪನಾಗಿದ್ದರೂ ತನಗೆ ಬೇಡವೆಂದು ತೋರಿದಾಗ ಸೃಷ್ಟಿಯೇ ಮೊದಲಾದ ವ್ಯಾಪಾರಗಳನ್ನು ತೊರೆದು ಉಪಶಮನ ಹೊಂದಿದ ಶಕ್ತಿಯುಳ್ಳವನಾಗಿ (ಶಾಂತನಾಗಿ) ಆತ್ಮಾನಂದಾನುಭವದಿಂದ ತೃಪ್ತವಾದ ಸ್ವರೂಪವುಳ್ಳವನಾಗುವನೋ ಮಾಯಾಕಲ್ಪಿತವಾದ ಗುಣಗಳಲ್ಲಿ ಅಂಟಿಕೊಳ್ಳದೆ ವಾಯುವಿನಂತೆ ಅಸಂಗನಾಗಿರುವನೋ ಅಂಥ ಪರಬ್ರಹ್ಮಪರಮಾತ್ಮನಿಗೆ ನಮಸ್ಕಾರ ಮಾಡುತ್ತೇನೆ.

**ನಮಸ್ತುಭ್ಯಮನನ್ತಾಯ ದುರ್ವಿತರ್ಕ್ಯಾತ್ಮಕರ್ಮಣೇ ।**
**ನಿರ್ಗುಣಾಯ ಗುಣೇಶಾಯ ಸತ್ತ್ವಸ್ಥಾಯ ಚ ಸಾಂಪ್ರತಮ್ ॥**

ಆದಿಮಧ್ಯಾನ್ತರಹಿತನಾದ, ಊಹಿಸಲು ಅಶಕ್ಯವಾದ ಮಹಿಮೆಯುಳ್ಳ, ನಿರ್ಗುಣನಾಗಿದ್ದರೂ ಕಲ್ಯಾಣಗುಣಪರಿಪೂರ್ಣನಾದ, ಸತ್ತ್ವಾದಿಗುಣಗಳಿಗೆ ಸ್ವಾಮಿಯಾದ ಪ್ರಕೃತದಲ್ಲಿ ಸತ್ತ್ವಗುಣದಲ್ಲಿರುವ ನಿನಗೆ ನಮಸ್ಕಾರಗಳು.

* * * * *

## 22. ದೇವತೆಗಳು ಮಾಡಿದ ಶಿವಸ್ತುತಿ

ಯೇ ತ್ವಾತ್ಮರಾಮಗುರುಭಿಃ ಹೃದಿ ಚಿಂತಿತಾಂಘ್ರಿ
ದ್ವಂದ್ವಂ ಚರನ್ತಮುಮಯಾ ತಪಸಾಽಭಿತಪ್ತಮ್।
ಕದ್ಥನ್ತ ಉಗ್ರಪುರುಷಂ ನಿರತಂ ಶ್ಮಶಾನೇ
ತೇ ನೂನಮೂತಿಮವಿದಂ ಸ್ತವ ಹಾತಲಜ್ಜಾಃ॥

ಶ್ರೀ ಮದ್ಭಾಗವತ 8-7-33

ಜೀವನ್ಮುಕ್ತರೂ ಆತ್ಮಾರಾಮರೂ ಆದ ಗುರುಜನರು ತಮ್ಮ ಹೃದಯಕಮಲಗಳಲ್ಲಿ ನಿನ್ನ ದಿವ್ಯವಾದ ಪಾದದ್ವಯಗಳನ್ನು ಧ್ಯಾನಮಾಡುತ್ತಿರುತ್ತಾರೆ. ನೀನು ಕೂಡ ನಿರಂತರವಾಗಿ ತಪಸ್ಸಿನಲ್ಲಿಯೇ ತೊಡಗಿರುವೆ. ಇಂಥ ನಿನ್ನನ್ನು ಕೆಲವರು ಕಾಮಾಸಕ್ತನೆಂದೂ ಸದಾ ಉಮೆಯೊಡನೆ ತಿರುಗುತ್ತಿರುವನೆಂದೂ ಹೇಳುತ್ತಾರೆ. ನಿರಂತರವಾಗಿ ಶ್ಮಶಾನದಲ್ಲಿ ವಾಸಮಾಡುವ ಉಗ್ರಪುರುಷನೆಂದೂ ತೆಗಳುತ್ತಾರೆ. ನಾಚಿಕೆಗೆಟ್ಟು ಹೀಗೆ ಹೇಳುವ ಅವರಿಗೆ ನಿನ್ನ ಮಹಿಮೆಯೇನಾದರೂ ತಿಳಿದಿರುವದೆ?

(ಕ್ಷೀರಸಮುದ್ರಮಥನಕಾಲಕ್ಕೆ ಈಶ್ವರನು ಸಮುದ್ರದಲ್ಲಿ ಹುಟ್ಟಿದ ಹಾಲಾಹಲ ವಿಷವನ್ನು ಪಾನಮಾಡಲು ಸಿದ್ಧನಾಗಿ ತನ್ನ ಪತ್ನಿ ಪಾರ್ವತಿಯನ್ನು ಒಪ್ಪಿಸಿ ಲೋಕಕಲ್ಯಾಣದ ದೃಷ್ಟಿಯಿಂದ ವಿಷಪಾನಮಾಡಿದನು. ಅದು ಈಶ್ವರನ ಕಂಠದಲ್ಲಿಯೇ ನಿಂತಿತು. ಆ ನೀಲಛಾಯೆಯು ಪರಮೇಶ್ವರನಿಗೆ ಅಲಂಕಾರವೇ ಆಯಿತು. ಆಗ ಬ್ರಹ್ಮ, ವಿಷ್ಣು-ಮುಂತಾದ ದೇವತೆಗಳು ಶಿವನನ್ನು ಸ್ತುತಿಸಿದರು.)

### ಹಾಲಾಹಲ ಪ್ರಾಶನ

ಶ್ರೀ ಶುಕಮಹಾಮುನಿಗಳು ಪರೀಕ್ಷಿತ್‌ರಾಜನಿಗೆ ಶ್ರೀ ವಾಸುದೇವಭಗವಂತನ ಮಹಿಮೆಯನ್ನು ಹೇಳುತ್ತಿರುವ ಸಂದರ್ಭದಲ್ಲಿ ದೇವತೆಗಳು ಅಮೃತವನ್ನು ಪಡೆಯಲು ಕ್ಷೀರಸಮುದ್ರವನ್ನು ಕಡೆಯಲು ಹೊರಟಾಗ ನಡುವೆ ಉಂಟಾದ ಹಾಲಾಹಲವೆಂಬ ಮಹಾವಿಷವು ಹುಟ್ಟಿದ್ದು ಎಲ್ಲೆಲ್ಲಿಯೂ ವ್ಯಾಪಿಸಿತು. ಆಗ ದೇವತೆಗಳು ಈ ಸಂದರ್ಭದಲ್ಲಿ ಸದಾಶಿವನೇ ರಕ್ಷಕನೆಂದು ತೀರ್ಮಾನಿಸಿ ದೇವಶ್ರೇಷ್ಠನಾದ ಪರಶಿವನನ್ನು ಸ್ತುತಿಸಿದರು. ಆ ಸ್ತುತಿಯನ್ನು ಅನುಸಂಧಾನಮಾಡೋಣ.

ಶ್ರೀ ಮಹಾದೇವನು ಪಾರ್ವತೀಸಮೇತನಾಗಿ ಕೈಲಾಸಪರ್ವತದಲ್ಲಿರುವಾಗಲೇ ದೇವತೆಗಳು ಅಲ್ಲಿಗೆ ಬಂದರು. ದೇವಶ್ರೇಷ್ಠನಾದ ಪರಶಿವನನ್ನು ಸಂದರ್ಶಿಸಿ ಸಾಷ್ಟಾಂಗ ಪ್ರಣಾಮಮಾಡಿ ಪರಶಿವನನ್ನು ಸ್ತುತಿಸಲಾರಂಭಿಸಿದರು.

ದೇವದೇವನೆ, ಮಹಾದೇವನೆ, ಸಕಲಪ್ರಾಣಿಗಳಲ್ಲಿಯೂ ಆತ್ಮರೂಪ ದಲ್ಲಿವವನೆ, ಮೂರು ಲೋಕಗಳನ್ನೂ ಸುಡಲು ಹೊರಟಿರುವ ಈ ಮಹಾವಿಷದಿಂದ ನಮ್ಮನ್ನು ರಕ್ಷಿಸುವವನಾಗು. ಸಕಲಲೋಕಗಳಲ್ಲಿರುವ ಸಕಲಪ್ರಾಣಿಗಳ ಬಂಧ-ಮೋಕ್ಷಗಳಿಗೆ ನೀನೊಬ್ಬನೇ ಒಡೆಯನು. ಆದ್ದರಿಂದಲೇ ಕುಶಲಮತಿಗಳಾದವರು ಶರಣಾಗತರ ಕಷ್ಟಗಳನ್ನು ಪರಿಹರಿಸುವ ಲೋಕಗುರುವಾದ ನಿನ್ನನ್ನೇ ಆರಾಧಿಸುತ್ತಾರೆ. ಸರ್ವಾತ್ಮನೆ, ಸ್ವಾಮಿಯೆ, ಸ್ವಯಂಪ್ರಕಾಶನಾದ ನೀನು ಈ ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳನ್ನು ಯಾವಾಗ ಮಾಡಲಿಚ್ಛಿಸುವೆಯೋ ಆಗ ಗುಣಗಳ ರೂಪವಾದ ನಿನ್ನ ಶಕ್ತಿಯಿಂದ ಬ್ರಹ್ಮ-ವಿಷ್ಣು- ಶಿವ, ಎಂಬ ಹೆಸರುಗಳನ್ನು ಪಡೆದು ಸೃಷ್ಟಿಸ್ಥಿತಿಲಯಗಳನ್ನು ಮಾಡುವವನಾಗಿರುವೆ.

ದೇವದೇವನೆ, ನೀನು ಅತಿಗುಹ್ಯವಾದ ಬ್ರಹ್ಮತತ್ತ್ವವೇ ಆಗಿರುವೆ, ಕಾರ್ಯಕಾರಣರೂಪದಿಂದ ದೇವತೆಗಳನ್ನೂ ಮನುಷ್ಯರನ್ನೂ ಪಶುಪಕ್ಷಿಗಳನ್ನೂ ಸೃಷ್ಟಿಸಿ ಪೋಷಿಸುವವನೂ ನೀನೇ ಆಗಿರುವೆ. ಅನೇಕಶಕ್ತಿಗಳ ಮೂಲಕವಾಗಿ ನೀನು ಜಗತ್ತಿನ ರೂಪದಲ್ಲಿಯೂ ಕಾಣಿಸಿಕೊಳ್ಳುವೆ. ಸಕಲಪ್ರಾಣಿಗಳ ಆತ್ಮಸ್ವರೂಪನೂ ಆಗಿರುವ ನೀನು ಜಗದೀಶ್ವರನೂ ಆಗಿರುವೆ. ಮಹಾದೇವನೆ, ಸಮಸ್ತ ವೇದಗಳೂ ನಿನ್ನಿಂದಲೇ ಪ್ರಕಟವಾಗಿವೆ. ಆದ್ದರಿಂದ ನೀನು ಸಮಸ್ತಜ್ಞಾನಗಳಿಗೂ ಮೂಲಸ್ರೋತನಾಗಿ ಜ್ಞಾನಸ್ವರೂಪನೇ ಆಗಿರುವೆ. ಪ್ರಾಣ, ಇಂದ್ರಿಯ ಮತ್ತು ಪಂಚಮಹಾಭೂತಗಳಿಗೆ ಕಾರಣವಾದ ರಾಜಸ ಸಾತ್ವಿವಕಾದಿ ಗುಣಗಳ ಸ್ವಭಾವವುಳ್ಳವನೂ ನೀನೇ ಆಗಿರುವೆ. ಪ್ರಾಣಗಳನ್ನು ವೃದ್ಧಿಗೊಳಿಸುವ ಮತ್ತು ವಿನಾಶಗೊಳಿಸುವ ಕಾಲನೂ ನೀನೇ ಆಗಿರುವೆ. ಪ್ರಾಣಿಗಳಿಗೆ ಕಲ್ಯಾಣವನ್ನುಂಟುಮಾಡುವ ಯಜ್ಞಸ್ವರೂಪನೂ ನೀನೇ. ಸತ್ಯ ಮತ್ತು ಋತಗಳೂ ನೀನೇ ಆಗಿರುವೆ, ಧರ್ಮವೆಂಬುದು ನಿನ್ನ ಸ್ವರೂಪವೇ ಆಗಿದೆ. ಅ-ಉ-ಮ ಈ ಮೂರು ಅಕ್ಷರಗಳಿಂದ ಯುಕ್ತವಾದ ಓಂಕಾರಸ್ವರೂಪನೂ ನೀನೇ ಆಗಿರುವೆ. ತ್ರಿಗುಣಾತ್ಮಿಕವಾದ ಪ್ರಕೃತಿಯೂ ನೀನೇ. ಹೀಗೆ ವೇದವಾದಿಗಳಾದ ಮಹಾತ್ಮರು ನಿನ್ನ ಗುಣಗಾನವನ್ನು ಮಾಡುತ್ತಾರೆ.

ಮೂರುಲೋಕಗಳಿಗೂ ಅಭ್ಯುದಯವನ್ನುಂಟುಮಾಡುವ ಶಂಕರನೆ, ಸರ್ವದೇವಸ್ವರೂಪನಾದ ಅಗ್ನಿಯೇ ನಿನಗೆ ಮುಖವಾಗಿರುತ್ತಾನೆ. ಈ ಭೂಮಂಡಲವು ನಿನ್ನ ಚರಣಕಮಲವಾಗಿದೆ. ನೀನು ಸಕಲದೇವತಾಸ್ವರೂಪನಾಗಿರುವೆ. ಈ ಕಾಲವೇ ನಿನ್ನ ಗತಿಯಾಗಿದೆ. ದಿಕ್ಕುಗಳೇ ನಿನ್ನ ಕಿವಿಗಳಾಗಿವೆ. ಜಲೇಶನಾದ ವರುಣನೇ ನಿನ್ನ ರಸನೇಂದ್ರಿಯವಾಗಿದ್ದಾನೆ. ಆಕಾಶವೇ ನಿನ್ನ ನಾಭಿಕಮಲವಾಗಿದೆ. ವಾಯುವು ಉಸಿರಾಗಿದೆ. ಸೂರ್ಯನು ಕಣ್ಣುಗಳಾಗಿದ್ದಾನೆ. ಜಲವೇ ನಿನ್ನ ರೇತಸ್ಸಾಗಿದೆ. ನಿನ್ನ ಅಹಂಕಾರವು ಉಚ್ಚನೀಚರೆನಿಸಿದ ಸಮಸ್ತಪ್ರಾಣಿಗಳಿಗೂ ಪರಮಾಶ್ರಯವಾಗಿದೆ. ಚಂದ್ರನೇ ನಿನ್ನ ಮನಸ್ಸಾಗಿದ್ದಾನೆ. ಸ್ವರ್ಗವೇ ನಿನ್ನ ಶಿರಸ್ಸಾಗಿದೆ. ಇಂಥ ಪರಾತ್ಪರನಾದ ನಿನಗೆ ವಂದನೆಗಳು.

ವೇದಮಯವಾದ ಆತ್ಮನುಳ್ಳವನೆ, ಪರಮೇಶ್ವರ, ನಿನಗೆ ಸಮುದ್ರಗಳೇ ಹೊಟ್ಟೆಯಾಗಿವೆ. ಪರ್ವತಗಳೇ ಮೂಳೆಗಳಾಗಿವೆ. ಭೂಮಿಯಲ್ಲಿರುವ ಗಿಡಬಳ್ಳಿಗಳೇ ನಿನ್ನ ಕೂದಲುಗಳ ರೂಪದಲ್ಲಿವೆ. ಗಾಯತ್ರಿಯೇ ಮೊದಲಾದ ಛಂದಸ್ಸುಗಳೇ ರಸ, ರಕ್ತ, ಮಾಂಸ, ಮೇದಸ್ಸು, ಅಸ್ಥಿ, ಮಜ್ಜಾ, ಮತ್ತು ಶುಕ್ರಗಳೆಂಬ ಸಪ್ತಧಾತುಗಳಾಗಿವೆ. ಸಮಸ್ತವಾದ ಧರ್ಮಗಳೂ ನಿನ್ನ ಹೃದಯವೇ ಆಗಿದೆ. ಸರ್ವೇಶನೆ, ಯಾವ ಉಪನಿಷನ್ಮಂತ್ರಗಳ ಸಮುಚ್ಚಯದಿಂದ ಮೂವತ್ತೆಂಟು ಬಿಡಿಬಿಡಿಯಾದ ಮಂತ್ರ ಗಳಾಗುವವೋ ಅಂಥ ಐದು ಉಪನಿಷನ್ಮಂತ್ರಗಳೇ (1) ಸದ್ಯೋಜಾತ (2) ವಾಮದೇವ (3) ಅಘೋರ (4) ತತ್ಪುರುಷ (5) ಈಶಾನ- ಎಂಬ ಐದು ಮುಖಗಳಾಗಿವೆ. ಸ್ವಯಂಜ್ಯೋತಿಸ್ವರೂಪದ ''ಶಿವ' ಎಂಬ ಹೆಸರಿನ ಯಾವ ಕೈವಲ್ಯಸ್ವರೂಪವಿರುವದೋ ಅದೇ ನಿನ್ನ ನಿಜಸ್ವರೂಪವು.

ಅಧರ್ಮಕ್ಕೆ ಮೂಲವಾದ ದಂಭಾಭಿಮಾನ- ಅಹಂಕಾರಗಳೆಂಬ ತರಂಗಗಳೇ ನಿನ್ನ ನೆರಳಾಗಿವೆ. ವಿಧವಿಧವಾದ ಸೃಷ್ಟಿಗಳಿಗೆ ಕಾರಣವಾಗಿರುವ ಅಂಥ ಸತ್ತ್ವರಜಸ್ತಮೋಗುಣಗಳೇ ನಿನ್ನ ಮೂರು ಕಣ್ಣುಗಳಾಗಿವೆ. ಸರ್ವಸಾಕ್ಷಿಯೂ ಮತ್ತು ಶಾಸ್ತ್ರಗಳನ್ನು ರಚಿಸಿದವನೂ ಆದ ನಿನಗೆ ಛಂದೋಮಯವಾದ ಮತ್ತು ಸನಾತನವಾದ ವೇದವೇ ನೋಟವಾಗಿದೆ. ಗಿರಿತ್ರನೆ, ಪರಮೇಶ್ವರನೆ, ನೀನು ಪರಂಜ್ಯೋತಿಮಯಸ್ವರೂಪನು. ನೀನು ಪರಬ್ರಹ್ಮ- ಪರಾತ್ಮ-ಪರತತ್ತ್ವವೇ ಆಗಿರುವೆ. ಸಚ್ಚಿದಾನಂದಘನಸ್ವರೂಪನು ನೀನು. ಪರಂಜ್ಯೋತಿಸ್ವರೂಪನಾದ ನಿನ್ನಲ್ಲಿ

ಸತ್ತ್ವರಜಸ್ತಮೋಗುಣಗಳಾಗಲಿ, ಯಾವದೇ ಭೇದಭಾವವಾಗಲಿ- ಇಲ್ಲ. ಇಂಥ ನಿನ್ನ ಚಿದಾನಂದಘನಸ್ವರೂಪವನ್ನು ಲೋಕಪಾಲಕರಾಗಲಿ ಬ್ರಹ್ಮೇಂದ್ರವಿಷ್ಣುಗಳಾಗಲಿ ಅರಿಯರು.

ಕಾಮದಹನ, ದಕ್ಷಯಜ್ಞವಿಧ್ವಂಸನ, ತ್ರಿಪುರಸುರಸಂಹಾರ, (ಈಗ ನಡೆಯಲಿರುವ) ಕಾಲಕೂಟವಿಷಭಕ್ಷಣ, ಭೂತದ್ರೋಹಿಗಳಾದ ಹಲವಾರು ರಾಕ್ಷಸರ ಸಂಹಾರ- ಇವೇ ಮುಂತಾದ, ಪ್ರಪಂಚಕ್ಕೆ ಹಿತವಾದ ಕಾರ್ಯಗಳನ್ನು ಮಾಡಿರುವೆ. ಇದು ನಿನ್ನನ್ನು ಸ್ತುತಿಮಾಡುವದಕ್ಕಾಗಿ ಹೇಳುತ್ತಿರುವ ಮಾತಲ್ಲ. ಇದೆಲ್ಲವೂ ನಿನ್ನ ದೃಷ್ಟಿಯಿಂದ ಅತ್ಯಲ್ಪವಾದ ವಿಷಯಗಳು. ಹೇಗೆಂದರೆ : ನೀನೇ ಸೃಷ್ಟಿಸಿದ ಈ ಜಗತ್ತು ಪ್ರಲಯಕಾಲದಲ್ಲಿ ನಿನ್ನ ಕಣ್ಣಿನಿಂದ ಹೊರಡುವ ಅಗ್ನಿಯ ಕಿಡಿಯ ಜ್ವಾಲೆಗಳಿಂದ ಕ್ಷಣಮಾತ್ರದಲ್ಲಿ ಭಸ್ಮವಾಗಿಹೋಗುತ್ತದೆ. ಸದಾ ಧ್ಯಾನಮಗ್ನನಾಗಿರುವ ನೀನು ಈ ಕಾರ್ಯಗಳ ಸಾಧನೆಯ ವಿಷಯವಾಗಿ ಯೋಚಿಸುವದೇ ಇಲ್ಲ. ನಿನ್ನ ಪರಮಾದ್ಭುತವಾದ ಶಕ್ತಿಯಿಂದ ತಾನೇ ತಾನಾಗಿ ಎಲ್ಲವೂ ನಡೆದುಹೋಗುತ್ತದೆ.

ಹೀಗೆ ಪರಮೇಶ್ವರನನ್ನು ದೇವತೆಗಳು ಸ್ತುತಿಸಲಾಗಿ ಶಿವನು ತನ್ನ ಪತ್ನಿಯಾದ ಪಾರ್ವತಿಯ ಸಮ್ಮತಿಯನ್ನು ಪಡೆದು ದೇವತೆಗಳ ಮೇಲಿನ ಕನಿಕರದಿಂದ ಹಾಲಾಹಲವಿಷವನ್ನು ಅಂಗೈಯಲ್ಲಿ ಆಕರ್ಷಿಸಿ ಕುಡಿದುಬಿಟ್ಟನು. ಆ ವಿಷವು ಪರಶಿವನ ಕೊರಳಿನಲ್ಲಿ ಕಪ್ಪನ್ನುಂಟುಮಾಡಿ ತನ್ನ ಶಕ್ತಿಯನ್ನು ಪ್ರದರ್ಶಿಸಿತು. ಆದರೆ ಆ ನೀಲಛಾಯೆಯೂ ಜಗದ್ರಕ್ಷಕನಾದ ಪರಮೇಶ್ವರನಿಗೆ ಅಲಂಕಾರವೇ ಆಯಿತು- ಎಂದು ಶುಕಮುನಿಗಳು ಪರೀಕ್ಷಿತನಿಗೆ ಹೇಳಿದರು.

* * * * *

# 23. ಅದಿತಿಯು ಭಗವಂತನನ್ನು ಸ್ತುತಿಸಿದುದು

**ಯಜ್ಞೇಶ ಯಜ್ಞಪುರುಷಾಚ್ಯುತ ತೀರ್ಥಪಾದ**
**ತೀರ್ಥಶ್ರವಃ ಶ್ರವಣಮಂಗಳ ನಾಮಧೇಯ।**
**ಆಪನ್ನಲೋಕವೃಜಿನೋಪಶಮೋ ದಯಾಢ್ಯ**
**ಶಂ ನಃ ಕೃಧೀಶತ ಭಗವನ್ನಸಿ ದೀನನಾಥಃ॥**

**ಮದ್ಭಾಗವತ 8-17-8**

ಯಜ್ಞಗಳೊಡೆಯನೆ, ಯಜ್ಞೇಶ್ವರನೆ, ಅಚ್ಯುತನೆ, ಗಂಗಾನದಿಯನ್ನು ಪಾದದಲ್ಲಿ ಧರಿಸಿರುವವನೆ, ಪುಣ್ಯಕೀರ್ತಿಯೆ, ಶ್ರವಣಮಾತ್ರದಿಂದ ಮಂಗಳವನ್ನುಂಟು ಮಾಡುವವನೆ, ಆದಿಪುರುಷನೆ, ದೀನರಿಗೆ ಒಡೆಯನೆ, ಸ್ವಾಮಿಯೆ- ನಮಗೆ ಮಂಗಳವನ್ನು ಉಂಟುಮಾಡುವವನಾಗು.

**(ದೇವಮಾತೆಯಾದ ಅದಿತಿಯು ದೇವತೆಗಳ ವಾಸಸ್ಥಾನವಾದ ಸ್ವರ್ಗವನ್ನು ಅಸುರರ ಒಡೆಯನಾದ ಬಲಿರಾಜನು ಆಕ್ರಮಿಸಿಕೊಂಡಾಗ ದೇವತೆಗಳಿಗೆ ಸ್ಥಾನವಿಲ್ಲವಾಗಲು ಭಗವಾನ್ ನಾರಾಯಣನನ್ನು ಸ್ತುತಿಸಲಾಗಿ ವಾಮನಾವತಾರವನ್ನು ಮಾಡಿ ಭಗವಂತನು ಬಲಿರಾಜನನ್ನು ಪಾತಾಳಕ್ಕೆ ಕಳುಹಿಸಿ ದೇವತೆಗಳನ್ನು ಅನುಗ್ರಹಿಸಿದನು)**

## ವಾಮನಾವತಾರ ವೃತ್ತಾಂತ

ಶ್ರೀಮನ್ನಾರಾಯಣನ ದಶಾವತಾರಗಳಲ್ಲಿ ವಾಮನಾವತಾರವು ಐದನೆಯದಾಗಿದೆ. ಶ್ರೀ ಶುಕಮಹಾಮುನಿಗಳು ಪರೀಕ್ಷಿತ್‌ರಾಜನಿಗೆ ಭಗವಂತನ ಅವತಾರಲೀಲೆಗಳನ್ನು ಶ್ರವಣಮಾಡಿಸುತ್ತಿರುವ ಸಂದರ್ಭದಲ್ಲಿ ವಾಮನನಾಗಿ ಶ್ರೀಮನ್ನಾರಾಯಣನು ಅದಿತಿದೇವಿಯ ಗರ್ಭದಲ್ಲಿ ಜನಿಸಿ ತ್ರಿವಿಕ್ರಮನಾಗಿ ಮೂರು ಲೋಕಗಳನ್ನೂ ವ್ಯಾಪಿಸಿ ಬಲಿಚಕ್ರವರ್ತಿಯನ್ನು ಪಾತಾಳಕ್ಕೆ ಕಳುಹಿಸಿದ ಉಪಾಖ್ಯಾನ ವನ್ನು ಶ್ರವಣಮಾಡಿಸಿದರು.

ಕಶ್ಯಪಮಹರ್ಷಿಗಳು ತಮ್ಮ ಪತ್ನಿಯಾದ ಅದಿತಿಗೆ ''ಪಯೋವ್ರತ''ವೆಂಬ ಅನುಷ್ಠಾನವನ್ನು ಉಪದೇಶಿಸಿ ತ್ರೈಲೋಕ್ಯಾಧಿಪತಿಯಾಗಿ ನೆಲೆಸಿದ್ದ ಬಲಿರಾಜನನ್ನು ನಿಗ್ರಹಿಸಿ ದೇವತೆಗಳಿಗೆ ಸ್ವರ್ಗಲೋಕದಲ್ಲಿ ನೆಲೆಸಲು ಅನುಕೂಲಮಾಡಿಕೊಡುವದಕ್ಕಾಗಿ

ಭಗವಾನ್ ನಾರಾಯಣನನ್ನು ಆರಾಧಿಸುವಂತೆ ಏರ್ಪಡಿಸಿದರು. ಆಗ ನಾರಾಯಣನು ಪ್ರತ್ಯಕ್ಷನಾಗಿ ಅದಿತಿದೇವಿಯ ಗರ್ಭದಲ್ಲಿ ಜನ್ಮವನ್ನು ತಾಳಿ ಬಲಿರಾಜನನ್ನು ನಿಗ್ರಹಿಸಿ ಪಾತಾಳಲೋಕಕ್ಕೆ ಕಳುಹಿಸುವದಾಗಿ ವರಪ್ರದಾನಮಾಡಿದನು. ಅದರಂತೆ ಅದಿತಿಯ ಗರ್ಭದಲ್ಲಿ ಪ್ರವೇಶಿಸಿ ''ವಾಮನ''ನಾಗಿ ಅವತರಿಸಿದನು. ಆಗ ಬಲಿರಾಜನು ಯಜ್ಞದೀಕ್ಷೆಯನ್ನು ಧರಿಸಿದವನಾಗಿದ್ದನು. ಉದಾರವಾಗಿ ದಾನಗಳನ್ನು ಯಜ್ಞಗಳ ಪರಿಪೂರ್ತಿಗಾಗಿ ಏರ್ಪಾಡುಮಾಡಿದ್ದನು. ಈ ಸಂದರ್ಭವನ್ನು ಗಮನಿಸಿ ಭಗವಂತನು 'ವಾಮನಮೂರ್ತಿ' (ಕುಳ್ಳಬ್ರಹ್ಮಚಾರಿ)ಯಾಗಿ ಆವಿರ್ಭವಿಸಿ ಬಲಿರಾಜನು ಯಜ್ಞಮಾಡುತ್ತಿದ್ದ ಸಭೆಗೆ ಬಂದು ತನ್ನ ದಿವ್ಯತೇಜಸ್ಸಿನಿಂದ ಎಲ್ಲರನ್ನೂ ಆಕರ್ಷಿಸಿದನು. ಬಲಿರಾಜನಂತೂ ಈ ವಾಮನ (ಕುಳ್ಳ)ವಟುವನ್ನು ನೋಡಿ ಬೆರಗಾಗಿ, ಅನಂತರ ಆಸನವನ್ನಿತ್ತು ಸತ್ಕರಿಸಿ ಸ್ವಾಗತಿಸಿದನು.

ವಾಮನಮೂರ್ತಿಯು ಕಡುಚೆಲುವನಾಗಿದ್ದನು. ಆತನನ್ನು ಎಷ್ಟು ನೋಡಿದರೂ ಸಭಿಕರಿಗೆ ತೃಪ್ತಿಯಾಗುತ್ತಿರಲಿಲ್ಲ. ಬಲಿರಾಜನು ವಾಮನಮೂರ್ತಿಯ ಪಾದಗಳನ್ನು ತೊಳೆದು ಸಂಪೂಜಿಸಿದನು. ಅನಂತರ ''ಬ್ರಾಹ್ಮಣಪುತ್ರನೆ, ನೀನು ಯಾಚಕನಾಗಿ ನನ್ನ ಬಳಿಗೆ ಬಂದಿರುವೆ- ಎಂದು ಭಾವಿಸುತ್ತೇನೆ. ನೀನು ಏನನ್ನು ಬಯಸುವೆಯೋ ಅವೆಲ್ಲವನ್ನೂ ನನ್ನಿಂದ ಪಡೆದುಕೊಳ್ಳಬಹುದು. ನಿನಗೆ ಇಷ್ಟವಾದ ಪದಾರ್ಥವು ಯಾವದೆಂದು ತಿಳಿಸು''- ಎಂದನು. ಆಗ ವಾಮನನು ಹೀಗೆಂದನು: ''ಮಹಾರಾಜ, ನೀನು ಮೂರು ಲೋಕಗಳಿಗೂ ಚಕ್ರವರ್ತಿಯಾಗಿರುವೆ. ಅತ್ಯಂತ ಉದಾರಿಯೂ ಆಗಿರುವೆ. ಆದರೂ ನನಗೆ ಬೇಕಾಗಿರುವಷ್ಟನ್ನು ಮಾತ್ರವೇ ನಿನ್ನಿಂದ ಯಾಚಿಸುತ್ತೇನೆ. ವಿದ್ವಾಂಸರಾದವರು ತಮ್ಮ ಅವಶ್ಯಕತೆಗೆ ಅಗತ್ಯವಾದಷ್ಟನ್ನು ಮಾತ್ರ ದಾನವಾಗಿ ಸ್ವೀಕರಿಸಬೇಕು. ಹೀಗೆ ಮಾಡಿದರೆ ಮಾತ್ರ ಪ್ರತಿಗ್ರಹದೋಷದಿಂದ ಮುಕ್ತರಾಗುತ್ತಾರೆ'' ಆದ್ದರಿಂದ ನನಗೆ ಮೂರುಹೆಜ್ಜೆ ಭೂಮಿಯನ್ನು ಮಾತ್ರ ದಾನವಾಗಿ ಕೊಡು ಎಂದನು.

ಆಗ ಬಲಿರಾಜನು ಹೀಗೆಂದನು : ಬ್ರಾಹ್ಮಣಕುಮಾರ, ನಿನ್ನ ಮಾತುಗಳೇನೋ ವೃದ್ಧರಾದವರೂ ಅನುಮೋದಿಸುವಂಥವುಗಳು. ಆದರೂ ನೀನು ಬಾಲಕನಾದ್ದರಿಂದ ಸ್ವಕಾರ್ಯದ ಸಾಧನೆಯ ವಿಷಯದಲ್ಲಿ ಮೂಢನಂತೆಯೇ ವರ್ತಿಸುತ್ತಿರುವೆ. ಬಾಲಬ್ರಹ್ಮಚಾರಿಯೆ, ಯಾವನೇ ಆಗಲಿ, ನನ್ನಲ್ಲಿ ಯಾಚಿಸಲು ಬಂದಮೇಲೆ ಅವನು ಮತ್ತೆಲ್ಲಿಗೂ ಪುನಃ ಯಾಚಿಸಲು ಹೋಗಬಾರದು. ಇದು ನನ್ನ ಅಭಿಮತವಾಗಿದೆ.

ಆದ್ದರಿಂದ ನಿನ್ನ ಜೀವಿಕೆಗೆ ಅಗತ್ಯವಾದಷ್ಟು ಫಲವತ್ತಾದ ಭೂಮಿಯನ್ನಾದರೂ ನನ್ನಿಂದ ಸ್ವೀಕರಿಸು ಎಂದು ಹೇಳಿದನು. ಆಗ ವಾಮನಮೂರ್ತಿಯು ಹೀಗೆಂದನು : ''ಮಹಾರಾಜ, ಮೂರು ಲೋಕಗಳಲ್ಲಿಯೂ ಮನುಷ್ಯನಿಗೆ ಇಷ್ಟವಾದ, ಉಪಭೋಗಿಸಲು ಯೋಗ್ಯವಾದ ವಿಷಯಗಳು ಎಷ್ಟಿವೆಯೋ ಅವೆಲ್ಲವೂ ದೊರೆತರೂ ಜಿತೇಂದ್ರಿಯನಲ್ಲದ ಒಬ್ಬ ಮನುಷ್ಯನು ತೃಪ್ತನಾಗುವದಿಲ್ಲವೋ ಅವನಿಗೆ ಒಂದು ದ್ವೀಪವನ್ನೇ ದಾನವಾಗಿ ಕೊಟ್ಟರೂ ಸಾಕಾಗುವದಿಲ್ಲ. ಆಸೆಗೆ ಇತಿಮಿತಿಗಳೇ ಇಲ್ಲ. ಆದ್ದರಿಂದ ದೈವೇಚ್ಛೆಯಿಂದ ದೊರಕಿದ ಅರ್ಥಕಾಮಗಳಿಂದಲೇ ತೃಪ್ತನಾಗುವ ಬ್ರಾಹ್ಮಣನ ತೇಜಸ್ಸು ವೃದ್ಧಿಸುತ್ತದೆ. ನಾನು ಕೇಳಿರುವಷ್ಟು (ಮೂರು ಹೆಜ್ಜೆ) ಭೂಮಿಯನ್ನು ಮಾತ್ರವೇ ನನಗೆ ದಾನವಾಗಿ ಕೊಡು''- ಎಂದನು. ಆಗ ಬಲಿರಾಜನು ವಟುವನ್ನು ಕುರಿತು ''ವಾಂಛಿತಂ ಪ್ರತಿಗೃಹ್ಯತಾಮ್'' ಎಂದು ಹೇಳಿ ವಾಮನನಿಗೆ ವಿಧಿವತ್ತಾಗಿ ಅವನ ಹೆಜ್ಜೆಯ ಅಳತೆಯಿಂದಲೇ ಮೂರು ಹೆಜ್ಜೆ ಭೂಮಿಯನ್ನು ದಾನಮಾಡಲು ಸಿದ್ಧನಾದನು.

ಆಗ ಶುಕ್ರಾಚಾರ್ಯರು (ಬಲಿರಾಜನ ಗುರುಗಳು) ಬಲಿರಾಜನನ್ನು ಕುರಿತು ಹೀಗೆಂದರು : ''ಎಲೈ ಬಲಿರಾಜನೆ, ಈ ವಾಮನಮೂರ್ತಿಯು ದೇವತಾಕಾರ್ಯ ಸಾಧಕನಾಗಿ ಬಂದಿದ್ದಾನೆ. ಇವನು ಶ್ರೀ ಮಹಾವಿಷ್ಣುವೇ ಆಗಿದ್ದಾನೆ. ಇವನ ಮೂರು ಹೆಜ್ಜೆಗಳಲ್ಲಿ ಮೂರು ಲೋಕಗಳೂ ಅಡಕವಾಗಿದ್ದು ಬ್ರಹ್ಮಾಂಡವೆಲ್ಲ ಇವನಲ್ಲಿಯೇ ಒಳಗೊಂಡಿದೆ. ಆದ್ದರಿಂದ ಈ ವಟುವಿಗೆ ದಾನವನ್ನು ಕೊಡಬೇಡ'' ಎಂದು ಸೂಚಿಸಿದರು. ಆದರೆ ಬಲಿರಾಜನು ತಾನು ವಾಮನಮೂರ್ತಿಗೆ ಮಾತು ಕೊಟ್ಟಾಗಿರುವದರಿಂದ ದಾನವನ್ನು ಕೈಬಿಡಲು ಒಪ್ಪಲಿಲ್ಲ. ಇದರಿಂದ ಕುಪಿತರಾದ ಶುಕ್ರಾಚಾರ್ಯರು ಬಲಿರಾಜನಿಗೆ ''ನೀನು ರಾಜ್ಯಭ್ರಷ್ಟನಾಗು'' ಎಂದು ಶಾಪವನ್ನು ಕೊಟ್ಟರು. ಆ ಶಾಪವೇ ಬಲಿರಾಜನಿಗೆ ವರವಾಗಿ ಪರಿಣಮಿಸಿತು.

ವಾಮನಮೂರ್ತಿಯು ಬಲಿರಾಜನಿಂದ ಮೂರು ಹೆಜ್ಜೆ ದಾನವನ್ನು ಸ್ವೀಕರಿಸಲು ತ್ರಿವಿಕ್ರಮನಾಗಿ ಆವಿರ್ಭವಿಸಿದನು. ವಿಶ್ವವ್ಯಾಪಿಯಾದ ಭಗವಂತನು ಬಲಿರಾಜನ ರಾಜ್ಯವನ್ನೆಲ್ಲ ತನ್ನ ಪಾದದಿಂದ ಅಳತೆಮಾಡಲುಪಕ್ರಮಿಸಿ ಮೂರು ಲೋಕಗಳನ್ನೂ ವ್ಯಾಪಿಸಿದನು. ಎರಡೇ ಪಾದಗಳ ನ್ಯಾಸದಿಂದ ತ್ರೈಲೋಕ್ಯವೂ ಅಡಕವಾಗಿಬಿಟ್ಟಿತು. ಮೂರನೆಯ ಪಾದಕ್ಕೆ ಅಳತೆಗೆ ಸ್ಥಳವೇ ಇಲ್ಲವಾಯಿತು. ಆಗ ಬಲಿರಾಜನು

ಭಗವಂತನನ್ನು ಪ್ರಾರ್ಥಿಸಿ ಅಳತೆಯ ಕೊನೆಯಪಾದಕ್ಕೆ ತನ್ನ ಶಿರಸ್ಸನ್ನೇ ಸಮರ್ಪಿಸಿದನು. ಆಗ ಶ್ರೀಮನ್ನಾರಾಯಣನು ಪ್ರತ್ಯಕ್ಷನಾಗಿ ಬಲಿರಾಜನನ್ನು ಅನುಗ್ರಹಿಸಿ ವರಪ್ರದಾನಮಾಡಿ ಪಾತಾಳಲೋಕದ ಆಧಿಪತ್ಯವನ್ನು ಅವನಿಗೆ ದಯಪಾಲಿಸಿದನು. ಬಲಿರಾಜನು ಭಗವಂತನನ್ನು ಮೊರೆಹೊಕ್ಕು ಶರಣಾಗತನಾದನು. ಶ್ರೀಮನ್ನಾರಾಯಣನು ವರಪ್ರದಾನಮಾಡುವಾಗ ಬಲಿರಾಜನ ವಾಸಸ್ಥಾನದಲ್ಲಿ ದ್ವಾರಪಾಲಕನಾಗಿ ನಿಂತು ಅನುಗ್ರಹಿಸಿದನು.

ದೀಪಾವಳಿ ಹಬ್ಬದಲ್ಲಿ ಬಲೀಂದ್ರನ ಪೂಜೆಯನ್ನು ಆಚರಿಸುವ ಪದ್ಧತಿಯು ಈಗಲೂ ಇದೆ. ಆ ಕಾಲದಲ್ಲಿ ಬಲಿರಾಜನು ಸಾರ್ವಭೌಮನಾಗಿದ್ದು ಭಗವಂತನು ದ್ವಾರಪಾಲಕನಾಗಿ ''ಭಕ್ತವತ್ಸಲ''ನೆನಿಸುತ್ತಾನೆ. ಇಂಥ ಬಲಿರಾಜನ ದೈವಭಕ್ತಿ, ಔದಾರ್ಯ, ಸಾಮ್ರಾಜ್ಯ ಆಧಿಪತ್ಯ- ಎಲ್ಲವೂ ಶ್ರೀಮನ್ನಾರಾಯಣನ ಅನುಗ್ರಹದಿಂದ ಭಕ್ತರಿಗೆ ಲಭಿಸುತ್ತದೆ. ಆದ್ದರಿಂದ ನಾವು ಭಗವದ್ಭಕ್ತರಾಗೋಣ.

* * * * *

## 24. ಅಂಬರೀಷನು ಸುದರ್ಶನಚಕ್ರವನ್ನು ಸ್ತುತಿಸಿದುದು

**ಸುದರ್ಶನ ನಮಸ್ತುಭ್ಯಂ ಸಹಸ್ರಾರಾಚ್ಯುತಪ್ರಿಯ।**
**ಸರ್ವಾಸ್ತ್ರಘಾತಿನ್ ವಿಪ್ರಾಯ ಸ್ವಸ್ತಿ ಭೂಯಾ ಇಡಸ್ಪತೇ॥**

**ಶ್ರೀ ಮದ್ಭಾಗವತ 9-5-4**

''ಸುದರ್ಶನ ಚಕ್ರದೊಡೆಯನೆ, ನಿನಗೆ ನಮಸ್ಕಾರಗಳು. ಸಾವಿರ ಅರೆಕಾಲುಗಳುಳ್ಳ ನಾರಾಯಣನಿಗೆ ಪ್ರಿಯವಾದ, ಎಲ್ಲಾ ಶಸ್ತ್ರಾಸ್ತ್ರಗಳನ್ನೂ ವಿನಾಶಗೊಳಿಸುವ ಸಾಮರ್ಥ್ಯವುಳ್ಳವನೂ ಭೂಮಂಡಲದ ಒಡೆಯನೂ ಆಗಿರುವವನೆ, ದಯಮಾಡಿ ಈ ಬ್ರಾಹ್ಮಣ(ದೂರ್ವಾಸ)ನಿಗೆ ಮಂಗಳವನ್ನು ದಯಪಾಲಿಸುವವನಾಗು.

**(ಅಂಬರೀಷನು ಏಕಾದಶೀವ್ರತವನ್ನು ಮಾಡಿ ದ್ವಾದಶೀದಿನ ಪಾರಣೆಮಾಡಲು ಸಿದ್ಧನಾಗುತ್ತಿದ್ದಾಗ ದೂರ್ವಾಸರು ಸಕಾಲಕ್ಕೆ ಬಾರದೆ ಇದ್ದದ್ದರಿಂದ ತಾನು ಪಾರಣೆ( ದ್ವಾದಶೀ ಭೋಜನ) ಮಾಡಿದನು. ಅದರಿಂದ ದೂರ್ವಾಸರು ಕೋಪಗೊಂಡು ಶಾಪವನ್ನುಕೊಡಲು**

ಹೊರಟಾಗ ಸುದರ್ಶನಚಕ್ರದೇವತೆಯು ದೂರ್ವಾಸರಿಗೆ ಎದುರಾಯಿತು. ಆಗ ಅಂಬರೀಷನು ದೂರ್ವಾಸರನ್ನು ಕಾಪಾಡಲು ಸುದರ್ಶನಚಕ್ರದೇವತೆಯನ್ನು ಸ್ತುತಿಸಿ ಸಮಾಧಾನಗೊಳಿಸಿ ಅವರನ್ನು ರಕ್ಷಿಸಿದನು.)

## ಅಂಬರೀಷೋಪಾಖ್ಯಾನ

ಶ್ರೀ ಶುಕಮಹಾಮುನಿಗಳು ಪರೀಕ್ಷಿತನಿಗೆ ಉಪದೇಶಿಸುತ್ತಿದ್ದ ಕಥೆಗಳಲ್ಲಿ ಅಂಬರೀಷಮಹಾರಾಜನ ಚರಿತ್ರೆಯೂ ಒಂದಾಗಿದೆ. ಈ ಉಪಾಖ್ಯಾನವನ್ನು ಅನುಸಂಧಾನಮಾಡೋಣ. ಅಂಬರೀಷನು ವಿಷ್ಣುಭಕ್ತನು. ಶ್ರೀಮನ್ನಾರಾಯಣನ ಸೇವೆ, ಕೀರ್ತನೆ, ಮಂದಿರನಿರ್ಮಾಣ- ಇತ್ಯಾದಿ ಸತ್ಕಾರ್ಯಗಳಿಂದಲೂ ಭಗವಂತನ ದಿವ್ಯಕ್ಷೇತ್ರಯಾತ್ರೆಗಳಿಂದಲೂ ತನ್ನ ಜೀವನವನ್ನು ಸಾರ್ಥಕಗೊಳಿಸುತ್ತಿದ್ದನು. ಒಮ್ಮೆ ಸರಸ್ವತೀನದಿಯ ದಂಡೆಯಮೇಲೆ ಯಜ್ಞಪುರುಷನಾದ ಶ್ರೀಕೃಷ್ಣನನ್ನು ಆರಾಧಿಸಿದನು. ಬಾಹ್ಯವಾದ ರಾಜಭೋಗಗಳನ್ನೆಲ್ಲಾ ಅನಿತ್ಯವೆಂದು ತಿಳಿದು ಇವುಗಳೆಲ್ಲದರಿಂದಲೂ ವಿರಕ್ತನಾದನು.

ಒಮ್ಮೆ ಅಂಬರೀಷನು ಶ್ರೀಕೃಷ್ಣಭಗವಂತನನ್ನು ಕುರಿತು ದ್ವಾದಶೀ ಪ್ರಧಾನವಾದ ಏಕಾದಶೀ (ಉಪವಾಸ) ವ್ರತವನ್ನು ಒಂದು ವರ್ಷ ಪೂರ್ತಿಯಾಗಿ ಕೈಗೊಂಡನು. ಭಗವಂತನನ್ನು ಪಂಚಾಮೃತಾಭಿಷೇಕಾದಿ- ಉಪಚಾರಗಳಿಂದ ಶ್ರದ್ಧಾವಂತನಾಗಿ ಆರಾಧಿಸಿ ಗೋದಾನಾದಿಗಳನ್ನು ಮಾಡಿದನು. ಆ ಗೋವುಗಳು ಸುಂದರವಾದ ವಸ್ತ್ರಾಭರಣಗಳಿಂದ ಶೋಭಿಸುತ್ತಿದ್ದವು. ಇದೇ ಸಂದರ್ಭದಲ್ಲಿ ದೂರ್ವಾಸಮುನಿಗಳು ಅತಿಥಿಯ ರೂಪದಲ್ಲಿ ರಾಜನ ಅರಮನೆಗೆ ಬಂದರು. ಮಹಾರಾಜನು ಆ ಮಹಾತ್ಮರನ್ನು ಸತ್ಕರಿಸಿ ಭೋಜನಮಾಡಬೇಕೆಂದು ಪ್ರಾರ್ಥಿಸಿದನು. ದೂರ್ವಾಸರು ರಾಜನ ಪ್ರಾರ್ಥನೆಯನ್ನು ಸ್ವೀಕರಿಸಿ ಅವಶ್ಯಕವಾದ ಆಹ್ನಿಕಕರ್ಮಗಳನ್ನು ಮಾಡುವ ಸಲುವಾಗಿ ನದಿಗೆ ಹೊರಟರು. ರಾಜನು (ಅಂಬರೀಷನು) ಕೈಕೊಂಡಿದ್ದ ನಿಯಮದಂತೆ ಆ ದಿನ ದ್ವಾದಶೀತಿಥಿಯಲ್ಲಿ ಅರ್ಧ ಮುಹೂರ್ತಕಾಲವು ಮಾತ್ರವೇ ಉಳಿದಿದ್ದಿತು. ದೂರ್ವಾಸರು ತಮ್ಮ ಕರ್ತವ್ಯ ಕರ್ಮಗಳನ್ನು ಪೂರೈಸಿಕೊಂಡು ಬರುವ ಸಂಭವವಿರಲಿಲ್ಲ.

ಆಗ ಅಂಬರೀಷನು ಬ್ರಾಹ್ಮಣರನ್ನು ಕರೆಯಿಸಿ ಅವರೊಡನೆ ಆ ಕುರಿತು ಚಿಂತಿಸತೊಡಗಿದನು. ''ಬ್ರಾಹ್ಮಣೋತ್ತಮರೆ, ದೂರ್ವಾಸಋಷಿಗಳನ್ನು ಬಿಟ್ಟು

ಪಾರಣೆಮಾಡುವದರಿಂದ ದೋಷವಿದೆ. ಹಾಗೆಯೇ ದ್ವಾದಶೀತಿಥಿಯು ಪೂರೈಸುವದರೊಳಗಾಗಿ ಪಾರಣೆಮಾಡದಿದ್ದರೂ ದೋಷವಿದೆ. ಈ ಸಮಯದಲ್ಲಿ ಯಾವ ರೀತಿಯಲ್ಲಿ ನಡೆದುಕೊಂಡರೆ ನನಗೆ ಒಳ್ಳೆಯದಾಗುತ್ತದೆ- ಎಂಬುದನ್ನು ತಿಳಿಸಿರಿ'' ಎಂದು ವಿಜ್ಞಾಪಿಸಿದನು.

ಹೀಗೆ ಸ್ವಲ್ಪ ಕಾಲದವರೆಗೆ ವಿಚಾರವಿನಿಮಯವಾದ ಅನಂತರ ರಾಜನೇ ಬ್ರಾಹ್ಮಣರಿಗೆ ತನ್ನ ನಿರ್ಣಯವನ್ನು ಹೀಗೆ ಹೇಳಿದನು :

**ಅಂಭಸಾ ಕೇವಲೇನಾಥ ಕರಿಷ್ಯೇ ವ್ರತಪಾರಣಮ್ ।**
**ಪ್ರಾಹುರಬ್ಭಕ್ಷಣಂ ವಿಪ್ರಾಃ ಅಶಿತಂ ನಾಶಿತಂ ಚ ತತ್ ॥**

''ಬ್ರಾಹ್ಮಣರೆ, ನೀರನ್ನು ಪ್ರಾಶನಮಾಡುವದು ಭೋಜನ ಮಾಡಿದಂತೆಯೂ ಆಗುತ್ತದೆ. ಹಾಗೂ ಭೋಜನಮಾಡದೆ ಇದ್ದಂತೆಯೂ ಆಗುತ್ತದೆ. ಈ ಶ್ರುತಿವಚನದಂತೆ ನಾನು ಕೇವಲ ಜಲಪ್ರಾಶನೆಯನ್ನು ಮಾಡಿ ಪಾರಣೆಯನ್ನು ಮುಗಿಸುತ್ತೇನೆ''. ಎಂದು ಹೇಳಿ ಅಂಬರೀಷನು ಜಲಪ್ರಾಶನಮಾಡಿ ಅಚ್ಯುತನನ್ನು ಧ್ಯಾನಿಸುತ್ತಾ ದೂರ್ವಾಸರ ಆಗಮನವನ್ನೇ ಎದುರುನೋಡುತ್ತಿದ್ದನು.

ಆಗ ದೂರ್ವಾಸರು ತಮ್ಮ ಕರ್ತವ್ಯಗಳನ್ನು ಪೂರೈಸಿಕೊಂಡು ಯಮುನಾನದಿಯ ತೀರದಿಂದ ಹಿಂದಿರುಗಿದರು. ರಾಜನು ಬಂದು ನಮಸ್ಕಾರಮಾಡುತ್ತಲಿರುವಾಗಲೇ ರಾಜನು ಜಲಪ್ರಾಶನದ ಮೂಲಕ ಪಾರಣೆಯನ್ನು ಮುಗಿಸಿದ್ದುದು ತಿಳಿದುಹೋಯಿತು. ಕೋಪಾವಿಷ್ಟರಾದ ದೂರ್ವಾಸರು ಹೀಗೆಂದರು: ''ಏನನ್ಯಾಯ, ಅತಿಥಿಯಾದ ನನಗೆ ಭೋಜನವನ್ನು ಮಾಡಿಸದೆ ಈ ರಾಜನು ಭೋಜನಮಾಡಿದ್ದಾನೆ. ಇವನ ಧರ್ಮವ್ಯತಿಕ್ರಮಕ್ಕೆ ಫಲವನ್ನು ನಾನು ಈಗ ತೋರಿಸುತ್ತೇನೆ'' ಎಂದು ಹೇಳುತ್ತಾ ತನ್ನ ಜಟೆಯಿಂದ ಒಂದು ಕೂದಲನ್ನು ಕಿತ್ತು ಮಾಟದ ಭೂತವನ್ನು ನಿರ್ಮಿಸಿ ಅಂಬರೀಷನ ಮೇಲೆ ಪ್ರಯೋಗಿಸಿದರು. ಆದರೆ ಶ್ರೀಮನ್ನಾರಾಯಣನು ಈ ಮೊದಲೇ ಅಂಬರೀಷನಿಗೆ ಸುದರ್ಶನಚಕ್ರವನ್ನು ದಯಪಾಲಿಸಿದ್ದನು. ಆ ಚಕ್ರವು ಕ್ಷಣಮಾತ್ರದಲ್ಲಿ ಆ ಶೂನ್ಯದೇವತೆಯನ್ನು ಭಸ್ಮಮಾಡಿಬಿಟ್ಟಿತು. ಅನಂತರ ಚಕ್ರವು ದೂರ್ವಾಸರನ್ನು ಅಟ್ಟಿಸಿಕೊಂಡು ಹೋಯಿತು. ಭಯಗೊಂಡ ದೂರ್ವಾಸರು ಎಲ್ಲಾ ದಿಕ್ಕುಗಳಿಗೂ ಸ್ವರ್ಗಾದಿಲೋಕಗಳಿಗೂ ಹರಿದಾಡಿದರು. ಎಲ್ಲಿಯೂ ರಕ್ಷಕರನ್ನು ಕಾಣದೆ

ದೂರ್ವಾಸರು ಬ್ರಹ್ಮನನ್ನೂ, ರುದ್ರನನ್ನೂ ಕ್ರಮವಾಗಿ ಮೊರೆಹೊಕ್ಕರು. ಅವರುಗಳು ಯಾರೂ ತಾವು ಸಮರ್ಥರಲ್ಲವೆಂದು ಕೈಬಿಟ್ಟರು. ಕಡೆಗೆ ಶ್ರೀಮಹಾವಿಷ್ಣುವನ್ನೇ ಮೊರೆಹೊಕ್ಕರೂ ಆ ಭಗವಂತನೂ ಆಶ್ರಯವನ್ನು ಕೊಡಲಾಗದೆ ಅಂಬರೀಷನ ಬಳಿಗೇ ಹೋಗುವಂತೆ ಆಜ್ಞಾಪಿಸಿದನು. ಆಗ ಅಂಬರೀಷನು ಸುದರ್ಶನಚಕ್ರಾಧಿದೇವತೆಗಳನ್ನು ಕುರಿತು ಹೀಗೆಂದು ಪ್ರಾರ್ಥಿಸಿದನು.

**ಸುದರ್ಶನ ನಮಸ್ತುಭ್ಯಂ ಸಹಸ್ರಾರಾಽಚ್ಯುತಪ್ರಿಯ ।**
**ಸರ್ವಾಸ್ತ್ರಘಾತಿನ್ ವಿಪ್ರಾಯ ಸ್ವಸ್ತಿ ಭೂಯಾ ಇಡಸ್ಪತೇ ॥**

''ಎಲೈ ಸುದರ್ಶನಚಕ್ರಾಧಿದೇವನೆ, ನಿನಗೆ ನಮಸ್ಕರಿಸುತ್ತೇನೆ. ಸಾವಿರ ಅರೆಕಾಲುಗಳಿಂದ ಕೂಡಿರುವವನೆ, ಅಚ್ಯುತನಿಗೆ ಪ್ರಿಯನಾದವನೆ, ಸಮಸ್ತವಾದ ಅಸ್ತ್ರ-ಶಸ್ತ್ರಗಳನ್ನೂ ವಿನಾಶಗೊಳಿಸುವ ಸಾಮರ್ಥ್ಯವನ್ನು ಹೊಂದಿರುವವನೆ, ಭೂಮಂಡಲಕ್ಕೆ ಒಡೆಯನೆ, ದಯಮಾಡಿ ಈ ಬ್ರಾಹ್ಮಣನಿಗೆ ಮಂಗಳವನ್ನು ಉಂಟುಮಾಡು. ನೀನೇ ಧರ್ಮಸ್ವರೂಪನಾಗಿರುವೆ. ಅಮೃತಸ್ವರೂಪನಾಗಿರುವೆ''- ಹೀಗೆ ಸುದರ್ಶನಚಕ್ರವನ್ನು ಪ್ರಾರ್ಥಿಸಲಾಗಿ ಅದು ಶಾಂತವಾಯಿತು. ಸುದರ್ಶನಚಕ್ರದ ತಾಪದಿಂದ ವಿಮುಕ್ತರಾದೊಡನೆಯೇ ದೂರ್ವಾಸರು ನೆಮ್ಮದಿಯನ್ನು ಹೊಂದಿದರು.

ಸುದರ್ಶನಚಕ್ರದಿಂದ ಭಯಗೊಂಡ ದೂರ್ವಾಸರು ಅಖಂಡ ಬ್ರಹ್ಮಾಂಡವನ್ನೂ ತ್ರಿಮೂರ್ತಿಗಳನ್ನೂ ಸಂದರ್ಶನಮಾಡಿ ಮತ್ತೆ ಅಂಬರೀಷ ಮಹಾರಾಜನ ಬಳಿಗೆ ಒಂದು ವರ್ಷದಷ್ಟು ಕಾಲದಲ್ಲಿ ಬಂದರು. ಅಂಬರೀಷನೂ ದುರ್ವಾಸರ ಪುನರಾಗಮವನ್ನೇ ನಿರೀಕ್ಷಿಸುತ್ತಿದ್ದು ಕೇವಲ ನೀರನ್ನೇ ಕುಡಿಯುತ್ತ ಒಂದು ವರ್ಷವನ್ನು ಕಳೆದನು. ದೂರ್ವಾಸರು ಬಂದಾಗಿ ಅವರಿಗೆ ಭೋಜನಮಾಡಿಸಿ ತಾನು ಮಿಕ್ಕು ಉಳಿದಿದ್ದ ಪವಿತ್ರವಾದ ಅನ್ನವನ್ನು ಸ್ವೀಕರಿಸಿದನು. ಅನಂತರ ಪರಬ್ರಹ್ಮ ಪರಮಾತ್ಮನಾದ ವಾಸುದೇವ ಭಗವಂತನಲ್ಲಿ ತನ್ನ ಭಕ್ತಿಭಾವವನ್ನು ಬಹಳವಾಗಿ ಬೆಳೆಯಿಸಿಕೊಂಡನು. ಬಳಿಕ ತನಗೆ ಸಮಾನಗುಣಶೀಲರಾದ ಮಕ್ಕಳಿಗೆ ರಾಜ್ಯಭಾರವನ್ನು ಒಪ್ಪಿಸಿ ವನವಾಸಕ್ಕೆ ಹೊರಟುಹೋದನು. ಅಲ್ಲಿ ಧೀರನಾದ ಅಬಂರೀಷಮಹಾರಾಜನು ಶ್ರೀಭಗವಂತನಾದ ವಾಸುದೇವನಲ್ಲಿ ತನ್ನ ಮನಸ್ಸನ್ನು ಲೀನಗೊಳಿಸಿ ಗುಣತ್ರಯರೂಪವಾದ ಸಂಸಾರದಿಂದ ಬಿಡುಗಡೆಹೊಂದಿದನು.

ಶುಕಮಹಾಮುನಿಗಳು ''ಪರೀಕ್ಷಿತಮಹಾರಾಜ, ಇದು ಅಂಬರೀಷ ಮಹಾರಾಜನ ಪುಣ್ಯತಮವಾದ ಆಖ್ಯಾನವಾಗಿದೆ. ಈ ಆಖ್ಯಾನವನ್ನು ಸಂಕೀರ್ತನೆ ಮಾಡುವವರೂ ಸ್ಮರಿಸುವವರೂ ಅಂಬರೀಷನಂತೆ ಭಗವದ್ಭಕ್ತರೇ ಆಗುತ್ತಾರೆ-'' ಹೀಗೆಂದು ಕಥಾಶ್ರವಣಮಾಡಿಸಿ ವಿಶ್ರಾಂತರಾದರು.

* * * * *

## 25. ದೇವತೆಗಳು ಮಾಡಿದ ವಿಷ್ಣುಸ್ತುತಿ

**ಸತ್ಯವ್ರತಂ ಸತ್ಯಪರಂ ತ್ರಿಸತ್ಯಂ**
**ಸತ್ಯಸ್ಯ ಯೋನಿಂ ನಿಹಿತಂ ಚ ಸತ್ಯೇ ।**
**ಸತ್ಯಸ್ಯ ಸತ್ಯಂ ಋತಸತ್ಯನೇತ್ರಂ**
**ಸತ್ಯಾತ್ಮಕಂ ತ್ವಾಂ ಶರಣಂ ಪ್ರಪನ್ನಾಃ ॥**

**ಶ್ರೀ ಮದ್ಭಾಗವತ 10-2-26**

(ಬ್ರಹ್ಮಾದಿದೇವತೆಗಳು ದೇವಕೀಗರ್ಭಸ್ಥನಾಗಿದ್ದ ಶ್ರೀಮನ್ನಾರಾಯಣನನ್ನು ಹೀಗೆ ಸ್ತುತಿಸಿದರು.) ''ಎಲೈ ಸತ್ಯಾತ್ಮಕನಾದ ಭಗವಂತನೆ, ನೀನು ಸತ್ಯನಿಷ್ಠನು. ಸದಾ ಕಾಲವೂ ಸತ್ಯದ ಪರವಾಗಿರುವವನು. (ಭೂತ-ಭವಿಷ್ಯ- ವರ್ತಮಾನ) ತ್ರಿಕಾಲದಲ್ಲಿಯೂ ಕಡಿವಡೆಯದ ಸತ್ಯಸ್ವರೂಪನೇ ಆಗಿರುವೆ. (ಇನ್ನು) ಸತ್ಯಕ್ಕೆ ಆಶ್ರಯನಾಗಿರುವೆ. ಹಾಗೂ ಸತ್ಯದಲ್ಲಿಯೇ ನೆಲೆನಿಂತಿರುವೆ. ಸತ್ಯದ ಸತ್ಯ- ಎಂದರೆ ಪರಮಾರ್ಥಸತ್ಯನೇ ಆಗಿರುವೆ. ಸತ್ಯವೆಂಬುದು ನಿನ್ನ ಕಣ್ಣು(ಗಳಾಗಿ)ರುವವು. (ಇಂಥ) ಸತ್ಯಸ್ವರೂಪನಾದ ನಿನ್ನನ್ನು ನಾವು ಶರಣವುಹೊಂದಿರುತ್ತೇವೆ.

(ಜಗನ್ಮಾತೆಯಾದ ದೇವಕಿಯ ಗರ್ಭದಲ್ಲಿ ಶ್ರೀ ಭಗವಂತನು ನೆಲೆಸಿದ್ದು ಕೃಷ್ಣಾವತಾರವನ್ನು ಮಾಡುವ ಮುಂಚೆ ದೇವತೆಗಳೆಲ್ಲರೂ ದೇವಕಿಯನ್ನು ಸಂದರ್ಶಿಸಿ ಸ್ತುತಿಸಿದ ಶ್ಲೋಕವಿದು.)

### ಕೃಷ್ಣಾವತಾರ

ಭಗವಂತನ ದಶಾವತಾರಗಳಲ್ಲಿ ಕೃಷ್ಣಾವತಾರವು ಪೂರ್ಣವಾದುದು.

ಮತ್ಸ್ಯಾದಿ ರಾಮಾವತಾರದವರೆಗಿನ ಏಳು ಅವತಾರಗಳು ಅಂಶಾವತಾರಗಳೆಂದು ಪ್ರಸಿದ್ಧವಾಗಿವೆ. ಅನಂತರ ಭಗವಂತನು ಧರಿಸಿದ ಕೃಷ್ಣಾವತಾರವು ಪೂರ್ಣಾವತಾರ ವಾಗಿದೆ. ಶ್ರೀಮನ್ನಾರಾಯಣನು ತಾನೇ ತನ್ನಪೂರ್ಣ ಜ್ಞಾನ-ಶಕ್ತಿ-ಬಲ- ಐಶ್ವರ್ಯ-ವೀರ್ಯ-ತೇಜಸ್ಸುಗಳೆಂಬ ಆರು ಗುಣಗಳಿಂದ ಸಂಪನ್ನನಾಗಿ ಕೃಷ್ಣಾವತಾರದಲ್ಲಿ ತನ್ನ ಮಹಿಮೆಯನ್ನು ಪ್ರಕಟಿಸಿರುತ್ತಾನೆ. ಆದ್ದರಿಂದ ವೇದವ್ಯಾಸರು ''ಕೃಷ್ಣಸ್ತು ಭಗವಾನ್ ಸ್ವಯಮ್'' ಎಂದು ಉದ್ಘೋಷಿಸಿರುತ್ತಾರೆ. ಈಗ ಕೃಷ್ಣಾವತಾರವನ್ನು ಶ್ರದ್ಧಾಭಕ್ತಿಗಳ ಆಧಾರದಿಂದ ಅನುಸಂಧಾನಮಾಡೋಣ.

ಶ್ರೀ ಶುಕಮಹಾಮುನಿಗಳು ಪರೀಕ್ಷಿತನನ್ನು ಕುರಿತು ಈಗ ಕಥಾರಂಭವನ್ನು ಮಾಡುತ್ತಾರೆ. ''ಮಹಾರಾಜ, ಹಿಂದೆ ಯದುವಂಶದಲ್ಲಿ ಉಗ್ರಸೇನನೆಂಬ ರಾಜನಿದ್ದನು. ಅವನು ಮಥುರಾನಗರಿಯಲ್ಲಿ ವಾಸಮಾಡುತ್ತಿದ್ದು ಮಥುರಾ-ಉಗ್ರಸೇನನ ರಾಜಧಾನಿಯಾಗಿತ್ತು. ಶೂರಸೇನನ ಪುತ್ರನಾದ ವಸುದೇವನು ಅವನ ಮಗಳಾದ ದೇವಕಿ- ಎಂಬ ಕನ್ಯೆಯನ್ನು ವಿವಾಹಮಾಡಿಕೊಂಡು ತನ್ನ ಅರಮನೆಗೆ ಹೊರಡಲು ರಥದಲ್ಲಿ ಕುಳಿತನು. ಕಂಸನೇ ರಥವನ್ನು ನಡೆಯಿಸುತ್ತಿದ್ದನು. ಆಗ ಒಂದು ಆಕಾಶವಾಣಿಯು ಕಂಸನನ್ನು ಸಂಬೋಧಿಸಿ ''ಮೂರ್ಖನೆ, ನೀನು ಸಂಭ್ರಮದಿಂದ ಕರೆದೊಯ್ಯುತ್ತಿರುವ ನಿನ್ನ ತಂಗಿಯ ಎಂಟನೆಯ ಗರ್ಭದಲ್ಲಿ ಹುಟ್ಟುವ ಶಿಶುವು ನಿನಗೆ ಮೃತ್ಯುವಾಗುತ್ತದೆ' ಎಂದಿತು. ಇದನ್ನು ಕೇಳಿ ಕಂಸನು ಕುಪಿತನಾದನು. ವಸುದೇವ ದೇವಕಿಯರನ್ನೇ ಕೊಲ್ಲಲು ಉದ್ಯುಕ್ತನಾಗಿ ಸೆರೆಯಲ್ಲಿಟ್ಟನು. ಆಗ ವಸುದೇವನು ಕಂಸನನ್ನು ಕುರಿತು 'ದೇವಕಿಯಿಂದ ನಿನಗೆ ಮರಣಭಯವಿಲ್ಲ, ಅನಂತರ ದೇವಕಿಯ ಪುತ್ರನಿಂದ ಮೃತ್ಯುಭಯವಿರುವದರಿಂದ ಆ ದೇವಕಿಗೆ ಪುತ್ರರಾಗಿ ಜನಿಸುವ ಮಕ್ಕಳನ್ನೆಲ್ಲ ನಿನಗೆ ಅರ್ಪಿಸುತ್ತೇನೆ'- ಎಂದು ಹೇಳಿ ಸಮಾಧಾನಗೊಳಿಸಿದನು.

ಸ್ವಲ್ಪಕಾಲದ ಅನಂತರ ದೇವಕಿಯು ವಸುದೇವನೊಡನೆ ವಿಹರಿಸುತ್ತಿದ್ದು ಗರ್ಭಧಾರಣೆಮಾಡಿದಳು. ಮೊದಲನೆಯ ಮಗು ಜನಿಸಿದಾಗ ವಸುದೇವನು ಆ ಶಿಶುವನ್ನು ಕಂಸನಿಗೆ ಒಪ್ಪಿಸಿದನು. ಆಗ ಕಂಸನು ಎಂಟನೆಯ ಗರ್ಭದಲ್ಲಿ ಜನಿಸುವ ಮಗುವಿನಿಂದ ತನಗೆ ಮೃತ್ಯುಭಯವಿರುವದರಿಂದ ಈ ಮಗುವನ್ನು ಕೊಲ್ಲಲಾರೆನೆಂದು ಕೈಬಿಟ್ಟನು. ಅನಂತರ ಮತ್ತೆ ಯೋಚಿಸಿ ಈ ಮಕ್ಕಳೂ ನನಗೆ ಮೃತ್ಯುವಾಗಬಲ್ಲರು ಎಂದು ಚಿಂತಿಸಿರುವ ಆರು ಮಕ್ಕಳನ್ನು ಕೊಂದನು. ಏಳನೇಯಮಗುವು ಪ್ರಸವಕ್ಕೆ

ಮೊದಲೇ ಗರ್ಭದಿಂದ ಜಾರಿ ಗೋಕುಲದಲ್ಲಿ ಬೆಳೆಯಿತು. ಸಂಕರ್ಷಣ ಅಥವಾ ಬಲರಾಮನೆಂದು ಪ್ರಸಿದ್ಧವಾಯಿತು. ಕೆಲವು ಕಾಲಾನಂತರ ದೇವಕಿಯು ಎಂಟನೆಯ ಗರ್ಭವನ್ನು ಧರಿಸಲಾಗಿ ಆ ಪ್ರಸವಕಾಲವನ್ನೇ ನಿರೀಕ್ಷಿಸುತ್ತಾ ದೇವಕೀ-ವಸುದೇವರುಗಳನ್ನು ಸೆರೆಯಲ್ಲಿಟ್ಟು ಕಾಯುತ್ತಿದ್ದನು.

ಭಗವಂತನು ಸತ್ಯಸಂಕಲ್ಪನು. ಅವನ ನಿರ್ಣಯಗಳನ್ನು ಯಾರೂ ಮೀರುವಂತಿಲ್ಲ. ಅದರಂತೆ ದೇವಕಿಯ ಎಂಟನೆಯ ಗರ್ಭದಲ್ಲಿ ಶ್ರೀಮನ್ನಾರಾಯಣನೇ ಅವತಾರ ಮಾಡಲು ನಿಶ್ಚಯಿಸಿದನು. ದುಷ್ಟನಿಗ್ರಹ, ಶಿಷ್ಟಪರಿಪಾಲನೆಗಳೇ ಅವನ ಉದ್ದೇಶವಾಗಿತ್ತು. ಅದರಂತೆ ದೇವಕೀದೇವಿಯ ಗರ್ಭದಲ್ಲಿ ಶ್ರಾವಣ ಬಹುಳ ಅಷ್ಟಮೀ ರೋಹಿಣೀ ನಕ್ಷತ್ರದಲ್ಲಿ ಮಧ್ಯರಾತ್ರಿಯಲ್ಲಿ ಭಗವಂತನು ಅವತರಸಿದನು. ವಸುದೇವನು ಶಿಶುರೂಪದಿಂದ ಪ್ರತ್ಯಕ್ಷನಾದ ನಾರಾಯಣನನ್ನು ನೋಡಿ ಸ್ತುತಿಮಾಡಲಾರಂಭಿಸಿದನು. ಆಗ ಭಗವಂತನು ತನ್ನನ್ನು ನಂದಗೋಕುಲಕ್ಕೆ ಕರೆದುಕೊಂಡು ಹೋಗಬೇಕೆಂದು ಸೂಚಿಸಿದನು. ಅದರಂತೆ ವಸುದೇವನು ನಂದಗೋಕುಲಕ್ಕೆ ಹೋಗಿ, ನಂದಗೋಪನೆಂಬ ಗೋಪಾಲಕನ ಪತ್ನಿಯು ಆಗ ತಾನೆ ಪ್ರಸವಿಸಿದ್ದ ಹೆಣ್ಣುಮಗುವನ್ನು ತಾನು ಸ್ವೀಕರಿಸಿ ತನ್ನ ಗಂಡುಶಿಶುವನ್ನು ಯಶೋದೆಯ ಮಗ್ಗುಲಲ್ಲಿಟ್ಟನು. ಆ ಮಗುವು ರೋಧನಮಾಡಿದಾಗ ಎಲ್ಲರೂ ನೋಡಲು ಸ್ತ್ರೀಶಿಶುವು ಕಂಡುಬಂದಿತು. ಅನಂತರ ಒಂದು ಚಮತ್ಕಾರವು ನಡೆಯಿತು. ಕೆಲವೇ ನಿಮಿಷಗಳಲ್ಲಿ ಆಕಾಶವಾಣಿಯು ಹೀಗೆ ನುಡಿಯಿತು. ''ನಾರಾಯಣ ಭಗವಂತನೇ ಗಂಡುಶಿಶುರೂಪದಲ್ಲಿ ನಂದಗೋಕುಲದಲ್ಲಿರುತ್ತಾನೆ. ಈಗಲಾದರೂ ಆ ಭಗವಂತನಿಗೆ ಶರಣಾಗಿ ಕೃತಾರ್ಥರಾಗಿರಿ'' ಎಂದು ಹೇಳಿ ಅಂತರ್ಧಾನವಾಯಿತು.

ಮುಂದೆ ನಂದಗೋಕುಲವು ಭಗವಂತನ ವಾಸಸ್ಥಾನವಾಯಿತು. ಆ ಕ್ಷೇತ್ರದ ಯಜಮಾನನಾದ ನಂದಗೋಪನು ತನಗೆ ಗಂಡುಮಗುವಾಗಿದೆಯೆಂದೇ ಭಾವಿಸಿ ಬ್ರಾಹ್ಮಣರನ್ನು ಕರೆಯಿಸಿ ಜಾತಕರ್ಮಾದಿ ಸಂಸ್ಕಾರಗಳನ್ನು ನೆರವೇರಿಸಿದನು. ಇತ್ತಲಾಗಿ ವಸುದೇವನು ನಂದಗೋಪನು ಇದ್ದ ಗೋಕುಲಕ್ಕೆ ಬಂದನು. ಆಗ ನಂದಗೋಪನು ಅತ್ಯಂತ ಪ್ರೇಮದಿಂದ ವಸುದೇವನನ್ನು ಬರಮಾಡಿಕೊಂಡು ಸತ್ಕರಿಸಿದನು. ಆಗ ವಸುದೇವನು ಹೀಗೆಂದನು: ''ಸಹೋದರ, ನಿನಗೆ ಇದುವರೆಗೆ ಯಾವ ಸಂತಾನವೂ ಇರಲಿಲ್ಲ. ಸೌಭಾಗ್ಯದ ನಿಮಿತ್ತ ಈಗ ಸಂತಾನವಾಗಿದೆ- ಎಂದರೆ ಇಬ್ಬರು ಗಂಡು ಮಕ್ಕಳು ದೊರಕಿರುತ್ತಾರೆ. ಇದರಿಂದ ನಮಗೂ ಆನಂದವಾಗಿದೆ''- ಎಂದು ನುಡಿದನು.

ಆಗ ನಂದಗೋಪನು ಹೀಗೆಂದನು: ''ಅಣ್ಣ, ವಸುದೇವ, ನಿನ್ನ ಮನಸ್ಸಿನ ಸಂಕಟವನ್ನು ಊಹಿಸಲೂ ಸಾಧ್ಯವಿಲ್ಲ. ಕಂಸನು ದೇವಕಿಯ ಗರ್ಭದಲ್ಲಿ ಹುಟ್ಟಿದ ಆರು ಮಕ್ಕಳನ್ನು ಕೊಂದುಹಾಕಿದನು. ಪ್ರಾಣಿಗಳ ಸುಖದುಃಖಗಳು ಅದೃಷ್ಟವನ್ನೇ ಅವಲಂಬಿಸಿವೆ. ಅದೃಷ್ಟವೆಂಬುದು ಪ್ರಾಣಿಗಳ ಏಕಮಾತ್ರ ಆಶ್ರಯವಾಗಿವೆ. ಜೀವನದ ಸುಖದುಃಖಗಳಿಗೆ ಅದೃಷ್ಟವೇ ಕಾರಣವೆಂದು ಯಾವನು ತಿಳಿದಿರುವನೋ ಅಂಥವನು ಸುಖವು ಒದಗಿಬಂದರೂ ಕಷ್ಟವು ಬಂದರೂ ವಿಮೋಹಿತನಾಗುವದಿಲ್ಲ.''

''ನಂದ, ವಾರ್ಷಿಕವಾಗಿ ಕೊಡಬೇಕಾಗಿದ್ದ ಕಪ್ಪಕಾಣಿಕೆಗಳನ್ನು ನೀನು ಕಂಸನಿಗೆ ಕೊಟ್ಟಯಿತು. ನಾವಿಬ್ಬರೂ ಕಲೆತು ಕುಶಲ ಪ್ರಶ್ನೆಗಳನ್ನು ಮಾಡಿಕೊಂಡೆವು.'' ಹೀಗೆಂದು ವಸುದೇವನು ನಂದಗೋಪನಿಗೆ ಹೇಳಿದನು. ಅನಂತರ ವಸುದೇವನು ಮಥುರಾನಗರಿಗೆ ಹಿಂದಿರುಗಿದನು. ಭಗವಂತನು ಕೃಷ್ಣನೆಂಬ ಹೆಸರಿನಿಂದ ನಂದಗೋಕುಲದಲ್ಲಿ ಬೆಳೆಯುತ್ತಿದ್ದನು.

* * * * *

## 26. ಶ್ರೀಕೃಷ್ಣಭಗವಂತನ ಮಹಿಮೆ

**ಬಹೂನಿ ಸನ್ತಿ ನಾಮಾನಿ ರೂಪಾಣಿ ಚ ಸುತಸ್ಯ ತೇ।**
**ಗುಣಕರ್ಮಾನುರೂಪಾಣಿ ತಾನ್ಯಹಂ ವೇದ ನೋ ಜನಾಃ॥**
**ಏಷ ವಃ ಶ್ರೇಯ ಆಧಾಸ್ಯತ್ ಗೋಪಗೋಕುಲನಂದನಃ।**
**ಅನೇನ ಸರ್ವ ದುರ್ಗಾಣಿ ಯೂಯಮಂಜಸ್ತರಿಷ್ಯಥ॥**

**ಶ್ರೀ ಮದ್ಭಾಗವತ 10-8-15, 16**

ಗರ್ಗಮಹಾಮುನಿಗಳು ಗೋಕುಲದ ಯಜಮಾನನಾದ ನಂದಗೋಪಾಲನನ್ನು ಕುರಿತು ಹೀಗೆಂದರು: ''ಎಲೈ, ನಂದಗೋಪನೆ, ಈ ನಿನ್ನ ಸಾಕುಮಗನಾದ ಕೃಷ್ಣನು ಸಾಮಾನ್ಯವ್ಯಕ್ತಿಯಲ್ಲ. ಇವನು ಶ್ರೀಮನ್ನಾರಾಯಣನ ಅವತಾರವೇ ಆಗಿದ್ದಾನೆ. ಇವನ ನಾಮರೂಪಗಳು ಅಪರಿಮಿತವಾಗಿವೆ. ಗುಣಕರ್ಮಗಳಿಗೆ ಅನುರುಪವಾಗಿವೆ. ಇವನು ನಿಮಗೆ ಪರಮಶ್ರೇಯಸ್ಸನ್ನು ಉಂಟುಮಾಡಲಿದ್ದಾನೆ. ಇವನ ಸಾನ್ನಿಧ್ಯದಿಂದ ನೀವು ಎಲ್ಲಾ ಕಷ್ಟಗಳನ್ನೂ ದಾಟಬಲ್ಲಿರಿ.'' (ಹೀಗೆ ಬಾಲಕೃಷ್ಣನ ನಿಜತತ್ತ್ವವನ್ನು ತಿಳಿಸಿದರು.)

(ಶ್ರೀಮನ್ನಾರಾಯಣನ ದಶಾವತಾರಗಳಲ್ಲಿ ಕೃಷ್ಣಾವತಾರವು ಪರಿಪೂರ್ಣವಾದುದು, ಜ್ಞಾನ, ಬಲ, ಐಶ್ವರ್ಯ, ವೀರ್ಯ, ತೇಜಸ್ಸುಗಳೆಲ್ಲವೂ ಶ್ರೀಕೃಷ್ಣನಲ್ಲಿ ತುಂಬಿತುಳುಕುತ್ತಿವೆ. ಭಗವಂತನಿಗೆ ಸರಿಸಮಾನರೇ ಯಾರೂ ಇಲ್ಲ. ಇನ್ನು ಅವನನ್ನು ಮೀರಿದವರು ಯಾರಿದ್ದಾರು? ಆದ್ದರಿಂದ ನಾವು ಶ್ರೀಕೃಷ್ಣನ ಭಕ್ತರಾಗೋಣ.)

## ರಾಮ-ಕೃಷ್ಣರ ಬಾಲಲೀಲೆಗಳು

ಶ್ರೀ ಶುಕಮಹಾಮುನಿಗಳು ಪರೀಕ್ಷಿತರಾಜನನ್ನು ಕುರಿತು ನಂದಗೋಕುಲದಲ್ಲಿ ಬಲರಾಮ ಕೃಷ್ಣರು ಪ್ರಕಟಿಸಿದ ಬಾಲಲೀಲೆಗಳನ್ನು ಹೇಳಲಾರಂಭಿಸಿದರು. ''ಮಹಾರಾಜ, ಬಲರಾಮ- ಕೃಷ್ಣರು ಕೆಲವು ದಿನಗಳಲ್ಲಿಯೇ ಅಂಬೆಗಾಲಿಟ್ಟುಕೊಂಡು ಗೋಕುಲದಲ್ಲೆಲ್ಲ ಆಟವಾಟಲಾರಂಭಿಸಿದರು. ರಾಮ-ಶ್ಯಾಮರಿಗೆ ಅವರ ತಾಯಿಯು ಕಾಲುಬಳೆಗಳನ್ನೂ ಗೆಜ್ಜೆಗಳನ್ನೂ ತೊಡಸಿ ಅಲಂಕರಿಸಿದಳು. ಗೋಕುಲದ ಧೂಳಿನ ಬೀದಿಯಲ್ಲಿ ಮಕ್ಕಳಿಬ್ಬರು ಅಂಬೆಗಾಲನ್ನು ಇಟ್ಟುಕೊಂಡು ಹೋಗುತ್ತಿರುವಾಗ ಝಣ-ಝಣ ಶಬ್ದವು ಕೇಳಿಬರುತ್ತಿದ್ದಿತು. ಆ ಗೆಜ್ಜೆಯ ಶಬ್ದವು ಮಕ್ಕಳಿಗೆ ಆನಂದವನ್ನುಂಟುಮಾಡುತ್ತಿತ್ತು. ರೋಹಿಣಿ- ಯಶೋದೆಯರಿಬ್ಬರೂ ಈ ಮಕ್ಕಳನ್ನು ಬಾಚಿ ತಬ್ಬಿಕೊಂಡು ಸ್ತನ್ಯಪಾನಮಾಡಿಸುತ್ತಿದ್ದರು. ನಡುನಡುವೆ ರಾಮ-ಕೃಷ್ಣರು ಕಿರುನಗೆಯನ್ನು ಪ್ರಕಟಗೊಳಿಸುತ್ತಾ ಗೋಪಿಯರನ್ನು ಆಕರ್ಷಿಸುತ್ತಿದ್ದರು.

ಶ್ರೀಕೃಷ್ಣನ ಬಾಲ್ಯಚಂಚಲತೆಯಿಂದ ಕೂಡದ ಆಟ-ಪಾಠಗಳು ಮನೋಹರವಾಗಿರುತ್ತಿದ್ದವು. ಆದರೂ ಕೆಲವು ಆಟಗಳ ತುಂಟತನವನ್ನು ತಡೆಯಲಾರದೆ ಗೋಪಿಯರು ಯಶೋದಾಮಾತೆಗೆ ದೂರು ಕೊಡುತ್ತಿದ್ದರು. ಇದರಿಂದ ಭಯಗೊಂಡವನಂತೆ ನಟಿಸುತ್ತಿದ್ದ ಶ್ರೀಕೃಷ್ಣನು 'ನಾನು ಕಳ್ಳನಲ್ಲ'- ಎಂದು ಯಶೋದೆಯ ಮುಂದೆ ಹೇಳಿದನು. ಆಗ ಮುದ್ದುಕೃಷ್ಣನ ಮುಖವನ್ನು ನೋಡಿ ಯಶೋದೆಯು ನಕ್ಕುಬಿಟ್ಟಳು.

ಮತ್ತೊಮ್ಮೆ ಗೋಪಿಯರು ಕೃಷ್ಣನು ಮಣ್ಣುತಿಂದನೆಂದು ಯಶೋದೆಗೆ ಹೇಳಲಾಗಿ ಆಕೆಯು 'ಮಣ್ಣನ್ನು ಏಕೆ ತಿಂದೆ? ಎಂದು ಕೇಳಲು ಕೃಷ್ಣನು 'ಅಮ್ಮ, ನಾನು ನಿಜವಾಗಿಯೂ ಮಣ್ಣನ್ನು ತಿನ್ನಲಿಲ್ಲ. ಬೇಕಾದರೆ ನೀನು ನನ್ನ ಬಾಯಿಯನ್ನು ನೋಡು' ಎಂದನು. ಆಗ ಯಶೋದೆಯು ಕೃಷ್ಣನ ಬಾಯನ್ನು ತೆರೆದು ನೋಡಲು

ಅಲ್ಲಿ ಬ್ರಹ್ಮಾಂಡಪ್ರಪಂಚವೇ ಕಾಣತೊಡಗಿತು. ಚರಾಚರಜಗತ್ತು ಅಲ್ಲಿ ಅಡಕವಾಗಿದ್ದುದನ್ನು ಆಕೆಯು ನೋಡಿದಳು. ಆಕಾಶ, ದಿಕ್ಕುಗಳು, ಪರ್ವತಗಳು, ದ್ವೀಪಗಳು, ಸಮುದ್ರಸಹಿತವಾದ ಭೂಮಂಡಲ, ವಾಯು, ವಿದ್ಯುತ್, ಅಗ್ನಿ, ಚಂದ್ರತಾರೆಗಳು, ಸಂಪೂರ್ಣವಾದ ಜ್ಯೋತಿರ್ಮಂಡಲ, ಜಲತೇಜಸ್ಸು, ಪವನ, ಆಕಾಶ, ರಸಾತಲವೇ ಮುಂತಾದ ಅಧೋಲೋಕಗಳು, ಅಧಿಷ್ಠಾನದೇವತೆಗಳಿಂದ ಕೂಡಿದ ಇಂದ್ರಿಯಗಳು, ಮನಸ್ಸು, ಪಂಚತನ್ಮಾತ್ರೆಗಳು, ಸತ್ತ್ವರಜಸ್ತಮೋಗುಣಗಳು- ಇವೆಲ್ಲವನ್ನೂ ಯಶೋದೆಯು ಶ್ರೀಕೃಷ್ಣನ ಬಾಯೊಳಗೆ ಕಂಡಳು. ಜೀವಾತ್ಮರು, ಕಾಲ, ಸ್ವಭಾವ, ಜನ್ಮಕ್ಕೆ ಕಾರಣವಾದ ಪಾಪಪುಣ್ಯಗಳು, ಕರ್ಮವಾಸನೆಗಳು, ಜೀವಾದಿಗಳಿಂದ ಭಿನ್ನಭಿನ್ನವಾದ ಜಗತ್ತು ಮತ್ತು ಅದರಲ್ಲಿಯೇ ಗೋಕುಲ, ಆ ಗೋಕುಲದಲ್ಲಿಯೇ ತಾನಿರುವದನ್ನು ಯಶೋದೆಯು ಅಲ್ಲಿ ನೋಡಿದಳು. ಯಶೋದೆಗೆ ಸಂಶಯ ವುಂಟಾಯಿತು. ''ನಾನೀಗ ಎಲ್ಲಿದ್ದೇನೆ? ಇದೇನು ಸ್ವಪ್ನವೆ, ಭಗವಂತನ ಮಾಯೆಯೆ? ನನ್ನ ಬುದ್ಧಿಗೆ ಏನಾದರೂ ಭ್ರಮವಣೆಯಾಗಿದೆಯೆ? ನನ್ನ ಮಗನಿಗೆ ಹುಟ್ಟಿದಾಗಲೇ ಯಾವದೋ ಯೋಗಸಿದ್ಧಿಯಾಗಿರಬೇಕು. ಆ ಯೋಗಮಾಯೆಯನ್ನೇ ಇವನು ನನಗೆ ತೋರಿಸುತ್ತಿರಬಹುದು. ಯಾವದು ತರ್ಕಕ್ಕೆ ಗೋಚರವಾಗುವದಿಲ್ಲವೋ, ಯಾವದು ಬುದ್ಧಿ, ಮನಸ್ಸು, ಕರ್ಮ ಮತ್ತು ವಾಕ್ಕುಗಳಿಗೆ ಸಿಲುಕದೋ, ಈ ಜಗತ್ತು ಯಾವದನ್ನಾಶ್ರಯಿಸಿರುವದೋ, ಯಾವದರಿಂದ ಈ ಜಗತ್ತು ವ್ಯಾವಹಾರಿಕವಾಗಿರು ವಂತೆ ತೋರುವದೋ ಅಂಥ ಅತ್ಯಂತಕಷ್ಟದಿಂದ ಭಾವಿಸಲ್ಪಡುವ ಪರಮಪದಕ್ಕೆ ನಮಸ್ಕಾರಗಳು.''

ಪರಮಾತ್ಮನ ಮಾಯೆಯಿಂದ ಬುದ್ಧಿಗೆಟ್ಟವಳಾಗಿ ''ನಾನು ನನ್ನದು'' ಎಂಬ ಅಹಂಕಾರದಿಂದ ತುಂಬಿಹೋಗಿದ್ದೇನೆ. ''ಇವನು ನನ್ನ ಪತಿ. ಇವನು ನನ್ನ ಮಗ, ನಾನು ಮಹಾಪತಿವ್ರತೆ, ಈ ಗೋಪೀಗೋಪಾಲಕರೆಲ್ಲರೂ ನನ್ನ ಸೇವಕರು. ಈ ಗೋಧನವೆಲ್ಲವೂ ನನ್ನದು''- ಮುಂತಾಗಿ ಅಹಂಕಾರಪಡುತ್ತಿದ್ದೇನೆ. ಇದಕ್ಕೆ ಭಗವಂತನ ಮಾಯೆಯೇ ಕಾರಣ. ಹೀಗೆ ಮಾಯೆಯ ಆವರಣವನ್ನು ಹೊದ್ದಿಸಿ ನನ್ನನು ಕುಮತಿಯನ್ನಾಗಿ ಮಾಡಿಬಿಟ್ಟಿರುವ ಪರಮಾತ್ಮನೇ ನನಗೆ ಅನನ್ಯ ಶರಣ್ಯನು.''

ಪರೀಕ್ಷಿತನೆ, ಶ್ರೀಕೃಷ್ಣನ ನಿಜತತ್ತ್ವವನ್ನು ತಿಳಿದ ಯಶೋದಾಮಾತೆಯು ಹೀಗೆ ಪ್ರಾರ್ಥಿಸುತ್ತಿರಲಾಗಿ ಸರ್ವವ್ಯಾಪಿಯಾದ, ಪ್ರಭುವಾದ ಭಗವಂತನು ಪುನಃ

ಪುತ್ರಸ್ನೇಹಮಯವಾದ ವೈಷ್ಣವೀಮಾಯೆಯನ್ನು ಅವಳ ಹೃದಯದಲ್ಲಿ ಪ್ರಕಾಶನಗೊಳಿಸಿದನು. ಅದರಿಂದ ಆವೃತಳಾದೊಡನೆಯೇ ಯಶೋದಾಮಾತೆಗೆ ತನ್ನ ಮಗನ ಬಾಯಲ್ಲಿ ಅಖಂಡಬ್ರಹ್ಮಾಂಡವನ್ನು ಕಂಡಿದ್ದು, ಅವನು ಯೋಗೇಶ್ವರ ನಿರಬಹುದೆಂದು ತರ್ಕಿಸಿದ್ದು, ಮತ್ತು ಅವನೇ ಪರಮಾತ್ಮನೆಂದು ಭಾವಿಸಿ ಸ್ತೋತ್ರಮಾಡಿದ್ದು- ಎಲ್ಲವೂ ಮರೆತೇಹೋಯಿತು. ಮುದ್ದುಕೃಷ್ಣನನ್ನು ಒಡನೆಯೇ ತೊಡೆಯ ಮೇಲೆ ಮಲಗಿಸಿಕೊಂಡು ಮುದ್ದಿಸಿದಳು. ಹಿಂದಿನಂತೆಯೇ ಅವಳ ಹೃದಯದಲ್ಲಿ ಪ್ರೇಮದ ಸಮುದ್ರವು ಉಕ್ಕಿಬರಲಾರಂಭಿಸಿತು. ಸಮಸ್ತವೇದಗಳೂ ಉಪನಿಷತ್ತುಗಳೂ, ಸಾಂಖ್ಯ-ಯೋಗಶಾಸ್ತ್ರಗಳೂ, ಭಕ್ತಜನರೂ ಯಾವ ಪರಮಪುರುಷನ ಮಾಹಾತ್ಮ್ಯೆಯನ್ನು ನಿರಂತರವಾಗಿ ಹೊಗಳಿ ಹಾಡುವರೋ ಅಂಥ ಅಪ್ರಮೇಯನಾದ, ಅನಂತನಾದ, ಅಪಾರನಾದ ಶ್ರೀಹರಿಯನ್ನು ಯಶೋದೆಯು ತನ್ನ ಮಗನೆಂದೇ ಭಾವಿಸಿದಳು.

ಆಗ ಪರೀಕ್ಷಿತನು 'ಪೂಜ್ಯರೆ, ಭಗವಂತನನ್ನು ಪುತ್ರನನ್ನಾಗಿ ಪಡೆಯಲು ಮತ್ತು ಮುದ್ದುಕೃಷ್ಣನ ಲೀಲಾವಿನೋದಗಳನ್ನು ನೋಡಲು ನಂದಗೋಪನು ಎಂಥ ಅದ್ಭುತವಾದ ಮಂಗಳಮಯವಾದ ಸಾಧನೆಯನ್ನು ಮಾಡಿದ್ದನು? ಇದನ್ನು ದಯಮಾಡಿ ಹೇಳಿರಿ' ಎಂದು ಶ್ರೀ ಶುಕಮಹಾಮುನಿಗಳನ್ನು ಕೇಳಿದನು.

ಆಗ ಶುಕಮಹಾಮುನಿಗಳು ಹೀಗೆಂದರು: ''ಪರೀಕ್ಷಿತನೆ, ನಂದಗೋಪನು ಹಿಂದಿನ ಜನ್ಮದಲ್ಲಿ ಒಬ್ಬ ಶ್ರೇಷ್ಠ ವಸುವಾಗಿದ್ದನು. ಅವನ ಹೆಸರು 'ದ್ರೋಣ' ಎಂದಾಗಿತ್ತು. ಅವನ ಪತ್ನಿಯ ಹೆಸರು ''ಧರಾ''. ಭೂಮಿಯಲ್ಲಿ ಗೋಪ-ಗೋಪಿಯ ರಾಗಿ ಹುಟ್ಟಬೇಕೆಂಬ ಬ್ರಹ್ಮನ ಆದೇಶವನ್ನು ಪರಿಪಾಲಿಸುವ ಇಚ್ಛೆಯಿಂದಿದ್ದ ದ್ರೋಣನು ಬ್ರಹ್ಮನಲ್ಲಿ ಹೀಗೆ ಪ್ರಾರ್ಥಿಸಿಕೊಂಡನು. ''ಚತುರ್ಮುಖನೆ, ನಿನ್ನ ಆಜ್ಞೆಯಂತೆ ನಾವು ಭೂಮಿಯಲ್ಲಿ ಹುಟ್ಟಿದಾಗ ಅನನ್ಯವಾದ, ಪ್ರೇಮಮಯವಾದ ಗಾಢವಾದ ಭಕ್ತಿಯು ಜಗದೀಶ್ವರನಾದ ಶ್ರೀಹರಿಯಲ್ಲಿ ಸ್ಥಿರವಾಗಿ ನಮ್ಮಲ್ಲಿ ನೆಲೆಸುವಂತೆ ಅನುಗ್ರಹಿಸು''- ಎಂದು ಕೇಳಿಕೊಂಡರು. ಆಗ ಬ್ರಹ್ಮನು ಅವರಿಗೆ ವರಪ್ರದಾನ ಮಾಡಿದನು.

ಬ್ರಹ್ಮನ ಆದೇಶದಂತೆ ದ್ರೋಣನೆಂಬ ವಸುವು ವ್ರಜಸ್ಥಾನದಲ್ಲಿ ನಂದಗೋಪನಾಗಿ ಹುಟ್ಟಿದನು. ಅವನ ಪತ್ನಿಯು (ಧರೆಯು) ಗೋಕುಲದಲ್ಲಿಯೇ

ಹುಟ್ಟಿ 'ಯಶೋದಾ' ಎಂಬ ಹೆಸರಿನಿಂದ ಪ್ರಖ್ಯಾತಳಾದಳು. ವರವನ್ನು ಪಡೆದಿದ್ದ ಆ ದಂಪತಿಗಳಿಗೆ ಶ್ರೀಕೃಷ್ಣನೆಂಬ ದಿವ್ಯಶಿಶುವಿನ ಮೇಲೆ ನಿರತಿಶಯವಾದ ಪ್ರೀತಿಯುಂಟಾಯಿತು. ಬ್ರಹ್ಮದೇವರ ಮಾತುಗಳನ್ನು ಸಾರ್ಥಕಗೊಳಿಸುವದಕ್ಕಾಗಿ ಶ್ರೀಕೃಷ್ಣನು ಬಲರಾಮನೊಡನೆ ವ್ರಜ(ನಂದಗೋಕುಲ)ದಲ್ಲಿರುತ್ತಾ ತನ್ನ ಬಾಲಲೀಲೆಗಳಿಂದ ಯಶೋದಾ-ನಂದಗೋಪರುಗಳನ್ನು ಆನಂದಪೂರ್ಣರನ್ನಾಗಿ ಮಾಡುತ್ತಿದ್ದನು.

* * * * *

## 27. ಶ್ರೀಕೃಷ್ಣಭಗವಂತನ ನಾಮಮಹಿಮೆ

**ನ ಚಾನ್ತರ್ನ ಬಹಿರ್ಯಸ್ಯ ನ ಪೂರ್ವಂ ನಾಪಿ ಚಾಪರಮ್ ।**
**ಪೂರ್ವಾಪರಂ ಬಹಿಶ್ಚಾನ್ತರ್ಜಗತೋ ಯೋ ಜಗಚ್ಚ ಯಃ ॥**
**ತಂ ಮತ್ವಾऽತ್ಮಜಮವ್ಯಕ್ತಂ ಮರ್ತ್ಯಲಿಂಗಮಧೋಕ್ಷಜಮ್ ।**
**ಗೋಪೀಕೋಲೂಖಲೇ ದಾಮ್ನಾ ಬಬಂಧ ಪ್ರಾಕೃತಂ ಯಥಾ ॥**

**ಶ್ರೀ ಮದ್ಭಾಗವತ 10-9-13, 14**

ಸರ್ವಾತ್ಮನಾದವನಿಗೆ ಒಳ-ಹೊರಗೆಂಬುದಾಗಲಿ, ಹಿಂದೆ ಮುಂದೆಂಬುದಾಗಲಿ, ಆದಿ, ಅಂತ್ಯವೆಂಬುದಾಗಲಿ ಇಲ್ಲವೊ, ಯಾವನು ಜಗತ್ತಿನ ಸೃಷ್ಟಿಗೆ ಮೊದಲೂ ಪ್ರಲಯವಾದ ಮೇಲೂ ಇರುವವನೋ, ಜಗತ್ತಿನ ಒಳಗೂ ಹೊರಗೂ ಇರುವನೋ ಜಗತ್ತಿನ ರೂಪವೇ ಆಗಿರುವನೋ, ಅಂಥ ದೇವನನ್ನು ಯಶೋದೆಯು ತನ್ನ ಮಗನೆಂದೇ ಭಾವಿಸಿ ಅವನ ತುಂಟತನವನ್ನು ತಡೆಯಲು ಹಗ್ಗದಿಂದ ಒರಳಿಗೆ ಕಟ್ಟಿಹಾಕಿದಳು.

**(ಭಗವಂತನ ಲೀಲಾಕಾರ್ಯಗಳನ್ನು ಯಶೋದೆಯು ತಿಳಿಯಲಾರದೆ ತನ್ನ ತಿಳಿವಳಿಕೆಗೆ ತಕ್ಕಂತೆ ಭಗವಂತನನ್ನು ತನ್ನ ಮಗುವೆಂದು ಭಾವಿಸಿ ಕಟ್ಟಿಹಾಕಿದಳು-ಎಂದಭಿಪ್ರಾಯ.)**

### ಭಗವಂತನ ದಿವ್ಯಲೀಲೆಗಳು

ಶ್ರೀ ಶುಕಮಹಾಮುನಿಗಳು ಪರೀಕ್ಷಿತರಾಜನನ್ನು ಕುರಿತು ಶ್ರೀಕೃಷ್ಣನ ದಿವ್ಯ

ಲೀಲೆಗಳನ್ನು ಮತ್ತೆ ಹೇಳಲಾರಂಭಿಸಿದರು. ''ಪರೀಕ್ಷಿತನೆ, ಮಹಾಮಹಾಯೋಗಿಗಳು ತಮ್ಮ ಕಠೋರವಾದ ತಪಸ್ಸಿನ ಮೂಲಕವಾಗಿ ಮನಸ್ಸನ್ನು ಏಕಾಗ್ರವಾಗಿ ಮತ್ತು ಶುದ್ಧವಾಗಿ ಮಾಡಿಕೊಂಡು ಚಿಂತಿಸಿದರೂ ಯಾವನಲ್ಲಿ ಮನಸ್ಸಿನಿಂದಲೂ ಪ್ರವೇಶಿಸಲು ಸಾಧ್ಯವಾಗುವದಿಲ್ಲವೋ ಅಂಥ ಪರಂಧಾಮನಾದ ಪರಮಾತ್ಮನನ್ನು ಹಿಡಯುವ ಸಲುವಾಗಿ ಯಶೋದೆಯು ಅಟ್ಟಿಸಿಕೊಂಡುಹೋದಳು. ಎಂಥ ಆಶ್ಚರ್ಯವಿದು? ಯಶೋದೆಯು ಮಗನ ಹಿಂದೆಯೇ ಓಡುತ್ತಿದ್ದಳು. ಅವಳಿಗೆ ಶರೀರಭಾರದಿಂದ ಬೇಗ ಓಡಲು ಆಗುತ್ತಿರಲಿಲ್ಲ, ಓಡುವಾಗ ಅವಳ ತಲೆಯಲ್ಲಿದ್ದ ಹೆರಳು ಬಿಚ್ಚಿಹೋಯಿತು. ಆದರಲ್ಲಿ ಮುಡಿದಿದ್ದ ಹೂವುಗಳು ಜಾರಿಬಿದ್ದವು. ಯಾವದನ್ನೂ ಲೆಕ್ಕಿಸದೆ ಓಡಿ ಹೋಗಿ ತನ್ನ ಮಗನನ್ನು ಹಿಡಿದುಬಿಟ್ಟಳು. ಆಗ ತನ್ನ ತಾಯಿಯ ಕಷ್ಟವನ್ನು ನೋಡಿ ಸಹಿಸಲಾರದೆ ಕೃಷ್ಣನು ತನ್ನ ವೇಗವನ್ನು ಕಡಿಮೆಮಾಡಿ ತಾನು ತಾಯಿಯ ಕೈಗೆ ಸಿಕ್ಕಿಬಿದ್ದನು. 'ಪೋರ, ಈಗ ನಿನ್ನನ್ನು ಏನು ಮಾಡುವೆನು ಗೊತ್ತೆ? ಎಂದು ಗದರಿಸಿದಳು. ಅಪರಾಧಿಯಾದ ಕೃಷ್ಣನು ಬಿಕ್ಕಿ ಬಿಕ್ಕಿ ಅಳುತ್ತಿದ್ದನು. ಅಳುತ್ತಾ ಕೈಗಳಿಂದ ಕಣ್ಣುಗಳನ್ನು ಒರೆಸಿಕೊಳ್ಳುತ್ತಿದ್ದನು. ಕಣ್ಣಿಗೆ ಹಚ್ಚಿದ್ದ ಕಾಡಿಗೆ (ಕಪ್ಪು) ಎಲ್ಲವೂ ಕೈಗೆ ಅಂಟಿಕೊಂಡಿತು. ತನ್ನ ಕೈಯಲ್ಲಿರುವ ಕೋಲನ್ನು ನೋಡಿ ತನ್ನ ಮಗನು ಭಯಪಟ್ಟಿರುವನೆಂದು ವಾತ್ಸಲ್ಯಮಯಿಯಾದ ತಾಯಿಯು ಭಾವಿಸಿ ಕೈಯಲ್ಲಿದ್ದ ಕೋಲನ್ನು ಬಿಸಾಡಿದಳು. ಕೃಷ್ಣನು ಪಕಪಕನೆ ನಕ್ಕುಬಿಟ್ಟನು. ಯಶೋದೆಯೂ ಮಗನೊಡನೆ ನಕ್ಕರೂ ಓಡಿಹೋಗುತ್ತಿರುವ ಪೋರನನ್ನು ತಡೆಹಿಡಿಯಲು ಏನಾದರೂ ಮಾಡಬೇಕೆಂದು ಯೋಚಿಸಿದಳು, ಅವನನ್ನು ಹಗ್ಗದಿಂದ ಕಟ್ಟಿಹಾಕಬೇಕೆಂದು ನಿಶ್ಚಯಿಸಿದಳು. ಪುತ್ರವತ್ಸಲೆಯಾಗಿದ್ದ ಅವಳಿಗೆ ತನ್ನ ಮಗನ ಪರಾಕ್ರಮವೆಷ್ಟು- ಎಂಬ ಅರಿವಿರಲಿಲ್ಲ.

ಸರ್ವಾತ್ಮನಾದ ಯಾವನಿಗೆ ಒಳಗು, ಹೊರಗು- ಎಂಬುದಾಗಲಿ, ಹಿಂದೆ-ಮುಂದೆ, ಎಂಬುದಾಗಲಿ, ಆದಿ-ಅಂತ್ಯವೆಂಬುದಾಗಲಿ ಇಲ್ಲವೋ, ಯಾವನು ಜಗತ್ತಿನ ಸೃಷ್ಟಿಗೆ ಮೊದಲೇ ಇದ್ದನೋ ಜಗತ್ತು ಪ್ರಲಯವಾದ ಮೇಲೂ ಇರುವನೋ, ಯಾವನು ಜಗತ್ತಿನ ಒಳಗೂ ಹೊರಗೂ ಇರುವನೋ, ಜಗತ್ತಿನ ನಾಮರೂಪಗಳೇ ಆಗಿರುವನೋ, ಯಾವನು ಇಂದ್ರಿಯಗಳಿಗೆ ಅಗೋಚರನೋ ಅವ್ಯಕ್ತನೋ, ಅಂಥ ಸತ್ಯಸ್ವರೂಪನಾದ ಪರಮಾತ್ಮನು ಮನುಷ್ಯನ ರೂಪವನ್ನು ಧಾರಣೆಮಾಡಿ ಅವತರಿಸಿರುವ ಕಾರಣ, ಯಶೋದಾದೇವಿಯು ಅವನನ್ನು ತನ್ನ ಮುದ್ದಿನ ಮಗನೆಂದೇ ಭಾವಿಸಿ ಅವನ ತುಂಟುತನವನ್ನು ತಡೆಯಲು (ಅವನನ್ನು) ಹಗ್ಗದಿಂದ ಒರಳಿಗೆ

ಕಟ್ಟಿಹಾಕಿಬಿಟ್ಟಳು. ಅಪರಾಧಿಯಾಗಿದ್ದ ತನ್ನ ಮಗನನ್ನು ಕಟ್ಟಿಹಾಕುವಾಗ ಒಂದು ಹಗ್ಗವನ್ನು ಮುದ್ದುಕೃಷ್ಣನ ಸೊಂಟದ ಸುತ್ತಲೂ ಸುತ್ತಿದಳು. ಎರಡು ಕಡೆಗಳನ್ನೂ ಸೇರಿಸಿ ಗಂಟುಹಾಕಲು ಸಾಧ್ಯವಾಗಲಿಲ್ಲ. ಹಗ್ಗವು ಎರಡು ಅಂಗುಲಗಳಷ್ಟು ಕಡಿಮೆಯಿದ್ದಿತು. ಪಕ್ಕದಲ್ಲಿಯೇ ಇದ್ದ ಮತ್ತೊಂದು ಹಗ್ಗವನ್ನು ಮೊದಲಿನ ಹಗ್ಗಕ್ಕೆ ಗಂಟುಹಾಕಿ ಪುನಃ ಸೊಂಟಕ್ಕೆ ಸುತ್ತಲು ಹೋದಳು. ಆಗಲೂ ಆ ಹಗ್ಗವು ಎರಡು ಅಂಗುಲಗಳಷ್ಟು ಸಾಲದಾಗಿ ಬಂದಿತು. ಪುನಃ ಮತ್ತೊಂದು ಹಗ್ಗವನ್ನು ಕೂಡಿಸಿದಳು. ಆಗಲೂ ಮುದ್ದುಕೃಷ್ಣನ ಸೊಂಟದ ಸುತ್ತಲೂ ಅದನ್ನು ಸುತ್ತಿಗಂಟು ಹಾಕಲು ಸಾಧ್ಯವಾಗಲೇ ಇಲ್ಲ. ಮನೆಯಲ್ಲಿದ್ದ ಹಗ್ಗಗಳನ್ನೆಲ್ಲ ಜೋಡಿಸಿ ಪ್ರಯತ್ನಿಸಿದಳು. ಆಗಲೂ ಸಾಧ್ಯವಾಗದೆ ಹೋಯಿತು. ಇದನ್ನು ನೋಡುತ್ತಿದ್ದ ಗೋಪಿಯರು ಪಕಪಕನೆ ನಗತೊಡಗಿದರು. ಯಶೋದೆಯೂ ನಕ್ಕಳು, ಪುಟ್ಟಸೊಂಟಕ್ಕೆ ಹಗ್ಗವನ್ನು ಬಿಗಿಯಲು ಸಾಧ್ಯವಾಗದೆ ಇದ್ದುದಕ್ಕಾಗಿ ಯಶೋದೆಯು ಆಶ್ಚರ್ಯಚಕಿತಳಾದಳು. ಭಗವಾನ್ ಶ್ರೀಕೃಷ್ಣನೂ ನಸುನಗುತ್ತಾ ನೋಡಿದನು. ತನ್ನ ತಾಯಿಯು ಬೆವರಿಹೋಗಿದ್ದು, ಬಹಳವಾಗಿ ಆಯಾಸಗೊಂಡಿದ್ದಳು. ಆಕೆಯ ಮುಡಿಯು ಬಿಚ್ಚಿ ಮುಡಿದಿದ್ದ ಹೂವಿನ ಮಾಲೆಯೆಲ್ಲವೂ ಕೆಳಕ್ಕೆ ಬೀಳುತ್ತಿದ್ದಿತ್ತು. 'ಅಯ್ಯೋ ಪಾಪ'- ಎನಿಸಿತು ದೇವನಿಗೆ. ಕರುಣಾಸಮುದ್ರನಾದ ಆ ಭಗವಂತನು ಒಡನೆಯೇ ಆಕೆಯ ಬಂಧನಕ್ಕೆ ಒಳಗಾದನು. ಯಶೋದೆಯು ಹಗ್ಗದಿಂದ ಮುದ್ದುಕೃಷ್ಣನನ್ನು ಬಿಗಿದು ಒರಳು ಕಲ್ಲಿಗೆ ಕಟ್ಟಿಯೇ ಬಿಟ್ಟಳು.

**ಏವಂ ಸಂದರ್ಶಿತಾ ಹ್ಯಂಗ ಹರಿಣಾ ಭೃತ್ಯವಶ್ಯತಾ ।**
**ಸ್ವವಶೇನಾಪಿ ಕೃಷ್ಣೇನ ಯಸ್ಯೇದಂ ಸೇಶ್ವರಂ ವಶೇ ॥**

ಪರೀಕ್ಷಿತಮಹಾರಾಜ, ಭಗವಂತನು ಸರ್ವಸ್ವತಂತ್ರನು- ಬ್ರಹ್ಮನೇ ಮೊದಲಾದವರಿಂದ ಕೂಡಿದ ಸಂಪೂರ್ಣಜಗತ್ತೂ ಅವನ ವಶದಲ್ಲಿಯೇ ಇದೆ. ಆದರೂ ವಾತ್ಸಲ್ಯಮಯಿಯಾದ ಯಶೋದಾದೇವಿಯಿಂದ ಬಂಧಿಸಲ್ಪಟ್ಟವನಾಗಿ ತಾನು ತನ್ನ ಪ್ರೀತಿಯ ಭೃತ್ಯರ ವಶನಾಗಿರುವೆನೆಂಬುದನ್ನು ಜಗತ್ತಿಗೇ ಸಾರಿರುತ್ತಾನೆ. ಭಗವಂತನ ಮಹಿಮೆಯು ಅಪಾರವಾದುದು.

**ನೇಮಂ ವಿರಿಂಚೋ ನ ಭವೋ ನ ಶ್ರೀರಪ್ಯಂಗಸಂಶ್ರಯಾ ।**
**ಪ್ರಸಾದಂ ಲೇಭಿರೇ ಗೋಪೀ ಯತ್ತತ್ ಪ್ರಾಪ ವಿಮುಕ್ತಿದಾತ್ ॥**

ಗೊಲ್ಲತಿಯಾದ ಯಶೋದೆಯು ಮುಕ್ತಿಪ್ರದನಾದ ಮುಕುಂದನಿಂದ ಯಾವ ಅನಿರ್ವಚನೀಯವಾದ ಕೃಪಾಪ್ರಸಾದವನ್ನು ಪಡೆದುಕೊಂಡಳೋ ಅಂಥ ಅನರ್ಘವಾದ ಕೃಪಾಪ್ರಸಾದವನ್ನು ಬ್ರಹ್ಮನೇ ಆಗಲಿ, ದೇವದೇವನಾದ ಶಂಕರನಾಗಲಿ, ವಕ್ಷಸ್ಥಲದಲ್ಲಿಯೇ ಕುಳಿತಿರುವ ಅರ್ಧಾಂಗಿಯಾದ ಲಕ್ಷ್ಮಿಯೇ ಆಗಲಿ- ಪಡೆದು ಕೊಳ್ಳಲು ಸಮರ್ಥರಾಗಲಿಲ್ಲ.

**ನಾಯಂ ಸುಖಾಪೋ ಭಗವಾನ್ ದೇಹಿನಾಂ ಗೋಪಿಕಾಸುತಃ।**
**ಜ್ಞಾನಿನಾಂ ಚಾತ್ಮಭೂತಾನಾಂ ಯಥಾ ಭಕ್ತಿಮತಾಮಿಹ॥**

ಗೋಪಿಕಾನಂದನನಾದ ಶ್ರೀಕೃಷ್ಣಭಗವಂತನು ಅನನ್ಯ ಪ್ರೇಮಿಗಳಾದ ಭಕ್ತ ಜನಕ್ಕೆ ಸುಲಭನಾಗಿರುವಂತೆ ದೇಹಾಭಿಮಾನಿಗಳಾದ ಕರ್ಮಕಾಂಡ ಅನುಷ್ಠಾನಪರರಿಗಾಗಲಿ, ತಪಸ್ವಿಗಳಿಗಾಗಲಿ ತನ್ನ ಸ್ವರೂಪಭೂತವಾದ ಜ್ಞಾನಿಗಳಿಗೇ ಆಗಲಿ, ಸುಲಭನಲ್ಲ. ಒರಳುಕಲ್ಲಿಗೆ ಕಟ್ಟಿದ ಅನಂತರ ಕಂದನ ಉಪಟಳವಿರದೆಂದು ಭಾವಿಸಿದ ಯಶೋದೆಯು ತನ್ನ ಗೃಹಕೃತ್ಯದಲ್ಲಿ ನಿರತಳಾದಳು. ತಾಯಿಗೆ ತನ್ನಕಡೆ ಗಮನವಿಲ್ಲದಿರುವದನ್ನು ಗಮನಿಸಿದ ಪ್ರಭುವು ಹಿಂದೆ ಯಕ್ಷರಾಜನಾದ ಕುಬೇರನ ಪುತ್ರರಾಗಿದ್ದು ಶಾಪದಿಂದ ಒಂದು ಜೋಡಿ ಮತ್ತಿಯ ಮರಗಳಾಗಿ ವ್ರಜಭೂಮಿ ಯಲ್ಲಿಯೇ ಹುಟ್ಟಿ ಬೆಳೆದಿದ್ದ ದೇವಕುಮಾರರಿಗೆ ಶಾಪವಿಮೋಚನೆಯನ್ನು ಮಾಡಬೇಕೆಂದು ನಿಶ್ಚಯಿಸಿದನು.

ಪರೀಕ್ಷಿತಮಹಾರಾಜ, ಕುಬೇರನ ಆ ಇಬ್ಬರು ಮಕ್ಕಳು ಅನುಕ್ರಮವಾಗಿ ನಲಕೂಬರ, ಮಣಿಗ್ರೀವ- ಎಂಬ ಹೆಸರುಗಳಿಂದ ವಿಖ್ಯಾತರಾಗಿದ್ದರು. ಅವರಲ್ಲಿ ಅಪಾರವಾದ ಐಶ್ವರ್ಯವಿದ್ದಿತು. ಮತ್ತು ಸೌಂದರ್ಯವಿದ್ದಿತು. ಅದರ ಜೊತೆಗೆ ಅಹಂಕಾರವೂ ಇದ್ದುದರಿಂದ ಮಹರ್ಷಿಗಳಾದ ನಾರದರ ಶಾಪಕ್ಕೆ ಗುರಿಯಾಗಿ ಅವರು ಒಂದು ಜೋಡಿ ಮತ್ತಿಯ ಮರಗಳಾಗಿ ಜನ್ಮತಾಳಿದ್ದರು.

* * * * *

## 28. ಶ್ರೀಕೃಷ್ಣಭಗವಂತನ ಸ್ತುತಿ

**ನಮಃ ಪರಮಕಲ್ಯಾಣ ನಮಃ ಪರಮಮಂಗಳ।**
**ವಾಸುದೇವಾಯ ಶಾಂತಾಯ ಯದೂನಾಂ ಪತಯೇ ನಮಃ॥**

ಶ್ರೀ ಮದ್ಭಾಗವತ 10-10, 36

ಪರಮಮಂಗಳ ಸ್ವರೂಪನೂ ಪರಮಶುಭ ಕಲ್ಯಾಣರೂಪನೂ ಆಗಿರುವ ಭಗವಂತನಿಗೆ ನಮಸ್ಕಾರಗಳು. (ಅವನು) ಸರ್ವಾಂತರ್ಯಾಮಿಯೂ ಶಾಂತನೂ ಯಾದವಕುಲದ ಯಜಮಾನನೂ ಆಗಿರುತ್ತಾನೆ. ಇಂಥ ಶ್ರೀವಾಸುದೇವನಿಗೆ ನಮಸ್ಕಾರಗಳು.

**(ಶ್ರೀಕೃಷ್ಣಭಗವಂತನು ಸಾಕ್ಷಾತ್ ನಾರಾಯಣನೇ ಆಗಿರುತ್ತಾನೆ. ಸಮಸ್ತಜಗತ್ತನ್ನೂ ವ್ಯಾಪಿಸಿರುತ್ತಾನೆ. ಸಮಸ್ತ ಜೀವರುಗಳ ಅಂತರಾತ್ಮನೇ ಆಗಿದ್ದಾನೆ. ಯಾದವ ವಂಶದ ಯಜಮಾನನೂ ಆಗಿರುತ್ತಾನೆ ಮತ್ತು ಜಗತ್ತಿನ ಸ್ಥಿತಿ(ಬಾಳುವಿಕೆ)ಗೆ ಯಜಮಾನ (ಒಡೆಯ) ನಾಗಿರುತ್ತಾನೆ ಇಂಥ ಜಗದೊಡೆಯನಾದ ವಾಸುದೇವನಿಗೆ ಅನಂತ ವಂದನೆಗಳು.)**

### ಕುಬೇರನ ಪುತ್ರರು ಮಾಡಿದ ವಿಷ್ಣುಸ್ತುತಿ

ಶ್ರೀಕೃಷ್ಣಭಗವಂತನ ಸಂಸ್ಪರ್ಶದಿಂದ ಶಾಪವಿಮುಕ್ತಿಯನ್ನು ಹೊಂದಿದ ನಲಕೂಬರ-ಮಣಿಗ್ರೀವರು ಶ್ರೀಕೃಷ್ಣನ ಬಳಿಗೆ ಬಂದು ಅವನ ಪಾದಾರವಿಂದಗಳಲ್ಲಿ ತಮ್ಮ ತಲೆಗಳನ್ನು ಇರಿಸಿ ನಮಸ್ಕರಿಸಿ ಕೈಜೋಡಿಸಿಕೊಂಡು ಶುದ್ಧಹೃದಯರಾಗಿ ಹೀಗೆ ಭಗವಂತನನ್ನು ಭಕ್ತಿಪೂರ್ಣರಾಗಿ ಪ್ರಾರ್ಥಿಸಿದರು.

**ಕೃಷ್ಣ ಕೃಷ್ಣ ಮಹಾಯೋಗಿನ್ ತ್ವಮಾದ್ಯಃ ಪುರುಷಃ ಪರಃ।**
**ವ್ಯಕ್ತಾವ್ಯಕ್ತಮಿದಂ ವಿಶ್ವಂ ರೂಪಂ ತೇ ಬ್ರಾಹ್ಮಣಾ ವಿದುಃ॥**

ಸಮಸ್ತ ಜೀವರುಗಳನ್ನೂ ಆಕರ್ಷಿಸುವ ಯೋಗೇಶ್ವರನಾದ ಶ್ರೀಕೃಷ್ಣಭಗವಂತನೆ, ನೀನು ಆದಿಪುರುಷನಾಗಿರುವೆ. ಪ್ರಕೃತಿಗೆ ಮೀರಿದವನಾಗಿ ಸ್ವಯಂ ಪುರುಷೋತ್ತಮ ನೆನಿಸಿರುವೆ, ವ್ಯಕ್ತವಾದ ಮತ್ತು ಅವ್ಯಕ್ತವಾದ ಸಂಪೂರ್ಣ ಜಗತ್ತೂ ನಿನ್ನ ಸ್ವರೂಪವೆಂದು ವೇದವಿದರಾದ ಬ್ರಾಹ್ಮಣರು ಹೇಳುತ್ತಾರೆ. ನೀನೇ ಸಮಸ್ತ ಪ್ರಾಣಿಗಳ ಶರೀರವೂ

ಆಗಿರುವೆ. ಪ್ರಾಣಗಳೂ ಅಂತಃಕರಣವೂ ಆಗಿರುವೆ. ಪ್ರಾಣಿಗಳ ಸರ್ವೇಂದ್ರಿಯಗಳ ಸ್ವಾಮಿಯೂ ಆಗಿರುವೆ. ನೀನೇ ಕಾಲಸ್ವರೂಪನೂ, ಸರ್ವ ವ್ಯಾಪಕನೂ ಅವಿನಾಶಿಯೂ ಆಗಿರುವೆ.

ನೀನು ಮಹತ್ತತ್ತ್ವವು. ತ್ರಿಗುಣಾತ್ಮಕವಾದ ಸೂಕ್ಷ್ಮಪ್ರಕೃತಿಯೂ ಆಗಿರುವೆ. ಸಕಲ ಕ್ಷೇತ್ರಗಳನ್ನೂ ಅವುಗಳ ವಿಕಾರವನ್ನೂ ಅರಿತು ಅವುಗಳಿಗೆ ಸಾಕ್ಷೀಭೂತನಾದ ಪರಮಾತ್ಮನೂ ನೀನೇ ಆಗಿರುವೆ. ಪ್ರಕೃತಿಯ ವಿಕಾರಗಳಾದ, ದೃಶ್ಯಗಳಾದ ಬುದ್ಧೀಂದ್ರಿಯಗಳಿಗೆ ನೀನು ಅಗೋಚರವನು. ಸ್ಥೂಲ-ಸೂಕ್ಷ್ಮ ದೇಹಗಳಿಂದ ಸಮಾವೃತನಾಗಿರುವ ಯಾವನು ತಾನೆ ತನಗಿಂತ ಮೊದಲೇ ಸ್ವಪ್ರಕಾಶನಾಗಿ ಸಿದ್ಧನಾಗಿರುವ ನಿನ್ನನ್ನು ನೋಡಬಲ್ಲನು? ಸಮಸ್ತ ಪ್ರಪಂಚದ ಸೃಷ್ಟಿಕರ್ತೃವಾದ, ಷಾಡ್ಗುಣ್ಯಪರಿಪೂರ್ಣನಾದ, ವಸುದೇವನ ಪುತ್ರನಾದ ನಿನಗೆ ನಮಸ್ಕರಿಸುತ್ತೇವೆ ಸೂರ್ಯನು ತಾನು ಉಂಟುಮಾಡಿದ ಮೋಡಗಳಿಂದಲೇ ಮುಚ್ಚಲ್ಪಡುವಂತೆ ಪ್ರಕೃತಿಗುಣಗಳಿಂದ (ಬುದ್ಧೀಂದ್ರಿಯಾದಿಗಳಿಂದ ಮುಚ್ಚಲ್ಪಟ್ಟ) ಮಹಿಮೆಯುಳ್ಳ ಪರಬ್ರಹ್ಮಸ್ವರೂಪನಾದ ನಿನಗೆ ವಂದನೆಗಳು.

ದೇವನೆ, ನೀನು ಪ್ರಾಕೃತಶರೀರದಿಂದ ವಿಹೀನನಾಗಿರುವೆ, ಆದರೂ ಸಾಧಾರಣ ಮನುಷ್ಯರಿಂದ ತೋರಿಸಲು ಅಶಕ್ಯವಾದ ಪರಾಕ್ರಮವನ್ನು, ಅಥವಾ ಅದ್ಭುತ ಕಾರ್ಯಗಳನ್ನು ಮಾಡಿ ತೋರಿಸಿದಾಗ, ಮತ್ತು ಅಂಥ ಅದ್ಭುತಕಾರ್ಯಗಳನ್ನು ಯಾರಿಂದಲೂ ಮಾಡಲು ಸಾಧ್ಯವಾಗದೆ ಇದ್ದಾಗ- ನಿನ್ನ ಅವತಾರಗಳು ಜನರಿಂದ ತಿಳಿಯಲ್ಪಡುತ್ತವೆ- ಪ್ರಭುವೆ, ಸಮಸ್ತಶ್ರೇಯಸ್ಸುಗಳಿಗೂ ಪಾಲಕನಾದ ನೀನು ಸಮಸ್ತಲೋಕಗಳಿಗೂ ಅಭ್ಯುದಯವನ್ನೂ ನಿಃಶ್ರೇಯಸವನ್ನೂ ದಯಪಾಲಿಸುವದಕ್ಕಾಗಿ ಅಂಶರೂಪದಿಂದ ಶ್ರೀಕೃಷ್ಣನಾಗಿ ಅವತರಿಸಿರುವೆ.

ಪರಮಕಲ್ಯಾಣಸ್ವರೂಪನೆ, ದಿವ್ಯಮಂಗಳವಿಗ್ರಹನೆ, ಪರಮಮಂಗಳಸ್ವರೂಪನೆ, ನಿನಗೆ ನಮಸ್ಕರಿಸುತ್ತೇವೆ. ಶಾಂತ-ಆತ್ಮನೇ, ಯದುಪತಿಯೆ, ವಾಸುದೇವನೆ, ನಿನಗೆ ನಮಸ್ಕಾರಗಳು. ಅನಂತನೆ, ಸರ್ವವ್ಯಾಪಕನೆ, ನಾವು ನಿನ್ನ ದಾಸಾನುದಾಸರಾಗಿದ್ದೇವೆ. ನಮ್ಮನ್ನು ನಿನ್ನ ಅನುಚರರನ್ನಾಗಿಯೂ, ದಾಸರಾಗಿಯೂ ಇರುವಂತೆ ಅನುವರ್ತಿಸು. ಮಹರ್ಷಿಗಳಾದ ನಾರದಮುನಿಗಳ ಪರಮಾನುಗ್ರಹದಿಂದಾಗಿ ಅಪರಾಧಿಗಳಾಗಿದ್ದ ನಮಗೆ ನಿನ್ನ ದರ್ಶನವಾಯಿತು.

ಪ್ರಭುವೆ, ನಮ್ಮ ನಾಲಗೆಯಿಂದ ಹೊರಡುವ ಮಾತು ಯಾವಾಗಲೂ ಮಂಗಳಮಯವಾದ ನಿನ್ನ ಗುಣಗಳನ್ನೇ ವರ್ಣಿಸುತ್ತಿರಲಿ- ನಮ್ಮ ಕಿವಿಗಳು ಯಾವಾಗಲೂ ರಸವತ್ತಾದ, ಪರಮಾದ್ಭುತವಾದ, ಪಾಪಹಾರಕವಾದ ನಿನ್ನ ಕಥೆಗಳನ್ನೇ ಕೇಳುತ್ತಿರಲಿ. ನಮ್ಮ ಕೈಗಳೂ ಯಾವಾಗಲೂ ನಿನ್ನ ಪೂಜೆಯಲ್ಲಿಯೇ ತೊಡಗಿರಲಿ, ನಮ್ಮ ಮನಸ್ಸು ಯಾವಾಗಲೂ ನಿನ್ನ ದಿವ್ಯಚರಣಕಮಲಗಳನ್ನೇ ಸ್ಮರಿಸುತ್ತಿರಲಿ, ನಮ್ಮ ಶಿರಸ್ಸು ಯಾವಾಗೂ ನಿನಗೆ ನಿವಾಸಭೂತವಾದ ಜಗತ್ತನ್ನು ನಮಿಸುತ್ತಿರಲಿ. ನಮ್ಮ ದೃಷ್ಟಿಯು ಯಾವಾಗಲೂ ನಿನ್ನ ಶರೀರ ಸ್ವರೂಪದಿಂದ ಸತ್ಪುರುಷರ ದರ್ಶನದಲ್ಲಿಯೇ ಆಸಕ್ತವಾಗಿರಲಿ.

ಪರೀಕ್ಷಿತಮಹಾರಾಜ, ಕುಬೇರ ಪುತ್ರರಾದ ನಲಕೂಬರ- ಮಣಿಗ್ರೀವರು ಹೀಗೆ ಸ್ತೋತ್ರಮಾಡಲು ಸೌಂದರ್ಯನಿಧಿಯೂ ಮಾಧುರ್ಯನಿಧಿಯೂ ಗೋಕುಲೇಶ್ವರನೂ ಆದ, ಹಗ್ಗದಿಂದ ಒರಳಕಲ್ಲಿಗೆ ಕಟ್ಟಿಹಾಕಲ್ಪಟ್ಟಿದ್ದ ಶ್ರೀಕೃಷ್ಣನು ನಸುನಗುತ್ತಾ ಹೀಗೆಂದನು: ಗುಹ್ಯಕರೆ, ನೀವು ಧನಮದದಿಂದ ಕುರುಡರಾಗಿ ಬಿಟ್ಟಿದ್ದಿರಿ. ಪರಮಕಾರುಣಿಕರಾದ ನಾರದ ಮಹರ್ಷಿಗಳು ನಿಮಗೆ ಶಾಪವನ್ನು ಕೊಟ್ಟು ನಿಮ್ಮ ಐಶ್ವರ್ಯವನ್ನು ವಿನಾಶಗೊಳಿಸಿದರು. ಆದರೂ ಕೃಪಾವಿಷ್ಟರಾಗಿ ನನ್ನ ಸಾನ್ನಿಧ್ಯದಿಂದ ಶಾಪವಿಮುಕ್ತರಾಗುವಂತೆ ಅನುಗ್ರಹವನ್ನು ಮಾಡಿದರು. ನನಗೆ ಈ ಹಿಂದೆಯೇ ಈ ವಿಷಯವು ತಿಳಿದಿದ್ದಿತು.

**ಸಾಧೂನಾಂ ಸಮಚಿತ್ತಾನಾಂ ಸುತರಾಮಮ್ಮತಾತ್ಮನಾಮ್ ।**
**ದರ್ಶನಾನ್ನೋ ಭವೇದ್ಬನ್ಧಃ ಪುಂಸೋಽಕ್ಷ್ಣೋಃ ಸವಿತುರ್ಯಥಾ ॥**

ಯಾರಿಗೆ ಸರ್ವತ್ರ ಸಮಬುದ್ಧಿಯಿರುವದೋ, ಯಾರು ನನ್ನಲ್ಲಿಯೇ ಲೀನವಾದ ಮನಸ್ಸುಳ್ಳವರಾಗಿರುವರೋ, ಅಂಥ ಸತ್ಪುರುಷರ ದರ್ಶನಮಾತ್ರದಿಂದಲೇ ಸಮಸ್ತವಾದ ಬಂಧನಗಳೂ-ಸೂರ್ಯನು ಉದಯಿಸಿದೊಡನೆಯೇ ಮನಷ್ಯರ ಕಣ್ಣುಗಳಿಂದ ಕತ್ತಲೆಯು ದೂರವಾಗಿಬಿಡುವಂತೆ- ಎಲ್ಲಾ ಅಡಚಣೆಗಳೂ ಪರಿಹಾರವಾಗಿಬಿಡುತ್ತವೆ. ನಲಕೂಬರ-ಮಣಿಗ್ರೀವರೆ, ನಿಮ್ಮ ಆಶಯದಂತೆ ಸಂಸಾರಬಂಧನದಿಂದ ಮುಕ್ತಗೊಳಿಸುವ, ಪರಮಪ್ರೇಮಯುಕ್ತವಾದ, ಅನನ್ಯವಾದ ಭಕ್ತಿಭಾವವು ನಿಮ್ಮಲ್ಲಿ ಉಂಟಾಗಿದೆ. ನೀವು ನನ್ನನ್ನೇ ಪರಮಾಶ್ರಯನನ್ನಾಗಿ ಮಾಡಿಕೊಂಡು ನಿಮ್ಮ ಲೋಕಗಳಿಗೆ

ಪ್ರಯಾಣಮಾಡಿರಿ. ಹೀಗೆಂದು ಶ್ರೀಕೃಷ್ಣಭಗವಂತನು ನಲಕೂಬರ-ಮಣಿಗ್ರೀವರಿಗೆ ನಿರ್ದೇಶಿಸಿದನು.

ಮಹಾರಾಜ, ಭಗವಂತನು ಹೀಗೆ ಹೇಳುತ್ತಲೆ, ಗುಹ್ಯಕ ಸಹೋದರರು ಭಗವಾನ್ ಶ್ರೀಕೃಷ್ಣನಿಗೆ ಪ್ರದಕ್ಷಿಣೆಯನ್ನು ಮಾಡಿ, ಮತ್ತೆ ಮತ್ತೆ ದೀರ್ಘದಂಡ ನಮಸ್ಕಾರಗಳನ್ನು ಮಾಡುತ್ತಾ, ಶ್ರೀಕೃಷ್ಣಭಗವಂತನ ಅಪ್ಪಣೆಯನ್ನು ಪಡೆದು ಉತ್ತರ ದಿಕ್ಕಿಗೆ ಪ್ರಯಾಣಮಾಡಿದರು.

* * * * *

## 29. ದಾಮೋದರ ಪರಮಪುರುಷಸ್ತುತಿ

ಯತ್ಪಾದಪಾಂಸುರ್ಬಹುಜನ್ಮಕೃಚ್ಛ್ರತಃ
ಧೃತಾತ್ಮಭಿರ್ಯೋಗಿಭಿರಪ್ಯಲಭ್ಯಃ।
ಸ ಏವ ಯದ್ ದೃಗ್ ವಿಷಯಃ ಸ್ವಯಂಸ್ಥಿತಃ
ಕಿಂ ವರ್ಣ್ಯತೇ ದಿಷ್ಟಮತೋ ವ್ರಜೌಕಸಾಮ್॥

ಶ್ರೀ ಮದ್ಭಾಗವತ 10-12-12

ಯಾವ ಭಗವಂತನ ಪಾದಧೂಳಿಯು ಹಲವಾರು ಜನ್ಮಗಳಲ್ಲಿ ಕಷ್ಟಪಟ್ಟು ತಪಸ್ಸುಮಾಡಿದ ಜಿತೇಂದ್ರಿಯರಾದ ಶುದ್ಧಮನಸ್ಕರಾದ ಯೋಗಿಗಳಿಗೂ ದುರ್ಲಭವಾದದ್ದೋ ಅಂಥ ಭಗವಂತನು ವ್ರಜವಾಸಿಗಳಾದ ಗೋಪಬಾಲಕರ ಜೊತೆಯಲ್ಲಿಯೇ ಇದ್ದು ಆಟವಾಡುತ್ತಿದ್ದನೆಂದರೆ ಆ ವ್ರಜವಾಸಿಗಳ ಪರಮಸೌಭಾಗ್ಯವನ್ನು ಏನೆಂದು ವರ್ಣಿಸೋಣ !

**(ಭಗವಂತನು ಗೋಪಬಾಲಕರೊಡನೆ ಒಡಗೂಡಿ ಕ್ರೀಡೆಗಳನ್ನು ಆಡುತ್ತಾ ಸಮಯಾನುಸಾರ ಅವರಿಗೆ ಬರಬಹುದಾದ ಕಂಟಕವನ್ನು ಪರಿಹರಿಸುತ್ತಾ ಇರುತ್ತಿದ್ದನು. ಇಂಥ ಸನ್ನಿವೇಶವನ್ನು ಪಡೆದ ಗೋಪಬಾಲಕರೇ ಧನ್ಯರು- ಎಂದು ಶುಕಮಹರ್ಷಿಗಳು ಪರೀಕ್ಷಿತನಿಗೆ ಪುರಾಣಶ್ರವಣವನ್ನು ಮುಂದುವರಿಸಿದರು.)**

## ಅಘಾಸುರನ ವಧೆ

ಭಗವಂತನಾದ ಶ್ರೀಕೃಷ್ಣನ ಪಾದಧೂಲಿಯು ಪರಮಪವಿತ್ರವಾದುದು. ಅದು ಮಹಾಯೋಗಿಗಳಿಗೂ ಅಲಭ್ಯವಾದುದು. ಒಮ್ಮೆ ಅಘಾಸುರನೆಂಬ ರಾಸನೊಬ್ಬನು ಗೋಪಾಲಕರೊಡನೆ ಆಟವಾಡುತ್ತಿದ್ದ ಶ್ರೀಕೃಷ್ಣನ ಬಳಿಗೆ ಬಂದನು. ಅವನು ಮಹಾಕ್ರೂರನಾಗಿದ್ದನು; ಮತ್ತು ಪೂತನಿ, ಬಕಾಸುರರ ಅನುಜ (ತಮ್ಮ)ನಾಗಿದ್ದನು. ಕೃಷ್ಣನೇ ಮೊದಲಾದ ಗೋಪಾಲಬಾಲಕರೆಲ್ಲರನ್ನೂ ಸಂಹರಿಸುತ್ತೇನೆಂದು ತೀರ್ಮಾನಿಸಿದನು. ಕೂಡಲೆ ಹೆಬ್ಬಾವಿನ ರೂಪವನ್ನು ತಾಳಿದನು. ಆ ಹೆಬ್ಬಾವಿನ ಶರೀರವು ಒಂದು ಯೋಜನದಷ್ಟು ಉದ್ದವಾಗಿಯೂ ಪರ್ವತದಷ್ಟು ಎತ್ತರವಾಗಿಯೂ ದಪ್ಪನಾಗಿಯೂ ಇದ್ದಿತು. ಕೃಷ್ಣಸಹಿತರಾದ ಗೋಪಾಲಬಾಲಕರನ್ನು ನುಂಗಿಹಾಕುವದೇ ಅವನ ಆಶಯವಾಗಿದ್ದಿತು. ಅವನು ಗುಹೆಗೆ ಸಮಾನವಾದ ತನ್ನ ಬಾಯನ್ನು ದೊಡ್ಡದಾಗಿ ತೆರೆದುಕೊಂಡು ಹಾದಿಯಲ್ಲಿ ಮಲಗಿದ್ದನು.

ಇಂಥ ಪರಮಾದ್ಭುತವಾದ ಶರೀರವನ್ನು ನೋಡಿದ ಬಾಲಕರು ಆ ಭೂತವು ಯಾವದೆಂಬುದನ್ನು ತಿಳಿಯಲು ಪರೀಕ್ಷಿಸತೊಡಗಿದರು. ''ಅದು ಒಂದು ಹೆಬ್ಬಾವಿನ ಶ್ವಾ ನಿಃಶ್ವಾಸದಂತಿದೆ. ಆದ್ದರಿಂದ ನಾವು ಎಚ್ಚರವಾಗಿರಬೇಕು'' ಎಂದು ತೀರ್ಮಾನಿಸಿ ಕೃಷ್ಣನನ್ನು ಆಶ್ರಯಿಸಿದರು. ಆಗ ಶ್ರೀಕೃಷ್ಣಭಗವಂತನು ''ಈ ನೀಚನನ್ನು ಸಂಹರಿಸಬೇಕು'' ಎಂದು ತೀರ್ಮಾನಿಸಿ ಆ ಹೆಬ್ಬಾವಿನ ಮುಖದಲ್ಲಿ ತಾನೇ ಪ್ರವೇಶಿಸಿಬಿಟ್ಟನು. ಆ ಸಮಯದಲ್ಲಿ ದೇವತೆಗಳು ''ಅಯ್ಯೋ, ಸರ್ವನಾಶವಾಗಿ ಹೋಯಿತು'' ಎಂದು ಕೂಗಿಕೊಂಡರು. ಆದರೆ ಆ ರಾಕ್ಷಸನ ದುರಾಲೋಚನೆಯನ್ನು ತಿಳಿದಿದ್ದ ಶ್ರೀಕೃಷ್ಣಭಗವಂತನು ತನ್ನ ಪುಟ್ಟಶರೀರವನ್ನು ಹಿಗ್ಗಿಸಲಾರಂಭಿಸಿದನು. ಆಗ ಆ ರಾಕ್ಷಸನ ಕಣ್ಣುಗುಡ್ಡೆಗಳು ಹೊರಬಂದವು. ಅವನ ಪ್ರಾಣವಾಯುವು ಹೊರಗೆ ಹೋಗಲು ಮಾರ್ಗವನ್ನು ಕಾಣದೆ ಬ್ರಹ್ಮರಂಧ್ರವನ್ನೇ ಭೇದಿಸಿಕೊಂಡು ಹೊರಬಿದ್ದಿತು. ಭಗವಂತನಾದ ಶ್ರೀಕೃಷ್ಣನು ಮೃತಪ್ರಾಯರಾಗಿದ್ದ ತನ್ನ ಸ್ನೇಹಿತರನ್ನೂ ಕರುಗಳನ್ನೂ ಅಮೃತಮಯವಾದ ದೃಷ್ಟಿಯನ್ನು ಹರಡಿ ಪುನರುಜ್ಜೀವನಗೊಳಿಸಿ ಅವರೆಲ್ಲರೊಡನೆ ರಾಕ್ಷಸನ ಬಾಯಿಂದ ಹೊರಬಂದನು.

ತಮ್ಮ ಶತ್ರುವಾದ ಅಘಾಸುರನ ಸಂಹಾರದಿಂದ ಪರಮಹೃಷ್ಟರಾದ ದೇವತೆಗಳು ಶ್ರೀಕೃಷ್ಣಭಗವಂತನ ಮೇಲೆ ಪುಷ್ಪವೃಷ್ಟಿಯನ್ನು ಸುರಿಸಿದರು. ಅಪ್ಸರೆಯರು

ನೃತ್ಯಮಾಡಿದರು. ಗಂಧರ್ವರು ಗಾನಮಾಡಿದರು. ವಿದ್ಯಾಧರರು ಮಂಗಳವಾದ್ಯವನ್ನು ಬಾರಿಸಿದರು. ಬ್ರಾಹ್ಮಣರು ವೇದಮಂತ್ರಗಳ ಮೂಲಕ ಸ್ತೋತ್ರಮಾಡಿದರು ಪಾರ್ಷದರು ಶ್ರೀಕೃಷ್ಣನಿಗೆ ಜಯವಾಗಲಿ! ಎಂದು ಜಯಘೋಷಮಾಡುತ್ತಾ ಆನಂದಪರಿಪೂರಿತವಾಗಿ ಶ್ರೀಕೃಷ್ಣಭಗವಂತನನ್ನು ಅಭಿನದಿಸಿದರು. ವೈದಿಕ ವಿದ್ವಾಂಸರುಗಳು ಮಾಡುತ್ತಿದ್ದ ಅದ್ಭುತವಾದ ಸ್ತೋತ್ರಗಳು, ವಿದ್ಯಾಧರರು ನುಡಿಸುತ್ತಿದ್ದ ಮಂಗಳವಾದ್ಯಗಳು. ಗಂಧರ್ವರು ಹಾಡುತ್ತಿದ್ದ ಮಂಗಳಗೀತೆಗಳು, ಪಾರ್ಷದರು ಮಾಡುತ್ತಿದ್ದ ಜಯಕಾರಗಳು- ಇವುಗಳ ಧ್ವನಿಯು ಬ್ರಹ್ಮಲೋಕವನ್ನು ಮುಟ್ಟಿತು. ಬ್ರಹ್ಮನು ಆ ಮಂಗಳಮಯವಾದ ಶಬ್ದವನ್ನು ಕೇಳುತ್ತಲೇ ಅವಸರದಿಂದ ವಾಹನವನ್ನು ಹತ್ತಿ ಶೀಘ್ರವಾಗಿ ಶ್ರೀಕೃಷ್ಣನು ಇದ್ದಲ್ಲಿಗೆ ಆಗಮಿಸಿದನು. ಶ್ರೀಕೃಷ್ಣನ ಅಪಾರಮಹಿಮೆಯನ್ನು ನೋಡಿ ಅಚ್ಚರಿಗೊಂಡನು. ಆತನನ್ನು ಪ್ರಶಂಸೆಮಾಡಿದನು. ಆಗ ಬ್ರಹ್ಮನು ಈ ರೀತಿಯಾಗಿ ಶ್ರೀಕೃಷ್ಣನನ್ನು ಸ್ತುತಿಸಿದನು.

ನೌಮೀಡ್ಯ ತೇಽಭ್ರವಪುಷೇ ತಡಿದಮ್ಬರಾಯ
ಗುಂಜಾವತಂಸಪರಿಪಿಚ್ಛಲಸನ್ಮುಖಾಯ।
ವನ್ಯಸ್ರಜೇ ಕಮಲನೇತ್ರ ವಿಷಾಣವೇಣು-
ಲಕ್ಷ್ಮಶ್ರಿಯೇ ಮೃದುಪದೇ ಪಶುಪಾಂಗಜಾಯ ॥1॥

ಸ್ತೋತ್ರಾರ್ಹನಾದ ಭಗವಂತನೆ, ನಿನಗೆ ನಮಸ್ಕಾರಗಳು. ನೀಲಮೇಘಶ್ಯಾಮನೆ, ಮಿಂಚಿನಂಥ ಪೀತಾಂಬರವನ್ನು ಧರಿಸಿರುವವನೆ, ಗುಲಗಂಜಿಯನ್ನೇ ಕರ್ಣಾಭರಣವಾಗಿ ಹೊಂದಿರುವವನೆ. ಶಿರಸ್ಸಿನಲ್ಲಿ ನವಿಲು ಗರಿಯನ್ನು ಧರಿಸಿ ಅದರಿಂದ ಪ್ರಕಾಶಮಾನವಾಗಿ ಕಾಣುವ ಮುಖವುಳ್ಳವನೆ, ಅರಣ್ಯಪುಷ್ಪಗಳ ಮಾಲೆಯನ್ನು ಧರಿಸಿರುವವನೆ, ಕೈಯಲ್ಲಿ ಮೊಸರನ್ನದ ತುತ್ತನ್ನು ಹಿಡಿದು ಉಡಿಯಲ್ಲಿ ಕೊಳಲನ್ನು ಇಟ್ಟುಕೊಂಡು ಕಂಕುಳಿನಲ್ಲಿ ಕೊಂಬನ್ನೂ ಚಾವಟಿಯನ್ನೂ ಸಿಕ್ಕಿಸಿಕೊಂಡ ಅನುಪಮವಾದ ಕಾಂತಿಯಿಂದ ಪ್ರಕಾಶಿಸುತ್ತಿರುವವನೆ, ಮೃದುವಾದ ಪಾದಗಳನ್ನು ಹೊಂದಿರುವವನೆ, ನಂದಗೋಪಸುತನೆ, ನಿನಗೆ ನಮಸ್ಕಾರಮಾಡುತ್ತೇನೆ.

ಜ್ಞಾನೇ ಪ್ರಯಾಸಮುದಪಾಸ್ಯ ನಮನ್ತ ಏವ
ಜೀವನ್ತಿ ಸನ್ಮುಖರಿತಾಂ ಭವದೀಯವಾರ್ತಾಮ್।

**ಸ್ಥಾನೇ ಸ್ಥಿತಾಃ ಶ್ರುತಿಗತಾಂ ತನುವಾಙ್ಮನೋಭಿಃ**
**ಯೇ ಪ್ರಾಯಶೋಽಜಿತಜಿತೋಽಪ್ಯಸಿ ತೈಸ್ತ್ರಿಲೋಕ್ಯಾಮ್ ॥**

ಪ್ರಭುವೆ, ಜ್ಞಾನಯೋಗಪ್ರಾಪ್ತಿಗಾಗಿ ಪ್ರಯತ್ನಿಸದೆಯೇ ತಾವಿರುವ ಸ್ಥಳದಲ್ಲಿಯೇ ಇದ್ದುಕೊಂಡು ಸತ್ಪುರುಷರ ಸಹವಾಸದಲ್ಲಿರುತ್ತಾ ನಿನಗೆ ಪ್ರಿಯತಮರಾದ ಸಂತರು ಹೇಳುವ ನಿನ್ನ ಲೀಲಾ ಪ್ರಸಂಗಗಳನ್ನು ಶರೀರ-ಮಾತು-ಮನಸ್ಸುಗಳೆಂಬ ತ್ರಿಕರಣಗಳಿಂದಲೂ ಶ್ರದ್ಧೆಯಿಟ್ಟು ಕೇಳುತ್ತಾ ಮತ್ತೆ ಯಾವ ಕಾರ್ಯಗಳನ್ನೂ ಮಾಡದೆ ಇರುವರೋ ಅಂಥವರು ಮೂರುಲೋಕಗಳಲ್ಲಿಯೂ ಯಾರಿಂದಲೂ ಜಯಿಸಲ್ಪಡದಿರುವ ನಿನ್ನನ್ನು ಜಯಿಸುತ್ತಾರೆ. ಅನನ್ಯಭಕ್ತಿಯ ಮೂಲಕವಾಗಿ ನಿನ್ನನ್ನು ವಶಪಡಿಸಿಕೊಳ್ಳುತ್ತಾರೆ.

**ಶ್ರೇಯಃ ಸ್ರುತಿಂ ಭಕ್ತಿಮುದಸ್ಯ ತೇ ವಿಭೋ**
**ಕ್ಲಿಶ್ಯನ್ತಿ ಯೇ ಕೇವಲಬೋಧಬುದ್ಧಯೇ ।**
**ತೇಷಾಮಸೌ ಕ್ಲೇಶಲ ಏವ ಶಿಷ್ಯತೇ**
**ನಾನ್ಯದ್ಯಥಾ ಸ್ಥೂಲತುಷಾವಘಾತಿನಾಮ್ ॥**

ಭಗವಂತನೆ, ನಿನ್ನ ಮೇಲಿನ ಭಕ್ತಿಯೆಂಬುದು ನಿಶ್ಚಯವಾಗಿಯೂ ಸುಮಸ್ತವಾದ ಕಲ್ಯಾಣಗಳಿಗೂ ಶ್ರೇಯಸ್ಸುಗಳಿಗೂ ಮೂಲಸ್ರೋತ್ರವಾಗಿದೆ. ಯಾರು ಸಕಲ ಪುರುಷಾರ್ಥಗಳನ್ನೂ ಕೊಡುವ ಅಂಥ ಅನನ್ಯಭಕ್ತಿಯನ್ನು ತೊರೆದು ಕೇವಲ ಜ್ಞಾನಕ್ಕಾಗಿ ಹಾತುವರಿಯುತ್ತಿರುವರೋ ಮತ್ತು ಅದಕ್ಕಾಗಿಯೇ ಶ್ರಮಿಸುವರೋ ಅಂಥವರಿಗೆ ಕೇವಲ ಶ್ರಮವೇ ಫಲವಾಗಿ ಉಳಿದುಕೊಳ್ಳುತ್ತದೆ. ಭತ್ತದ ಹೊಟ್ಟನ್ನು ಕುಟ್ಟಿದವನಿಗೆ (ಅಕ್ಕಿಯು ಸಿಕ್ಕದೆ) ಕೇವಲ ಶ್ರಮವು ಮಾತ್ರ ಉಳಿದುಕೊಳ್ಳುವಂತೆ. ಜ್ಞಾನಕ್ಕಾಗಿ ಶ್ರಮಿಸುವವನಿಗೆ ಕೇವಲ ಶ್ರಮವು ಮಾತ್ರ ಉಳಿದುಕೊಳ್ಳುತ್ತದೆ. (ಶ್ರವಣಾದಿನವಭಕ್ತಿಗಳಲ್ಲಿ ಯಾವದಾದರೂ ಒಂದಿದ್ದರೂ ಕೃತಾರ್ಥರಾಗಬಹುದು.)

* * * * *

# 30. ಶ್ರೀಕೃಷ್ಣಭಗವಂತನ ಸರ್ವಾತ್ಮತ್ವ

**ಸ್ವಯಮಾತ್ಮಾತ್ಮಗೋವತ್ಸಾನ್ ಪ್ರತಿವಾರ್ಯಾತ್ಮವತ್ಸಪೈಃ।**
**ಕ್ರೀಡನ್ ಆತ್ಮವಿಹಾರೈಶ್ಚ ಸರ್ವಾತ್ಮಾ ಪ್ರಾವಿಶದ್ವ್ರಜಮ್ ॥**

**ಶ್ರೀ ಮದ್ಭಾಗವತ 10-13-20**

ಶ್ರೀಕೃಷ್ಣಭಗವಂತನು ತಾನೇ ಕರುಗಳೂ ಕರುಗಳನ್ನು ಕಾಯುವ ಗೋಪಾಲಕರೂ ಆದನು. ಆತ್ಮಸ್ವರೂಪವವೇ ಆದ ಗೋಪಾಲಕರಿಂದ ಆತ್ಮಸ್ವರೂಪಗಳೇ ಆದ ಗೋವತ್ಸಗಳನ್ನು ತಡೆದು ನಿಲ್ಲಿಸುತ್ತಾ ಆತ್ಮಸ್ವರೂಪರಾದ ಗೋಪಬಾಲಕರೊಡನೆ ಅನೇಕಪ್ರಕಾರದ ಆಟಗಳನ್ನು ಆಡುತ್ತಾ ಗೊಲ್ಲರಹಟ್ಟಿಯನ್ನು ಪ್ರವೇಶಿಸಿದನು.

**(ಭಗವಂತನ ದಶಾವತಾರಗಳಲ್ಲಿ ಕೃಷ್ಣಾವತಾರವು ಪರಿಪೂರ್ಣವಾದುದು. ಅವನು ಮಾನವರ ಪಾಪಗಳನ್ನು ಪರಿಹಾರಮಾಡುತ್ತಾ, ತನ್ನ ಭಕ್ತರಿಗೆ ಸದ್ಗತಿಯನ್ನು ಕರುಣಿಸಿ ಮುಕ್ತಿಯನ್ನು ಅನುಗ್ರಹಿಸಿ ಕೃತಾರ್ಥರನ್ನಾಗಿ ಮಾಡುತ್ತಾನೆ. ಆದ್ದರಿಂದ ಮಾನವರು ಶ್ರೀಕೃಷ್ಣಭಗವಂತನನ್ನು ಆಶ್ರಯಿಸಿ ಮುಕ್ತಿಯನ್ನು ಸಂಪಾದಿಸಿಕೊಂಡು ಅಮೃತಾತ್ಮರಾಗಿ ಬಾಳಿ ಮಾನವಜನ್ಮದ ಸಾರ್ಥಕ್ಯವನ್ನು ಪಡೆಯಬಹುದಾಗಿದೆ.)**

## ಶ್ರೀಕೃಷ್ಣಭಗವಂತನ ವಿಶ್ವರೂಪ

ಶ್ರೀಕೃಷ್ಣನು ಗೊಲ್ಲರಹಟ್ಟಿಯನ್ನು ಪ್ರವೇಶಿಸಿ ಒಂದೊಂದು ಕರುವನ್ನೂ ಪ್ರತ್ಯೇಕ-ಪ್ರತ್ಯೇಕವಾಗಿ ಆಯಾ ಮನೆಗೆ ಸೇರಿಸಿದನು. ಅಂತೆಯೇ ಆತ್ಮನ ಸ್ವರೂಪರಾದ ಗೋಪಾಲಬಾಲಕರನ್ನೂ ಅವರವರ ಮನೆಗೆ ಸೇರುವಂತೆ ಮಾಡಿದನು. ಎಂದಿನಂತೆ ಕೃಷ್ಣಭೂತರಾದ ಗೋಪಾಲಕರೂ ಕೊಳಲನ್ನು ಊದಿಕೊಂಡೇ ಮನೆಗೆ ಬಂದರು. ಕೊಳಲಿನ ಧ್ವನಿಯನ್ನು ಕೇಳುತ್ತಲೇ ಗೋಪಿಯರು ಕೂಡಲೆ ಮೇಲೆದ್ದು ಪರಬ್ರಹ್ಮನಾದ ಶ್ರೀಕೃಷ್ಣನ ಸ್ವರೂಪಿಗಳಾಗಿದ್ದ ಗೋಪಬಾಲಕರನ್ನು ತಮ್ಮ ಮಕ್ಕಳೆಂದೇ ಭಾವಿಸಿ ತೋಳುಗಳಿಂದ ಬಾಚಿ ತಬ್ಬಿಕೊಂಡು ಅಮೃತಕ್ಕಿಂತಲೂ ಮಧುರವಾಗಿದ್ದ, ಆಸವಕ್ಕಿಂತಲೂ ಹೆಚ್ಚು ಮದವನ್ನು ಉಂಟುಮಾಡುವದಾಗಿದ್ದ ವಾತ್ಸಲ್ಯಪೂರ್ಣವಾದ ಸ್ತನ್ಯವನ್ನು ಅವರಿಗೆ ಉಣಬಡಿಸಿದರು.

ಪರೀಕ್ಷಿತ, ಶ್ರೀಕೃಷ್ಣನ ಲೀಲಾವಿನೋದಗಳನ್ನು ಊಹಿಸಿಕೊಳ್ಳಲಾದರೂ

ಸಾಧ್ಯವೆ? ಗೋಪಿಯರೆಲ್ಲರೂ ತಮ್ಮ ಮಕ್ಕಳ ನೆಪದಲ್ಲಿ ಸಾಕ್ಷಾತ್ ಕೃಷ್ಣನಿಗೇ ಹಾಲುಣಿಸುತ್ತಿದ್ದರು. ಕೃಷ್ಣನಿಗೆ ಹಾಲುಣಿಸುತ್ತಿರುವೆವೆಂಬ ವಿಷಯವು ಮಾತ್ರ ಅವರಿಗೆ ತಿಳಿದಿರಲಿಲ್ಲ. ಶ್ರೀಕೃಷ್ಣನು ಸಾಯಂಕಾಲವಾಗುತ್ತಲೆ ಹೊತ್ತಿಗೆ ಸರಿಯಾಗಿ ಕೃಷ್ಣ ಕಲ್ಪಿತರಾದ ಗೋಪಬಾಲಕರು ಮತ್ತು ಗೋವತ್ಸಗಳೊಡನೆ ಕೊಳಲನ್ನೂದುತ್ತಾ ವ್ರಜಭೂಮಿಗೆ ಬಂದುಬಿಡುತ್ತಿದ್ದನು. ಕೃಷ್ಣಭೂತರಾದ ಗೋಪಬಾಲಕರೂ ಸಾಕ್ಷಾತ್ ಗೋಪಬಾಲಕರಂತೆಯೇ ವರ್ತಿಸುತ್ತಿದ್ದರು ಅಥವಾ ಸರ್ವಾಂತರ್ಯಾಮಿಯಾದ ಶ್ರೀಕೃಷ್ಣನೇ ಹಾಗೆ ಮಾಡುತ್ತಿದ್ದನು. ಗೋಪಬಾಲಕರ ರೂಪದಲ್ಲಿ ಗೋಪಿಯರ ಮನೆಗಳಿಗೆ ಹೋಗಿ ಬಾಲಸುಲಭವಾದ ಲೀಲೆಗಳಿಂದ ಅವರನ್ನು ಸಂತೋಷಗೊಳಿಸುತ್ತಿದ್ದನು. ಗೋಪಿಯರು ಕೂಡ ತಮ್ಮ ಆ ಮುದ್ದುಕಂದನಿಗೆ ಸ್ನಾನಮಾಡಿಸುತ್ತಿದ್ದರು. ಅವನ ಪುಟ್ಟ ಕೈಕಾಲುಗಳನ್ನು ಒತ್ತುತ್ತಿದ್ದರು. ಅವನಿಗೆ ಗಂಧವನ್ನು ಪೂಸುತ್ತಿದ್ದರು. ಅಲಂಕಾರಮಾಡುತ್ತಿದ್ದರು, ರಕ್ಷೆಯಿಡುತ್ತಿದ್ದರು, ತಿಲಕವಿಡುತ್ತಿದ್ದರು, ಭೋಜನ ಮಾಡಿಸುತ್ತಿದ್ದರು- ಇವೇ ಮುಂತಾದ ಉಪಚಾರಗಳಿಂದ ಕೃಷ್ಣನೇ ಲಾಲಿಸಲ್ಪಡುತ್ತಿದ್ದನು. ಗೋಪಿಯರಿಗೇ ತಾವು ಗೋಪಬಾಲಕನ ರೂಪದಲ್ಲಿರುವ ಶ್ರೀಕೃಷ್ಣನಿಗೆ ಮೊಲೆಯುಣಿಸುತ್ತಿದ್ದೇವೆಂದು ತಿಳಿಯದಿದ್ದ ಮೇಲೆ ಹಸುಗಳಿಗಾದರೂ ಹೇಗೆ ಸಾಧ್ಯ? ಶ್ರೀಕೃಷ್ಣನೇ ಕರುಗಳಾಗಿ ಕೃಷ್ಣನಿಂದಲೇ ಕರೆತರಲ್ಪಟ್ಟು ಕೊಟ್ಟಿಗೆಯನ್ನು ಸೇರುವವು. ಆ ವೇಳೆಗೆ ಹಸುಗಳೂ ಕೊಟ್ಟಿಗೆಯಲ್ಲಿ ಇರುತ್ತಿದ್ದವು. ಕರುಗಳನ್ನು ಕಂಡೊಡನೆಯೇ ವಾತ್ಸಲ್ಯದಿಂದ ''ಹಂಬಾ''! ಎಂದು ಅವು ಕೂಗುವವು. ಕರುಗಳು ತಾಯಿ ಹಸುಗಳ ಬಳಿಗೆ ನಾಗಾಲೋಟದಿಂದ ಓಡಿಹೋಗುವವು. ಹಾಗೆ ತಮ್ಮ ಬಳಿಗೆ ಓಡಿಬಂದ ಕರುಗಳನ್ನು ಅಕ್ಕರೆಯಿಂದ ನೆಕ್ಕುತ್ತಾ ಕೆಚ್ಚಲಿನಿಂದ ಒಸರುತ್ತಿರುವ ಅಮೃತೋಪಮವಾದ ಹಾಲನ್ನು ಅವುಗಳಿಗೆ ಉಣಿಸುವವು. ಕರುಗಳ ರೂಪದಲ್ಲಿದ್ದ ಶ್ರೀಕೃಷ್ಣನೇ ಎಲ್ಲಾ ಹಸುಗಳ ಹಾಲನ್ನೂ ಕುಡಿಯುತ್ತಿದ್ದನು.

ಪರೀಕ್ಷಿತ, ಪಾವನಾತ್ಮನಾದ ಶ್ರೀಕೃಷ್ಣನು ತನ್ನ ಅನಂತವಾದ ಶಕ್ತಿಯಿಂದ ಗೋಕುಲದಲ್ಲಿ ಸ್ವಲ್ಪವೂ ವ್ಯತ್ಯಾಸವಾಗದಂತೆ ನಡೆದುಕೊಳ್ಳುತ್ತಿದ್ದನು. ಆದರೆ ಗೋಪಬಾಲಕರಾಗಿಯೂ ಗೋವತ್ಸಗಳಾಗಿಯೂ ನರ್ತಿಸಿದ ಶ್ರೀಕೃಷ್ಣನಲ್ಲಿ ಗೋಪಿಯರಿಗೂ ಗೋವುಗಳಿಗೂ ಮಾತೃಭಾವವು ಮೊದಲಿನಿಂದ ಇದ್ದರೂ ಆ ವಾತ್ಸಲ್ಯದ ಸ್ವಭಾವವು ಈಗ ಅತಿಶಯವಾಗಿ ವೃದ್ಧಿಹೊಂದಿತ್ತು. ಗೋಪಬಾಲಕರು ತಾಯಿಯಲ್ಲಿ ತೋರುತ್ತಿದ್ದ ಪ್ರೇಮಾದರಗಳನ್ನೇ ಗೋಪಬಾಲಕರೂಪದಲ್ಲಿದ್ದ ಕೃಷ್ಣನೂ

ತೋರುತ್ತಿದ್ದನು. ''ಇವನು ನನ್ನ ಮಗನಲ್ಲ''- ಎಂಬ ಸಂಶಯವು ಲೇಶಮಾತ್ರವೂ ಉಂಟಾಗದಂತೆ ನೋಡಿಕೊಳ್ಳುತ್ತಿದ್ದನು. ಆದರೆ ''ಇವಳು ನನ್ನ ತಾಯಿ''- ಎಂಬ ಮೋಹವು ಅವನಲ್ಲಿರಲಿಲ್ಲ. ಹೀಗೆಯೇ ಒಂದು ವರ್ಷ ಪರ್ಯಂತವಾಗಿ ಗೋಪಿಯರಿಗೂ ಮತ್ತು ಗೋವುಗಳಿಗೂ ತಮ್ಮ ಬಾಲಕರ ವಿಷಯವಾಗಿ, ಮತ್ತು ಕರುಗಳ ವಿಷಯವಾಗಿ ಸ್ನೇಹಲತೆಯು ವೃದ್ಧಿಹೊಂದುತ್ತಾ ಹರಡುತ್ತಲೇ ಇದ್ದಿತು. ಗೋಪಿಯರಿಗೂ ಮತ್ತು ಗೋವುಗಳಿಗೂ ಶ್ರೀಕೃಷ್ಣನ ವಿಷಯದಲ್ಲಿ ಎಂತಹ ಅಪೂರ್ವವಾದ ಪ್ರೇಮಾದರಗಳಿದ್ದವೋ ಅಂಥ ಅಸೀಮವಾದ ಪ್ರೇಮಾದರಗಳನ್ನೇ ಗೊಲ್ಲತಿಯರು ಗೋಪಾಲಕರ ಮೇಲೆ ತೋರುತ್ತಿದ್ದರು. ಹಾಗೆಯೇ ಗೋವುಗಳೂ ಕರುಗಳ ಮೇಲೆ ತೋರುತ್ತಿದ್ದವು. ಶ್ರೀಕೃಷ್ಣನೇ ಗೋಪಬಾಲಕನಾಗಿಯೂ ಕರುವಾಗಿಯೂ ಇದ್ದುದೇ ಇದಕ್ಕೆ ಕಾರಣವಾಗಿದ್ದಿತು. ಹೀಗೆ ಗೋಪಾಲಕೃಷ್ಣನು ಗೋಪಬಾಲಕರೂ ಕರುಗಳೂ ಆಗಿ ತನ್ನನ್ನು ತಾನೇ ಪರಿಪಾಲಿಸಿಕೊಳ್ಳುತ್ತಾ ಒಂದು ವರ್ಷದ ಪರ್ಯಂತವಾಗಿ ವೃಂದಾವನದ ಕಾಡುಗಳಲ್ಲಿಯೂ ಈ ಗೊಲ್ಲರ ಹಳ್ಳಿಗಳಲ್ಲಿಯೂ ಕೊಟ್ಟಿಗೆಗಳಲ್ಲಿಯೂ ಆತ್ಮಾನಂದದಿಂದ ಆಟವಾಡುತ್ತಿದ್ದನು. ಒಂದು ವರ್ಷ ತುಂಬಲು ಐದಾರು ರಾತ್ರಿಗಳು ಮಾತ್ರವೇ ಉಳಿದಿದ್ದವು.

ಒಂದು ದಿನ ಶ್ರೀಕೃಷ್ಣನು ಬಲರಾಮನನ್ನು ಜೊತೆಯಲ್ಲಿ ಕರೆದುಕೊಂಡು ಕರುಗಳನ್ನು ಮೇಯಿಸಲು ಕಾಡಿಗೆ ಹೋದನು. ಕರುಗಳನ್ನು ನೋಡುತ್ತಲೇ ಹಸುಗಳಿಗೆ ತಮ್ಮ ಕರುಗಳ ಮೇಲಿನ ವಾತ್ಸಲ್ಯವು ಉಕ್ಕಿಹರಿಯಿತು. ಅತ್ಯಂತ ವೇಗವಾಗಿ ಹಾಲನ್ನು ಸುರಿಸುತ್ತಾ ''ಹಂಬಾ'' ಎಂದು ಕೂಗಿಕೊಳ್ಳುತ್ತಾ ಕರುಗಳಿದ್ದೆಡೆಗೆ ಅವು ಬಂದು ಸೇರಿದವು. ಆಕ್ಕರೆಯಿಂದ ಕರುಗಳಿಗೆ ಹಾಲುಣಿಸಿದವು. ಅನಂತರ ಶ್ರೀಕೃಷ್ಣನು ಇದ್ದ ಕಡೆಗೆ ಹಸುಗಳೂ ಬಂದವು. ಗೋಪಬಾಲಕರಿಗೆ ತಾಯಿಯ ಹಾಲು ಕುಡಿಯುವ ಸಂದರ್ಭವಿರಲಿಲ್ಲ. ಆದರೂ ಗೋಪಿಯರಿಗೆ ತಮ್ಮ ಮಕ್ಕಳ ಮೇಲೆ ಪ್ರೀತಿಯಿದ್ದುದ ರಿಂದ ಆ ಮಕ್ಕಳನ್ನು ತಬ್ಬಿಕೊಂಡು ಆನಂದಪಡುತ್ತಿದ್ದರು.

ಶ್ರೀಕೃಷ್ಣ ಭಗವಂತನು ಇಡಿಯ ಜಗತ್ತಿನ ಮೂಲಪುರುಷನಾಗಿದ್ದು ತನ್ನ ಯೋಗಮಾಯೆಯಿಂದ ಮನುಷ್ಯರು, ಗೋವುಗಳು- ಮುಂತಾಗಿ ಎಲ್ಲ ಜೀವರನ್ನೂ ಸೃಷ್ಟಿಸಿ ತಾನು ಎಲ್ಲ ಜೀವರುಗಳಲ್ಲಿಯೂ ಪ್ರವೇಶಿಸಿ ಆತ್ಮನಾಗಿ ಹೀಗೆ ತನ್ನ ವಿಭೂತಿಯನ್ನು ಹರಡಿರುತ್ತಾನೆ.

* * * * *

# 31. ಅಕ್ರೂರನು ಮಾಡಿದ ಶ್ರೀಕೃಷ್ಣಸ್ತೋತ್ರ

ನತೋಽಸ್ಮ್ಯಹಂ ತ್ವಾಖಿಲಹೇತುಹೇತುಂ
ನಾರಾಯಣಂ ಪೂರುಷಮಾದ್ಯಮವ್ಯಯಮ್।
ಯನ್ನಾಭಿಜಾತಾದರವಿಂದಕೋಶಾತ್
ಬ್ರಹ್ಮಾವಿರಾಸೀತ್ ಯತ ಏಷ ಲೋಕಃ॥

ಶ್ರೀ ಮದ್ಭಾಗವತ 10-14-1

ಪ್ರಭುವೆ, ಜಗತ್ತಿಗೆ ಕಾರಣಭೂತಗಳಾದ ಪಂಚಭೂತಗಳಿಗೂ ನೀನೇ ಪರಮಕಾರಣನಾಗಿರುವೆ. ಅವಿನಾಶಿಯೂ ಪುರುಷೋತ್ತಮನೂ ಆದ ನಾರಾಯಣನೇ ನೀನಾಗಿರುವೆ. ನಿನ್ನ ನಾಭಿಕಮಲದಿಂದಲೇ ಜಗತ್ತಿನ ಸೃಷ್ಟಿಕರ್ತನಾದ ಚತುರ್ಮುಖನು ಜನಿಸಿದನು. ಇಂಥ ಪರಮಪುರುಷನಾದ ನಿನಗೆ ನಮಸ್ಕರಿಸುತ್ತೇನೆ.

**(ಭಗವಂತನ ದಿವ್ಯವಾದ ಸ್ವರೂಪವನ್ನು ನೋಡಿದ ಅಕ್ರೂರನು ಕ್ಷಣಕಾಲ ಚೇತರಿಸಿಕೊಂಡು ತಲೆಬಾಗಿ ನಮಸ್ಕರಿಸಿ ಮುಂದೆ ಮೆಲ್ಲಮೆಲ್ಲಗೆ ಸ್ತೋತ್ರಮಾಡಲು ಉಪಕ್ರಮಿಸಿದನು.)**

## ಅಕ್ರೂರನ ಭಗವತ್ ಸ್ತುತಿ

ಭಗವಂತನು ತನ್ನ ದಿವ್ಯಸ್ವರೂಪವನ್ನು ಅಕ್ರೂರನಿಗೆ ದಯಪಾಲಿಸಿದಾಗ ಅವನಿಗೆ ಮಾತೇ ಹೊರಡದಂತಾಯಿತು. ಸ್ವಲ್ಪಕಾಲದಲ್ಲೇ ಚೇತರಿಸಿಕೊಂಡು ಕೈಗಳೆರಡನ್ನೂ ಜೋಡಿಸಿ ತಲೆಯ ಮೇಲಿಟ್ಟುಕೊಂಡು ಗದ್ಗದಧ್ವನಿಯಿಂದಲೇ ದಯಾಮಯನಾದ ಪರಮಾತ್ಮನನ್ನು ಮೆಲ್ಲಮೆಲ್ಲನೆ ಸ್ತೋತ್ರಮಾಡಲು ಉಪಕ್ರಮಿಸಿದನು.

ಪ್ರಭುವೆ, ಜಗತ್ತಿಗೆ ಕಾರಣಭೂತಗಳಾದ ಪಂಚಮಹಾಭೂತಗಳಿಗೂ ನೀನೇ ಪರಮಕಾರಣನಾಗಿರುವೆ. ಅವಿನಾಶಿಯೂ ಪುರುಷೋತ್ತಮನೂ ಆಗಿರುವ ನಾರಾಯಣನೇ ನೀನಾಗಿರುವೆ. ನಿನ್ನ ನಾಭಿಕಮಲದಿಂದಲೇ ಜಗತ್ತಿನ ಸೃಷ್ಟಿಕರ್ತನಾದ ಚತುರ್ಮುಖನು ಆವಿರ್ಭವಿಸಿರುವನು. ಇಂಥ ಪರಮಪುರುಷನಾದ ನಿನಗೆ ವಂದನೆಗಳು. ಪೃಥಿವ್ಯಾದಿಪಂಚಮಹಾಭೂತಗಳು, ಮಹತ್ತತ್ತ್ವ, ಪ್ರಕೃತಿ, ಪುರುಷ,

ಮನಸ್ಸು, ಇಂದ್ರಿಯಗಳು, ಅವುಗಳ ವಿಷಯಗಳು, ಅಧಿಷ್ಠಾತೃದೇವತೆಗಳು, ಸಮಸ್ತಚರಾಚರವಾದ ಜಗತ್ತು, ಅದರಲ್ಲಿ ನಡೆಯುವ ವ್ಯವಹಾರಗಳು- ಇವೆಲ್ಲವೂ ವಿರಾಟ್ ಪುರುಷನಾದ ನಿನ್ನ ಅವಯವಗಳೇ ಆಗಿವೆ. ಇವೆಲ್ಲವೂ ನಿನ್ನ ಅವಯವಗಳೇ ಆಗಿದ್ದರೂ ನಿನ್ನ ಆತ್ಮಸ್ವರೂಪವನ್ನು ಅವು ತಿಳಿದಿರುವದಿಲ್ಲ. ಪ್ರತ್ಯಕ್ಷಾದಿಪ್ರಮಾಣಗಳಿಗೆ ಒಳಗಾಗುವದರಿಂದ ಪ್ರಕೃತಿ ಮತ್ತು ಪ್ರಕೃತಿಯಿಂದ ಹುಟ್ಟಿದ ಸಮಸ್ತಪದಾರ್ಥಗಳೂ ಅನಾತ್ಮಗಳೆಂದು ಗ್ರಹಿಸಲ್ಪಟ್ಟಿವೆ. ಬ್ರಹ್ಮನೂ ನಿನ್ನ ಸ್ವರೂಪನೇ ಆಗಿದ್ದಾನೆ. ಆದರೆ ಪ್ರಕೃತಿಯ ಗುಣವಾದ ರಜಸ್ಸಿನಿಂದ ಆವಿರ್ಭೂತನಾಗಿದ್ದಾನೆ. ಈ ಕಾರಣದಿಂದಲೇ ಅವನು ಕೂಡ ಗುಣಗಳ ಆಚೆ ಇರುವ ನಿರ್ಗುಣವಾದ ಅಥವಾ ಗುಣಾತೀತನಾದ ನಿನ್ನ ಆತ್ಮಸ್ವರೂಪವನ್ನು ತಿಳಿದವನಾಗಿಲ್ಲ.

ಹೀಗೆ ನೀನು ದೇಹಧಾರಿಗಳ ಚರ್ಮಚಕ್ಷುಸ್ಸಿಗೆ ಗೋಚರನಾಗದಿದ್ದರೂ ಸತ್ಯನಿಷ್ಠರಾದ ಯೋಗಿಗಳು, ಮಹಾಪುರುಷನೂ ಈಶ್ವರನೂ ಆದ ನಿನ್ನನ್ನು ನಾನಾ ಪ್ರಕಾರವಾಗಿ ಉಪಾಸನೆಮಾಡುತ್ತಾರೆ. ಅಧಿಭೂತ, ಅಧಿದೈವ, ಅಧ್ಯಾತ್ಮಗಳೊಡನಿರುವ ನಿನ್ನನ್ನು ಸತ್ಪುರುಷರು ಉಪಾಸನೆಮಾಡುತ್ತಾರೆ. ಯಾಜ್ಞಿಕರಾದ ಕೆಲವರು ಬ್ರಾಹ್ಮಣರು ಕರ್ಮಕಾಂಡವನ್ನು ಪ್ರತಿಪಾದಿಸುವ ವೇದತ್ರಯಗಳ ಮೂಲಕವಾಗಿ ಮಾಡುವ ವಿಸ್ತಾರವಾದ ಯಜ್ಞಗಳಿಂದ ನಾನ ರೂಪಗಳುಳ್ಳ ದೇವತೆಗಳ ಹೆಸರಿನಿಂದ ನಿನ್ನನ್ನೇ ಪೂಜಿಸುತ್ತಾರೆ. ಮತ್ತೆ ಕೆಲವರು ಜ್ಞಾನಿಗಳು ಸಮಸ್ತ ಕರ್ಮಗಳನ್ನೂ ಪರಿತ್ಯಜಿಸಿ ಶಾಂತಮನಸ್ಕರಾಗಿ ಜ್ಞಾನಯಜ್ಞದ ಮೂಲಕ ಜ್ಞಾನಸ್ವರೂಪನಾದ ನಿನ್ನನ್ನೇ ಆರಾಧಿಸುತ್ತಾರೆ. ಸಂಸ್ಕಾರಗಳಿಂದ ಶುದ್ಧಗೊಳಿಸಲ್ಪಟ್ಟ ಮನಸ್ಸುಳ್ಳ ಮತ್ತೆ ಕೆಲವು ಉಪಾಸಕರು ನೀನು ಹೇಳಿದ ಪಾಂಚರಾತ್ರಾಗಮ ವಿಧಿಯಂತೆ ಐಕಾಂತಿಕಭಾವದಿಂದ ನಿನ್ನಲ್ಲಿಯೇ ತನ್ಮಯರಾಗಿ ವಾಸುದೇವ- ಸಂಕರ್ಷಣ- ಪ್ರದ್ಯುಮ್ನ, ಅನಿರುದ್ಧ-ಎಂಬ ನಾಲ್ಕು ಮೂರ್ತಿರೂಪಗಳಿಂದಲೂ ಪರವಾಸುದೇವ, ಅಥವಾ ನಾರಾಯಣನೆಂಬ ಏಕರೂಪದಿಂದಲೂ ಕೂಡಿರುವ ನಿನ್ನನ್ನೇ ಆರಾಧಿಸುತ್ತಾರೆ.

ಮತ್ತೆ ಕೆಲವರು ಶಿವನಿಂದ ಹೇಳಲ್ಪಟ್ಟಿರುವ ಶೈವಾಗಮವಿಧಾನದಿಂದ ಹಲವಾರು ಮತಭೇದಗಳುಳ್ಳ ಶೈವ- ಪಾಶುಪತಾದಿಮಾರ್ಗಗಳಿಂದ ನಿನ್ನನ್ನೇ ಉಪಾಸನೆ ಮಾಡುತ್ತಾರೆ. ನಿನ್ನಿಂದ ಭಿನ್ನರಾದವರೆಂದು ಭಾವಿಸಿ ಇತರ ಹಲವಾರು ದೇವತೆಗಳನ್ನು ಯಾರು ಪೂಜಿಸುವರೋ ಅಂಥ ಅನ್ಯ ದೇವತಾಭಕ್ತರು ಕೂಡ ವಾಸ್ತವವಾಗಿ

ಸರ್ವದೇವತಾಮಯನೂ ಸರ್ವೇಶ್ವರನೂ ಆದ ನಿನ್ನನ್ನೇ ಪೂಜಿಸುತ್ತಾರೆ. ಪ್ರಭುವೆ, ಯಾವ ರೀತಿಯಲ್ಲಿ ಪರ್ವತದಲ್ಲಿ ಹುಟ್ಟಿದ ನದಿಗಳು ವರ್ಷಾಕಾಲದ ಮಳೆಯ ನೀರಿನಿಂದ ತುಂಬಿ ಹರಿಯುತ್ತಾ ಕಟ್ಟಕಡೆಗೆ ಸಮುದ್ರವನ್ನೇ ಸೇರುವವೋ ಅದೇ ರೀತಿಯಲ್ಲಿ ಶ್ರುತಿಸ್ಮೃತಿಪುರಾಣಗಳಲ್ಲಿ ಹೇಳಿರುವ ಎಲ್ಲಾ ಉಪಾಸನಾಮಾರ್ಗಗಳೂ ನಿನ್ನಲ್ಲಿಯೇ ಬಂದು ಸೇರುತ್ತವೆ.

ದೇವದೇವನೆ, ಸತ್ತ್ವರಜಸ್ತಮಗಳೆಂಬವು ನಿನ್ನ ಪ್ರಕೃತಿಯ ಗುಣಗಳಾಗಿವೆ. ಬ್ರಹ್ಮನಿಂದಾರಂಭಿಸಿ ಸಕಲ ಚರಾಚರಪ್ರಾಣಿಗಳೂ ಬಟ್ಟೆಯಲ್ಲಿ ನೂಲು ಹಾಸು ಹೊಕ್ಕಾಗಿರುವಂತೆ ತ್ರಿಗುಣಗಳಲ್ಲಿ ಹಾಸುಹೊಕ್ಕಾಗಿವೆ. ನೀನು ಸರ್ವಸ್ವರೂಪನಾಗಿದ್ದರೂ ಅವುಗಳಲ್ಲಿ ಲಿಪ್ತನಾಗಿಲ್ಲ. ನೀನು ನಿರ್ಲಿಪ್ತನು. ನೀನು ಸಮಸ್ತರ ಬುದ್ಧಿಗಳಲ್ಲಿಯೂ ಸಾಕ್ಷಿರೂಪನಾಗಿರುವೆ. ಗುಣಗಳ ಪ್ರವಾಹದಿಂದ ಹುಟ್ಟಿರುವ ಈ ಸೃಷ್ಟಿಯು ಅವಿದ್ಯಾಮೂಲವಾಗಿದೆ. ಮತ್ತು ಈ ಗುಣಪ್ರವಾಹವು ದೇವ-ಮನುಷ್ಯ- ತಿರ್ಯಕ್ ಪ್ರಾಣಿಗಳಲ್ಲಿಯೂ ವ್ಯಾಪ್ತವಾಗಿದೆ. ಆದರೆ ನೀನು ಮಾತ್ರ ಇವೆಲ್ಲದರಿಂದಲೂ ಪ್ರತ್ಯೇಕವಾಗಿಯೇ ಇರುವೆ. ತ್ರಿಗುಣಾತೀತನಾಗಿರುವೆ. ಇಂಥ ಪರಾತ್ಪರನಾದ ನಿನಗೆ ನಮಸ್ಕರಿಸುತ್ತೇನೆ.

ದೇವ ದೇವನೆ, ಅಗ್ನಿಯು ನಿನ್ನ ಮುಖವಾಗಿದೆ. ಭೂಮಿಯು ನಿನ್ನ ಚರಣಕಮಲವಾಗಿದೆ. ಸೂರ್ಯ-ಚಂದ್ರರು ನಿನ್ನ ಕಣ್ಣುಗಳಾಗಿದ್ದಾರೆ. ಆಕಾಶವು ನಿನ್ನ ಹೊಕ್ಕುಳಾಗಿದೆ. ದಿಕ್ಕುಗಳೇ ನಿನ್ನ ಕಿವಿಯಾಗಿವೆ. ಸ್ವರ್ಗಲೋಕವು ನಿನ್ನ ಶಿರಸ್ಸಾಗಿದೆ. ದೇವಗಣಗಳು ನಿನ್ನ ಬಾಹುಗಳಾಗಿವೆ. ಸಮುದ್ರವು ಹೊಟ್ಟೆಯಾಗಿದೆ. ವಾಯುವು ನಿನ್ನ ಪ್ರಾಣಶಕ್ತಿಯ ರೂಪದಲ್ಲಿ ಕಲ್ಪಿತವಾಗಿದೆ. ವೃಕ್ಷಗಳು, ಔಷಧಿಲತೆಗಳು-ಪರಮೇಶ್ವರನಾದ ನಿನ್ನನ್ನು ಆಶ್ರಯಿಸಿ ರೋಮಗಳಾಗಿವೆ. ಮೇಘವು ತಲೆಗೂದಲಾಗಿದೆ. ಪರ್ವತಗಳು ನಿನ್ನ ಮೂಳೆಗಳೂ ಉಗುರುಗಳೂ ಆಗಿವೆ. ಹಗಲು-ರಾತ್ರಿಗಳು ರೆಪ್ಪೆಗಳನ್ನು ಮುಚ್ಚಿಕೊಳ್ಳುವ ಮತ್ತು ತೆರೆಯುವ ನಿಮೇಷಗಳಾಗಿವೆ. ಪ್ರಜಾಪತಿಯು ಜನನೇಂದ್ರಿಯ ವಾಗಿದ್ದಾನೆ. ವೃಷ್ಟಿಯು ನಿನ್ನ ರೇತಸ್ಸಾಗಿದೆ. ಅವಿನಾಶಿಯಾದ ಪರಮಾತ್ಮನೆ, ನೀರಿನಲ್ಲಿ ಕೋಟಿ ಕೋಟಿ ಜಲಚರಪ್ರಾಣಿಗಳಿರುವಂತೆಯೂ ಮನೋವೃತ್ತಿಗೆ ಮಾತ್ರವೇ ಲಕ್ಷ್ಯನಾಗತಕ್ಕ ಮಹಾಪುರುಷನಾದ ನಿನ್ನಲ್ಲಿ ಲೋಕಪಾಲರಿಂದಲೂ ಹಲವಾರು ಪ್ರಾಣಿಗಳಿಂದಲೂ ತುಂಬಿದ ಅನೇಕ ಕೋಟಿ ಬ್ರಹ್ಮಾಂಡಗಳೂ ನೆಲಸಿವೆ.

ನೀನು ಲೀಲೆಗಾಗಿ ಈ ಲೋಕದಲ್ಲಿ ಯಾವ ಯಾವ ಲೀಲಾವಿಗ್ರಹಗಳನ್ನು ಧರಿಸಿ ಅವತರಿಸುವೆಯೋ, ಅಂಥ ಅವತಾರಗಳ ಪ್ರಭಾವದಿಂದ ಶೋಕಮೋಹ ಗಳಿಂದ ವಿಮುಕ್ತರಾದ ಜನರು ಸಂತೋಷಭರಿತರಾಗಿ ನಿನ್ನ ನಿರ್ಮಲವಾದ ಯಶಸ್ಸನ್ನು ಹಾಡುತ್ತಿರುತ್ತಾರೆ.

ಸತ್ಪುರುಷರ ಭಯವನ್ನು ಹೋಗಲಾಡಿಸುವ ಪ್ರಭುವೆ, ಅದ್ಭುತಸಿಂಹನಾಗಿ ಅವತರಿಸಿದ ನರಸಿಂಹಮೂರ್ತಿಗೆ ನಮಸ್ಕರಿಸುತ್ತೇನೆ. ಮೂರು ಹೆಜ್ಜೆಗಳಿಂದ ಮೂರು ಲೋಕಗಳನ್ನು ಆಕ್ರಮಿಸಿದ ವಾಮನಮೂರ್ತಿಗೆ ನಮಸ್ಕರಿಸುತ್ತೇನೆ. ಚಿತ್ತಕ್ಕೆ ಅಧಿಷ್ಠಾತೃ ದೇವತೆಯಾದ ವಾಸುದೇವನಿಗೆ ನಮಸ್ಕರಿಸುತ್ತೇನೆ. ಎಂದು ಅನನ್ಯಭಕ್ತಿಯಿಂದ ಸ್ತೋತ್ರ ಮಾಡುತ್ತಿದ್ದ ಅಕ್ರೂರನಿಗೆ ನೀರಿನಲ್ಲಿ ತನ್ನ ದಿವ್ಯಸ್ವರೂಪವನ್ನು ತೋರಿಸಿದನು.

* * * * *

## 32. ಅಕ್ರೂರನ ಭಗವತ್ ಸ್ತುತಿ

**ದೇವ ದೇವ ಜಗನ್ನಾಥ ಪುಣ್ಯ ಶ್ರವಣಕೀರ್ತನ।**
**ಯದೂತ್ತಮೋತ್ತಮಶ್ಲೋಕ ನಾರಾಯಣ ನಮೋಽಸ್ತು ತೇ॥**

ಶ್ರೀ ಮದ್ಭಾಗವತ 10-41-16

ದೇವತೆಗಳಿಗೂ ದೇವನಾಗಿರುವವನೆ, ಲೋಕೇಶ್ವರನೆ, ಪುಣ್ಯತಮವಾದ ಶ್ರವಣ- ಕೀರ್ತನಗಳ ಭಾಗ್ಯವುಳ್ಳವನೆ, ಯದುಶ್ರೇಷ್ಠರಲ್ಲಿ ಶ್ರೇಷ್ಠವಾದ ಕೀರ್ತಿಯನ್ನು ಗಳಿಸಿರುವವನೆ, ನಾರಾಯಣನೆ, ನಿನಗೆ ನಮಸ್ಕಾರಗಳು.

**(ಅಕ್ರೂರನು ಭಗವಂತನಿಂದ ಆದೇಶಿಸಲ್ಪಟ್ಟವನಾಗಿ ಅವನನ್ನು ಬಿಟ್ಟುಹೋಗಲು ಮನಸ್ಸಿಲ್ಲದಿದ್ದರೂ ಅನ್ಯಮಾರ್ಗವಿಲ್ಲದೆ ಮಧುರಾಪಟ್ಟಣವನ್ನು ಪ್ರವೇಶಿಸಿ ಮೊದಲು ಕಂಸನ ಅರಮನೆಗೆ ಹೋದನು. ಮಾರನೆಯ ದಿನ ಶ್ರೀಕೃಷ್ಣನು ಬಲರಾಮನೊಡನೆ ಗೋಪಾಲಕರಿಂದ ಸಮಾವೃತನಾಗಿ ಮಧುರಾ ಪಟ್ಟಣವನ್ನು ಪ್ರವೇಶಿಸಿದನು.)**

## ಮಧುರಾಪಟ್ಟಣ ಪ್ರವೇಶ

ವಸುದೇವನ ಪುತ್ರರಾದ ಬಲರಾಮ- ಕೃಷ್ಣರು ಗೆಳೆಯರಿಂದ ಪರಿವೃತರಾಗಿ ಮಧುರಾಪಟ್ಟಣದ ಸೊಬಗನ್ನು ನೋಡುತ್ತಾ ರಾಜಬೀದಿಯನ್ನು ಪ್ರವೇಶಿಸಿದೊಡನೆಯೇ ಆ ಪಟ್ಟಣದ ಸ್ತ್ರೀಯರು ರಾಮ-ಕೃಷ್ಣರನ್ನು ನೋಡುವ ಸಲುವಾಗಿ ಅವಸರದಿಂದ ಹೊರಬಂದರು. ಅನಂತರ ಮಹಡಿಗಳನ್ನು ಏರಿ ನಿಂತು ಉತ್ಸಾಹದಿಂದ ನೋಡುತ್ತಾ ಇರುವಲ್ಲಿ ''ಪುಂಸಾಂ ಮೋಹನರೂಪಾಯ'' ಎಂಬಂತಿದ್ದ ಶ್ರೀಕೃಷ್ಣನು ಸ್ತ್ರೀಯರ ಮನಸ್ಸುಗಳೆಲ್ಲವನ್ನೂ ಅಪಹರಿಸಿಬಿಟ್ಟನು. ಆ ಸಮಯದಲ್ಲಿ ಪಟ್ಟಣಿಗರು ತಮ್ಮ ತಮ್ಮಲ್ಲಿಯೇ ಹೀಗೆ ಮಾತನಾಡಿಕೊಳ್ಳುತ್ತಿದ್ದರು. ಅಬ್ಬಾ ಗೋಪಿಕಾಸ್ತ್ರೀಯರು ನಿಶ್ಚಯವಾಗಿಯೂ ಎಂಥ ತಪಸ್ಸನ್ನು ಮಾಡಿದ್ದಿರಬೇಕು? ಪರಮಾನಂದದಾಯಕರಾದ ಈ ಬಾಲಕರನ್ನು ನಿರಂತರವಾಗಿ ನೋಡುತ್ತಿರುತ್ತಾರಲ್ಲ! ಎಂದು ಆಶ್ಚರ್ಯಪಟ್ಟರು.

ಈ ಸಂದರ್ಭದಲ್ಲಿ ಕೃಷ್ಣನು ಒಬ್ಬ ಅಗಸನನ್ನು ಬಟ್ಟೆಗಾಗಿ ಯಾಚಿಸಿದನು. ಅವನು ವಸ್ತ್ರಗಳನ್ನು ಕೊಡಲಿಲ್ಲವಾಗಿ ಅವನನ್ನು ಸಂಹಾರಮಾಡಿದನು. ಬಳಿಕ ರಾಮಕೃಷ್ಣರು ಸುಧಾಮನೆಂಬ ಹೂವಾಡಿಗನ ಮನೆಗೆ ಹೋದರು. ಅವನು ತಲೆಬಾಗಿ ನಮಸ್ಕರಿಸಿದನು. ರಾಮಕೃಷ್ಣರ ದರ್ಶನ- ಸಂಭಾಷಣೆಗಳಿಂದ ಅವನು ಸಂತುಷ್ಟನಾಗಿ ಚೆಲುವಾದ ಪುಷ್ಪಮಾಲೆಗಳನ್ನು ಅರ್ಪಿಸಿದನು. ಅವನು ಶ್ರೀಕೃಷ್ಣನನ್ನು ಕುರಿತು 'ಪ್ರಭುವೆ, ನನ್ನ ಭಕ್ತಿಯು ಅಚಲವಾಗಿರುವಂತೆ ಅನುಗ್ರಹಿಸುವವನಾಗು, ನಿನ್ನ ಭಕ್ತರಲ್ಲಿ ನನಗೆ ಸೌಹಾರ್ದವೂ ಮೈತ್ರಿಯೂ ಇರುವಂತೆ ವರವನ್ನು ದಯಪಾಲಿಸು' ಎಂದು ಬೇಡಿಕೊಂಡನು. ಶ್ರೀಕೃಷ್ಣನು ಅವನಿಗೆ ಎಲ್ಲ ರೀತಿಯ ವರಗಳನ್ನೂ ದಯಪಾಲಿಸಿ ಅವರ ಮನೆಯಿಂದ ಹೊರಟನು.

ಹೀಗೆ ಶ್ರೀಕೃಷ್ಣನು ರಾಜಬೀದಿಯಲ್ಲಿ ಹೋಗುತ್ತಿರುವಾಗ ಯುವತಿಯಾದ, ಚೆಲುವೆಯಾದ, ಆದರೆ ಕುಬ್ಜಾದ ಡೊಂಕು ದೇಹವುಳ್ಳ ಸ್ತ್ರೀಯನ್ನು ತನ್ನ ಎದುರಿಗೆ ಕಂಡನು. ಆಕೆಯು ಕಂಸನಿಗೆ ಚಂದನ- ಅಂಗರಾಗಗಳನ್ನು ಒಯ್ಯುತ್ತಿದ್ದಳು. ಬಲರಾಮ ಕೃಷ್ಣರನ್ನು ಕಂಡಾಗ ಅವರ ತೇಜಸ್ಸು- ಸೌಂದರ್ಯಗಳನ್ನು ಕಂಡು ಭಕ್ತಿಪರವಶಳಾಗಿ ಗಂಧ- ಅಂಗರಾಗಗಳನ್ನು ಶ್ರೀ ಬಲರಾಮ ಕೃಷ್ಣರಿಗೇ ಸಮರ್ಪಿಸಿಬಿಟ್ಟಳು. ಅವರುಗಳು ಸಂತೋಷದಿಂದ ಸ್ವೀಕರಿಸಿ ತಮ್ಮ ಶರೀರವನ್ನು ಅಲಂಕರಿಸಿಕೊಂಡು

ವಿರಾಜಮಾನರಾದರು. ಕುಬ್ಜೆಯ ಬಗ್ಗೆ ಸಂತುಷ್ಟರಾಗಿ ಅವಳನ್ನು ನಿಲ್ಲಿಸಿಕೊಂಡು ಅವಳನ್ನು ಪ್ರಮದೋತ್ತಮೆಯಾಗಿ ಪರಿವರ್ತಿಸಿದರು. ಆಗ ಆಕೆಯು ರಾಮಕೃಷ್ಣರನ್ನು ತನ್ನ ಮನೆಗೆ ಆಹ್ವಾನಿಸಿದಳು. ಆಗ ಶ್ರೀಕೃಷ್ಣನು ತನ್ನ ಕಾರ್ಯಗೌರವಗಳು ಪೂರೈಸಿದ ಅನಂತರ ಬರುವದಾಗಿ ತಿಳಿಸಿ ಆಕೆಯನ್ನು ಕಳುಹಿಸಿಕೊಟ್ಟನು. ಅನಂತರ ಧನುರ್ಯಜ್ಞವು ನಡೆಯುತ್ತಿರುವ ಸ್ಥಳವನ್ನು ಪ್ರವೇಶಿಸಿ ಧನುಸ್ಸನ್ನು ನೋಡಿದರು. ಆ ಮಹಾಧನುಸ್ಸನ್ನು ಕ್ಷಣಮಾತ್ರದಲ್ಲಿ ಲೀಲಾಜಾಲವಾಗಿ ಮೇಲೆತ್ತಿ ನಾಣನ್ನು ಸುದೀರ್ಘವಾಗಿ ಸೆಳೆದು ಕಬ್ಬಿನ ಜಲ್ಲೆಯನ್ನು ಸುಲಭವಾಗಿ ಮುರಿದುಹಾಕುವಂತೆ ಧನುಸ್ಸನ್ನು ಮುರಿದುಹಾಕಿದನು, ಆಗ ರಾಕ್ಷಸರು ಕೃಷ್ಣನನ್ನು ಹಿಡಿಯಲು ಬಂದಾಗ ಕೃಷ್ಣ-ಬಲರಾಮರು ಅವರುಗಳನ್ನು ಸಂಹರಿಸಿಬಿಟ್ಟರು.

ಆಗ ಕಂಸನು ಬಹಳವಾಗಿ ಗಾಬರಿಗೊಂಡನು. ಅವನು ತನ್ನನ್ನು ಕನ್ನಡಿಯಲ್ಲಿ ನೋಡಿಕೊಂಡಾಗ ಅವನ ತಲೆಯೇ ಕಾಣುತ್ತಿರಲಿಲ್ಲ. ಮತ್ತು ಮೃತ್ಯುಸೂಚಕವಾದ ಹಲವಾರು ದೃಶ್ಯಗಳನ್ನು ಕಂಡನು. ಇಬ್ಬರು ಸೂರ್ಯರು, ಇಬ್ಬರು ಚಂದ್ರರಿರುವಂತೆ ಕಾಣುತ್ತಿದ್ದನು. ಕಿವಿಗಳನ್ನು ಮುಚ್ಚಿಕೊಂಡರೆ ಪ್ರಾಣಧ್ವನಿಯು ಕೇಳಬರುತ್ತಿರಲಿಲ್ಲ. ಗಿಡ- ಮರ- ಬಳ್ಳಿಗಳು ಸ್ವರ್ಣಮಯವಾಗಿ ಕಾಣುತ್ತಿದ್ದವು. ನಡೆಯುವಾಗ ಹೆಜ್ಜೆಗಳೇ ಕಾಣುತ್ತಿರಲಿಲ್ಲ. ಕಂಸನಿಗೆ ಸ್ವಪ್ನಾವಸ್ಥೆಯಲ್ಲಿಯೂ ಇಂಥ ವಿಚಿತ್ರದೃಶ್ಯಗಳು ಕಾಣುತ್ತಿದ್ದವು. ಕತ್ತೆಯ ಮೇಲೆ ಕುಳಿತು ವಿಷಪಾನಮಾಡುತ್ತಿರುವಂತೆಯೂ ಮೈಗೆ ಎಣ್ಣೆಯನ್ನು ಬಳಿದುಕೊಂಡು ದಿಗಂಬರನಾಗಿ ಹೋಗುತ್ತಿರುವಂತೆಯೂ ಕನಸಾಗುತ್ತಿತ್ತು. ನಿದ್ರೆ ಮಾಡುವಾಗಲೂ, ಎಚ್ಚರಗೊಂಡಾಗಲೂ ಮರಣಸೂಚಕವಾದ ಇಂಥ ಹಲವಾರು ದೃಶ್ಯಗಳನ್ನು ಕಂಡು ಕಂಸನಿಗೆ ಮರಣದ ಚಿಂತೆಯಿಂದಾಗಿ ನಿದ್ರೆಯೇ ಬರಲಿಲ್ಲ.

ರಾತ್ರಿಯು ಕಳೆದು ಸೂರ್ಯೋದಯವಾಗಲು ಕಂಸನು ಮಲ್ಲಕ್ರೀಡಾ ಮಹೋತ್ಸವವನ್ನು ಉದ್ಘಾಟಿಸಿದನು. ರಾಜಭಟರು ರಂಗಮಂಟಪವನ್ನು ಚೆನ್ನಾಗಿ ಸಿಂಗರಿಸಿದ್ದರು. ಸಮವಸ್ತ್ರಧಾರಿಗಳು ಭೇರಿ, ತುತ್ತೂರಿ, ಢಕ್ಕೆ, ಮೃದಂಗ- ಮೊದಲಾದ ವಾದ್ಯಗಳನ್ನು ನುಡಿಸುತ್ತಿದ್ದರು. ಪ್ರೇಕ್ಷಕರು ಕುಳಿತುಕೊಳ್ಳುವ ಮಂಚವು ಹೂವಿನ ಮಾಲೆಗಳು, ಬಾವುಟಗಳು, ಮೇಲ್ಕಟ್ಟುಗಳಿಂದಲೂ, ತೋರಣಗಳಿಂದಲೂ ಸಿಂಗರಿಸಲ್ಪಟ್ಟಿದ್ದವು. ಸುಂದರವಾಗಿದ್ದ ಆ ಮಂಚಗಳಲ್ಲಿ ಬ್ರಾಹ್ಮಣಕ್ಷತ್ರಿಯರೇ ಮೊದಲಾದ ಗ್ರಾಮವಾಸಿಗಳೂ ಹಳ್ಳಿಯವರೂ ಕುಳಿತಿದ್ದರು. ಕಂಸನು ಅಮಾತ್ಯರಿಂದ

ಪರಿವೃತನಾಗಿ ಮಂಡಲೇಶ್ವರರ ಮಧ್ಯಭಾಗದಲ್ಲಿ ಶ್ರೇಷ್ಠವಾದ ರಾಜಸಿಂಹಾಸನದಲ್ಲಿ ಕುಳಿತಿದ್ದನು. ಆದರೆ ಅವನ ಮನಸ್ಸು ಮಾತ್ರ ದುಃಸ್ವಪ್ನ ದುಃಶಕುನಗಳ ಕಾರಣಗಳಿಂದಾಗಿ ತಳಮಳಿಸುತ್ತಿದ್ದಿತು.

ನಾನಾ ಬಗೆಯ ವಾದ್ಯಗಳು ಮೊಳಗುತ್ತಿರಲು ಜಟ್ಟಿಗಳ ಕೈಚಪ್ಪಾಳೆ ಗಟ್ಟಿಯಾಗಿ ಕೇಳುತ್ತಿರಲು ಗರ್ವಿಷ್ಠರಾದ ಜಟ್ಟಿಗಳು ಯಥೋಚಿತವಾಗಿ ಅಲಂಕರಿಸಿಕೊಂಡು ತಮ್ಮ ಗುರುಗಳ ಒಡನೆ ರಂಗಮಂಟಪದಲ್ಲಿ ಕುಳಿತುಕೊಂಡರು. ಆ ಸಮಯದಲ್ಲಿ ಆಹ್ವಾನಿತರಾಗಿದ್ದ ನಂದಗೋಪನೇ ಮೊದಲಾದ ಗೋಪಾಲಕರು ತಾವು ತಂದಿದ್ದ ಕಪ್ಪ-ಕಾಣಿಕೆಗಳನ್ನು ಕಂಸಮಹಾರಾಜನಿಗೆ ಅರ್ಪಿಸಿ ಅವನ ಅನುಮತಿಯನ್ನು ಪಡೆದು ರಂಗಮಂಟಪದ ಸಮೀಪದಲ್ಲಿಯೇ ಇದ್ದ ಮಂಚವೊಂದರಲ್ಲಿ ಕುಳಿತುಕೊಂಡರು. ರಾಮಕೃಷ್ಣರಿಬ್ಬರೂ ಸ್ನಾನಾದಿ ನಿತ್ಯಕರ್ಮಗಳನ್ನು ಪೂರೈಸಿಕೊಂಡು ಮಲ್ಲಯುದ್ಧವನ್ನು ನೋಡುವ ಆಸೆಯಿಂದ ರಂಗಭೂಮಿಗೆ ಆಗಮಿಸಿದರು. ಅನಂತರ ತಾವೇ ಮುಷ್ಟಿಕ ಜಾಣೂರಾದಿಗಳ ಜೊತೆ ಯುದ್ಧವನ್ನು ಮಾಡಿ ಅವರುಗಳನ್ನು ಸೋಲಿಸಿ, ಕಂಸನನ್ನು ಸಂಹರಿಸಿ, ಉಗ್ರಸೇನನನ್ನು ರಾಜನನ್ನಾಗಿಸಿ ವಸುದೇವ ದೇವಕಿಯರೊಡನೆ ಲೀಲಾ ವಿನೋದವನ್ನು ನಡೆಸುತ್ತಿದ್ದರು.

* * * * *

## 33. ಮಾತಾಪಿತೃಗಳ ವೈಶಿಷ್ಟ್ಯ

**ಸ ಪಿತಾ ಸಾ ಚ ಜನನೀ ಯೌ ಪುಷ್ಣೀತಾಂ ಸ್ವಪುತ್ರವತ್**
**ಶಿಶೂನ್ ಬಂಧುಭಿರುತ್ಸೃಷ್ಟಾನ್ ಅಕಲ್ಪೈಃ ಪೋಷರಕ್ಷಣೇ ||**

ಶ್ರೀ ಮದ್ಭಾಗವತ **10-45-22**

ಪಾಲನ- ರಕ್ಷಣೆಗಳಲ್ಲಿ ಅಸಮರ್ಥರಾದ ಬಂಧುಗಳಿಂದ ಪರಿತ್ಯಜಿಸಲ್ಪಟ್ಟ ಮಕ್ಕಳನ್ನು ತಮ್ಮ ಮಕ್ಕಳೆಂದೇ ಭಾವಿಸಿ ರಕ್ಷಿಸುವವರೇ ನಿಜವಾದ ತಾಯಿ-ತಂದೆಗಳು.

(ತಂದೆ-ತಾಯಿಗಳು ಶಿಶುವಿಗೆ ಜನ್ಮವನ್ನು ನೀಡಿದವರಾದರೂ ಕಾರಣಾಂತರ ಗಳಿಂದ ಶಿಶುರಕ್ಷಣೆಯು ಸಾಧ್ಯವಾಗದಿರುವಾಗ ಉದಾರಮನಸ್ಸಿನ ಒಬ್ಬ ಗೃಹಸ್ಥರು

ಶಿಶುವನ್ನು ತಮ್ಮ ಕಂದನೆಂದೇ ಭಾವಿಸಿ ಪೋಷಿಸಿದರೆ ಅವರೇ ಶಿಶುವಿನ ನಿಜವಾದ ಮಾತಾಪಿತೃಗಳೆಂದು ಶಾಸ್ತ್ರವು ತಿಳಿಸುತ್ತದೆ.)

## ರಾಮಕೃಷ್ಣರ ವಿದ್ಯಾಭ್ಯಾಸ

ಸಮಸ್ತ ವಿದ್ಯೆಗಳಿಗೂ ಉತ್ಪತ್ತಿಸ್ಥಾನರೂಪರಾದ, ಸರ್ವಜ್ಞರಾದ, ಜಗತ್ತಿಗೇ ಈಶ್ವರರಾದ ಬಲರಾಮಕೃಷ್ಣರು ತಮ್ಮ ಮಾನುಷಲೀಲೆಗಳಿಂದ ಸ್ವತಃಸಿದ್ಧವಾದ ಶುದ್ಧಜ್ಞಾನವನ್ನು ಮರೆಸಿಕೊಂಡಿದ್ದರು. ಸಮಸ್ತ ವಿದ್ಯೆಗಳಿಗೂ ಸಾಗರಪ್ರಾಯರಾಗಿದ್ದರೂ ಕೂಡ ಬಲರಾಮ- ಕೃಷ್ಣರು ಗುರುಕುಲದಲ್ಲಿ ವಿದ್ಯಾಭ್ಯಾಸವನ್ನು ಮಾಡಬೇಕೆಂಬ ಆಶಯದಿಂದ ಅವಂತೀಪುರದಲ್ಲಿ (ಉಜ್ಜಯಿನಿಯಲ್ಲಿ) ವಾಸಿಸುತ್ತಿದ್ದ ಕಾಶ್ಯಪಗೋತ್ರೀಯನಾದ ಸಾಂದೀಪನೀಮುನಿಯ ಬಳಿಗೆ ಹೋದರು. ನಿಯಮಪೂರ್ವಕವಾಗಿ ಬ್ರಹ್ಮಚರ್ಯವ್ರತದಲ್ಲಿದ್ದು ಗುರುವಿನಲ್ಲಿ ವಿದ್ಯಾಭ್ಯಾಸಮಾಡುತ್ತಿದ್ದ ರಾಮ-ಕೃಷ್ಣರು ಬಹಿರಿಂದ್ರಿಯಗಳನ್ನು ನಿಗ್ರಹಿಸಿದ್ದರು. ಗುರುಗಳ ವಿಷಯದಲ್ಲಿ ನಿರ್ದುಷ್ಟವಾದ ವ್ಯವಹಾರವುಳ್ಳವರಾಗಿದ್ದರು. ಗುರುಗಳಿಗೆ ಹೇಗೆ ಸೇವೆ ಮಾಡಬೇಕೆನ್ನುವ ಆದರ್ಶವನ್ನು ಲೋಕಕ್ಕೆ ತೋರಿಸಿಕೊಡುತ್ತಾ ಬಲರಾಮ-ಕೃಷ್ಣರು ಗುರುಗಳನ್ನು ಇಷ್ಟದೇವತೆಯೆಂದೇ ಭಾವಿಸಿ ಭಕ್ತಿಪೂರ್ವಕವಾಗಿ ಸ್ವಲ್ಪವಾದರೂ ಆಲಸಿಕೆಯಿಲ್ಲದೆ ಅವರ ಸೇವೆಯನ್ನು ಮಾಡುತ್ತಿದ್ದರು. ಶಿಷ್ಯರ ಶುದ್ಧಭಾವದಿಂದ ಕೂಡಿದ ಸೇವೆಯಿಂದ ಸಂತೃಪ್ತರಾದ ಬ್ರಾಹ್ಮಣಶ್ರೇಷ್ಠರಾದ ಸಾಂದೀಪನೀಮುನಿಗಳು ಶಿಕ್ಷಾ- ವ್ಯಾಕರಣ- ಛಂದಸ್ಸು- ನಿರುಕ್ತ- ಜ್ಯೋತಿಷ್ಯ, ಕಲ್ಪ- ಈ ಆರು ಅಂಗಗಳಿಂದಲೂ ಮತ್ತು ಉಪನಿಷತ್ತುಗಳಿಂದಲೂ ಕೂಡಿದ ಸಮಸ್ತ ವೇದಗಳನ್ನೂ ರಾಮಕೃಷ್ಣರಿಗೆ ಉಪದೇಶಿಸಿದರು. ಇಷ್ಟುಮಾತ್ರವಲ್ಲದೆ ಮಂತ್ರಗಳ ರಹಸ್ಯದಿಂದ ಕೂಡಿದ ಧನುರ್ವೇದವನ್ನೂ ಮನುಸ್ಮೃತಿಯೇ ಮೊದಲಾದ ಧರ್ಮಶಾಸ್ತ್ರಗಳನ್ನೂ ವೇದಾರ್ಥಗಳನ್ನೂ ನಿರೂಪಿಸುವ ಮೀಮಾಂಸವೇ ಮೊದಲಾದ ಶಾಸ್ತ್ರಗಳನ್ನೂ ನ್ಯಾಯಶಾಸ್ತ್ರವನ್ನೂ (ತರ್ಕ) ಉಪದೇಶಿಸಿದರು. ಸಂಧಿ-ವಿಗ್ರಹ- ಯಾನ- ಆಸನ- ದ್ವೈಧ ಮತ್ತು ಆಶ್ರಯಗಳೆಂಬ ಆರು ವಿಧವಾದ ರಾಜನೀತಿಗಳನ್ನೂ ಗುರುಗಳು ಶಿಷ್ಯರಿಗೆ ಬೋಧಿಸಿದರು.

ಪರೀಕ್ಷಿತಮಹಾರಾಜ, ನಿಜವಾಗಿ ಹೇಳುವದಾದರೆ ರಾಮ-ಕೃಷ್ಣರೇ ಸಮಸ್ತವಿದ್ಯೆಗಳ ಪ್ರವರ್ತಕರು. ಆದ್ದರಿಂದ ಅವರು ಮತ್ತೊಬ್ಬರಿಂದ

ಕಲಿಯಬೇಕಾದುದೇನೂ ಇರಲಿಲ್ಲ. ಆದರೂ ಮನುಷ್ಯರಂತೆ ವ್ಯವಹರಿಸುತ್ತಿದ್ದ ಅವರು ಏಕಸಂಧಿಗ್ರಾಹಿಗಳಾಗಿ ಗುರುಗಳು ಒಮ್ಮೆ ಹೇಳುತ್ತಿದ್ದಂತೆಯೇ ವಿದ್ಯೆಗಳನ್ನು ಗ್ರಹಿಸಿಬಿಡುತ್ತಿದ್ದರು. ಪ್ರಯತ್ನಶೀಲರಾದ ರಾಮಕೃಷ್ಣರು ಅರವತ್ತುನಾಲ್ಕು ಕಲೆಗಳನ್ನೂ ಕೇವಲ ಅರವತ್ತುನಾಲ್ಕು ದಿವಸಗಳಲ್ಲಿಯೇ ಕಲಿತು ಗುರುದಕ್ಷಿಣೆಯನ್ನು ಕೊಡುವ ಸಲುವಾಗಿ ಆಚಾರ್ಯರನ್ನು ಪ್ರಾರ್ಥಿಸಿಕೊಂಡರು.

ಪರೀಕ್ಷಿತಮಹಾರಾಜ, ಸಾಂದೀಪನೀಮುನಿಗಳು ಶ್ರೀಕೃಷ್ಣ- ಬಲರಾಮರು ಅದ್ಭುತವಾದ ಮಹಿಮೆಯುಳ್ಳವರೆಂಬುದನ್ನೂ ಅಲೌಕಿಕವಾದ ಬುದ್ಧಿಯುಳ್ಳವರೆಂಬುದನ್ನೂ ಆ ವೇಳೆಗಾಗಲೆ ತಿಳಿದುಕೊಂಡಿದ್ದರು. ತಮ್ಮ ಪತ್ನಿಯೊಡನೆಯೂ ಸಮಾಲೋಚಿಸಿ ರಾಮ-ಕೃಷ್ಣರಿಗೆ ಗುರುದಕ್ಷಿಣೆಯ ವಿಷಯವಾಗಿ ಹೇಳಿದರು. ''ಎಲೈ, ನನ್ನ ಪ್ರಿಯಶಿಷ್ಯರೆ, ನಿಮ್ಮ ಶ್ರದ್ಧಾಭಕ್ತಿಗಳೇ ಗುರುದಕ್ಷಿಣೆ. ಇಷ್ಟೇ ಸಾಕಾಗಿತ್ತು. ಆದರೂ ನಿಮ್ಮ ಅದ್ಭುತವಾದ ಲೀಲೆಗಳನ್ನು ನೋಡಿ ಅದ್ಭುತವಾದ ಒಂದು ಗುರುದಕ್ಷಿಣೆಯನ್ನೇ ಕೇಳುವ ಮನಸ್ಸಾಗಿದೆ. ಸ್ವಲ್ಪದಿನಗಳ ಹಿಂದೆ ನಮ್ಮ ಏಕಮಾತ್ರಪುತ್ರನು ಪ್ರಭಾಸಕ್ಷೇತ್ರದ ಸಮುದ್ರದಲ್ಲಿ ಮುಳುಗಿ ಸತ್ತುಹೋದನು. ಅವನನ್ನು ಕರೆತಂದರೆ ಅದೇ ನಮ್ಮ ಗುರುದಕ್ಷಿಣೆಯಾದೀತು.''

ರಾಮಕೃಷ್ಣರಿಗೆ ಇದು ಅಸಾಧ್ಯವೆನಿಸಿರಲಿಲ್ಲ ಅವರು ಇಬ್ಬರೂ ದುರಂತ ಪರಾಕ್ರಮರು. ಇಬ್ಬರೂ ಮಹಾರಥಿಗಳು. ಗುರುಗಳಿಗೆ ಹಾಗೆಯೇ ಆಗಲೆಂದು ಹೇಳಿ ಅವರ ಅನುಮತಿಯನ್ನು ಪಡೆದು ರಥದಲ್ಲಿ ಕುಳಿತು ಪ್ರಭಾಸಕ್ಷೇತ್ರಕ್ಕೆ ಹೊರಟೇಬಿಟ್ಟರು. ಪ್ರಭಾಸಕ್ಷೇತ್ರದ ಸಮುದ್ರತೀರಕ್ಕೆ ಹೋಗಿ ಅಲ್ಲಿಸ್ವಲ್ಪಹೊತ್ತುಕುಳಿತರು. ತನ್ನನ್ನು ನೋಡುವ ಸಲುವಾಗಿ ಜಗದೀಶ್ವರರೇ ಆಗಮಿಸಿರುವರೆಂಬುದನ್ನು ತಿಳಿದು ಸಮುದ್ರರಾಜನು ಅತಿಥಿಸತ್ಕಾರಕ್ಕಾಗಿ ಅರ್ಘ್ಯಪಾದ್ಯಗಳೇ ಮೊದಲಾದುವನ್ನು ತೆಗೆದುಕೊಂಡು ರಾಮಕೃಷ್ಣರ ಬಳಿಗೆ ಆಗಮಿಸಿದನು. ದೇವೇಶ್ವರರನ್ನು ಯಥೋಚಿತವಾಗಿ ಸತ್ಕರಿಸಿದ ನಂತರ ಶ್ರೀಕೃಷ್ಣನು ಸಮುದ್ರರಾಜನಿಗೆ ಆಜ್ಞಾಪಿಸಿದನು. ''ಸಮುದ್ರರಾಜ, ಈ ಹಿಂದೆ ನೀನು ನಿನ್ನ ದೊಡ್ಡ ದೊಡ್ಡ ತೆರೆಗಳ ಮೂಲಕ ನಿನ್ನ ತೀರದಲ್ಲಿದ್ದ ನಮ್ಮ ಗುರುಗಳ ಮಗನನ್ನು ನುಂಗಿಹಾಕಿರುವೆ. ಅವನನ್ನು ಶೀಘ್ರವಾಗಿ ಕೊಟ್ಟುಬಿಡು.''

ಸಮುದ್ರರಾಜನು ಹೇಳುತ್ತಾನೆ: 'ದೇವದೇವನೆ, ಕೃಷ್ಣಸ್ವಾಮಿಯೆ, ನಾನು ಗುರುಪುತ್ರನನ್ನು ಸೆಳೆದುಕೊಂಡು ಹೋಗಿರವದಿಲ್ಲ. ನನ್ನ ನೀರಿನ ಕೆಳಭಾಗದಲ್ಲಿ-

ಪಂಚಜನನೆಂಬ ಹೆಸರಿನ ದೊಡ್ಡ ದೈತ್ಯನಿದ್ದಾನೆ. ಆ ಮಹಾಸುರನು ಶಂಖರೂಪವನ್ನು ಧರಿಸಿದ್ದಾನೆ. ನಿಶ್ಚಯವಾಗಿಯೂ ಅವನೇ ಗುರುಪುತ್ರನನ್ನು ಅಪಹರಿಸಿರುವನು.'

ಸಮುದ್ರರಾಜನ ಮಾತನ್ನು ಕೇಳುತ್ತಲೇ ಶ್ರೀಕೃಷ್ಣನು ಸಮುದ್ರದ ತಳಭಾಗಕ್ಕೆ ಹೋಗಿ ಅಲ್ಲಿದ್ದ ಶಂಖಾಸುರನನ್ನು ಸಂಹರಿಸಿದನು. ಆದರೆ ಅವನ ಹೊಟ್ಟೆಯಲ್ಲಿ ಗುರುಪುತ್ರನು ಇರಲೇ ಇಲ್ಲ. ಅವನ ಶರೀರದಲ್ಲಿದ್ದ ಶಂಖವನ್ನು ತೆಗೆದುಕೊಂಡು ಶ್ರೀಕೃಷ್ಣನು ಸಮುದ್ರದ ಹೊರಗೆ ಬಂದು ರಥದಲ್ಲಿ ಕುಳಿತನು. ಗುರುಪುತ್ರನು ಸಮುದ್ರದಲ್ಲಿ ಸಿಕ್ಕದಿರಲು ಶ್ರೀಕೃಷ್ಣನು ಬಲರಾಮನೊಡನೆ ಯಮರಾಜನಿಗೆ ಅತ್ಯಂತ ಪ್ರಿಯವಾಗಿದ್ದ ಸಂಯಮಿನೀ- ಎಂಬ ಪಟ್ಟಣಕ್ಕೆ ಹೋಗಿ ಗಟ್ಟಿಯಾಗಿ ಶಂಖವನ್ನೂದಿದನು. ಶಂಖಧ್ವನಿಯನ್ನು ಕೇಳುತ್ತಲೇ ಸಮಸ್ತಪ್ರಜೆಗಳ ಶಾಸಕನಾದ ಯಮಧರ್ಮನು ಶ್ರೀಕೃಷ್ಣ ಬಲರಾಮರನ್ನು ಆದರದಿಂದ ಸ್ವಾಗತಿಸಿ ಭಕ್ತಿಭಾವದಿಂದ ಕೂಡಿದವನಾಗಿ ಅವರಿಗೆ ವಿಧಿವತ್ತಾಗಿ ಮಹಾಪೂಜೆಯನ್ನು ಸಲ್ಲಿಸಿದನು. ಸಮಸ್ತಪ್ರಾಣಿಗಳ ಹೃದಯದಲ್ಲಿಯೂ ವಿರಾಜಮಾನನಾಗಿರುವ ಸಚ್ಚಿದಾನಂದ ಸ್ವರೂಪನಾದ ಶ್ರೀಕೃಷ್ಣನಿಗೆ ಯಮರಾಜನು ವಿನಮ್ರವಾಗಿ ಹೇಳಿದನು.

''ಲೀಲಾಮನುಷ್ಯ ಹೇ ವಿಷ್ಣೋ, ಯುವಯೋಃ ಕರವಾಮ ಕಿಮ್''! ಲೀಲಾ ಮಾನುಷವಿಗ್ರಹನಾದ ಹೇ ವಿಷ್ಣುವೆ ! ನಾನು ನಿಮ್ಮಿಬ್ಬರಿಗೂ ಯಾವ ಕಾರ್ಯವನ್ನು ಮಾಡಿಕೊಡಲಿ? ಭಗವಂತನು ಹೇಳುತ್ತಾನೆ: ''ಯಮಧರ್ಮ, ಅವನ ಕರ್ಮಬಂಧನಕ್ಕೆ ಅನುಸಾರವಾಗಿ ನಮ್ಮ ಗುರುಪುತ್ರನು ಇಲ್ಲಿಗೆ ತರಲ್ಪಟ್ಟಿದ್ದಾನೆ. ಈಗ ನೀನು ಅವನ ಕರ್ಮಾನುಸಾರವಾದ ಫಲವನ್ನು ಕೊಡಹೋಗದೆ ನನ್ನ ಆಜ್ಞೆಯನ್ನು ಪುರಸ್ಕರಿಸಿ ನನ್ನ ಬಳಿಗೆ ಅವನನ್ನು ಕರೆದುಕೊಂಡು ಬಾ'' ಎಂದನು. ಯಮಧರ್ಮನು ಹಾಗೆಯೇ ಆಗಲೆಂದು ಅವರ ಗುರುಪುತ್ರನನ್ನು ಒಪ್ಪಿಸಿದನು. ಬಲರಾಮಕೃಷ್ಣರು ಗುರುಪುತ್ರನನ್ನು ಗುರುಗಳಿಗೆ ಒಪ್ಪಿಸಿ, ಗುರುಕುಲ ವಿದ್ಯಾಭ್ಯಾಸವನ್ನು ಮುಗಿಸಿ, ಮಧುರಾಪಟ್ಟಣಕ್ಕೆ ಹಿಂತಿರುಗಿದರು.

* * * * *

## 34. ಶ್ರೀಕೃಷ್ಣಭಗವಂತನ ಸರ್ವಾತ್ಮಭಾವ

**ನ ಹ್ಯಸ್ಯಾಸ್ತಿ ಪ್ರಿಯಂ ಕಶ್ಚಿತ್ ನಾಪ್ರಿಯೋ ನಾಸ್ತ್ಯಮಾನಿನಃ।**
**ನೋತ್ತಮೋ ನಾಧಮೋ ನಾಪಿ ಸಮಾನಸ್ಯ ಸಮೋಽಪಿ ವಾ॥**

**ಶ್ರೀ ಮದ್ಭಾಗವತ 10-46-37**

ಅಹಂಕಾರಾದಿಗಳಿಗೆ ಅಧೀನನಾಗದ ಭಗವಂತನಿಗೆ ಈ ಲೋಕದಲ್ಲಿ ಪ್ರಿಯನಾದವನೂ ಇಲ್ಲ. ಅಪ್ರಿಯನಾದವನೂ ಇಲ್ಲ. ಸರ್ವರಲ್ಲಿಯೂ ಸಮದೃಷ್ಟಿಯಿರುವ ಭಗವಂತನಿಗೆ ಉತ್ತಮನೆಂಬುವನೂ ಇಲ್ಲ. ಅಧಮನೆಂಬುವನೂ ಇಲ್ಲ. ಅಸಮಾನನೆಂಬುವನೂ ಇಲ್ಲ.

**(ಭಗವಂತನು ಸೃಷ್ಟಿಯಲ್ಲಿರುವ ಎಲ್ಲಾ ಜೀವರಾಶಿಗಳಲ್ಲಿಯೂ- ಸೂರ್ಯನು ಜಗತ್ತನ್ನೆಲ್ಲ ಬೆಳಗುವಂತೆ- ವ್ಯಾಪಿಸಿಕೊಂಡಿರುತ್ತಾನೆ. ಅವನಿಗೆ ತಂದೆ, ತಾಯಿ, ಮಕ್ಕಳು, ಆತ್ಮೀಯರು, ಪರಕೀಯರು- ಇತ್ಯಾದಿ ಭೇದಗಳಿಲ್ಲ. ಈ ಲೋಕದಲ್ಲಿ ಮಾಡಬೇಕಾದ ಕರ್ಮವೂ ಇರುವದಿಲ್ಲ. ನಿತ್ಯಶುದ್ಧಬುದ್ಧಮುಕ್ತ ಸ್ವಭಾವದವನಾಗಿರುತ್ತಾನೆ- ಎಂದು ಶ್ರುತಿಸ್ಮೃತಿಗಳು ಸಾರುತ್ತಿವೆ.)**

### ಉದ್ಧವನ ವ್ರಜಯಾತ್ರೆ

ಉದ್ಧವನು ವೃಷ್ಣಿವಂಶೀಯರಲ್ಲಿ ಪ್ರಧಾನಪುರುಷನಾಗಿದ್ದನು. ಬೃಹಸ್ಪತಿಯ ಸಾಕ್ಷಾತ್ ಶಿಷ್ಯನಾಗಿದ್ದು ಅವನು ಪರಮಬುದ್ಧಿಶಾಲಿಯೂ ಆಗಿದ್ದನು. ಮತ್ತು ಶ್ರೀಕೃಷ್ಣನ ಮಂತ್ರಿಯೂ ಪ್ರಿಯಸಖನೂ ಆಗಿದ್ದನು. ಒಂದು ದಿನ ಶ್ರೀಕೃಷ್ಣನು ತನ್ನ ಪ್ರಿಭಕ್ತನಾದ ಉದ್ಧವನನ್ನು ಕುರಿತು ಹೀಗೆಂದನು: ''ಸೌಮ್ಯನೆ, ನೀನು ಈಗಲೆ ಗೋಕುಲಕ್ಕೆ ಹೋಗು; ಅಲ್ಲಿರುವ ನನ್ನ ತಂದೆ-ತಾಯಿಗಳನ್ನು ಆನಂದಗೊಳಿಸು. ಗೋಪಿಕಾಸ್ತ್ರೀಯರ ಮನಸ್ಸು ನನ್ನಲ್ಲಿಯೇ ಸೇರಿಹೋಗಿಬಿಟ್ಟಿದೆ. ನನಗಾಗಿ ಅವರು ಪತಿ- ಪುತ್ರರನ್ನು ಹಾಗೂ ಜ್ಞಾತಿ ಬಂದುಗಳನ್ನೂ ತೊರೆಯುಬಿಟ್ಟಿದ್ದಾರೆ. ''ನಾನು ಪುನಃ ನಿಮ್ಮಲ್ಲಿಗೆ ಬರುತ್ತೇನೆ''- ಹೀಗೆಂದು ಸಂದೇಶವನ್ನು ಹೇಳಿ ಉದ್ಧವನನ್ನು ನಂದಗೋಕುಲಕ್ಕೆ ಕಳುಹಿಸಿದನು. ಉದ್ಧವನು ಸೂರ್ಯಾಸ್ತಸಮಯಕ್ಕೆ ನಂದಗೋಕುಲವನ್ನು ಸೇರಿದನು. ನಂದಗೋಪನು ವಾಸುದೇವನೇ ಬಂದಿರುವನೆಂದು ಭಾವಿಸಿ ಪ್ರೀತಿಯಿಂದ ಉದ್ಧವನನ್ನು ಸನ್ಮಾನಿಸಿದನು. ಶ್ರೀಕೃಷ್ಣನಲ್ಲಿಯೇ ಅನುರಕ್ತನಾಗಿದ್ದ ನಂದಗೋಪನು ಗದ್ಗದನಾಗಿ

ಮಾತನಾಡಲಾರದೆ ಸುಮ್ಮನಾದನು. ಆಗ ಉದ್ಧವನು ಆನಂದಭರಿತನಾಗಿ ನಂದಗೋಪ- ಯಶೋದೆಯರಿಗೆ ಹೀಗೆ ಹೇಳಿದನು.

ಮಾನವನೆ, ನೀವಿಬ್ಬರೂ ದೇಹಧಾರಿಗಳಲ್ಲಿಯೇ ಅತ್ಯಂತ ಶ್ಲಾಘ್ಯತಮರಾಗಿರುವಿರಿ. ಅಖಿಲಲೋಕಗುರುವಾದ ಶ್ರೀಮನ್ನಾರಾಯಣನಲ್ಲಿ ನಿಮಗೆ ಈ ವಿಧವಾದ ಪುತ್ರವಾತ್ಸಲ್ಯವಿರುವದಲ್ಲವೆ? ನಂದ, ನಿನ್ನ ಮಕ್ಕಳಾದ ರಾಮ-ಕೃಷ್ಣರು ಸಾಮಾನ್ಯರಲ್ಲ. ಪುರಾಣಪುರುಷರು. ಅವರು ಈ ಅಖಂಡವಿಶ್ವಕ್ಕೂ ಉಪಾದಾನ ನಿಮಿತ್ತಕಾರಣರೂ ಆಗಿರುತ್ತಾರೆ. ಮುಕುಂದನು (ಕೃಷ್ಣ) ಪುರುಷನಾದರೆ ಬಲರಾಮನು ಪ್ರಕೃತಿಯಾಗಿರುತ್ತಾನೆ. ರಾಮ-ಕೃಷ್ಣರು ಸಕಲಪ್ರಾಣಿಗಳಲ್ಲಿಯೂ ಪ್ರವೇಶಿಸಿ ನಾನಾ ಭೇದವುಳ್ಳ ಚೈತನ್ಯಾತ್ಮಕವಾದ ಜೀವರನ್ನು ನಿಯಂತ್ರಿಸುತ್ತಾರೆ.

ಯಾವ ಜೀವನು- ಪ್ರಾಣಪ್ರಯಾಣಸಮಯದಲ್ಲಿ ಶುದ್ಧವಾದ ಮನಸ್ಸನ್ನು ಒಂದುಕ್ಷಣವಾದರೂ ಭಗವಂತನಲ್ಲಿ ಸಮಾವೇಶಗೊಳಿಸವನೋ ಅಂಥವನು ಅತಿಶೀಘ್ರವಾಗಿ ಸಮಸ್ತವಾದ ಕರ್ಮವಾಸನೆಗಳನ್ನೂ ಕಳೆದುಕೊಂಡು (ಮೊದಲಿನಂತೆ) ಸೂರ್ಯನಂತೆ ತೇಜಸ್ವಿಯೂ ಬ್ರಹ್ಮಮಯನೂ ಆಗಿ ಪರಮಗತಿಯನ್ನು ಹೊಂದುತ್ತಾನೆ.

ಭಗವಂತನಾದ ಶ್ರೀಕೃಷ್ಣನು ಸಮಸ್ತಪ್ರಾಣಿಗಳ ಆತ್ಮಸ್ವರೂಪನೂ ಪರಮಕಾರಣನೂ ಆಗಿರುತ್ತಾನೆ. ಭಕ್ತರ ಅಭಿಲಾಷೆಗಳನ್ನು ಪೂರ್ಣಗೊಳಿಸಿ ಕೊಡುವದಕ್ಕಾಗಿಯೂ ಮತ್ತು ಭೂಭಾರವನ್ನು ಇಳಿಸುವದಕ್ಕಾಗಿಯೂ ಅವನು ಇಲ್ಲಿ ಅವತರಿಸಿದ್ದಾನೆ. ಮಹಾತ್ಮರಾದ ದಂಪತಿಗಳೆ, ಅಂತಹ ಪರಮಪುರುಷನಾದ ಪರಮಾತ್ಮನಲ್ಲಿ ನೀವು ನಿರತಿಶಯವಾದ ಪುತ್ರವಾತ್ಸಲ್ಯವನ್ನು ಹೊಂದಿರುವಿರಿ. ಇದಕ್ಕಿಂತಲೂ ಮಿಗಿಲಾದ ಶುಭಕರ್ಮವು ಬೇರೆ ಯಾವದಿದೆ? ಬೇರಾವ ಶುಭಕರ್ಮವನ್ನು ನೀವು ಮಾಡಿ ಮುಗಿಸಬೇಕಾಗಿದೆ? ನಂದ, ಭಕ್ತವತ್ಸಲನಾದ ಯದುವಂಶಶಿರೋಮಣಿಯಾದ ಭಗವಾನ್ ಶ್ರೀಕೃಷ್ಣನು ಸ್ವಲ್ಪದಿನಗಳಲ್ಲಿಯೇ ವ್ರಜಕ್ಕೆ ಬರುವನು. ಮಾತಾಪಿತೃಗಳಾದ ನಿಮ್ಮನ್ನು ತನ್ನ ಕರುಣಾಕಟಾಕ್ಷವೀಕ್ಷಣದಿಂದ ಆನಂದಗೊಳಿಸುತ್ತಾನೆ. ಸಮಸ್ತ ಯದುವಂಶೀಯರಿಗೂ ದ್ರೋಹಿಯಾದ ಕಂಸನನ್ನು ರಂಗಮಂಟಪದಲ್ಲಿ ಸಂಹರಿಸಿದ ನಂತರ “ನಾನು ವ್ರಜಕ್ಕೆ ಶೀಘ್ರವಾಗಿಯೇ ಬರುತ್ತೇನೆ” ಎಂಬ ಯಾವ ಮಾತನ್ನು ನಿಮ್ಮ ಬಳಿ ಹೇಳಿದ್ದನೋ ಆ ಮಾತನ್ನು ಶ್ರೀಕೃಷ್ಣನು ಸತ್ಯದ ಮಾತನ್ನಾಗಿ ಮಾಡುತ್ತಾನೆ.

ಮಹಾಭಾಗ್ಯಶಾಲಿಗಳೆ, ನಂದ- ಯಶೋದೆಯರೆ, ದುಃಖಿಸಬೇಡಿರಿ. ಕಟ್ಟಿಗೆಯೊಳಗೆ ಬೆಂಕಿಯು ಇರುವಂತೆ- ಸಮಸ್ತಪ್ರಾಣಿಗಳ ಹೃದಯದಲ್ಲಿಯೂ ಇರುವ ಜಗದಾನಂದಕಂದನಾದ ಶ್ರೀಕೃಷ್ಣನನ್ನು ನೀವು ಸಮೀಪದಲ್ಲಿಯೇ ಕಾಣುವಿರಿ. ಅಹಂಕಾರಾದಿ ಮಾಯಾಗುಣಗಳಿಗೆ ಅಧೀನನಾಗದ ಅವನಿಗೆ ಈ ಲೋಕದಲ್ಲಿ ಪ್ರಿಯನಾದವನೂ ಇಲ್ಲ, ಅಪ್ರಿಯನಾದವನೂ ಇಲ್ಲ. ಸರ್ವರಲ್ಲಿಯೂ ಸಮದೃಷ್ಟಿಯಿಂದ ಇರುವ ಅವನಿಗೆ ಉತ್ತಮನೆಂಬುವನೂ ಇಲ್ಲ, ಅಧಮನೆಂಬುವನೂ ಇಲ್ಲ, ಅಸಮಾನನೆಂಬುವನೂ ಇಲ್ಲ.

ಪರಮಪುರುಷನಾದ ಶ್ರೀಕೃಷ್ಣನಿಗೆ ತಾಯಿ, ತಂದೆ-ಪತ್ನಿ, ಮಕ್ಕಳು ಆತ್ಮೀಯರು, ಪರಕೀಯರು- ಎಂಬುವವರು ಯಾರೂ ಇಲ್ಲ. ಜನ್ಮಗಳೂ ಇಲ್ಲ. ಈ ಲೋಕದಲ್ಲಿ ಮಾಡಬೇಕಾದ ಕರ್ಮವೇನೂ ಇಲ್ಲ. ಆದರೂ ಸಾಧುಗಳ ರಕ್ಷಣೆಗಾಗಿಯೂ ತನ್ನ ಲೀಲಾವಿನೋದಗಳನ್ನು ಭಕ್ತರಿಗೆ ತೋರಿಸುವ ಸುಲವಾಗಿಯೂ ದೇವತೆಯೇ ಮೊದಲಾದ ಸಾತ್ವಿಕಯೋನಿಗಳಲ್ಲಿಯೂ ಮತ್ಸ್ಯವೇ ಮೊದಲಾದ ಮಿಶ್ರಯೋನಿ ಗಳಲ್ಲಿಯೂ ಅವತರಿಸುತ್ತಾನೆ. ನಂದಗೋಪ, ಭಗವಂತನಿಗೆ ಹುಟ್ಟುಸಾವು ಗಳು ಇಲ್ಲ. ಅವನು ಗುಣಾತೀತನಾಗಿದ್ದರೂ ಮಾಯಾಮಯವಾದ ಕ್ರೀಡೆಯನ್ನು ಆಡುತ್ತಾ ಸತ್ವ-ರಜ-ಸ್ತಮಗಳೆಂಬ ಮೂರು ಗುಣಗಳನ್ನು ಸ್ವೀಕರಿಸಿ ಈ ಜಗತ್ತನ್ನು ಸೃಷ್ಟಿಮಾಡುತ್ತಾನೆ. ಪೋಷಿಸುತ್ತಾನೆ, ಮತ್ತು ಲಯಗೊಳಿಸುತ್ತಾನೆ.

ಹುಡುಗರು ಅಪ್ಪಾಲೆ- ತಿಪ್ಪಾಲೆಯಾಡುವಾಗ ಅವರ ಸುತ್ತಲೂ ಇರುವ ಪದಾರ್ಥಗಳೆಲ್ಲವೂ ತಿರುಗುತ್ತಿರುವಂತೆ ಕಾಣುತ್ತದೆ. ಆದರೆ ಆ ವಸ್ತುಗಳು ವಾಸ್ತವವಾಗಿ ತಿರುಗುತ್ತಿರುವದಿಲ್ಲ. ಅಂತೆಯೇ ಚಿತ್ತವೇ ಎಲ್ಲವನ್ನೂ ಮಾಡುವಹಾಗಿರುತ್ತದೆ. ಆದರೆ ಆ ಶುದ್ಧಚೈತನ್ಯದಲ್ಲಿ ಅಹಂಬುದ್ಧಿಯು ಪ್ರವೇಶವಾಗುವದರಿಂದ ಆತ್ಮನು ಕರ್ತೃವಿನಂತೆ ಪ್ರತೀತನಾಗುತ್ತಾನೆ. ನಂದ, ಶ್ರೀಕೃಷ್ಣಸ್ವಾಮಿಯು ನಿಮ್ಮಿಬ್ಬರಿಗೆ ಮಾತ್ರವೇ ಪುತ್ರನಾಗಿಲ್ಲ, ಸಮಸ್ತಪ್ರಾಣಿಗಳಿಗೂ ಆತ್ಮಸ್ವರೂಪನೇ ಆಗಿರುತ್ತಾನೆ. ಎಲ್ಲರಿಗೂ ಪುತ್ರನೂ ತಂದೆ ಮತ್ತು ತಾಯಿಯೂ ಆಗಿರುತ್ತಾನೆ.

ನಂದಗೋಪ, ಲೋಕದಲ್ಲಿ ಕಾಣಲ್ಪಡುವ ಮತ್ತು ಕೇಳಲ್ಪಡುವ ವಸ್ತುಗಳಲ್ಲಿ, ಹಿಂದಕ್ಕೆ ಸಂಬಂಧಿಸಿದ, ವರ್ತಮಾನಕ್ಕೆ ಸಂಬಂಧಿಸಿದ ಮತ್ತು ಭವಿಷ್ಯತ್ತಿಗೆ ಸಂಬಂಧಿ ಸಿದ ವಸ್ತುಗಳಲ್ಲಿ ಸ್ಥಾವರ- ಜಂಗಮವಸ್ತುಗಳಲ್ಲಿ- ಮಹತ್ತರರ ಮತ್ತು ಅಲ್ಪವಾದ

ವಸ್ತುಗಳಲ್ಲಿ ಯಾವದೇ ವಸ್ತುವಾದರೂ ಅಚ್ಯುತನಿಗಿಂತ ಬೇರೆಯಾದ ವಸ್ತುವೆಂದು ಹೇಳಬಾರದು. ಎಲ್ಲಾ ವಸ್ತುಗಳಲ್ಲಿಯೂ ಅಚ್ಯುತನಿದ್ದಾನೆ. ''ಸರ್ವಂ ವಿಷ್ಣುಮಯಂ ಜಗತ್'' ಎಂಬಂತೆ ಪರಮಾರ್ಥವಾಗಿ ಸರ್ವವೂ ಅಚ್ಯುತನೇ ಆಗಿರುತ್ತದೆ.

* * * * *

## 35. ಜಗತ್ತೆಲ್ಲವೂ ಶ್ರೀಮಹಾವಿಷ್ಣುವೇ

ದೃಷ್ಟಂ ಶ್ರುತಂ ಭೂತಭವದ್ಭವಿಷ್ಯತ್
ಸ್ಥಾಸ್ನುಶ್ಚರಿಷ್ಣುರ್ಮಹದಲ್ಪಕಂ ಚ ।
ವಿನಾಚ್ಯುತಾದ್ ವಸ್ತುತರಾಂ ನ ವಾಚ್ಯಂ
ಸ ಏವ ಸರ್ವಂ ಪರಮಾರ್ಥಭೂತಃ ॥

* * * * *

ಶ್ರೀ ಮದ್ಭಾಗವತ 10-46-43

ಲೋಕದಲ್ಲಿ ಕಂಡುಬರುವ ಮತ್ತು ಕೇಳಲ್ಪಡುವ ವಸ್ತುಗಳಲ್ಲಿ ಗತ, ವರ್ತಮಾನ, ಭವಿಷ್ಯತ್ತುಗಳಿಗೆ ಸಂಬಂಧಿಸಿದ ವಸ್ತುಗಳಲ್ಲಿ ಹಾಗೂ ಯಾವದೇ ವಸ್ತುವಾದರೂ ಅಚ್ಯುತನಿಗಿಂತ ಬೇರೆಯಾದ ವಸ್ತುವೆನ್ನಬಾರದು. ಎಲ್ಲ ವಸ್ತುಗಳಲ್ಲಿಯೂ ಅಚ್ಯುತ ನಿರುತ್ತಾನೆ. ಸರ್ವವೂ ಅಚ್ಯುತನೇ ಆಗಿರುತ್ತಾನೆ.

( ವಿಷ್ಣು- ಎಂಬ ನಾವುವು ಸರ್ವವ್ಯಾಪಕನಾದ ಹಾಗೂ ನಿತ್ಯಶುದ್ಧಬುದ್ಧಮುಕ್ತನಾದ ಭಗವಂತನನ್ನೇ ತಿಳಿಸುತ್ತದೆ. ಕಾಲ, ದೇಶ, ಜೀವರುಗಳು, ಹದಿನಾಲ್ಕು ಲೋಕಗಳಲ್ಲಿರುವ ಸ್ಥಾವರ- ಜಂಗಮ ಪ್ರಾಣಿಗಳು- ಎಲ್ಲರೂ ಅಚ್ಯುತನೇ ಆಗಿದ್ದಾರೆ. ''ಸರ್ವಂ ವಿಷ್ಣುಮಯಂ ಜಗತ್''- ಎಂದರೆ ಪರಮಾರ್ಥದಲ್ಲಿ ಎಲ್ಲವೂ ಸರ್ವವ್ಯಾಪಕವಾದ ಶ್ರೀ ವಿಷ್ಣುವೇ ಆಗಿರುತ್ತದೆ.)

### ಸರ್ವಂ ವಿಷ್ಣುಮಯಂ ಜಗತ್

ಗೋಕುಲದ ಗೋಪಿಕಾಸ್ತ್ರೀಯರು ಶ್ರೀಕೃಷ್ಣನಂತೆಯೇ ಇದ್ದ, ಕೃಷ್ಣಾನುಚರನಾದ ಉದ್ಧವನನ್ನು ನೋಡಿದರು. ಅವನನ್ನು ಗೋಪಿಯರು ಸತ್ಕರಿಸಿ ಏಕಾಂತದಲ್ಲಿ ಹೀಗೆಂದರು ''ಉದ್ಧವ, ನಾವು ನಿನ್ನನ್ನು ಯದುಪತಿಯ ಜೊತೆಗಾರನೆಂದು

ತಿಳಿಯುತ್ತೇವೆ. ನಿನ್ನನ್ನು ಶ್ರೀಕೃಷ್ಣನು ಕಳುಹಿಸಿಕೊಟ್ಟಿರುತ್ತಾನೆ. ನಿಮ್ಮ ಜೀವನವು ಸಫಲವಾಗಿದೆ. ನೀವೇ ಧನ್ಯರು.'' ಆಗ ಉದ್ಧವನು ಗೋಪಿಯರನ್ನು ಕುರಿತು ಹೀಗೆಂದನು: ಗೋಪಿಯರೆ, ಶ್ರೀಕೃಷ್ಣನು ನಿಮ್ಮೆಲ್ಲರಿಗೂ ಪರಮಸುಖವನ್ನು ಉಂಟುಮಾಡಲು ಈ ಸಂದೇಶವನ್ನು ಕಳುಹಿಸಿರುತ್ತಾನೆ. ಉತ್ತಮ ಕೀರ್ತಿಯುಳ್ಳ ಭಗವಂತನಲ್ಲಿ ನಿಮ್ಮಿಂದ ಅತ್ಯಂತ ಶ್ರೇಷ್ಠವಾದ ಪ್ರೇಮದ ಭಕ್ತಿಪಂಥವು ಪ್ರಾರಂಭವಾಗಿದೆ. ನಿಮ್ಮ ಪ್ರಿಯತಮನಾದ ಭಗವಾನ್ ಶ್ರೀಕೃಷ್ಣನು ನಿಮ್ಮೆಲ್ಲರಿಗೂ ಪರಮಸುಖವನ್ನು ಉಂಟುಮಾಡಲು ಪ್ರೀತಿಯ ಈ ಸಂದೇಶವನ್ನು ಕಳುಹಿಸಿರುತ್ತಾನೆ. ಅದನ್ನು ಈಗ ಯಥಾವತ್ತಾಗಿ ಲಾಲಿಸಿರಿ.

**ಮಯ್ಯಾವೇಶ್ಯ ಮನಃ ಕೃತ್ಸ್ನಂ ವಿಮುಕ್ತಾಶೇಷವೃತ್ತಿ ಯತ್ ।**
**ಅನುಸ್ಮರನ್ತೋ ಮಾಂ ನಿತ್ಯಂ ಅಚಿರಾನ್ಮಾಮುಪೈಷ್ಯಥ ॥**

ನನ್ನಲ್ಲಿಯೇ ಮನಸ್ಸನ್ನು ನೆಲೆಗೊಳಿಸಿ ಇತರ ಎಲ್ಲಾ ವ್ಯವಹಾರಗಳಿಂದಲೂ ನಿವೃತ್ತರಾಗಿ ನಿತ್ಯನಿರಂತರವಾಗಿ ನನ್ನನ್ನು ಸದಾ ಕಾಲದಲ್ಲಿಯೂ ಧ್ಯಾನಿಸುತ್ತಿದ್ದರೆ ಬಹಳ ಬೇಗನೆ ನನ್ನನ್ನು ಹೊಂದುವಿರಿ.

ಹೀಗೆ ಗೋಪಿಯರಿಗೆ ತಮ್ಮ ಪ್ರಿಯತಮನ ಸಂದೇಶವನ್ನು ಕೇಳಿ ಮಹದಾನಂದ ವಾಯಿತು. ಶ್ರೀಕೃಷ್ಣ ಸಂದೇಶದಿಂದಾಗಿ ಗೋಪಿಯರು ಅವನ ದಿವ್ಯಸ್ವರೂಪವನ್ನೂ ಲೀಲಾವಿನೋದಗಳನ್ನೂ ಸ್ಮರಿಸಿಕೊಂಡರು. ಇದರಿಂದ ಸುಪ್ರೀತರಾದ ಗೋಪಿಯರು ಉದ್ಧವನಿಗೆ ಹೀಗೆ ಹೇಳಿದರು.

ಉದ್ಧವಮಹಾಶಯ, ಯಾದವರಿಗೆ ಉಪಟಳವನ್ನು ಕೊಡುತ್ತಿದ್ದು ಅವರ ವಿಷಯದಲ್ಲಿ ಹಲವಾರು ಪಾಪಕೃತ್ಯಗಳನ್ನು ಮಾಡಿದ ದುಷ್ಟಕಂಸನು ಅನುಯಾಯಿ ಗಳೊಡನೆ ಮರಣಹೊಂದಿದನೆಂಬುದು ಸೌಭಾಗ್ಯದ ಮತ್ತು ಆನಂದದ ವಿಷಯವೇ ಆಗಿದೆ. ಶ್ರೀಕೃಷ್ಣನ ನೆಂಟರಿಷ್ಟರು ಮತ್ತು ಗುರುಜನರು ಪೂರ್ಣಮನೋರಥರಾದ ರೆಂಬುದೂ ಆನಂದಿಸಬೇಕಾದ ವಿಷಯವೇ ಆಗಿದೆ. ಈಗ ನಮ್ಮ ಶ್ಯಾಮಸುಂದರನು ತಂದೆ-ತಾಯಿಗಳ, ಬಂಧುಬಳಗದವರ ಮತ್ತು ಸಹೃದಯದವರ ಜೊತೆಯಲ್ಲಿ ಸುಕುಶಲಿಯಾಗಿರುವ ಮಾತನ್ನು ಕೇಳಿ ನಾವು ಅಮೃತಪಾನಮಾಡಿದಷ್ಟು ಸಂತೋಷಗೊಂಡಿದ್ದೇವೆ. ಆದರೆ ಅವನ ವಿಷಯವಾಗಿ ನಾವು ಒಂದು ಮಾತನ್ನು

ಕೇಳಬಯಸುತ್ತೇವೆ, ನಾವು ಸ್ನೇಹಪೂರ್ಣವಾದ ನಾಚಿಕೆಯಿಂದ ಕೂಡಿದ ಮಂದಹಾಸದಿಂದಲೂ ಉದಾರವಾದ ನೋಟದಿಂದಲೂ ಅವನ ಸೇವೆಯನ್ನು ಮಾಡುತ್ತಿದ್ದೆವು. ಮುಕುಂದನೂ ಹಾಗೆಯೇ ಕಿರುನಗೆಯಿಂದಲೂ ಕಡೆಗಣ್ಣಿನ ನೋಟದಿಂದಲೂ ಹುಬ್ಬುಹಾರಿಸುವಿಕೆಯಿಂದಲೂ ಮಧುರವಾದ ಮಾತುಗಳಿಂದಲೂ ನಮ್ಮನ್ನು ಸಂತೃಪ್ತಿಗೊಳಿಸುತ್ತಿದ್ದನು. ಆಗ ಮಧುರಾಪಟ್ಟಣದಲ್ಲಿರುವ ಸ್ತ್ರೀಯರೂ ನಮ್ಮಂತೆಯೇ ಅವನನ್ನು ಸತ್ಕರಿಸುತ್ತಿರುವರೆ? ನಮ್ಮ ಇನಿಯನೂ ಅವರನ್ನು ಪ್ರೀತಿಸುತ್ತಿರುವನೆ ?

ಮತ್ತೊಬ್ಬಗೋಪಿಯು ಹೇಳುತ್ತಾಳೆ. ಗೆಳತಿಯರೆ, ನಿಮ್ಮೆಲ್ಲರಿಗೂ ತಿಳಿದಿರುವಂತೆ ನಮ್ಮ ಪ್ರಿಯತಮನಾದ ಶ್ಯಾಮಸುಂದರನು ಪ್ರೇಮದ ಕಲೆಯಲ್ಲಿ ವಿಶೇಷ ಪಾಂಡಿತ್ಯವನ್ನು ಪಡೆದಿರುತ್ತಾನೆ. ಶ್ರೇಷ್ಠರೆನಿಸಿಕೊಂಡ ಸ್ತ್ರೀಯರೂ ಅವನನ್ನು ಪ್ರೀತಿಸುತ್ತಾರೆ. ಹೀಗಿರುವಾಗ ನಗರದ ಸ್ತ್ರೀಯರು ಆಡುವ ಮಧು-ಮಧುರವಾದ ಮಾತುಗಳಿಂದಲೂ, ಅವರ ಹಾವಭಾವಗಳಿಂದಲೂ ಕಟಾಕ್ಷದ ವೀಕ್ಷಣಗಳಿಂದಲೂ ಸತ್ಕೃತನಾದ ಆವನು ಹೇಗೆ ತಾನೆ ಅವರ ಪ್ರೇಮಪಾಶಗಳಿಮದ ಬಂಧಿಸಲ್ಪಡದೆ ಇದ್ದಾನು?

ಮತ್ತೊಬ್ಬ ಗೋಪಿಯು ಪ್ರಶ್ನಿಸುತ್ತಾಳೆ. ಸಾಧು ಪುರುಷನೆ, ನಾನು ಕೇಳಲಿರುವ ಈ ಪ್ರಶ್ನೆಗೆ ನೀನು ಉತ್ತರವನ್ನು ಕೊಡಬೇಕು. ನಮ್ಮ ಪ್ರಿಯತಮನನ್ನು ಓಲೈಸುವ ಸುಲವಾಗಿ ಪುರಸ್ತ್ರೀಯರ ಒಂದು ದೊಡ್ಡ ಗೋಷ್ಠಿಯೇ ಸೇರಿರುತ್ತದೆ. ಅವರ ಮಧ್ಯದಲ್ಲಿ ನಮ್ಮ ಇನಿಯನು ಕುಳಿತು ಬೇಕುಬೇಕಾದಂತೆ ಸಚ್ಛಂದವಾಗಿ ಕಾಮಿನಿಯರ ಮನಸ್ಸನ್ನು ತಣಿಸುವ ಮಾತುಗಳನ್ನು ಆಡುತ್ತಿರುತ್ತಾನೆ. ಆ ಸಮಯದಲ್ಲಿ ಗೋಕುಲದ ಗೊಲ್ಲತಿಯರನ್ನು ಒಮ್ಮೆಯಾದರೂ ಸ್ಮರಿಸುವನೆ?

ಮತ್ತೊಬ್ಬ ಗೋಪಿಯು ಪ್ರಶ್ನಿಸುತ್ತಾಳೆ. ಉದ್ಧವಮಹಾಶಯ ನಮ್ಮ ಪ್ರಿಯತಮನು ಆ ದಿವ್ಯರಾತ್ರಿಗಳನ್ನಾದರೂ ಸ್ಮರಿಸುವನೆ? ವಿಕಸಿತವಾದ ಬಿಳಿಯ ನೈದಿಲೆಗಳಿಂದಲೂ ಮಲ್ಲಿಗೆ ಹೂವುಗಳಿಂದಲೂ ಶರತ್ಕಾಲದ ಬೆಳದಿಂಗಳಿಂದಲೂ ವ್ಯಾಪ್ತವಾದ ವೃಂದಾವನದಲ್ಲಿ ಆ ರಾತ್ರಿಗಳಲ್ಲಿ ನಮ್ಮ ಪ್ರಿಯತಮನು ರಾಸಮಂಡಲ ವನ್ನು ಮಾಡಿಕೊಂಡು ನಮ್ಮೊಡನೆ ನೃತ್ಯಮಾಡುತ್ತಿದ್ದನು. ನಿಶ್ಚಯವಾಗಿಯೂ ಎಷ್ಟು ಸುಂದರವಾದದ್ದು ಆ ರಾಸಲೀಲೆ! ನಂದಕಿಶೋರನ ಜೊತೆಯಲ್ಲಿ ನಾವು

ನೃತ್ಯವನ್ನಾಡುವಾಗ ನಮ್ಮ ಕಾಲಂದುಗೆಗಳು ಝಣಝಣಿಸುತ್ತಿದ್ದವು. ನಾವೆಲ್ಲರೂ ಸೇರಿ ಶ್ರೀಕೃಷ್ಣನ ಲೀಲಾಪ್ರಸಂಗಗಳನ್ನು ಆನಂದದಿಂದ ಹಾಡುತ್ತಿದ್ದೆವು. ಹೀಗೆ ಅವನು ನಮ್ಮೊಡನೆ ನಾನಾ ಪ್ರಕಾರವಾದ ಕ್ರೀಡೆಗಳನ್ನು ಆಡುತ್ತಿದ್ದನು. ಅಂಥ ರಾತ್ರಿಗಳನ್ನು ನಾವೆಂದೂ ಮರೆಯಲಾರೆವು. ಆದರೆ ಅವನಿಗೆ ಅದರ ಸ್ಮರಣೆಯಾದರೂ ಇರುವದೆ?

ಮತ್ತೊಬ್ಬ ಗೋಪಿಯು ಹೇಳುತ್ತಾಳೆ : ಉದ್ಧವನೆ ನಮ್ಮ ಇನಯನ ಹಂಸದ ನಡೆಗೆಯಂತಹ ಗಾಂಭೀರ್ಯ, ಮನೋಹರವಾದ ಕಿರುನಗೆ, ಚೇತೋಪಹಾರಿಯಾದ ಕುಡಿನೋಟ, ಮಧು-ಮಧುರವಾದ ಮಾತು, ಎಲ್ಲರನ್ನೂ ಹುಚ್ಚಾಗಿಸುವ ಕೊಳಲಿನ ಕರೆ- ಇತ್ಯಾದಿಗಳಿಂದ ಶ್ರೀಕೃಷ್ಣಭಗವಂತನು ನಮ್ಮ ಮನಸ್ಸನ್ನೇ ಅಪಹರಿಸಿಬಿಟ್ಟಿದ್ದಾನೆ. ನಮ್ಮ ಮನಸ್ಸೇ ಅವನಲ್ಲಿ ಸೇರಿಹೋಗಿರುವಾಗ ಅವನನ್ನು ಬಿಟ್ಟು ಬೇರೊಂದರ ಸ್ಮರಣೆಯೇ ನಮಗೆ ಆಗುತ್ತಿಲ್ಲ ಎನ್ನುತ್ತ ಗೋಕುಲನಾಥನೆ, ಗೋವಿಂದನ, ತಂದೆತಾಯಿಗಳು, ಸಹೃದಯರು, ನಿನಗೆ ಅತಿಪ್ರಿಯವಾದ ಗೋವುಗಳು ಇರುವ ಗೋಕುಲವನ್ನು ಬಿಟ್ಟು ನೀನು ನಮ್ಮನ್ನು ಕಾಣದೆ ಇರುವಲ್ಲಿ ನಾವು ದುಃಖಸಾಗರದಲ್ಲಿ ಮುಳುಗಿಹೋಗಿದ್ದೇವೆ. ನಮ್ಮನ್ನು ಉದ್ಧರಿಸು ಎಂದು ಕೃಷ್ಣನನ್ನು ಅಂಗಲಾಚಿ ಗೋಪಿಯರೆಲ್ಲರೂ ಬೇಡಿಕೊಂಡರು. ಆಗ ಭಗವಂತನು ಗೋಪಿಯರಿಗೆ ದರ್ಶನವನ್ನು ನೀಡಿದನು.

* * * * *

## 36. ನಂದಗೋಪಾದಿಗಳು ಉದ್ಧವನಿಗೆ ಹೇಳಿದ್ದು

**ಮನಸೋ ವೃತ್ತಯೋ ನಃ ಸ್ಯುಃ ಕೃಷ್ಣಪಾದಾಂಬುಜಾಶ್ರಯಾಃ।**
**ವಾಚೋऽಭಿಧಾಯಿನೀರ್ನಾಮ್ನಾಂ ಕಾಯಸ್ತತ್ ಪ್ರಹ್ವಣಾದಿಷು॥**

**ಶ್ರೀ ಮದ್ಭಾಗವತ 10-47-66**

ಉದ್ಧವಮಹಾಶಯನೆ, ನಮ್ಮ ಚಿತ್ತವೃತ್ತಿಗಳು ಯಾವಾಗಲೂ ಶ್ರೀಕೃಷ್ಣ ಪಾದಕಮಲಗಳನ್ನೇ ಆಶ್ರಯಿಸಿ ಇರಲಿ. ನಮ್ಮ ವಾಣಿಯು ನಿತ್ಯನಿರಂತರವಾಗಿ ಅವನ ಶುಭನಾಮಗಳನ್ನು ಹಾಡುತ್ತಿರಲಿ. ನಮ್ಮ ಶರೀರವು ಅವನಿಗೆ ಪ್ರಣಾಮ ಮಾಡುವದಕ್ಕೂ ಮತ್ತು ಅವನ ಸೇವೆ ಮಾಡುವದಕ್ಕೂ ಮೀಸಲಾಗಿ ಇರಲಿ.

(ನಂದಗೋಪನೇ ಮೊದಲಾದವರು ಶ್ರೀಕೃಷ್ಣಭಗವಂತನಲ್ಲಿ ಅನಿರ್ವ್ಯಾಜ ಪ್ರೇಮವನ್ನು ಹೊಂದಿದ್ದು, ಅವರುಗಳು ಮಾಡಿರುವ ಪುಣ್ಯಕಾರ್ಯಗಳ ಫಲವಾಗಿ ಶ್ರೀಕೃಷ್ಣನಲ್ಲಿಯೇ ಅಚಲವಾದ ಭಕ್ತಿಯನ್ನು ಹೊಂದಿದ್ದು ಕೃತಾರ್ಥರಾಗಿದ್ದಾರೆ. ಆ ಆದರ್ಶವನ್ನು ನಾವುಗಳೂ ಸಹ ಆದರಿಸಿ ಭಗವದ್ಭಕ್ತಿಯನ್ನು ಅವಲಂಬಿಸಿ ಉದ್ಧಾರವಾಗೋಣ.)

## ಶ್ರೀಕೃಷ್ಣನು ಅಕ್ರೂರನಮನೆಗೆ ಹೋದದ್ದು

ಶ್ರೀಕೃಷ್ಣನು ಅಕ್ರೂರನ ಅಭಿಲಾಷೆಯನ್ನು ಪೂರ್ಣಗೊಳಿಸುವ ಸಲುವಾಗಿ, ಮತ್ತು ಅವನಿಗೆ ಒಂದು ಕಾರ್ಯವನ್ನು ವಹಿಸಿಕೊಡುವ ಸಲುವಾಗಿ ಉದ್ಧವ-ಬಲರಾಮ ರೊಡನೆ ಅವನ ಮನೆಗೆ ಹೋದನು. ತನ್ನ ಬಂಧುಗಳಾದ, ಮನುಷ್ಯಶ್ರೇಷ್ಠರಾದ ಶ್ರೀಕೃಷ್ಣ-ಬಲರಾಮ-ಉದ್ಧವರು ತನ್ನ ಮನೆಗೆ ಬರುತ್ತಿದ್ದವರನ್ನು ಅಕ್ರೂರನು ಕಂಡು ಆನಂದಭರಿತನಾಗಿ ಮೇಲೆದ್ದು ಅವರನ್ನು ಸ್ವಾಗತಿಸಿ ಒಬ್ಬೊಬ್ಬರನ್ನೂ ಗಾಢವಾಗಿ ಆಲಿಂಗಿಸಿಕೊಂಡು ಅಭಿನಂದಿಸಿದನು. ಅಕ್ರೂರನು ರಾಮ-ಕೃಷ್ಣರಿಗೆ ನಮಸ್ಕರಿಸಿದನು. ಹಾಗೆಯೇ ರಾಮ-ಕೃಷ್ಣ-ಉದ್ಧವರು ಅಕ್ರೂರನಿಗೂ ನಮಸ್ಕರಸಿದರು. ಅಕ್ರೂರನು ಸಮರ್ಪಿಸಿದ ಸುಖಾಸನಗಳಲ್ಲಿ ಮೂವರೂ ಕುಳಿತಮೇಲೆ ಅಕ್ರೂರನು ವಿಧಿವತ್ತಾಗಿ ಮೂವರನ್ನೂ ಸತ್ಕರಿಸತೊಡಗಿದನು. ಭಗವಂತನಾದ ಶ್ರೀಕೃಷ್ಣನ ದಿವ್ಯಪಾದಗಳನ್ನೂ ತೊಳೆದು ಪಾದೋದಕವನ್ನು ತನ್ನ ತಲೆಯಲ್ಲಿ ಧರಿಸಿದನು. ಬಳಿಕ ದಿವ್ಯವಾದ ವಸ್ತ್ರಗಳನ್ನು ಭಗವಂತನಿಗೆ ತೊಡಿಸಿ ದಿವ್ಯವಾದ ಮಾಲೆಗಳನ್ನು ಮತ್ತು ಆಭರಣಗಳನ್ನು ಕೊರಳಿಗೆ ಹಾಕಿ, ದಿವ್ಯಗಂಧಗಳನ್ನು ಅನುಲೇಪಿಸಿ ಭಕ್ಷ್ಯಭೋಜ್ಯಾದಿಗಳನ್ನೂ ಫಲಗಳನ್ನೂ ಸಮರ್ಪಿಸಿ ತಲೆಬಾಗಿ ಅವನ ಪಾದಾರವಿಂದಗಳಲ್ಲಿ ನಮಸ್ಕರಿಸಿದನು. ಬಳಿಕ ಅಕ್ರೂರನು ಭಗವಂತನ ಚರಣಕಮಲಗಳನ್ನು ತನ್ನ ತೊಡೆಯಮೇಲೆ ಇಟ್ಟುಕೊಂಡು ಒತ್ತುತ್ತಾ ವಿನೀತನಾಗಿ ರಾಮಕೃಷ್ಣರಿಗೆ ಹೇಳಿದನು.

ಪ್ರಭುಗಳೆ, ಅದೃಷ್ಟದಿಂದಾಗಿ ಪಾಪಿಯಾದ ಕಂಸನು ಅವನ ಅನುಯಾಯಿ ಗಳೊಡನೆ ಮರಣಹೊಂದಿದನು. ನೀವಿಬ್ಬರೂ ಸೇರಿ ಅವನನ್ನು ಸಂಹರಿಸಿ ಯದುವಂಶವನ್ನೇ ಮಹಾಸಂಕಟದಿಂದ ಪಾರುಮಾಡಿದುದು ಮಾತ್ರವಲ್ಲದೆ ವಂಶದ ಔನ್ನತ್ಯವನ್ನೂ ಸಮೃದ್ಧಿಯನ್ನೂ ಹೆಚ್ಚಿಸಿರುವಿರಿ. ನೀವಿಬ್ಬರೂ ಜಗತ್ತಿಗೆ ಕಾರಣ ಭೂತರು. ಹಾಗೂ ಜಗದ್ರೂಪರೂ ಆದಿಪುರುಷರೂ ಆಗಿರುವಿರಿ. ನಿಮಗಿಂತ ಬೇರೆಯಾದ ಯಾವ ವಸ್ತುವೂ ಇಲ್ಲ. ಕಾರಣವೂ ಇಲ್ಲ.

ಭಗವಂತನೆ, ನೀನೇ ನಿನ್ನ ಶಕ್ತಿಯಿಂದ ಈ ವಿಶ್ವವನ್ನು ಸೃಷ್ಟಿಸಿರುವೆ. ಕಾಲ, ಮಾಯೆ- ಮುಂತಾದ ಶಕ್ತಿಗಳೊಡನೆ ನೀನೇ ಸೃಷ್ಟಿಸಿರುವ ಜಗತ್ತಿನಲ್ಲಿ ಅನುಪ್ರವೇಶ ಮಾಡಿರುವೆ. ಕಂಡು ಕೇಳಿದ ಎಲ್ಲಾ ವಸ್ತುಗಳಲ್ಲಿಯೂ ನೀನು ಬಹುಪ್ರಕಾರವಾಗಿ ಕಂಡುಬರುವೆ. ಪ್ರಪಂಚದಲ್ಲಿರುವ ಎಲ್ಲ ವಸ್ತುಗಳಲ್ಲಿಯೂ ನಿನ್ನ ಆವಿರ್ಭಾವವಿದೆ.

ಪೃಥ್ವಿಯೇ ಮೊದಲಾದ ಪಂಚಭೂತಗಳು ಅವುಗಳಿಂದಲೇ ಉಂಟಾದ ಚರಾಚರಜಗತ್ತಿನಲ್ಲಿ ನಾನಾರೂಪವಾಗಿ ಹೇಗೆ ಸೇರಿಕೊಂಡಿದೆಯೋ ಅದೇ ರೀತಿಯಲ್ಲಿ ಸರ್ವತಂತ್ರಸ್ವತಂತ್ರನಾದ ನೀನು ಕೂಡ ಆತ್ಮನಿರ್ಮಿತವಾದ ಕಾರ್ಯರೂಪವಾದ ಈ ಬ್ರಹ್ಮಾಂಡದಲ್ಲಿ ಅಂತರಾತ್ಮನಾಗಿ ಬಹುರೂಪದಿಂದ ತೋರುತ್ತಿರುವೆ. ಇದೂ ಒಂದು ನಿನ್ನ ಲೀಲೆಯೇ ಆಗಿದೆ.

**ದುರಾರಾಧ್ಯಂ ಸಮಾರಾಧ್ಯಂ ವಿಷ್ಣುಂ ಸರ್ವೇಶ್ವರೇಶ್ವರಮ್ ।**
**ಯೋ ವೃಣೀತೇ ಮನೋಗ್ರಾಹ್ಯಂ ಅಸತ್ತ್ವಾತ್ ಕುಮನೀಷ್ಯಸೌ ॥**

ಬ್ರಹ್ಮೇಂದ್ರರುದ್ರಾದಿ ಸರ್ವೇಶ್ವರರಿಗೂ ಈಶ್ವರನೂ ಸುಲಭಾವಿ ಆರಾಧಿಸಲ್ಪಡುವವನೂ ಆದ ವಿಷ್ಣುವನ್ನು ಯಾವದೋ ರೂಪದಿಂದ ಆರಾಧಿಸಿ ಅವನ ಒಲುಮೆಯನ್ನು ಪಡೆದು ವರವನ್ನು ಬೇಡುವಾಗ ವಿಷಯಸುಖವನ್ನು ಬೇಡುವವನು ನಿಶ್ಚಯವಾಗಿಯೂ ಬುದ್ಧಿಹೀನನನೇ ಸರಿ. ವಿಷಯಸುಖವೆಂಬುದು ತುಚ್ಛವಾದುದು. ಇಂಥದ್ದನ್ನು ಭಗವಂತನಲ್ಲಿ ಬೇಡಬಾರದು.

ಜನಾರ್ದನನೆ, ಯೋಗೇಶ್ವರರಿಂದಲೂ ಸುರೇಶ್ವರರಿಂದಲೂ ತಿಳಿಯಲು ಅಶಕ್ಯವಾದ ಮಹಿಮೆಯುಳ್ಳ ನೀನು ಅದೃಷ್ಟವಶದಿಂದ ನಮಗೆ ಪ್ರತ್ಯಕ್ಷನಾಗಿ ನಮ್ಮ ಮನೆಯಲ್ಲಿಯೇ ದರ್ಶನವನ್ನಿತ್ತಿರುವೆ. ಸ್ವಾಮಿಯೆ, ನಾನು ಪತ್ನಿ-ಪುತ್ರ-ಸ್ವಜನ-ಐಶ್ವರ್ಯ- ಮನೆಪಾಠಗಳು- ಇವೇ ಮುಂತಾದ ಮೋಹಕವಾದ ಪಾಶಗಳಿಂದ ಬಂಧಿಸಲ್ಪಟ್ಟಿದ್ದೇನೆ. ನಿನ್ನ ಅನುಗ್ರಹರೂಪವಾಗಿ ನಿನ್ನದೇ ಆಗಿರುವ ಈ ಮಾಯಾಜಾಲವನ್ನು ಕತ್ತರಿಸಿ ನನ್ನನ್ನು ಉದ್ಧರಿಸು.

ಹೀಗೆ ಅಕ್ರೂರನು ತನ್ನ ಮನೆಗೆ ಆಗಮಿಸಿದ ಶ್ರೀಕೃಷ್ಣನನ್ನು ಯಥಾಯೋಗ್ಯವಾಗಿ ಸತ್ಕರಿಸಿ ಸ್ತೋತ್ರಮಾಡಿದನು. ಶ್ರೀಕೃಷ್ಣನು ಅಕ್ರೂರನಿಗೆ ಯಥಾಯೋಗ್ಯವಾಗಿ ಸಂದೇಶವನ್ನು ಕೊಟ್ಟು ಬಲರಾಮ-ಉದ್ಧವರೊಡನೆ ತನ್ನ ಭವನಕ್ಕೆ ತೆರಳಿದನು.

* * * * *

# 37. ಕುಂತಿಯು ಮಾಡಿದ ಶ್ರೀಕೃಷ್ಣಸ್ತುತಿ

**ನಾನ್ಯತ್ತವ ಪದಾಂಭೋಜಾತ್ ಪಶ್ಯಾಮಿ ಶರಣಂ ನೃಣಾಮ್।**
**ಭಿಭ್ಯತಾಂ ಮೃತ್ಯುಸಂಸಾರಾತ್ ಈಶ್ವರಸ್ಯಾಪವರ್ಗಿಕಾತ್॥**
**ನಮಃ ಕೃಷ್ಣಾಯ ಶುದ್ಧಾಯ ಬ್ರಹ್ಮಣೇ ಪರಮಾತ್ಮನೇ।**
**ಯೋಗೇಶ್ವರಾಯ ಯೋಗಾಯ ತ್ವಾಮಹಂ ಶರಣಂ ಗತಾ॥**

**ಶ್ರೀ ಮದ್ಭಾಗವತ 10-49-12, 13**

ಮೃತ್ಯುರೂಪವಾದ ಸಂಸಾರದಿಂದ ನಡುಗಿಹೋದ ಜನರಿಗೆ ಪರಮಾತ್ಮನಾದ ನಿನ್ನ ಚರಣಕಮಲವೇ ಕಾರಣ. ಅದೇ ಮೋಕ್ಷಪ್ರದವಾಗಿದೆ. ಅದನ್ನು ಬಿಟ್ಟು ಮತ್ತೊಂದನ್ನು ನಾನರಿಯೆನು. ಶುದ್ಧಬ್ರಹ್ಮಸ್ವರೂಪನೂ ಪರಮಾತ್ಮನೂ ಯೋಗೇಶ್ವರನೂ ಯೋಗಸ್ವರೂಪನೂ ಆದ ಶ್ರೀಕೃಷ್ಣನಿಗೆ ನಮಸ್ಕಾರವು. ನಾನು ನಿನ್ನನ್ನು ಶರಣು ಬಂದಿರುತ್ತೇನೆ.

## ಕುಂತಿಯ ಶರಣಾಗತಿ

ನಮ್ಮ ಸನಾತನ ಸಂಸ್ಕೃತಿಯಲ್ಲಿ ಸ್ತ್ರೀಯರೂ ಎಂತಹ ಉತ್ತಮ ಸಂಸ್ಕಾರದಿಂದ ಕೂಡಿದವರಾಗಿದ್ದರೆಂಬುದಕ್ಕೆ ಕುಂತಿಯೇ ಮುಂತಾದವರು ಉದಾಹರಣೀಯರು. ಅಕ್ರೂರನು ಹಸ್ತಿನಾವತಿಗೆ ಬಂದು ಭೀಷ್ಮಾದಿಗಳನ್ನೆಲ್ಲಾ ಭೇಟಿಮಾಡಿದ ನಂತರ, ಕುಂತಿಯ ಹತ್ತಿರ ಬರಲಾಗಿ, ಕುತಿಯು ಪಾಂಡವರನ್ನು ಕುರಿತು ದ್ವೇಷವನ್ನು ಕಾಡುತ್ತಿದ್ದ ದುರ್ಯೋಧನಾದಿಗಳ ವಿಷಯವನ್ನು ತಿಳಿಸಿ, ತಮಗೆ ಶ್ರೀಕೃಷ್ಣನೇ ಶರಣ್ಯನು ಎಂಬುದನ್ನು ಅತ್ಯಂತ ರೋಮಾಂಚನಕಾರಿಯಾದ ಅಧ್ಯಾತ್ಮತತ್ತ್ವಗಳಿಂದಲೂ ಭಕ್ತಿಭಾವದಿಂದಲೂ ತುಂಬಿ ತುಳುಕಾಡುತ್ತಿರುವ ಸ್ತೋತ್ರವನ್ನು ಮಾಡಿದಳು. ಅದನ್ನು ನಾವುಗಳೆಲ್ಲರೂ ಮನನಮಾಡಬೇಕು. ನಿಜವಾಗಿಯೂ ಈ ತರಹದ ಸ್ತ್ರೀಯರು ನಮ್ಮ ಸಮಾಜದಲ್ಲಿದ್ದರೆ ಧರ್ಮರಾಯನಂಥವರು ಅವತರಿಸುವದರಲ್ಲಿ ಆಶ್ಚರ್ಯವೇನು? ಧರ್ಮರಾಯ ನಂಥವರು ಅವತರಿಸಿದರೆ ಸಮಾಜೋನ್ನತಿ, ದೇಶೋನ್ನತಿಯಾಗುವದರಲ್ಲಿ ಆಶ್ಚರ್ಯವೇನು ?

ಈ ಭಾಗವತಶ್ಲೋಕದ ಅಂತರಾರ್ಥವನ್ನು ಗಮನಿಸಿದರೆ ಎಂತಹ

ಶರಣಾಗತಿಯ ಭಕ್ತಿಭಾವವನ್ನು ಸೂಚಿಸಿರುತ್ತಾಳೆಂದು ನಾವು ತಿಳಿಯಬಹುದು. ಮನುಷ್ಯನಿಗೆ ಆಗುತ್ತಿರುವ ಅನರ್ಥಪರಂಪರೆಗಳಿಗೆ ಲೌಕಿಕೋಪಾಯದಿಂದಲೇ ಪರಿಹಾರವನ್ನು ಕಾಣಬಹುದೆಂಬ ಭ್ರಮೆಯು ಜನರಿಗೆ ಇರುತ್ತದೆ. ಆದರೆ ಇದು ಶುದ್ಧತಪ್ಪು, ಒಂದು ಸಂಕಟದಿಂದ ಪಾರಾಗುವೆನೆನ್ನುವಷ್ಟರೊಳಗೆ ಇನ್ನು ನಾಲ್ಕಾರು ಸಂಕಟಗಳು ಗಂಟುಬೀಳುತ್ತದೆ. ''ಬಾಂಡಲಿಯಿಂದ ಬೆಂಕಿಗೆ ಹಾರಿದ'' ಎನ್ನುವ ಹಾಗೆ ಸಣ್ಣ ಕಷ್ಟದಿಂದ ದೊಡ್ಡಕಷ್ಟಕ್ಕೆ ಸಿಕ್ಕಿಕೊಳ್ಳುತ್ತಿದ್ದಾನೆ. ಕೆಲವೊಮ್ಮೆ ತಾನು ಕೈಗೊಂಡ ಉಪಾಯದಿಂದ ಪಾರಾದವನಾದೆ ಎನ್ನುವಾಗಲೂ ಯಾವದೋ ಜನ್ಮಾಂತರದಲ್ಲಿ ಸಂಚಿತವಾಗಿದ್ದ ಸುಕೃತ(ಪುಣ್ಯ)ಕ್ಕನುಗುಣವಾಗಿ ಪಾರಾದವನಾಗಿರುತ್ತಾನೆಯೇ ಹೊರತು ಇವನ ಪ್ರಯತ್ನವೇನೂ ಇರುವದಿಲ್ಲ. ಆಗಲೂ ಸಹ ತಾತ್ಕಾಲಿಕವಾದ ಉಪಶಮನವೇ ಹೊರತು ಮತ್ತೊಮ್ಮೆ ಬಾರದಹಾಗೆ ನಿವೃತ್ತಿಯಾಗುವದಿಲ್ಲ. ಆದ್ದರಿಂದಲೇ ಮಹಾಮಾತೆಯಾದ ಕುಂತಿಯು ಸಂಸಾರದಲ್ಲಿ ಒದ್ದಾಡುತ್ತಿರುವವನಿಗೆ ನಿನಗಿಂತ ಬೇರೊಬ್ಬನು ಶರಣ್ಯನಿಲ್ಲ ಎಂದಿರುತ್ತಾಳೆ. ಅದನ್ನು ಹೇಳುವಾಗಲೂ ಮೃತ್ಯು ರೂಪವಾದ ಸಂಸಾರದಿಂದ ಎಂಬ ವಿಶೇಷಣವು ತುಂಬಾ ಸ್ವಾರಸ್ಯಕರವಾಗಿದೆ. ಸಂಸಾರದಲ್ಲಿ ಸುಖವಿದೆ ಎಂದುಕೊಂಡ ಪ್ರಾಕೃತಜನರ ತಿಳಿವಳಿಕೆಗಾಗಿ ಮೃತ್ಯುರೂಪವಾದ (ಆಯಾಸಕರವಾದ- ದುಃಖಕರವಾದ) ಎಂದು ಸೂಚಿಸುತ್ತಿದ್ದಾಳೆ. ಇದರಿಂದ ನಾವು ಚೆನ್ನಾಗಿ ಸಂಸಾರಸ್ವಭಾವವನ್ನು ಮನನಮಾಡುತ್ತಿರಬೇಕು ಎಂದು ಗೊತ್ತಾಗುತ್ತದೆ. ಹಾಗೆಯೇ ನಿನಗಿಂತ ಮತ್ತೊಬ್ಬನಾದ ಶರಣ್ಯನಾದವನನ್ನು ಕಾಣೆನು ಎಂಬುದೂ ಸಹ ಅಷ್ಟೇ ಸ್ವಾರಸ್ಯಕರವಾಗಿದೆ. ''ಅಸಾರೇ ಖಲು ಸಂಸಾರೇ ಸಾರಃ ಶ್ರೀಹರಿಪದಾಂಬುಜಮ್'' ಎನ್ನುವ ಹಾಗೆ ಸಂಪೂರ್ಣವಾದ ಶಾಂತಿ ಸುಖಾದಿಗಳನ್ನು ಹೊಂದಬೇಕಾದರೆ ಪರಮಾತ್ಮನನ್ನೇ ಶರಣುಹೊಂದಬೇಕು. ಕತ್ತಲೆ ನಿವೃತ್ತಿಗೆ ಬೆಳಕೇ ಹೇಗೆ ಬೇಕೊ, ಚಳಿ ನಿವಾರಣೆಗೆ ಬಿಸಿ ಸ್ವಭಾವದ್ದಾದ ಅಗ್ನಿಸೂರ್ಯರೇ ಹೇಗೆ ಬೇಕೋ ಸಿಹಿಯನ್ನು ಅನುಭವಿಸುವದಕ್ಕೆ ಸಕ್ಕರೆ ಬೆಲ್ಲವೇ ಹೇಗೆ ಬೇಕೋ ಕಷ್ಟನಿವಾರಣೆಗೆ ಶಾಂತಿಸುಖಪ್ರಾಪ್ತಿಗೆ ಪರಮಾತ್ಮನ ಪಾದಕಮಲವನ್ನೇ ಆಶ್ರಯಿಸಬೇಕು. ಅದೇ ರೀತಿ ಪರಮಾತ್ಮನ ಗುಣಗಾನಮಾಡುವಾಗಲೂ ಪರಮಾರ್ಥತತ್ತ್ವಕ್ಕನುಗುಣವಾಗಿಯೇ ಮಾಡಿರುತ್ತದೆ ಎಂಬುದೊಂದು ವಿಶೇಷವು. ಶುದ್ಧಬ್ರಹ್ಮಸ್ವರೂಪನೂ, ಪರಮಾತ್ಮನೂ ಆದ ಶ್ರೀಕೃಷ್ಣನಿಗೆ ನಮಸ್ಕಾರವು ಎನ್ನುವಾಗ ಗೀತೆಯಲ್ಲಿ ಹೇಳಿರುವಂತೆ ''ಯಸ್ಮಾತ್ ಕ್ಷರ ಮತೀತೋಹಂ ಅಕ್ಷರಾದಪಿ ಚೋತ್ತಮ'' ವ್ಯಾಕೃತಾವ್ಯಾಕೃತ ಪ್ರಪಂಚಕ್ಕಿಂತ

ವಿಲಕ್ಷಣನೂ ಉತ್ತಮ ಪುರುಷನೆಂತಲೂ ''ಅಜೋಽಪಿಸನ್ನವ್ಯಯಾತ್ಮಾ'' ಅಜನೂ (ಜನ್ಮರಹಿತನೂ) ಅವ್ಯಯ (ನಾಶರಹಿತ) ಸ್ವರೂಪನೆಂದು ಭಗವಂತನೇ ಅಪ್ಪಣೆಕೊಟ್ಟಿರುವಂತೆ ಯಥಾವತ್ತಾಗಿ ಕುಂತಿಯು ಸ್ತುತಿಸಿರುತ್ತಾಳೆ. ಆತನು ಯೋಗೇಶ್ವರನೆಂದರೆ ಕರ್ಮ, ಭಕ್ತಿ, ಉಪಾಸನೆ, ಧ್ಯಾನಾದಿಯೋಗಗಳಿಂದ ಪಡೆಯಬೇಕಾದವನೂ ಈ ಎಲ್ಲಾ ಯೋಗಸ್ವರೂಪವನೂ ಆಗಿರುತ್ತಾನೆಂದು ತಿಳಿಸುತ್ತಿದೆ. ಯೋಗದ ಯೋಗತ್ವವು ಭಗವಂತನನ್ನು ಪಡೆಸುವದರಿಂದ ಬಂದಿರುತ್ತಾನೆಂದು ಹೊರತು ಕೇವಲ ಅನುಷ್ಠಾನರೂಪವಾಗಿದೆ ಎಂಬ ಕಾರಣದಿಂದ ಬಂದಿರುವದಿಲ್ಲ. ಪರಮಾತ್ಮ ಪ್ರಾಪ್ತಿಯು ಆಪವರ್ಗಿಕ ಎಂದರೆ ಮೋಕ್ಷಪ್ರದವಾಗಿದೆ ಎಂದರ್ಥವು. ಮೋಕ್ಷಪ್ರಾಪ್ತಿ ಎಂದರೆ ಒಂದಾನೊಂದು ಗೊತ್ತಾದ ದೇಶಕಾಲ ನಿಮಿತ್ತ ಅವಸ್ಥಾವಿಶೇಷ ರೂಪದಲ್ಲಿ, ಮತ್ತೇನೆಂದರೆ ನಿತ್ಯಪ್ರಾಪ್ತವಾದ ಸರ್ವತಃ ಪರಮಾರ್ಥ ಸ್ವರೂಪವಾದ ನಿತ್ಯಶುದ್ಧಬುದ್ಧಮುಕ್ತಸ್ವಭಾವವಾದ ಆತ್ಮನ ಸ್ವಭಾವವೇ ಆಗಿರುತ್ತದೆ. ಹೀಗಿದ್ದರೂ ವಿಷಯಾಸಕ್ತಿ ಮತ್ತು ದೇಹೇಂದ್ರಿಯಾದ್ಯುಪಾಧಿತಾದಾತ್ಮ್ಯತೆಯಿಂದ ಮರೆಯಾದಂತಾಗಿದ್ದು ಅನವರತ ಭಗವಂತನ ಚಿಂತನೆಯ ಪ್ರಭಾವದಿಂದ ಆತನ ಅನುಗ್ರಹವಾಗಲಾಗಿ ಅಜ್ಞಾನವು ತೊಲಗಿ ಮೋಕ್ಷವು ಪ್ರಾಪ್ತವಾದಂತಾಗುತ್ತದೆ. ಅಷ್ಟೆ!

* * * * *

## 38. ಭಗವಂತನ ಅವತಾರದ ಉದ್ದೇಶ

**ಏತದರ್ಥೋಽವತಾರೋಽಯಂ ಭೂಭಾರ ಹರಣಾಯ ಮೇ।**
**ಸಂರಕ್ಷಣಾಯ ಸಾಧೂನಾಂ ಕೃತೋಽನ್ಯೇಷಾಂ ವಧಾಯ ಚ॥**

**ಶ್ರೀ ಮದ್ಭಾಗವತ 10-50-9**

ಭೂಮಿಯ ಭಾರವನ್ನು ಹರಣಮಾಡಬೇಕೆಂಬುದೇ ನನ್ನ ಅವತಾರದ ಮುಖ್ಯ ಉದ್ದೇಶವಾಗಿದೆ. ಸಾಧುಗಳ ಸಂರಕ್ಷಣೆ ದುಷ್ಟಜನರ ಸಂಹಾರ ಇವು ಈ ಅವತಾರದಲ್ಲಿ ಅವಶ್ಯವಾಗಿ ಮಾಡಬೇಕಾದ ಪ್ರಧಾನ ಕೆಲಸವಾಗಿದೆ.

(ಇಲ್ಲಿ ಭಗವಂತನು ಸ್ವತಃ ನಿತ್ಯಶುದ್ಧಬುದ್ಧಮುಕ್ತಸ್ವರೂಪದವನಾಗಿದ್ದರೂ ಇಚ್ಛಾವಶದಿಂದ ಮಾಯಾಮಯವಾದ ರೂಪವನ್ನು ಸ್ವೀಕರಿಸುವನೆಂತಲೂ ಅದು ಕೇವಲ

ಭಕ್ತಾನುಗ್ರಹಕ್ಕಾಗಿಯೂ ದುಷ್ಟನಿಗ್ರಹಕ್ಕಾಗಿಯೂ ಎಂಬುದನ್ನು ಸೂಚಿಸಿರುತ್ತಾನೆಂಬುದನ್ನು ನಾವು ಲಕ್ಷಿಸಬೇಕು)

## ಭಗವಂತನ ಅನುಗ್ರಹ

ಪರಮಾರ್ಥವಾಗಿ ಯಾವ ಸೃಷ್ಟಿಯೂ ಆಗಿಲ್ಲವೆಂಬುದು ನಿಜವಾದರೂ ವ್ಯವಹಾರದೃಷ್ಟಿಯಿಂದ (ಅಜ್ಞಾನದೃಷ್ಟಿಯಿಂದ) ಕಾಣುತ್ತಿರುವ ಪ್ರಪಂಚವನ್ನಿಟ್ಟು ಕೊಂಡು ಈ ಅನುಗ್ರಹವೆಂಬ ವಿಚಾರವನ್ನು ಶಾಸ್ತ್ರದಲ್ಲಿ ಮಾಡಿರುತ್ತದೆ. ಸರ್ವಾತ್ಮನಾದ ಆತನಿಗೆ ಪರಿಪೂರ್ಣವಾದ ದಯೆಯು ಸಮಸ್ತ ಜೀವರಾಶಿಯ ಮೇಲೆಲ್ಲಾ ಸ್ವಾಭಾವಿಕವಾಗಿಯೇ ಇದೆಯಾದರೂ ಆಯಾ ಜೀವರ ಸಂಸ್ಕಾರಕ್ಕನುಗುಣವಾಗಿ ತೋರುವ ದುಷ್ಟಸ್ವಭಾವವನ್ನು ಹತ್ತಿಕ್ಕಲು ಆತನ ಅಂಶಾವತಾರವು ಆಗುತ್ತಲೇ ಇರುವದು. ಇದೂ ಒಂದು ರೀತಿಯಿಂದ ದುಷ್ಟರ ಅನುಗ್ರಹವೇ ಹೊರತು ನಿಗ್ರಹವಲ್ಲ. ದ್ವೇಷದಿಂದ ಮಾಡುವ ಪ್ರತೀಕಾರವಲ್ಲ.

ಪ್ರಕೃತ, ಭಾಗವತದಲ್ಲಿ, ದುಷ್ಟನಾದ ಕಂಸನ ಸಂಹಾರವಾಗಲಾಗಿ ಆತನ ಮಡದಿಯರಾದ ಆಸ್ತಿ, ಪ್ರಾಸ್ತಿ, ಎಂಬುವರು ತಮ್ಮ ತವರುಮನೆಯಾದ ಮಗಧದೇಶದ ದೊರೆಯಾದ ಜರಾಸಂಧನ ಸಮೀಪಕ್ಕೆ ಬಂದು ತಮಗೆ ಬಂದ ವೈಧವ್ಯಪ್ರಕಾರವನ್ನು ವಿವರಿಸಿ ತಿಳಿಸಿದರು. ತನ್ನ ಇಬ್ಬರು ಹೆಣ್ಣುಮಕ್ಕಳಿಗೂ ಆದ, ಗಂಡಾಂತರದಿಂದ ಅತ್ಯಂತ ಕುಪಿತನಾದವನಾದ ಜರಾಸಂಧನು ಹೇಗಾದರೂ ಶ್ರೀಕೃಷ್ಣನ ಮೇಲೆ ತನ್ನ ಸೇಡನ್ನು ತೀರಿಸಕೊಳ್ಳಲೇಬೇಕೆಂದು ಸಂಕಲ್ಪಮಾಡಿದನು. ಆಗ ಜರಾಸಂಧನನ್ನು ಮೃತ್ಯುರೂಪವಾದ ಕೋಪವು ಆವರಿಸಿಕೊಂಡಿತು. ಅಖಂಡಭೂಮಂಡಲವನ್ನೇ ಯದುಕುಲರಹಿತವನ್ನಾಗಿ ಮಾಡಿಬಿಡಬೇಕೆಂದು ಆಲೋಚಿಸಿ ಅದಕ್ಕೆ ತಕ್ಕಬಲವನ್ನು ಸಂಗ್ರಹಿಸತೊಡಗಿದನು. ಕೆಲವೇ ದಿನಗಳಲ್ಲಿ ಇಪ್ಪತ್ಮೂರು ಅಕ್ಷೌಹಿಣೀ ಸೈನ್ಯ ಸಮೇತನಾಗಿ ಮಥುರಾ ಪಟ್ಟಣಕ್ಕೆ ಬಂದು ಆ ನಗರದ ನಾಲ್ಕು ಮಹಾದ್ವಾರಗಳಿಂದಲೂ ಮುತ್ತಿಗೆ ಹಾಕಿದನು. ಆ ಜರಾಸಂಧನ ಸೈನ್ಯವು ಉಕ್ಕಿಬರುತ್ತಿರುವ ಮಹಾಸಮುದ್ರೋಪಾದಿ ಯಲ್ಲಿತ್ತು. ಆ ನಗರದ ಎಲ್ಲಾ ನಾಗರಿಕರೂ ಭಯಾವಿಷ್ಟರಾಗಿ ಚಿಂತಾಕ್ರಾಂತರಾದರು. ಈ ಸಂದರ್ಭದಲ್ಲಿ ಸಕಲ ಭೂತಗಳಿಗೂ ಹಿತೈಷಿಯಾದ ಭೂಭಾರಹರಣಕ್ಕಾಗಿ ಅವತರಿಸಿದ ಭಗವಂತನಾದ ಶ್ರೀಕೃಷ್ಣನು ಆಲಚಿಸಿದ್ದೇನೆಂದರೆ- ಈಗಲೇ ಜರಾಸಂಧನನ್ನು ಸಂಹಾರಮಾಡಿದರೆ ಇನ್ನೂ ಅನೇಕ ದುಷ್ಟರು ಉಳಿದುಕೊಂಡಾರು!

ಆದ್ದರಿಂದ ಆತನನ್ನು ಬಿಟ್ಟು ಉಳಿದ ಎಲ್ಲಾ ಸೈನ್ಯವನ್ನೂ ಸಂಹಾರಮಾಡುವೆನೆಂದು ಆಲೋಚಿಸಿದನು. ಅದರಂತೆ ಮಿಂಚಿನ ವೇಗದಂತೆ ಶ್ರೀಕೃಷ್ಣಬಲರಾಮರಿಬ್ಬರೂ ಆ ಜರಾಸಂಧನ ಸೈನ್ಯವನ್ನು ಸಂಹಾರಮಾಡತೊಡಗಿದರು. ಬಲರಾಮನು ತನ್ನ ಮುಸಲಾಯುಧದಿಂದಲೂ ಶ್ರೀಕೃಷ್ಣನು ಶಾರ್ಙಧನುಸ್ಸು ಮತ್ತು ಸುದರ್ಶನ ಚಕ್ರದಿಂದಲೂ ಶತ್ರುಗಳನ್ನು ಸಂಹಾರಮಾಡುತ್ತಿರಲಾಗಿ ಅಲ್ಲಿನ ಪದಾತಿ, ಕುದುರೆ, ಆನೆಗಳ ರಕ್ತದ ನದಿಯಲ್ಲಿ ಆ ಸೈನಿಕರ ತೋಳುಗಳು ನೀರಿನ ಹಾವಿನಂತೆಯೂ, ತಲೆಗಳು ಆಮೆಗಳಂತೆಯೂ, ಆನೆಗಳ ಶರೀರಗಳು ದ್ವೀಪದಂತೆಯೂ, ಕುದುರೆಗಳನ್ನು ಮೊಸಳೆಯಂತೆಯೂ, ಸೈನಿಕರ ಕೈಕಾಲುಗಳು ಮೀನುಗಳಂತೆಯೂ, ಅವರ ತಲೆಗೂದಲುಗಳು ಪಾಚಿಯಂತೆಯೂ ಕಾಣುತ್ತಿದ್ದವು. ಈ ರೀತಿ ಅದು ಭಯಾನಕವಾಗಿತ್ತು.

ಆ ಜಗದೀಶ್ವರರಾದ ರಾಮಕೃಷ್ಣರು ನಿಜವಾಗಿ ಹೇಳಬೇಕೆಂದರೆ ಯುದ್ಧವೆಂಬ ಆಟವನ್ನಾಡುತ್ತಾ, "ಸ್ಥಿತ್ಯುದ್ಭವಾನ್ತಂ ಭುವನತ್ರಯಸ್ಯ ಯಃ ಸಮೀಹತೇऽನನ್ತಗುಣಃ ಸ್ವಲೀಲಯಾ। ನ ತಸ್ಯ ಚಿತ್ರಂ ಪರಪಕ್ಷನಿಗ್ರಹಃ ತಥಾಪಿ ಮರ್ತ್ಯಾನುವಿಧಸ್ಯ ವರ್ಣ್ಯತೇ॥ ಮೂರು ಲೋಕದ ಉತ್ಪತ್ತಿಸ್ಥಿಪ್ರಲಯಗಳನ್ನು ಆಟವಾಡುತ್ತಲೇ ಯಾವಾತನು ಮಾಡಿರುವನೋ ಅಂತಹವನಿಗೆ ಈ ಶತ್ರುಪಕ್ಷದ ವಿಜಯವೆಂಬುದೂ ಸಹ ಮಹತ್ತರವಾದ ವಿಷಯವೇನಲ್ಲ. ಆದರೂ ಮನುಷ್ಯನಾಗಿ ಅವತರಿಸಿದಾಗ ಅವುಗಳನ್ನು ಯಥಾವತ್ತಾಗಿ ವರ್ಣಿಸಲಾಗುತ್ತದೆ- ಎಂದು ಹೇಳಿರುವಂತೆ ಲೀಲಮಾತ್ರರಾಗಿ ತಮ್ಮ ಕೆಲಸಗಳನ್ನು ಮಾಡುವವರಾಗಿರುತ್ತಾರೆ. ಇಲ್ಲಿ ಭಗವಂತನ ಅನುಗ್ರಹವೆಂಬುದು ತಂದೆಯು ಮಗನಿಗೆ ಬೇಕಾದದ್ದನ್ನು ಕೊಡುವಂತೆ ಎಂದಾಗಲೀ, ರಾಜನು ಸೇವಕನಿಗೆ ಹಣವನ್ನು ಕೊಡುವಂತೆ ಎಂದಾಗಲೀ ತಿಳಿಯಬಾರದು. ಪರಮಾತ್ಮನ ಅನುಗ್ರಹವೆಂಬುದು ಒಂದು ರೀತಿ ತರ್ಕಾತೀತವಾಗಿದೆ. ಯಾವಾತನಿಗೆ ಅನುಗ್ರಹಿಸ ಬೇಕೆಂದಿರುವನೋ ಆತನಿಗೆ ಆತನ ಬುದ್ಧಿಯನ್ನು ಪ್ರೇರಿಸುವ ರೀತಿಯಿಂದಲೋ ಅಥವಾ ಯಾರಿಂದ ಆತನ ಇಷ್ಟಾರ್ಥವು ನೆರವೇರುವದೋ ಅಂಥವರನ್ನೇ ಅಲ್ಲಿಗೆ ಪ್ರೇರಿಸುವ ಮೂಲಕವೋ, ಹೇಗೋ ನಮ್ಮ ತರ್ಕಕ್ಕೆ ನಿಲುಕದ ಯಾವದೋ ಒಂದು ಪ್ರಕಾರದಿಂದ ನೆರವೇರಿಸಿಕೊಡುತ್ತಾನೆ. ಅದು ಭಕ್ತರಿಗೆ ಮಾತ್ರ ತಿಳಿದು ಬರುವಂಥದ್ದಾಗಿರುತ್ತದೆ.

ನ ದೇವಾ ದಂಡಮಾದಾಯ ರಕ್ಷನ್ತಿ ಪಶುಪಾಲವತ್ । ಯಂ ತು ರಕ್ಷಿತುಮಿಚ್ಛನ್ತಿ ಬುದ್ಧ್ಯಾ ತಂ ಪ್ರೇರಯನ್ತಿ ಚ । ''ದೇವತೆಗಳು ಕೋಲನ್ನು ಹಿಡಿದುಕೊಂಡು ದನಕಾಯುವರು (ಹಸುವನ್ನು) ಕಾಯುವಂತೆ ಕಾಪಾಡುತ್ತಾರೆಂದು ತಿಳಿಯಬಾರದು. ಯಾರನ್ನು ರಕ್ಷಿಸಬೇಕೆನ್ನುವರೋ ಆತನ ಬುದ್ಧಿಯನ್ನು ಪ್ರೇರಿಸುತ್ತಾರೆ'' ಎಂದು ಹೇಳಿರುವ ಹಾಗೆ ದೇವದೇವೋತ್ತಮನಾದ ಪರಮಾತ್ಮನೂ ಸಹ ಸದ್ಬುದ್ಧಿಯನ್ನು ಕೊಡುವ ರೀತಿಯಿಂದಲೋ ಬೇರೊಬ್ಬರ ಮುಖಾಂತರದಿಂದಲೋ ನಮ್ಮ ಇಷ್ಟಾರ್ಥವನ್ನು ದಯಪಾಲಿಸುತ್ತಾನೆ. ಭಕ್ತಿಭಾವನೆಯ ತೀವ್ರತೆ ಇದ್ದರೆ ಆತನೇ ತೋರಿಕೊಂಡು ಧ್ರುವ, ಪ್ರಹ್ಲಾದರಿಗೆ ಅನುಗ್ರಹಿಸಿದಂತೆಯೂ ಅನುಗ್ರಹಿಸಬಲ್ಲವನಾಗಿರುತ್ತಾನೆ. ಒಟ್ಟಿನ ಮೇಲೆ ಆತನಿಂದಲೇ ಸಮಸ್ತಜನರ ಇಷ್ಟಾರ್ಥಸಿದ್ಧಿಯಾಗುವದು. ಆಗುವ ಪ್ರಕಾರವು ಮಾತ್ರ ಪ್ರಾಕೃತರಾದ ಜೀವರ ಬುದ್ಧಿಗೆ ಅಗೋಚರವಾಗಿರುತ್ತದೆ. ಅದನ್ನು ಗುರುತಿಸುವದೂ ಒಂದು ರೀತಿಯ ದೈವಾನುಗ್ರಹವೇ ಸರಿ.

* * * * *

## 39. ಮುಚುಕುಂದನ ಸ್ತೋತ್ರ

**ಲಬ್ಧ್ವಾ ಜನೋ ದುರ್ಲಭಮತ್ರ ಮಾನುಷಂ**
**ಕಥಂಚಿದವ್ಯಂಗಮಯತ್ನತಸ್ತವ।**
**ಪಾದಾರವಿಂದಂ ನ ಭಜತ್ಯಸನ್ಮತಿಃ**
**ಗೃಹಾಂಧಕೂಪೇ ಪತಿತೋ ಯಥಾ ಪಶುಃ॥**

**ಶ್ರೀ ಮದ್ಭಾಗವತ 10-51-47**

ಪರಮಾತ್ಮ! ಜನರು ದುರ್ಲಭವಾದ ಮನುಷ್ಯದೇಹವನ್ನು ಹೇಗೋ ದೈವಯೋಗದಿಂದ ಪಡೆದರೂ ಕೆಟ್ಟಬುದ್ಧಿಯವರಾಗಿ ನಿನ್ನ ಪಾದಕಮಲವನ್ನು ಸೇವಿಸದೇ (ಪತ್ನೀಪುತ್ರರೆಂಬ) ಮನೆಯ ಕುರುಡುಬಾವಿಯಲ್ಲಿ ಬಿದ್ದು- ಹುಲ್ಲಿನಿಂದ ಮುಚ್ಚಿಹೋದ ಹಾಳುಬಾವಿಗೆ ಹಸುವು ಬಿದ್ದು ಒದ್ದಾಡುವಂತೆ- ಒದ್ದಾಡುತ್ತಿರುತ್ತಾರೆ!

(ಅಸಾರವಾದ ಸಂಸಾರದಲ್ಲಿ ಶ್ರೀಹರಿಯ ಚರಣಸೇವೆಯೇ ಶ್ರೇಯಸ್ಕರ

ವಾದದ್ದೆಂದು- ದುಃಖವನ್ನುಕಾಣುತ್ತಿದ್ದರೂ- ತಿಳಿಯುತ್ತಿಲ್ಲವಲ್ಲಾ! ಎಂದು ಮರುಕವನ್ನು ತೋರಿಸುತ್ತಿದ್ದಾನೆ!)

## ಮುಚುಕುಂದನಿಗೆ ಶ್ರೀಕೃಷ್ಣನದರ್ಶನ

ಶ್ರೀಕೃಷ್ಣಪರಮಾತ್ಮನು ತಮ್ಮ ಬಂಧುಗಳಾದ ಯಾದವರ ಸಂರಕ್ಷಣೆಗಾಗಿಯೂ ಜರಾಸಂಧ ಕಾಲಯವನ ಮುಂತಾದ ದುಷ್ಟರ ಪೀಡೆಯು ಉಂಟಾಗದಿರಲೆಂದೂ ಸಮುದ್ರದ ಮಧ್ಯದಲ್ಲಿ ದ್ವಾರಕಾಪಟ್ಟಣವೆಂಬ ಸುಂದರವಾದ ನಗರವನ್ನು ನಿರ್ಮಾಣ ಮಾಡಿ ಯಾದವರೆಲ್ಲರನ್ನೂ ಅಲ್ಲಿ ತಂದಿಟ್ಟನು. ತಾನು ಪುನಃ ಮಥುರಾಪಟ್ಟಣಕ್ಕೆ ಹೋಗಿ ಅಣ್ಣನಾದ ಬಲರಾಮನಿಗೆ ಮಥುರೆಯಲ್ಲಿಯೇ ಅಲ್ಲಿನ ಪ್ರಜೆಗಳನ್ನು ಕಾಪಾಡಿಕೊಂಡಿರು ಎಂದು ಹೇಳಿ ತಾನು ನಿರಾಯುಧನಾಗಿ ಮಥುರಾಪುರದಿಂದ ಹೊರಟುಹೋದನು.

ಆ ಸಮಯದಲ್ಲಿ ಕಾಲಯವನನೆಂಬ ಅಸುರನು ನಿರಾಯುಧನಾಗಿ ಬರುತ್ತಿರುವ ಶ್ರೀಹರಿಯನ್ನು ಕಂಡು ಇದೇ ಸರಿಯಾದ, ಇವನೊಡನೆ ಯುದ್ಧ ಮಾಡಬೇಕಾದ ಸಂದರ್ಭವೆಂದು ತಿಳಿದು ಶ್ರೀಕೃಷ್ಣನನ್ನು ಬೆನ್ನಟ್ಟಿದನು. ಶ್ರೀಕೃಷ್ಣನು ಈತನನ್ನು ಸಂಹಾರಮಾಡಲು ತಾನೇ ಸಮರ್ಥನಾದವನಾದರೂ ಈತನ ಮೃತ್ಯುವು ಮತ್ತೊಬ್ಬನಿಂದ ಆಗಬೇಕಾಗಿದೆ- ಎಂಬುದನ್ನು ತಿಳಿದವನಾಗಿ ತಾನೂ ಆತನು ಅಟ್ಟಿಸಿಕೊಂಡು ಬರುತ್ತಿರುವುದನ್ನು ಕಂಡು ಓಡಲಾರಂಭಿಸಿದನು. ಆದರೆ ಕಾಲಯವನನೂ ಸಹ ಕೈಬಿಡದೆ ಶ್ರೀಕೃಷ್ಣನನ್ನು ಕೊಂದುಬಿಡುವೆನೆಂದುಕೊಂಡು ಶ್ರೀಕೃಷ್ಣನ ಹಿಂದೆಯೇ ಓಡಲಾರಂಭಿಸಿದನು. ಶ್ರೀಕೃಷ್ಣನೂ ಸಹ ಓಡುತ್ತಾ ಓಡುತ್ತಾ ಕೊನೆಗೆ ಒಂದು ಗುಹೆಯೊಳಗೆ ಹೋದನು. ಅಲ್ಲಿ ಮುಚುಕುಂದನು ಮಲಗಿದ್ದನು. ಆತನ ಮೇಲೆ ಶ್ರೀಕೃಷ್ಣನು ತನ್ನ ಪೀತಾಂಬರ ಹೊದಿಸಿ ತಾನು ಗುಹೆಯೊಳಗೆ ಒಂದು ಪಕ್ಕದಲ್ಲಿ ಅವಿತುಕೊಂಡನು. ಇಷ್ಟರಲ್ಲಿಯೇ ಕಾಲಯವನನೂ ಸಹ ಅದೇ ಗುಹೆಯೊಳಗೆ ಪ್ರವೇಶಮಾಡಿ ಪೀತಾಂಬರವಸ್ತ್ರವನ್ನು ಹೊದ್ದುಕೊಂಡು ಮಲಗಿದವನು ಶ್ರೀಕೃಷ್ಣನೆಂದೇ ಭಾವಿಸಿ ಜೋರಾಗಿ ಆತನಿಗೆ ಒದ್ದನು. ತತ್‌ಕ್ಷಣ ದೇವತೆಗಳ ವರವನ್ನು ಪಡೆದು ಅಲ್ಲಿ ಮಲಗಿದ್ದ ಮುಚುಕುಂದನು ಎದ್ದು ಕಣ್ಣುಬಿಟ್ಟು ನೋಡಲಾಗಿ ಕಾಲಯವನನು ಭಸ್ಮನಾದನು. ಈ ರೀತಿ ಶ್ರೀಕೃಷ್ಣಪರಮಾತ್ಮನು ಯುದ್ಧವನ್ನೇ ಮಾಡದೇ ಕಾಲಯವನನನ್ನು ಸಂಹಾರಮಾಡಿಸಿದನು.

ಅನಂತರ ಮುಚುಕುಂದನಿಗೆ ಶ್ರೀಕೃಷ್ಣನು ದರ್ಶನವನ್ನು ಕೊಟ್ಟನು. ಶ್ರೀಕೃಷ್ಣನನ್ನು ಕಂಡ ಕೂಡಲೇ ಬಹು ಸುಂದರವಾಗಿ ಸ್ತೋತ್ರವನ್ನು ಮಾಡಲಾರಂಭಿಸುತ್ತಾನೆ. ಅವುಗಳಲ್ಲಿ ಒಂದು ಸ್ತೋತ್ರ ಈ ರೀತಿ ಇದೆ. **''ನ ಕಾಮಯೇಽನ್ಯಂ ತವ ಪಾದ ಸೇವನಾತ್ ಅಕಿಂಚನ ಪ್ರಾರ್ಥ್ಯತಮಾತ್ ವರಂ ವಿಭೋ । ಆರಾಧ್ಯ ಕಸ್ತ್ವಾಂ ಹ್ಯಪವರ್ಗದಂ ಹರೇ ! ವೃಣೀತ ಆರ್ಯೋವರಮಾತ್ಮ ಬಂಧನಮ್''** । ಹೇ ಪರಮಾತ್ಮ! ಅತ್ಯಂತ ಬಡವರಾದವರು ಅವಶ್ಯವಾಗಿ ಬಯಸುವುದಕ್ಕೆ ಯೋಗ್ಯವಾದ ನಿನ್ನ ಪಾದಸೇವೆಗಿಂತ ಬೇರೆಯಾಗಿ ಯಾವುದೊಂದು ವರವನ್ನೂ ನಾನು ಬಯಸುವುದಿಲ್ಲ. ಮೋಕ್ಷವನ್ನೇ ಕೊಡುವ ನಿನ್ನನ್ನು ಆರಾಧಿಸಿದ ಮೇಲೂ ತನಗೆ ಬಂಧವನ್ನುಂಟುಮಾಡುವ (ಅತ್ಯಂತ) ಕೀಳಾದ ವರವನ್ನು ಯಾವನು ತಾನೆ ಬಯಸಿಯಾನು! ಈ ಶ್ಲೋಕದಲ್ಲಿ ಎಷ್ಟು ಸುಂದರವಾದ ಉತ್ತಮವಾದ ಪ್ರಾರ್ಥನೆ ಇದೆ ಎಂದರೆ ನಿಜವಾದ ಭಕ್ತನು ಭಗವಂತನಿಗಿಂತ ಬೇರೆಯಾದುದನ್ನು ಬೇಡುವದಿಲ್ಲ. ಭಗವಂತನಿಗಿಂತ ಬೇರೆಯಾದ ಏನನ್ನೂ ಬೇಡುವದಿಲ್ಲ. ಭಗವಂತನಿಗಿಂತ ಬೇರೆಯಾದುದನ್ನು ಬೇಡುವವನು ನಿಜವಾದ ಭಕ್ತನಲ್ಲ. ಏಕೆಂದರೆ ಆ ಬೇರೆಯಾದ ಧನ-ಕನಕ-ಗೋಭೂಮಿ ಸ್ತ್ರೀ ಅನ್ನಪಾನಗಳನ್ನು ಬಯಸಿದರೆ ಅದರ ಮೇಲೆ ಅವನಿಗೆ ಆಸಕ್ತಿ ಇದೆಯೆಂದಾಗುವುದೇ ಹೊರತು ಪರಮಾತ್ಮನ ಮೇಲೆ ಭಕ್ತಿ ಇದೆಯೆಂದಾಗುವದಿಲ್ಲ. ಆಗ ಪರಮಾತ್ಮನು ಕೇವಲ ಮಧ್ಯವರ್ತಿ ಎಂದಾಗುವನೇ ಹೊರತು ಪ್ರಧಾನನೆಂದಾಗುವದಿಲ್ಲ. ಪ್ರಧಾನನೆಂದಾಗದಿದ್ದಾಗ ಆ ಭಕ್ತಿಯು ಹೇಗೆ ತಾನೆ ಮುಖ್ಯ ಭಕ್ತಿಯೆಂದಾಗುತ್ತದೆ? ಆದ್ದರಿಂದ ನಿಜವಾದ ಭಕ್ತನಿಗೆ ಭಗವಂತನ ಹೊರತು ಮತ್ತೆ ಇನ್ನಾವುದೂ ಬೇಕಿರುವದಿಲ್ಲ. ಇನ್ನಾವುದಾದರೂ ಬಂದರೆ ಅದನ್ನು ಅವನು ಭಕ್ತಿಗೆ ಅಡ್ಡಿ ಎಂದು ತಿಳಿಯುತ್ತಾನೆಯೇ ಹೊರತು ಆ ಬಂದದ್ದಕ್ಕೆ ಸಂತೋಷವನ್ನು ವ್ಯಕ್ತಪಡಿಸುವುದಿಲ್ಲ. ಹೇಗೆ ನಿಜವಾದ ಜ್ಞಾನನಿಷ್ಠೆಯನ್ನು ಹೊಂದಿದವನಿಗೆ ಪ್ರಾಪಂಚಿಕವಾದ ಯಾವ ವಸ್ತುವಿನಲ್ಲೂ ಸತ್ಯತ್ವಬುದ್ಧಿ ಇರುವುದಿಲ್ಲವೋ ಹಾಗಾಗಿ ಆತನಿಗೆ ಅದರ ಬಗ್ಗೆ ಬಯಕೆಯಾಗಲೀ ಅದನ್ನು ಪಡೆಯುವದಕ್ಕೆ ಪ್ರವೃತ್ತಿಯಾಗಲೀ ಹೊಂದುವುದಿಲ್ಲವೋ ಅದರಂತೆ ಪರಾಭಕ್ತಿಯನ್ನು ಹೊಂದಿದ ಭಾಗವತೋತ್ತಮನು ಯಾವ ಹೊರಗಿನವಸ್ತುವನ್ನೂ ಬಯಸುವುದಿಲ್ಲ. ಕೇವಲ ಪ್ರಾರಬ್ಧಕರ್ಮದಿಂದ ಬಂದ ಶರೀರೇಂದ್ರಿಯಗಳ ನಿರ್ವಹಣೆಗಾಗಿ ಬೇಕಾಗುವುದಷ್ಟಕ್ಕೆ ಮಾತ್ರ ಬಾಹ್ಯವಸ್ತುವನ್ನು ಅವಲಂಬಿಸಿರುತ್ತಾನೆ. ಅದರಲ್ಲೂ ಆತನಿಗೆ

ಅಭಿಮಾನವಿರುವುದಿಲ್ಲ.ಬಹಳಮಟ್ಟಿಗೆ ಎಲ್ಲವೂ ಭಗವಂತನ ಅನುಗ್ರಹದಿಂದ ನಡೆಯುತ್ತದೆ ಎಂದು ತಿಳಿದಿರುತ್ತಾನೆ. ಅವನಿಗೆ **ಯೋಗಕ್ಷೇಮಂ ವಹಾಮ್ಯಹಮ್** ಎಂಬ ಭಗವಂತನ ಮಾತಿನಲ್ಲಿ ಅಚಲವಾದ ಶ್ರದ್ಧೆ ಇರುತ್ತದೆ. ಆದರೆ ಎಲ್ಲವನ್ನೂ ಭಗವಂತನು ನಡೆಸುತ್ತಾನೆ ಎಂದು ಸುಮ್ಮನೇ ಸೋಮಾರಿಯಾಗಿ ಏನನ್ನೂ ಮಾಡದೇ ಕುಳಿತಿರುವುದಿಲ್ಲ. ಏಕೆಂದರೆ ಸೋಮಾರಿತನವೆಂಬುದು ದೇಹಾಭಿಮಾನದ ಗುರುತು, ಮತ್ತೇನೆಂದರೆ ಯಾವಾಗಲೂ ಉತ್ಸಾಹಭರಿತನಾಗಿ ಕರ್ತವ್ಯನಿಷ್ಠನಾಗಿರುತ್ತಾನೆ. ಮಾಡುವ ಕೆಲಸದ ಫಲಾಫಲಗಳು ಭಗವಂತನಿಗೆ ಸೇರಿದ್ದೆಂದು ತಿಳಿದಿರುತ್ತಾನೆ. ಕೆಲಸವನ್ನು ಮಾಡುವಾಗಲೂ ಸಹ ಲೋಕಸಂಗ್ರಹಕ್ಕಾಗಿ ಮಾಡುತ್ತಿರುತ್ತಾನೆಯೇ ಹೊರತು ಫಲಾಪ್ರಾಪ್ತಿಯಾಗಲೆಂದು ಮಾತ್ರ ಪರಮಭಕ್ತನು ಸ್ವಪ್ನದಲ್ಲೂ ಮಾಡುವದಿಲ್ಲ. ಆದ್ದರಿಂದ ನಿಜವಾದ ಪರಭಕ್ತನ ನಡವಳಿಕೆಯೂ ಜ್ಞಾನಿಯ ನಡವಳಿಕೆಯೂ ಒಂದೇ ಎಂದು ತೀರ್ಮಾನವಾಗುತ್ತದೆ. ಈ ವಿಚಾರಗಳನ್ನು ನಿಜವಾದ ಪರಭಕ್ತರ ಅಥವಾ ಜ್ಞಾನಿಗಳ ಸಹವಾಸದಿಂದಲಾಗಲೀ ಶಾಸ್ತ್ರದಿಂದಾಗಲೀ ತಿಳಿದುಕೊಳ್ಳಬೇಕು.

* * * * *

## 40. ರುಕ್ಮಿಣಿಯ ಆರ್ತತೆ

**ಪೂರ್ತೇಷ್ಟದತ್ತನಿಯಮವ್ರತದೇವವಿಪ್ರ**
**ಗುರ್ವರ್ಚನಾದಿಭಿರಲಂ ಭಗವಾನ್ ಪರೇಶಃ।**
**ಆರಾಧಿತೋ ಯದಿಗದಾಗ್ರಜ ಏತ್ಯ ಪಾಣಿಂ**
**ಗೃಹ್ಣಾತು ಮೇ ನ ದಮನಘೋಷಸುತಾದಯೋಽನ್ಯೇ॥**

**- ಶ್ರೀಮದ್ಭಾಗವತ 10-52-40**

ನಾನೆಂದಾದರೂ ಇಷ್ಟಾಪೂರ್ತದಾನನಿಯಮವ್ರತವನ್ನಾಗಲೀ ದೇವತೆಗಳ ಬ್ರಾಹ್ಮಣರ ಗುರುಗಳ ಪೂಜೆಯನ್ನಾಗಲೀ - ಮಾಡುತ್ತಾ ಭಗವಂತನನ್ನು ಆರಾಧಿಸಿದ್ದು ನಿಜವಾದರೆ (ಅದರ ಫಲವಾಗಿ) ಗದಾಗ್ರಜನನ್ನುಳ್ಳ ಶ್ರೀಕೃಷ್ಣದೇವನು ಬಂದು ನನ್ನ ಕೈಯನ್ನು ಹಿಡಿಯಲಿ. ದಮಘೋಷನ ಮಗನಾದ ಶಿಶುಪಾಲಾದಿಗಳು ನನ್ನನ್ನು ಮುಟ್ಟದಿರಲಿ.

[ಇಷ್ಟ- ಎಂದರೆ ಯಜ್ಞ- ಯಾಗಗಳು, ಪೂರ್ತ ಎಂದರೆ ಸಾರ್ವಜನಿಕರಿಗಾಗಿ ಕಟ್ಟಿಸುವ ಕೆರೆ ಬಾವಿ ತೋಪುಗಳು]

## ''ಭಕ್ತಿ'' - ಸರ್ವಸ್ವಸಮರ್ಪಣೆ

ಬಹಳ ಜನರಿಗೆ ಭಗವಂತನನ್ನು ಭಜಿಸಿ ಏನನ್ನು ಕೇಳಬೇಕೆಂದೇ ತಿಳಿಯದು. ''ಮಕ್ಕಳನ್ನು ಕೊಡು, ಐಶ್ವರ್ಯವನ್ನು, ಆರೋಗ್ಯವನ್ನು ಕೊಡು'' ಎಂದು ಮುಂತಾಗಿ ಭಗವಂತನಿಗಿಂತ ಬೇರೆಯದನ್ನು ಬೇಡುತ್ತಾರೆ. ಆಗ ಆ ಜನರಿಗೆ, ನಮಗೆ ಬೇಕಾದದ್ದು ಮಕ್ಕಳು ಹಣ ಆರೋಗ್ಯ ಇವುಗಳು ಎಂದಾಯಿತೇ ಹೊರತು ಭಗವಂತನು ಬೇಕೆಂದಾಗುವುದಿಲ್ಲ ಎಂಬುದು ತಿಳಿದಿಲ್ಲ. ಅಲ್ಲಿ ಭಗವಂತನು ಕೇವಲ ಮಧ್ಯವರ್ತಿ ಎಂದಾಗುವನೇ ಹೊರತು ಆತನೇ ಪ್ರಧಾನವಾಗಿ ಬೇಕಾದವನೆಂದಾಗುವುದಿಲ್ಲ. ಇದು ಶುದ್ಧ ತಪ್ಪು. ಮಕ್ಕಳು, ಹಣ ಮುಂತಾದವುಗಳು ನಮಗೆ ಸುಖಕ್ಕೆ ಕಾರಣವಾಗಿದೆ ಎಂಬ ಕಾರಣದಿಂದ ಬೇಕಾಗಿರುತ್ತದೆಯೇ ಹೊರತು ಅದಕ್ಕಾಗಿಯೇ ಅದು ಬೇಕಾಗಿರುವುದಿಲ್ಲ. ಈಗ ಸುಖಕ್ಕಾಗಿಯೇ ಅವು ಬೇಕೆಂಬುದು ನಿಜವಾದರೆ ಸುಖಸ್ವರೂಪನಾದ ಪರಮಾತ್ಮನೇ ಸಿಗುವುದಕ್ಕೆ ಅವಕಾಶವಿರುವಾಗ ಅದಕ್ಕಿಂತ ಬೇರೆಯಾದದ್ದು ಬೇಕೆಂದು ನಾವು ಏತಕ್ಕೆ ಹವಣಿಸಬೇಕು? ಅಷ್ಟೇ ಅಲ್ಲ ಭಗವಂತನು ತನ್ನ ಸರ್ವಸ್ವವನ್ನೂ ಕೊಡಲು ಸಮರ್ಥನಾಗಿರುವಾಗ ಹೆಚ್ಚೇಕೆ? ತನ್ನನ್ನೇ ಕೊಟ್ಟುಕೊಳ್ಳುವುದಕ್ಕೂ ಸಿದ್ಧನಾಗಿರುವಾಗ ಈ ಪುಡಿಪುಡಿಯಾದ ವಿಷಯಸುಖವನ್ನು ಅವನಿಂದ ಕೇಳಿಕೊಳ್ಳುವುದು ಮಹಾ ಅಪಚಾರವಲ್ಲವೆ? ಇದನ್ನು ಚೆನ್ನಾಗಿ ಆಲೋಚಿಸಬೇಕು.

ಪ್ರಕೃತದಲ್ಲಿ ರುಕ್ಮಿಣಿದೇವಿಯು ಎಂಥ ಅಪಾರವಾದ ಭಕ್ತೆಯು! ಎಂಬುದನ್ನು ನಾವಿಲ್ಲಿ ಕಾಣಬಹುದು. ತನಗೆ ಈ ಪ್ರಪಂಚದಲ್ಲಿ ಶ್ರೀಕೃಷ್ಣನ ಹೊರತಾಗಿ ಇನ್ನೇನೂ ಬೇಡ, ತನ್ನ ಶರೀರ, ಸಂಪೂರ್ಣವಾಗಿ ಶ್ರೀಕೃಷ್ಣನಿಗೇ ಸಮರ್ಪಿತವಾಗಬೇಕು. ಇದನ್ನು ಇನ್ನಾರೂ ಮುಟ್ಟಬಾರದು. ರುಕ್ಮಿಣಿಗೆ ಐಹಿಕಜೀವನದಲ್ಲಿ ಎಲ್ಲಾ ಸೌಕರ್ಯ ಗಳೂ ಭೋಗಸಾಮಗ್ರಿಗಳೂ ಇದ್ದರೂ, ತಾನು ಸ್ವತಃ ರಾಜಕುವರಿಯಾಗಿದ್ದರೂ, ತನ್ನನ್ನು ಬೇರೆ ಬೇರೆ ರಾಜರುಗಳು ಮದುವೆ ಯಾಗುವುದಕ್ಕೆ ಹಗಲೂ ಇರುಳೂ ತವಕಪಡುತ್ತಿದ್ದರೂ, ಯಾರನ್ನೂ ಒಮ್ಮೆಯೂ ಕುಡಿಗಣ್ಣಿನಿಂದಲೂ ಸಹ ನೋಡದೆ ನಿರಂತರವಾಗಿ ಶ್ರೀ ಕೃಷ್ಣಪರಮಾತ್ಮನ ಸ್ಮರಣೆಯಲ್ಲಿಯೇ ಮುಳುಗಿದವಳಾಗಿಯೂ,

ತಾನು ಎಂದೂ ಶ್ರೀ ಕೃಷ್ಣನನ್ನು ನೋಡದಿದ್ದರೂ ಬರೀ ಸಖಿಗಳ ಮತ್ತು ಜನರ ಬಾಯಿಂದ ಶ್ರೀಕೃಷ್ಣನ ಗುಣಗಾನ ರೂಪಲಾವಣ್ಯದ ಸೌಂದರ್ಯವನ್ನೇ ನೆನೆಯುತ್ತಾ ಇರುತ್ತಿದ್ದಳು. ಆಕೆಗೆ ತನ್ನ ಜೀವನದಲ್ಲಿ ಶ್ರೀಕೃಷ್ಣನಿಗಿಂತ ಮತ್ತೊಬ್ಬ ಹೆಚ್ಚಿನವನಿಲ್ಲ. ತನ್ನ ಇಂದ್ರಿಯಗಳೂ ಪ್ರಾಣಗಳೂ ಶರೀರವೂ ಸರ್ವಸ್ವವೂ ಆತನಿಗೆ ಸಮರ್ಪಿತವಾಗಿ ಬಿಟ್ಟಿದೆ. ಇನ್ನು ಆತನೇ ಖುದ್ದಾಗಿ ಬಂದು ತನ್ನ ವಸ್ತುವನ್ನು ತೆಗೆದುಕೊಂಡು ಹೋಗುವುದೊಂದು ಬಾಕಿ.

ಆದರೆ ಈ ಕಡೆ ಮನೆಯಲ್ಲಿ ತನ್ನ ಅಣ್ಣಂದಿರೂ ಮತ್ತು ತಂದೆಯು ಎಲ್ಲರೂ ಶಿಶುಪಾಲನಿಗೆ ಈಕೆಯನ್ನು ಕೊಟ್ಟು ಮದುವೆಯನ್ನು ಮಾಡಬೇಕೆಂದು ಸಂಕಲ್ಪಿಸಿದ್ದರು. ಆದಕ್ಕಾಗಿ ಎಲ್ಲಾ ಸಿದ್ಧತೆಗಳೂ ಸಹ ನಡೆಯುತ್ತಿದ್ದವು. ಇನ್ನೇನು ಎರಡು ಮೂರು ದಿನಗಳಲ್ಲಿ ವಿವಾಹಮಹೋತ್ಸವವು ನಡೆಯಬೇಕೆಂದಿರುವಾಗ ಸ್ವತಃ ರುಕ್ಮಿಣಿಯೇ ಒಬ್ಬ ಬ್ರಾಹ್ಮಣನನ್ನು ಕರೆದು ಆತನ ಮೂಲಕ ತನ್ನ ಸಂದೇಶವನ್ನು ಶ್ರೀಕೃಷ್ಣನಿಗೆ ಕಳುಹಿಸಿಕೊಡುತ್ತಾಳೆ. ಅನಂತರ ಶ್ರೀಕೃಷ್ಣನು ಸೇವಾಸಮೇತನಾಗಿ ಬಂದು ರುಕ್ಮಿಣಿಯನ್ನು ವಿವಾಹವಾಗುತ್ತಾನೆ. ರುಕ್ಮಿಣಿಯು ತನ್ನ ಸರ್ವಸ್ವವನ್ನು ಒಪ್ಪಿಸಿ ಕೃತಾರ್ಥಗಳಾಗುತ್ತಾಳೆ. ನಿಜವಾಗಿಯೂ ಈ ಸಂದೇಶವು ತುಂಬಾ ಚೆನ್ನಾಗಿದೆ. ಇಂದಿನ ಎಲ್ಲಾ ಸ್ತ್ರೀಯರೂ, ಎಲ್ಲಾ ಪುರುಷರೂ ಇಂಥಹ ಸರ್ವಸ್ವವನ್ನು ಒಪ್ಪಿಸುವ ಭಕ್ತಿಯನ್ನು ಕಲಿಯುವುದಕ್ಕಾಗಿ ಇದನ್ನು ಕಂಠಪಾಠಮಾಡಿಕೊಳ್ಳಬೇಕು. ನಿರ್ವ್ಯಾಜಭಕ್ತಿ ಎಂದರೆ ಈ ತರಹದ್ದಾಗಿರಬೇಕು.

ಇಲ್ಲಿ ಕೆಲವರು ಹೀಗೆಂದು ಪ್ರಶ್ನೆಯನ್ನು ಮಾಡಬಹುದು. ಅದೇನೆಂದರೆ ರುಕ್ಮಿಣಿಗಾದರೆ ಶ್ರೀಕೃಷ್ಣನು ಆಗ ಅಲ್ಲಿ ಅವತಾರವನ್ನು ಮಾಡಿದ್ದನು. ಮತ್ತು ಅವನ ಗುಣಗಾನವನ್ನೂ ಕೇಳಿದ್ದಳು. ಹಾಗಾಗಿ ಅವಳಿಗೆ ಅವನಲ್ಲಿ ಪ್ರೀತಿ ಬಂದದ್ದು ಸ್ವಾಭಾವಿಕವಾಗಿದೆ. ಆದರೆ ಇಂದು ನಮಗೆ ಆದು ಕೇವಲ ಪರೋಕ್ಷವಾಗಿರು ವುದರಿಂದ ಅಂಥ ಭಕ್ತಿಯಾಗಲೀ ಆತನ ಸಹವಾಸವಾಗಲೀ ಹೇಗಾಗುತ್ತದೆ? ಎಂದು ಕೇಳಿದರೆ- ನಿಜ, ಅಂದಿನಷ್ಟು ಅನುಕೂಲ ಇಂದು ನಮಗಿಲ್ಲವಾದರೂ ಅಂದಿನ ರೂಪಿಯಾದ ಶ್ರೀಕೃಷ್ಣನು ಇಂದೂ ತನ್ನ ಪರಮಾರ್ಥರೂಪದಿಂದ ಎಲ್ಲರ ಹೃದಯದಲ್ಲೂ ನೆಲೆಸಿರುವುದರಿಂದ ಖಂಡಿತವಾಗಿಯೂ ನಮ್ಮ ಆರ್ತತೆ, ಆಹ್ವಾನ, ಸಂಬೋಧನೆ ಎಲ್ಲವೂ ಅವನಿಗೆ ತಿಳಿದೇ ತಿಳಿಯುತ್ತದೆ. ಇದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಅನನ್ಯಪ್ರೇಮದಿಂದ ಕರೆಯುವುದೊಂದು ಬಾಕಿ, ಆತನು ನಮ್ಮ

ಮುಂದೆಯೂ ಹಿಂದೆಯೂ ನಮ್ಮೊಳಗೂ ಎಲ್ಲೆಲ್ಲೂ ಇದ್ದೇ ಇರುತ್ತಾನೆ. ನಮಗೆ ಅಂಥಹ ಭಕ್ತಿಯಿಲ್ಲದೇ ಬಾಹ್ಯಭೋಗದ ಸೆಳೆತಕ್ಕೆ ಸಿಲುಕಿ ಸಂಕಟ ಬಂದಾಗ ಮಾತ್ರ ಹೇಗೋ ಕೂಗಿದ ಮಾತ್ರಕ್ಕೆ ಬಾರದೇ ಇದ್ದರೆ ಇದು ಅವನ ಸ್ವಭಾವವೋ ನಮ್ಮ ದೋಷವೋ? ನಾವೇ ವಿಚಾರವನ್ನು ಮಾಡಬೇಕು. ಶ್ರೀ ಶಂಕರಾಚಾರ್ಯರು "ಸ್ಯಾತ್ ಪರಮೇಶ್ವರಸ್ಯಾಪಿ ಇಚ್ಛಾವಶಾತ್ ಮಾಯಾಮಯಂ ರೂಪಂ ಸಾಧಕಾನುಗ್ರಹಾರ್ಥಂ" (ಸಾಧಕರಿಗೆ ಅನುಗ್ರಹ ಮಾಡುವುದಕ್ಕೆ ಪರಮೇಶ್ವರನಿಗೂ ಮಾಯಾಮಯವಾದ ರೂಪವು ಇರಬಹುದು) ಎಂದಿದ್ದಾರೆ. ಇದರಿಂದ ಏನು ಗೊತ್ತಾಗುತ್ತದೆ ಎಂದರೆ ಪರಮೇಶ್ವರನೇನೋ ಸ್ವರೂಪದಿಂದ ನಿರ್ಗುಣನೂ ನಿರ್ವಿಶೇಷನೂ ಆಗಿರುವವನಾಗಿದ್ದರೂ ಭಕ್ತರ ಅನುಗ್ರಹಕ್ಕಾಗಿ ಅವರ ಅಪೇಕ್ಷೆಯ ರೂಪದಂತೆ ಸಾಕ್ಷಾತ್ಕಾರವಾಗಿ ತೋರಿಕೊಳ್ಳಬಹುದು, ಅಂದಮೇಲೆ ನಾವೂ ಇಂದು ರುಕ್ಮಿಣಿಯಂತೆ ಅನನ್ಯಪ್ರೇಮದಿಂದ ಆತನನ್ನು ಕರೆದರೆ- ಅಥವಾ ಆತನ ಸ್ಮರಣೆಯಲ್ಲಿಯೇ ನಿರಂತರವಾಗಿದ್ದರೆ ಆತನ ಸಗುಣರೂಪದ ದರ್ಶನವೂ, ಪರತತ್ತ್ವದ ಅರಿವೂ ಆಗುವುದರಲ್ಲಿ ಆಶ್ಚರ್ಯವೇನು? ಮೀರಾಬಾಯಿ, ರಾಮಕೃಷ್ಣಪರಮಹಂಸರು, ಬ್ರಹ್ಮಚೈತನ್ಯಮಹಾರಾಜರೇ ಮುಂತಾದವರ ಚರಿತ್ರೆಯಲ್ಲಿ ಇತ್ತೀಚಿನ ಕಾಲದಲ್ಲಿಯೇ ನಡೆದದ್ದನ್ನು ನಾವು ಕೇಳಿಲ್ಲವೆ? ನಾನು ಮಾತ್ರ ಏನನ್ನೂ ಮಾಡದೇ ಭಕ್ತಿಯನ್ನೇ ಹೊಂದದೇ ಅದು ಹೇಗೆ ಆಗುತ್ತದೆ? ಎಂದು ಅನುಮಾನಪಡುತ್ತಿದ್ದರೆ ಅದು ಅನುಮಾನದಲ್ಲೇ ಪರ್ಯವಸಾನ ವಾಗುವುದೇ ಹೊರತು ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಆಲದಮರದ್ದೋ, ಅರಳಿಮರದ್ದೋ ಬೀಜವನ್ನು ನೋಡಿ ಆ ಬೀಜದಿಂದ ಇಷ್ಟು ದೊಡ್ಡದಾದ ಮರವು ಉಂಟಾಗಿದೆಯೇ? ಇದು ಹೇಗೆ ಸಾಧ್ಯ? ಎಂದು ತರ್ಕವನ್ನು ಮಾಡುತ್ತೇವೆಯೆ? ಎಂದಿಗೂ ಇಲ್ಲ. ಅದರಂತೆ ಪ್ರತಿನಿತ್ಯ ಅನನ್ಯತೆಯಿಂದ ನಿರ್ವ್ಯಾಜವಾಗಿ ಭಕ್ತಿಗಾಗಿ ಭಕ್ತಿಯನ್ನು ಮಾಡುತ್ತಿದ್ದರೆ (ಇದಕ್ಕೆ ಸಹಾಯವಾಗಿ ಜಪ, ಸ್ತೋತ್ರ, ವೇದಾಧ್ಯಯನ- ಪೂಜೆ, ಹೋಮ ಏನನ್ನು ಮಾಡಿದರೂ ಸರಿಯೇ) ಇದರಿಂದ ಅವಶ್ಯವಾಗಿ ಆತನ ದರ್ಶನ- ಸಂಭಾಷಣ- ಸ್ವರೂಪದ ಪರಿಚಯ, ಇವು ಆಗುವುದರಲ್ಲಿ ಸಂಶಯವಿಲ್ಲ. ಇದಕ್ಕಾಗಿಯೇ ಎಲ್ಲಾ ಶ್ರುತಿ ಸ್ಮೃತಿ ಪುರಾಣ ಧರ್ಮಶಾಸ್ತ್ರ- ಸಂಪ್ರದಾಯಗಳು ಹೊರಟಿರುತ್ತವೆ. ಭಕ್ತಿ ಇಲ್ಲದಿದ್ದರೆ ಅವುಗಳಿಗೆ ಏನೂ ಬೆಲೆಯೇ ಇಲ್ಲ. ಇಂಥಹ ಭಕ್ತಿಯನ್ನು ಸಂಪಾದಿಸಿಕೊಳ್ಳಬೇಕು.

* * * * *

# 41. ರುಕ್ಮಿಣಿ ಗೀತೆ

ತ್ವತ್ಪಾದಪದ್ಮಮಕರಂದಜುಷಾಂ ಮುನೀನಾಂ
ವರ್ತ್ಮಾSಸ್ಫುಟಂ ನೃಪಶುಭಿರ್ನನು ದುರ್ವಿಭಾವ್ಯಮ್ ।
ಯಸ್ಮಾದಲೌಕಿಕಮಿವೇಹಿತಮೀಶ್ವರಸ್ಯ
ಭೂಮಂಸ್ತವೇಹಿತಮಥೋ ಅನು ಯೇ ಭವನ್ತಮ್ ॥

- ಶ್ರೀಮದ್ಭಾಗವತ 10-60-37

ನಿನ್ನ ಪಾದಕಮಲದ ಮಕರಂದವನ್ನು ಸೇವಿಸುವ ಋಷಿಗಳ ನಡೆವಳಿಕೆಯೂ ಸಹ ಪಶುರೂಪದವರಾದ ಮನುಷ್ಯರಿಗೆ ಗೋಚರವಾಗುವುದಿಲ್ಲ ವೆಂದು ಇರುವಾಗ ನಿನ್ನ ನಡೆವಳಿಕೆಯನ್ನು ಅರ್ಥಮಾಡಿಕೊಳ್ಳುವುದು ಎಲ್ಲಿ ಬಂತು! ನಿನ್ನನ್ನು ಅನುಸರಿಸುವ ಭಕ್ತರ ಮಾರ್ಗವೇ ಅಲೌಕಿಕವಾಗಿರುವಾಗ ಸರ್ವಾತ್ಮನಾದ ಸರ್ವೇಶ್ವರನಾದ ನಿನ್ನ ಮಾರ್ಗವು (ಪ್ರಾಕೃತರಿಗೆ) ತಿಳಿಯುವುದಿಲ್ಲವೆಂದು ಬೇರೆ ಏನು ಹೇಳಬೇಕು?

[ವಾಚಾಮಗೋಚರನಾದ ಪರಮೇಶ್ವರನ ಪರತತ್ತ್ವವನ್ನು ಅವನ ಹೊರತು ಮತ್ತೆ ಯಾರೂ ಅರಿತವರಿಲ್ಲ ಎಂದು ಭಾವ.]

## ಅಪೂರ್ವ ದಾಂಪತ್ಯ

ನಾವು ಶ್ರೀಕೃಷ್ಣಾವತಾರದ ಮೇಲೆ ಒಮ್ಮೆ ನಮ್ಮ ದೃಷ್ಟಿಯನ್ನು ಹಾಯಿಸಿದರೆ ಆದರಲ್ಲಿ ತೋರಿಬರುವ ಅಂಶಗಳೇನೆಂದರೆ- ಆರಂಭದಿಂದಲೂ ದುಷ್ಟನಿಗ್ರಹ ವನ್ನು- ಪೂತನಿಸಂಹಾರ, ಶಕಟಾಸುರ, ಧೇನುಕಾಸುರ, ಯಮಳಾರ್ಜುನ ಭಂಜನ, ಕಾಳಿಂಗಸರ್ಪ, ಕಂಸ, ಶಿಶುಪಾಲ ಇತ್ಯಾದಿ- ಅನೇಕರ ಸಂಹಾರವು ಶ್ರೀಕೃಷ್ಣನ ಬಾಲ್ಯದಲ್ಲೇ ನಡೆದುಹೋದ ಘಟನೆಗಳನ್ನು ನಾವು ಕಾಣಬಹುದು. ಇದು ಒಂದು ಕಡೆಯಾದರೆ ಇನ್ನೊಂದು ಕಡೆಯಲ್ಲಿ- ಸ್ನೇಹಿತರಾದ ಗೊಲ್ಲರೊಡನೆ ಎಂತಹ ರೋಮಾಂಚನ ವರ್ತನೆ- ಪ್ರೇಮ! ನಂದಗೋಕುಲದ ಆಬಾಲವೃದ್ಧರೊಡನೆ ಎಂತಹ ಸ್ಮಿತಮಂದಹಾಸದ ನಡವಳಿಕೆ! ತಾಯಿ, ಯಶೋಧೆಯೊಡನೆ ಎಂತಹ ವಾತ್ಸಲ್ಯದ ವರ್ತನೆ! ಅಲ್ಲಿಯ ಸ್ತ್ರೀಯರೊಡನೆ ಎಂತಹ ಮೃದುತನದ ವರ್ತನೆ! ಚೇತೋಹಾರಿಯಾದ ಸಂಭಾಷಣೆ! ಅಲ್ಲಿನವರಿಗೆ ಶ್ರೀಕೃಷ್ಣನ ಮೇಲಿದ್ದ ಪ್ರೇಮ

ವಾದರೋ ಅವರ್ಣನೀಯ! ಇವೆಲ್ಲವನ್ನೂ ಮೆಲಕು ಹಾಕುತ್ತಿದ್ದರೆ ವಾಚಕವೃಂದಕ್ಕೆ ಈಗಲೇ ನಂದಗೋಕುಲಕ್ಕೆ ಓಡಿಹೋಗಿಬಿಡೋಣವೇ? ಎಂದೆನಿಸುವುದಿಲ್ಲವೇ? ಅಯ್ಯೋ! ಖಂಡಿತಾ! ಅನ್ನಿಸುತ್ತದೆ! ಆ ಪುಣ್ಯಪುರುಷನು ಇಂದೂ ತನ್ನ ಶರೀರ ರೂಪದಿಂದ ಅಂದಿನವನಂತೆ ನಮ್ಮ ಕಣ್ಣು ಮುಂದೆ ಓಡಾಡುತ್ತಿದ್ದರೆ ನಮಗೆಲ್ಲಾ ಏನಾಗುವುದಿಲ್ಲ! ಅಂತಹ ಭಾಗ್ಯ ನಮ್ಮದಾಗುವದೆ?

ಇನ್ನು ಪ್ರೌಢನಾದ ಮೇಲೆ ಅವನು ಎಂತಹ ರಾಜಕೀಯ ಸೂತ್ರಧಾರನಾದ! ತಾನು ಸ್ವಯಂ ರಾಜನಾಗದಿದ್ದರೂ ಯಾರು ಎಲ್ಲಿ ಹೇಗೆ ರಾಜರಾಗಬೇಕೆಂಬುದನ್ನು ಹೇಗೆ ಜಾರಿಗೆ ತಂದ! ಮಾವನಾದ ಕಂಸನನ್ನೇ ಕೊಂದು ಮಾತಾಮಹನಾದ ಉಗ್ರಸೇನನನ್ನು ಸೆರೆಮನೆಯಿಂದ ಬಿಡಿಸಿ ರಾಜ್ಯಾಭಿಷಿಕ್ತನನ್ನಾಗಿ ಮಾಡಿದ. ರಾಜ್ಯವನ್ನು ನಿಷ್ಕಂಟಕವನ್ನಾಗಿ ಮಾಡಿದ. ಭೀಮನಿಂದ ಜರಾಸಂದನ ವಧೆಮಾಡಿಸಿ ಜರಾಸಂಧನು ಸೆರೆಮನೆಯಲ್ಲಿಟ್ಟಿದ್ದ ಎಲ್ಲಾ 99 ರಾಜಕುಮಾರರಿಗೂ ಮರಳಿ ರಾಜ್ಯವನ್ನು ಕೊಡಿಸಿದ. ಯಾರಿಗೆ ರಾಜ್ಯಪ್ರಾಪ್ತಿಯಾದರೆ ದೇಶಕ್ಕೆ ಹಿತವೆಂಬುದನ್ನು ಲೋಕಕ್ಕೆ ಚೆನ್ನಾಗಿ ತಿಳಿಸಿಕೊಟ್ಟ. ಹೀಗೆ ಆತನ ಪ್ರತಿಯೊಂದು ಹಂತದ ಕೆಲಸ ಕಾರ್ಯಗಳೂ ಲೋಕೋತ್ತರವಾದವುಗಳೇ ಆಗಿವೆ.

ಇನ್ನು ವಿವಾಹಜೀವನದಲ್ಲಿ- ಮೊಟ್ಟಮೊದಲು ರುಕ್ಮಿಣಿಯನ್ನು ಮದುವೆಯಾದ. ಅದೂ ಸಹ ರುಕ್ಮಿಣಿಯ ಅಣ್ಣನಿಗಾಗಲೀ ತಂದೆಗಾಗಲೀ ಕೃಷ್ಣನಿಗೆ ಕೊಡಲು ಇಷ್ಟವಿರಲಿಲ್ಲ. ರುಕ್ಮಿಣಿಯೇ ಖುದ್ದಾಗಿ ಒಬ್ಬ ಬ್ರಾಹ್ಮಣನನ್ನು ಶ್ರೀಕೃಷ್ಣನ ಹತ್ತಿರ ಕಳುಹಿಸಿ ತನ್ನ ಅನಿಸಿಕೆಯನ್ನೆಲ್ಲಾ ತಿಳಿಸಿದ ಮೇಲೆ ಅದರ ಮೇರೆಗೆ ಶ್ರೀಕೃಷ್ಣನೇ ಬಂದು ಶಿಶುಪಾಲಾದಿ ಎಲ್ಲಾ ರಾಜರನ್ನೂ ಯುದ್ಧದಲ್ಲಿ ಸೋಲಿಸಿ ಮದುವೆಯಾಗುತ್ತಾನೆ. ಹಾಗಿರುವಾಗ ರುಕ್ಮಿಣೀ ಶ್ರೀಕೃಷ್ಣರ ವಿನೋದದ ಒಂದು ಸಂವಾದ ತುಂಬಾ ಚೆನ್ನಾಗಿ ಅತ್ಯಂತ ರಮಣೀಯವೂ ಚೇತೋಹಾರಿಯೂ ಆಗಿದೆ.

ಒಮ್ಮೆ ಶ್ರೀಕೃಷ್ಣನು ವಿನೋದಮಾಡುವ ಸಲುವಾಗಿ ರುಕ್ಮಿಣಿ ನೋಡು! ನೀನು ಮಹಾರಾಜನ ಮಗಳು, ನಿನ್ನನ್ನು ಲೋಕಪಾಲಕರಂತೆ ಇರುವ ರಾಜಾಧಿ ರಾಜರು ವರಿಸಿದ್ದರು. ನಿನ್ನ ತಂದೆ ಮತ್ತು ಅಣ್ಣನೂ ಸಹ ಶಿಶುಪಾಲನಿಗೇ ಕೊಡಬೇಕೆಂದಿದ್ದರು. ನೀನೂ ಸಹ ಅಂತಹವರನ್ನುವರಿಸದೇ ನನ್ನನ್ನೇಕೆ ವರಿಸಿಬಿಟ್ಟೆ? ನಿನಗೆ ಅನ್ಯಾಯವಾಗಲಿಲ್ಲವೆ? ನಾವಾದರೋ ಶಿಶುಪಾಲಜರಾಸಂಧಾದಿಗಳಿಗೆ

ಹೆದರಿ ಸಮುದ್ರಮಧ್ಯದಲ್ಲಿ ವಾಸಿಸುತ್ತಿರುವವರು, ನಮಗೆ ರಾಜ್ಯವಿಲ್ಲ, ಸಿಂಹಾಸನವಿಲ್ಲ, ಅಷ್ಟೆ ಅಲ್ಲ, ನಾವು ಅಕಿಂಚನ ಜನರು ಮತ್ತು ಅಂಥವರಿಗೆ ಪ್ರಿಯರು, ಅಂದರೆ ಏನೂ ಇಲ್ಲದ ಬಡವರು ಮತ್ತು ಅಂಥವರಿಗೇ ಪ್ರಿಯರು, ನಮಗೂ ನಿಮಗೂ ಯಾವ ರೀತಿಯಿಂದಲೂ ಸರಿಸಾಟಿ ಇಲ್ಲ. ಹಾಗಾಗಿ ಅನ್ಯಾಯವಾಗಿ ನನ್ನನ್ನು ವರಿಸಿ ಮೋಸಹೋದೆಯಲ್ಲಾ! ಆದರೆ ಈಗಲೂ ಕಾಲ ಮಿಂಚಿಲ್ಲ, ನಿನಗನುಗುಣನಾದ ಪುರುಷಶ್ರೇಷ್ಠನನ್ನು ಈಗಲಾದರೂ ವರಿಸು. ನಾನು ನಿನಗೆ ಅನುಮತಿ ನೀಡುತ್ತೇನೆ ಎಂದು ವಿನೋದವಾಗಿ ಹೇಳಿದನು. ಇದನ್ನು ಕೇಳಿದ ರುಕ್ಮಿಣಿಯು ನಿಜವೆಂತಲೇ ಭಾವಿಸಿ ಅತ್ಯಂತ ದುಃಖಿತಳಾಗಿ ಅಳಲಾರಂಭಿಸಿದಳು. ಮೂರ್ಛೆ ಹೋದಳು.

ಅನಂತರ ಶ್ರೀಕೃಷ್ಣನೇ ಅವಳಿಗೆ ಸಮಾಧಾನ ಮಾಡುವಾಗ ಶ್ರೀಕೃಷ್ಣನ ಮಾತು ಹೇಗಿತ್ತೆಂದರೆ ''ಅಯಂ ಹಿ ಪರಮೋ ಲಾಭೋ ಗೃಹೇಷು ಗೃಹಮೇಧಿನಾಮ್। ಯನ್ನರ್ಮೈರ್ನೀಯತೇ ಯಾಮಃ ಪ್ರಿಯಯಾ ಭೀರು ಭಾಮಿನಿ''॥ ಎಲೆ ಭಾಮಿನಿಯೇ ಗೃಹಸ್ಥರಿಗೆ ತಮ್ಮ ಹೆಂಡತಿಯೊಡನೆ ವಿನೋದಕ್ಕಾಗಿ ಪರಿಹಾಸದ ಮಾತುಗಳಿಂದ ಕಾಲವನ್ನು ಕಳೆಯುವುದೆಂಬುದೇ ಹೆಚ್ಚಿನ ಲಾಭವಲ್ಲವೇ? ಇದರಲ್ಲಿ ಎಂತಹ ಪತ್ನಿಪ್ರೇಮವನ್ನು ವ್ಯಕ್ತಪಡಿಸಿದ್ದಾನೆ! ಅನಂತರ ಶ್ರೀಕೃಷ್ಣನು ತನ್ನ ಬಗ್ಗೆ ತಾನೇ ಹೇಳಿಕೊಂಡಿದ್ದಕ್ಕೆಲ್ಲಾ ರುಕ್ಮಿಣಿಯು ಕೊಟ್ಟ ಉತ್ತರವೂ ಸಹ ತುಂಬಾ ಅದ್ಭುತವಾಗಿದೆ. ಅದು ಹೇಗಿದೆ ಎಂದರೆ, ನಿನಗೆ ನಾನು ತಕ್ಕವನಲ್ಲ ಎಂದು ಹೇಳಿದೆಯಲ್ಲಾ. ಅದು ದಿಟವೆ, ಏಕೆಂದರೆ ಸರ್ವೇಶ್ವರನಾದ ನೀನೆಲ್ಲಿ? ಅತ್ಯಂತ ಪ್ರಾಕೃತಳಾದ ನಾನೆಲ್ಲಿ? ಖಂಡಿತಾ ನನಗೂ ನಿನಗೂ ಮಹಾನ್ ಅಂತರವೇ ಇರುತ್ತದೆ. ಹಾಗೆಯೇ ಶಿಶುಪಾಲಾದಿಗಳಿಗೆ ಹೆದರಿ ಸಮುದ್ರದ ಮಧ್ಯದಲ್ಲಿ ಮನೆಯನ್ನು ಕಟ್ಟಿಕೊಂಡವನು ಎಂದೆಯಲ್ಲಾ! ಅದು ದಿಟವೆ, ಏಕೆಂದರೆ ಶಬ್ದಾದಿಗುಣಗಳೆಂಬ ದುಷ್ಟೇಂದ್ರಿಯ ವೆಂಬ ರಾಜರಿಗೆ ನಿಲುಕಬಾರದೆಂದು ಹೃದಯಗುಹೆಯೆಂಬ ಸಮುದ್ರವನ್ನು ನೀನು ಹೊಕ್ಕಿರುವೆ. ಇಲ್ಲಿ ಶಿಶುಪಾಲ ಎಂದರೆ ಶಿಶುಸ್ವಭಾವವಾದ ಅತಿಪ್ರಾಕೃತವಾದ ಇಂದ್ರಿಯವ್ಯಾಪಾರಗಳು ಎಂದರ್ಥ. ಅದಕ್ಕೆ ಆತನು ನಿಲುಕದವನು. ಇದರಿಂದ ಎಂತಹ ವೇದಾಂತತತ್ತ್ವವನ್ನು ಸೂಚಿಸುತ್ತಿದ್ದಾಳೆ. ಇನ್ನು ರಾಜ್ಯವಿಲ್ಲದವನು ಸಿಂಹಾಸನವಿಲ್ಲದವನು ಎಂದೆಯಲ್ಲಾ! ಅದೂ ಸರಿಯೇ, ನಿನ್ನ ಭಕ್ತರಾದವರೇ ರಾಜ್ಯಾಧಿಕಾರವು ಪಾಪಫಲವೆಂದು ಅರಿತು ಬಂಧಕಾರಣವೆಂದು ತಿಳಿದಾಗ,

ನಿತ್ಯತೃಪ್ತನಾದ ಆಪ್ತಕಾಮನಾದ ನಿನಗೆ ಅದರ ಹಂಗೇತಕ್ಕೆ? ಇನ್ನು, ನಮ್ಮ ನಡವಳಿಕೆಯು ತೀರ ಲೋಕವಿಲಕ್ಷಣವೆಂತಲೂ ಅದನ್ನು ಅನೇಕರು ಹೀಯಾಳಿಸುವರೆಂದು ಹೇಳಿದೆಯಲ್ಲ, ಇದರಲ್ಲೇನೂ ತಪ್ಪಿಲ್ಲ, ಏಕೆಂದರೆ ನಿನ್ನ ಪಾದಾರವಿಂದವನ್ನು ಸೇವಿಸಿದ ಮುನಿಗಳ ಚರ್ಯೆಯೇ ಪಶುರೂಪರಾದ ಮನುಷ್ಯರಿಗೆ ಅರ್ಥವಾಗದಿದ್ದಾಗ ನಿನ್ನ ನಡವಳಿಕೆಯು ಲೋಕದವರಿಗೆ ಅರ್ಥವಾಗದಿದ್ದಲ್ಲಿ ಆಶ್ಚರ್ಯವೇನು? ಇನ್ನು "**ಅಕಿಂಚನ ಜನಾ ವಯಂ ಅಕಿಂಚನ ಜನಪ್ರಿಯಃ**" ನಮ್ಮಲ್ಲಿ ಏನೇನೂ ಇಲ್ಲ, ಅಂತಹ ಬಡವರಿಗೇ ನಾವು ಪ್ರಿಯರು ಎಂದು ಹೇಳಿಕೊಂಡಿರುವೆಯಲ್ಲಾ! ಇದೂ ದಿಟವೇ, ನಿರ್ವಿಶೇಷಚಿನ್ಮಾತ್ರರಾದ ನಿಮಗೆ ಯಾವುದೂ ಸಂಬಂಧಪಟ್ಟುಕೊಂಡಿಲ್ಲ, ಹಾಗೆಯೇ ಎಲ್ಲವನ್ನೂ ತೊರೆದ ಸಂನ್ಯಾಸಿಗಳಿಗೇ ನೀವು ಪ್ರಿಯರೇ ಆಗಿರುವಿರೆಂಬುದು ಯುಕ್ತವೇ ಆಗಿದೆ. ಅತ್ಯಂತ ಪ್ರಾಕೃತರಿಗೆ ನಿನ್ನ ಮಹಿಮೆ ಹೇಗೆ ತಿಳಿದೀತು! ಆದ್ದರಿಂದ ನನ್ನಂಥವಳೊಡನೆ ವಿವಾಹಮಾಡಿಕೊಂಡ ನಿಮಗೇ ಸಾಮ್ಯತೆ ಹೊಂದದೇ ಹೋದೀತೇ ಹೊರತು ನನಗೆ ಅಲ್ಲ. ನನಗೆ ನಿಮ್ಮಂಥವರೊಡನೆ ಸಂಬಂಧವೆಂಬುದು ಅತ್ಯಂತ ಪರಮಭಾಗ್ಯ ದಾಯಕವೇ ಆಗಿದೆ.

ಈ ತರಹದ ಸಂಭಾಷಣೆಯಲ್ಲಿರುವ ಸ್ವಾರಸ್ಯವನ್ನು ನಾವು ನೇರಾಗಿ ಭಾಗವತವನ್ನು ಓದಿದಾಗಲೇ ಅದನ್ನು ಕಾಣುವುದಕ್ಕಾದೀತೇ ಹೊರತು, ಕೇವಲ ಅನುವಾದವನ್ನೋ ಲೇಖನವನ್ನೋ ಓದಿದಾಗ ಖಂಡಿತವಾಗಿಯೂ ಆಗುವುದಿಲ್ಲ. ಅಜನೂ ಅವ್ಯಯನೂ ಸಮಸ್ತಭೂತಗಳಿಗೂ ಈಶ್ವರನಾದ ಶ್ರೀಕೃಷ್ಣಪರಮಾತ್ಮನ ಒಂದೊಂದು ಚರ್ಯೆಯೂ ಮಹಾಯಜ್ಞಮಯವಾಗಿಯೂ ಒಂದೊಂದು ವಾಣಿಯೂ ದಿವ್ಯವಾದ ವೇದವಾಣಿಯಾಗಿರುತ್ತದೆಯೇ ಹೊರತು ಪ್ರಾಕೃತದ ನಡೆನುಡಿಗೆ ಎಂದಿಗೂ ಹೋಲಿಸುವುದಕ್ಕಾಗುವುದಿಲ್ಲ. ಇಂದಿಗೂ ಎಷ್ಟೋ ಮಂದಿ ಮೂರ್ಖರು, ಶ್ರೀಕೃಷ್ಣನನ್ನು ಸ್ತ್ರೈಣನೆಂತಲೂ ಕಪಟರಾಜಕೀಯ ಸೂತ್ರಧಾರಿ ಎಂತಲೂ ವಂಚಕನೆಂತಲೂ ಹಳಿಯುವುದುಂಟು. ನಿಜವಾಗಿಯೂ ಅದು ಘೋರಪಾಪದ ಫಲ ಹಾಗೂ ಅವರ ದೌರ್ಭಾಗ್ಯತನ. ಶ್ರೀಕೃಷ್ಣನ ವ್ಯಕ್ತಿತ್ವವನ್ನು ಶ್ರೀ ವೇದವ್ಯಾಸರ ಮಹಾಭಾರತದಿಂದಲೂ ಭಗವದ್ಗೀತೆಯಿಂದಲೂ ತಿಳಿದುಕೊಳ್ಳ ಬೇಕು. ಭಾಗವತವಂತೂ ಭಕ್ತಿಸಾಗರದ ಆಲಯಸ್ಥಾನ, ಭಕ್ತಿಯ ಪರಾಕಾಷ್ಠೆಯನ್ನು ಅಲ್ಲಿ ಓದಿ ನಾವು ತಿಳಿದುಕೊಳ್ಳಬೇಕು. ಅವರಿವರ ಪುಡಿ ಮಾತಿಗೆ

ಬೆಲೆಕೊಡಬಾರದು. ಸುಳ್ಳು ಸುಳ್ಳಾದ ಕಥೆಯಿಂದ ವಂಚಿತರಾಗಬಾರದು. ಶ್ರೀಕೃಷ್ಣನೆಂದರೆ ಬೇರೆ ಅಲ್ಲ ಪರಂಬ್ರಹ್ಮವೆಂದರೆ ಬೇರೆ ಅಲ್ಲ. ಕೃಷ್ಣಸ್ತು ಭಗವಾನ್ ಸ್ವಯಮ್ ಎನ್ನುತ್ತಾರೆ ಭಾಗವತಕಾರರು! ಇದನ್ನು ನಾವು ಅರ್ಥಮಾಡಿಕೊಂಡು ಕೃತಾರ್ಥರಾಗಬೇಕು.

* * * * *

## 42. ರುದ್ರಸ್ತೋತ್ರ

ನಾಭಿರ್ನಭೋಽಗ್ನಿಃ ಮುಖಮಂಬುರೇತೋ
ದ್ಯೌಃಶೀರ್ಷಮಾಶಾ ಶ್ರುತಿರಂಘ್ರಿರುರ್ವೀ ।
ಚಂದ್ರೋ ಮನೋ ಯಸ್ಯ ದೃಗರ್ಕ ಆತ್ಮಾ
ಅಹಂ ಸಮುದ್ರೋ ಜಠರಂ ಭುಜೇಂದ್ರಃ ॥

– ಶ್ರೀಮದ್ಭಾಗವತ 10-63-35

(ಹೇ ಪರಮಾತ್ಮನೇ) ತ್ರೈಲೋಕ್ಯಶರೀರಿಯಾದ ನಿನಗೆ) ಅಂತರಿಕ್ಷವೇ ನಾಭಿಯೋ, ಅಗ್ನಿಯೇ ಬಾಯಿಯೋ, ಜಲವೇ ರೇತಸ್ಸೋ, ದ್ಯುಲೋಕವೇ ತಲೆಯೋ, ದಿಕ್ಕುಗಳೇ ಕಿವಿಯೋ, ಭೂಮಿಯೇ ಪಾದವೋ, ಚಂದ್ರನೇ ಮನಸ್ಸೋ, ಸೂರ್ಯನೇ ಕಣ್ಣೋ (ರುದ್ರನಾದ) ನಾನೇ (ನಿನ್ನ) ಅಹಂಕಾರವೋ, ಸಮುದ್ರವೇ ಹೊಟ್ಟೆಯೋ, ಇಂದ್ರನೇ ತೋಳೋ ಅಂತಹ ನಿನ್ನನ್ನು ಏನೆಂದು ವರ್ಣಿಸಲಿ?

(ಭಗವತ್ತತ್ತ್ವವನ್ನು ಸಂಪೂರ್ಣವಾಗಿ ವರ್ಣಿಸಲಸಾಧ್ಯ ಎಂದು ಭಾವ.)

### ವಿರಾಡ್ರೂಪದ ಸ್ತೋತ್ರ

ಈ ಸ್ತೋತ್ರದಲ್ಲಿರುವಂತೆಯೇ ಪರಮಾತ್ಮನ ವರ್ಣನೆಯನ್ನು ''ಅಗ್ನಿರ್ಮೂರ್ಧಾ ಚಕ್ಷುಷೀ ಚಂದ್ರ ಸೂರ್ಯೌ'' ಎಂದು ಮುಂತಾಗಿ ಮುಂಡಕೋಪನಿಷತ್ತಿನಲ್ಲಿ ಮಾಡಿರುತ್ತದೆ. ಹಾಗೆಯೇ ಪುರುಷಸೂಕ್ತದಲ್ಲಿಯೂ ಈ ರೀತಿಯ ವರ್ಣನೆಯನ್ನು ಕಾಣಬಹುದು. ವಿಷ್ಣುಸಹಸ್ರನಾಮ ಸ್ತೋತ್ರದ ಪೀಠಿಕಾಭಾಗದಲ್ಲೂ ''ಭೂಃ ಪಾದೌ ಯಸ್ಯ ನಾಭಿರ್ವಿಯತ್'' ಎಂಬುದಾಗಿರುವ

ಸ್ತೋತ್ರವೂ ಇದೇ ವಿಷಯವನ್ನು ಹೇಳುತ್ತದೆ. ಹಾಗೆಯೇ ''ಯಸ್ಯಾಗ್ನಿರಾಸ್ಯಂ ದ್ಯೌರ್ಮೂರ್ಧಾ'' ಎಂಬುದಾಗಿ ಭೀಷ್ಮಸ್ತವರಾಜ ಸ್ತೋತ್ರದ ಈ ಸ್ತೋತ್ರವನ್ನು ಬ್ರಹ್ಮಸೂತ್ರಭಾಷ್ಯದಲ್ಲಿ ಶ್ರೀ ಶಂಕರಾಚಾರ್ಯರೂ ಉದಾಹರಿಸಿರುವುದನ್ನೆಲ್ಲಾ ಮನದಂದರೆ ಈ ವಿರಾಡ್ರೂಪನಾದ ಪರಮಾತ್ಮನ ವರ್ಣನಾಸ್ತೋತ್ರಕ್ಕೆ ಎಷ್ಟೊಂದು ಪ್ರಾಶಸ್ತ್ಯವಿದೆ! ಎನ್ನುವುದು ಗೊತ್ತಾಗುತ್ತದೆ.

ಹಾಗಾದರೆ ಈ ಸ್ತೋತ್ರದ ವಿಶೇಷವೇನು? ಎಂದರೆ ಇದು ವಿರಾಟ್ಪುರುಷನ ಉಪಾಸನೆಯು. ಇದನ್ನು ಎಲ್ಲರೂ ಎಂದರೆ ಸ್ತ್ರೀಯರೂ- ಶೂದ್ರರೂ ಉಪನೀತರೂ ಅನುಪನೀತರೂ ಹಾಗೆಯೇ ಪ್ರಪಂಚದ ಸರ್ವಮಾನವರೂ ಮಾಡಬಹುದೆಂದು ಗೊತ್ತಾಗುತ್ತದೆ. ಏಕೆಂದರೆ ಇದು ಪುರಾಣ ಇತಿಹಾಸದಲ್ಲಿ ಉಪದೇಶಿಸಿದ ಉಪಾಸನೆ. ಇದರ ಸ್ವರೂಪವೇನು? ಎಂದರೆ ಜಗತ್ತಿನ ಸೃಷ್ಟಿಯ ಆರಂಭದಲ್ಲಿ ಪರಮಾತ್ಮನು ಜಗತ್ತನ್ನು ಸೃಷ್ಟಿಸುವಾಗ ಮೊದಲು ಹಿರಣ್ಯಗರ್ಭನನ್ನು ಸೃಷ್ಟಿಸಿದನು. ಹಿರಣ್ಯಗರ್ಭನೆಂದರೆ ಸಮಷ್ಟಿ ಪ್ರಾಣಾಭಿಮಾನಿಯೂ ಸಮಷ್ಟಿ ಮನೋಭಿಮಾನಿಯೂ ಆದ ದೇವತೆಯು. ಆತನಿಗೆ ಸ್ಥೂಲವಾದ ನಮಗೆ ಇರುವ ಹಾಗೆ ಶರೀರವಲ್ಲ. ಆತನನ್ನು ಸಮಷ್ಟಿಲಿಂಗಶರೀರಿ ಎಂತಲೂ ಅವ್ಯಾಕೃತದಿಂದ ಮೊಟ್ಟಮೊದಲು ತೋರಿಕೊಂಡನೆಂತಲೂ ಶಾಸ್ತ್ರದಲ್ಲಿ ವರ್ಣನೆ ಇದೆ. ಈತನಿಂದಲೇ ಈ ವಿರಾಟ್ಪುರುಷನು ಹುಟ್ಟುತ್ತಾನೆಂದು ಹೇಳಿದೆ. ವಿರಾಟ್ಪುರುಷನೆಂದರೆ ಅಖಂಡಸ್ಥೂಲ ಪ್ರಪಂಚವನ್ನೇ ನಾನೆಂದು ಅಭಿಮಾನವನ್ನು ಪಟ್ಟುಕೊಂಡ ಪರಮಾತ್ಮ ದೇವತೆಯು. ಆತನದು ದ್ಯುಲೋಕವೇ ತಲೆ, ಸೂರ್ಯನೇ ಕಣ್ಣು, ಚಂದ್ರನೇ ಮನಸ್ಸು, ವಾಯುವೇ ಪ್ರಾಣ, ಆಕಾಶವೇ ನಡುಮೈ, ಸಮುದ್ರವೇ ಕಿಬ್ಬೊಟ್ಟೆ, ಸಮಸ್ತ ಇಂದ್ರಾದಿ ದೇವತೆಗಳೇ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳು. ಅಗ್ನಿಯೇ ಬಾಯಿ, ಔಷಧಿವನಸ್ಪತಿಗಳೇ ಕೇಶಲೋಮಗಳು, ದಿಕ್ಕುಗಳೇ ಕಿವಿ, ಪೃಥಿವಿಯೇ ಪಾದ ಎಂದು ಮುಂತಾಗಿ ಸ್ಥೂಲಪ್ರಪಂಚವನ್ನೇ ಅವನ ಅವಯವವಾಗಿ ವರ್ಣಿಸಿದೆ. ಹೀಗೆ ವರ್ಣಿಸಿದ ಆತನಲ್ಲಿಯೇ ನಾವುಗಳೂ ಸೇರಿಹೋಗುವುದರಿಂದ ನಾವು ಆತನಿಗಿಂತ ಭಿನ್ನರಲ್ಲ. ಹೀಗೆ ನೋಡಿದರೆ ಅವನೇ ನಾನು, ನಾನೇ ಅವನು ಎಂದು ಏಕಾತ್ಮತೆಯು ಅವನೊಡನೆ ನಮಗೆ ಇರುತ್ತದೆ. ಹೀಗೆ ತೋರಿ ಬಂದ ಏಕಾತ್ಮತೆಯನ್ನು ನಿರಂತರವಾಗಿ ಭಾವನೆಯನ್ನು (ಎಂದರೆ ನಾನು ವಿರಾಟ್ಪುರುಷನಾದ ಸರ್ವಾತ್ಮನೇ) ಎಂಬುದಾಗಿ ಮಾಡುತ್ತಿದ್ದರೆ ಈ ಭಾವನೆಯು ಕ್ರಮಕ್ರಮವಾಗಿ ಬಲಿತುಕೊಂಡು

ಈಗಿರುವ ಶರೀರಾತ್ಮಭಾವನೆಯಂತೆ ಆತನಲ್ಲಿ ನಾನೆಂಬ ಭಾವನೆಯು ಊರಿಕೊಳ್ಳುತ್ತದೆ. ಹೀಗೆ ಊರಿಕೊಂಡ ಭಾವನೆಗೇ ಸಾಕ್ಷಾತ್ಕಾರವೆಂದು ಕರೆಯುತ್ತಾರೆ. ಹೀಗೆ ಸಾಕ್ಷಾತ್ಕಾರವಾದರೆ ಆತನಿಗೆ ಬ್ರಹ್ಮಲೋಕ (ಸತ್ಯಲೋಕ) ಪ್ರಾಪ್ತಿಯಾಗುತ್ತದೆ ಎಂದು ಶಾಸ್ತ್ರದಲ್ಲಿ ಹೇಳಿದೆ.

ಈ ಪುರುಷನನ್ನು ವೈಶ್ವಾನರನೆಂತಲೂ ಈತನೇ ಅಖಂಡ ಜಾಗ್ರತ್ಪ್ರಪಂಚಕ್ಕೆ ಆತ್ಮನೆಂತಲೂ ವರ್ಣಿಸಿದೆ. ಮಾಂಡೂಕ್ಯದಲ್ಲಿ ಹೀಗೆ ವರ್ಣಿಸುವಾಗ ಈತನಿಗೆ ದ್ಯುಲೋಕ, ಸೂರ್ಯ, ವಾಯು, ಆಕಾಶ, ಸಮಸ್ತ ನೀರು, ಭೂಮಿ, ಅಗ್ನಿ ಎಂಬ ಏಳು ಅವಯವವೆಂತಲೂ ಹೇಳಿ, ಇವನಿಗೆ ಹತ್ತೊಂಭತ್ತು ಮುಖಗಳು ಅಂದರೆ ಪಂಚ ಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯ, ಪಂಚಪ್ರಾಣಾಪಾನಾದಿಗಳು ಮತ್ತು ಅಹಂಕಾರ ಬುದ್ಧಿ ಮನಸ್ಸು ಚಿತ್ತ ಹೀಗೆ ಇವು ತನ್ನನ್ನೇ ಅರಿಯುವುದಕ್ಕೆ ಸಾಧನೆಗಳೆಂದು ವರ್ಣಿಸಿದೆ. ಇದನ್ನು ಅಲ್ಲಿ ಜ್ಞಾನಕ್ಕೆ ಸಾಧನವಾಗಿ ಹೇಳಿದೆಯೇ ಹೊರತು ಇಲ್ಲಿನ ಹಾಗೆ ಉಪಾಸನೆಗಾಗಿ ಹೇಳಿಲ್ಲ. ಛಾಂದೋಗ್ಯದಲ್ಲಿ ಈ ವೈಶ್ವಾನರನ ಉಪಾಸನೆಯನ್ನು ಹೇಳಿದೆ. ಅಲ್ಲೂ ಮೇಲೆ ಹೇಳಿದಂತೆಯೇ ಉಪಾಸನೆಗಾಗಿಯೇ ಹೇಳಿದ್ದು, ಜ್ಞಾನಕ್ಕಾಗಿ ಅಲ್ಲ. ನಾವು ಇದನ್ನು ಆಲೋಚಿಸಿದರೆ ಇದರಿಂದ ಏನು ತೀರ್ಮಾನವಾಗಿರುತ್ತದೆ ಎಂದರೆ ಒಬ್ಬನೇ ಆತ್ಮನು ಮಂದಮಧ್ಯಮಾಧಿಕಾರಿಗಳಿಗಾಗಿ ಉಪಾಸ್ಯರೂಪನೆಂತಲೂ ಉತ್ತಮಾಧಿಕಾರಿಗಳಿಗೆ ಜ್ಞೇಯನೆಂತಲೂ ಹೇಳಿರುತ್ತದೆ ಎಂದು ಗೊತ್ತಾಗುತ್ತದೆ. ಆಗ ಸಿದ್ಧಾಂತವೇನಾಗುತ್ತದೆ ಎಂದರೆ ಒಬ್ಬನೇ ಆತ್ಮನು ಸ್ವತಃ ನಿರ್ವಿಶೇಷನಾಗಿದ್ದರೂ ಆತನೇ ಈ ಪ್ರಪಂಚಾಕಾರ ವಾಗಿ ತೋರುತ್ತಿದ್ದಾನೆ, ಅಂದರೆ ಆ ರೀತಿ ಆತನನ್ನು ಜನರು ಕಲ್ಪಿಸಿರುತ್ತಾರೆ ಎಂದಾಗುತ್ತದೆ. ಆಗ ಉಪನಿಷತ್ತುಗಳು ಉಪಾಸನೆಗಾಗಿ ಹೇಳುತ್ತಿರುವ ಉಪಾಸ್ಯ ಬ್ರಹ್ಮವು ಜ್ಞೇಯಬ್ರಹ್ಮಕ್ಕೆ ಎಷ್ಟು ನಿಕಟವಾಗಿದೆ ಎಂತಲೂ ತೀರ್ಮಾನವಾಗುತ್ತದೆ.

ಇನ್ನೂ ಒಂದು ಏನೆಂದರೆ- ಶ್ರುತ್ಯುಕ್ತವಾದ ಉಪಾಸನೆಗಳಿಗೂ ಕರ್ಮಗಳಿಗೂ ನೇರಾಗಿ ಎಲ್ಲರಿಗೂ ಅಧಿಕಾರವಿಲ್ಲವೆಂಬುದು ಒಂದು ರೀತಿಯಿಂದ ಸರಿ ಎಂದು ತೋರಿಬಂದರೂ ಇನ್ನೊಂದು ರೀತಿಯಿಂದ ಅಂದರೆ ಶ್ರುತ್ಯುಕ್ತವಾದ ನೇರವಾದ ಆ ಶಬ್ದದಿಂದಲೇ ಇಲ್ಲವಾದರೂ ವಸ್ತುವಿನ ಕಡೆಯಿಂದ ಆ ತತ್ತ್ವಕ್ಕೆ (ಆ ಬ್ರಹ್ಮಕ್ಕೆ) ಎಲ್ಲರೂ ಸಂಬಂಧಪಟ್ಟವರೇ ಆಗಿರುತ್ತಾರೆ ಎಂದಾಗುತ್ತದೆ. ಏಕೆಂದರೆ

ಶ್ರುತ್ಯುಕ್ತವಿಚಾರವನ್ನೇ ಸ್ಮೃತಿಗಳೂ ಪುರಾಣಗಳೂ ಹೇಳುತ್ತಿರುವುದರಿಂದಲೂ, ಪುರಾಣೋಕ್ತಕರ್ಮಗಳಿಗೆ ಎಲ್ಲರೂ ಅಧಿಕಾರಿಗಳಾದ್ದರಿಂದಲೂ ಎಲ್ಲರೂ ಇದನ್ನು ಮಾಡಬಹುದಾಗಿದೆ. ಇನ್ನೂ ಒಂದು ಏನೆಂದರೆ ಶ್ರುತ್ಯುಕ್ತಪ್ರಕಾರಕ್ಕಿಂತ ಪುರಾಣೋಕ್ತ ಪ್ರಕಾರವು ಸುಲಭತಮವಾದ್ದರಿಂದ ಒಂದು ರೀತಿಯಿಂದ ಇಂದಿನ ಸಮಾಜವನ್ನು ಪರಿಶೀಲಿಸಿದರೆ ಎಲ್ಲರೂ ಪುರಾಣೋಕ್ತಪ್ರಕಾರದಲ್ಲಿ ಉಪಾಸನೆಯನ್ನು ಮಾಡುವುದಕ್ಕೇ ಅರ್ಹರಾಗಿರುತ್ತಾರೆ ಎನ್ನಬಹುದು. ಇದರಲ್ಲಿ ಲೋಪದೋಷಗಳೂ ಪ್ರತ್ಯವಾಯಗಳೂ ಅತ್ಯಲ್ಪವಾದ್ದರಿಂದ ಎಲ್ಲರೂ ಇದನ್ನು ಸುಲಭವಾಗಿ ನಡೆಸಬಹುದಾಗಿದೆ. ಆದರೆ ಫಲದಲ್ಲಿ ಮಾತ್ರ ಶ್ರುತ್ಯುಕ್ತವಾದ ಉಪಾಸನೆಗಿಂತ ಇದಕ್ಕೆ ಎಳ್ಳಷ್ಟೂ ಕಡಿಮೆಯದಾಗಿರುವುದಿಲ್ಲ. ಹೀಗೆ ಸಮಾನವಾದ ಫಲವೂ ಆಯಾಸವೂ ಇರುವಾಗ ಸುಲಭವಾದ ಪ್ರತ್ಯವಾಯಾದಿಗಳಿಲ್ಲದ ಮಾರ್ಗವನ್ನೇ ಎಲ್ಲರೂ ಏತಕ್ಕೆ ಹಿಡಿಯಬಾರದು?

ಇದೂ ಅಲ್ಲದೇ ಪುರಾಣದಲ್ಲಿ ವರ್ಣಿಸಿರುವ ಈ ವಿರಾಡಾತ್ಮನನ್ನು ಪ್ರಯಾಣದಲ್ಲಿರುವಾಗಲೂ ಬೇರೊಂದು ಕೆಲಸ ಕಾರ್ಯಗಳಲ್ಲಿರುವಾಗಲೂ ಹಗಲುರಾತ್ರಿ ಎಂಬ ಕಾಲನಿಯಮವಿಲ್ಲದೇ ಎಲ್ಲಾ ಸಂದರ್ಭದಲ್ಲೂ ಸ್ಮರಿಸಿಕೊಳ್ಳ ಬಹುದೆಂದಾಗಿರುವುದರಿಂದ ಇದು ಇನ್ನೂ ಸಾಕ್ಷಾತ್ಕಾರಕ್ಕೆ ಸುಲಭತಮಮಾರ್ಗ ವೆಂದಾಗುತ್ತದೆ.

ಆದರೆ ಉಪಾಸನೆ ಎಂಬುದು ನಿರಂತರವಾಗಿರಬೇಕಾಗಿರುವುದರಿಂದಲೂ ಆ ಭಾವನೆಗೆ ವಿರುದ್ಧವಾದ ಯಾವ ವಿಚಾರವೂ ಮನಸ್ಸಿನೊಳಗೆ ನುಸುಳಿಕೊಳ್ಳದೇ ಇರುವಂತೆ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿರಬೇಕೆಂಬುದಂತೂ ಕಡುಖಂಡಿತ. ಹಾಗೇನಾದರೂ ವಿಷಯಾಂತರಗಳಿಂದ ಅದು ವಿಕ್ಷಿಪ್ತವಾಗುತ್ತಿದ್ದರೆ ಸಾಕ್ಷಾತ್ಕಾರವಾಗುವುದು ದುರ್ಲಭ. ಸಾಕ್ಷಾತ್ಕಾರವಾಗದಿದ್ದರೆ ಆ ಫಲಪ್ರಾಪ್ತಿಯೂ ಆಗುವುದಿಲ್ಲ. ಆದರೂ ವ್ಯರ್ಥವೇನಲ್ಲ. ಎಷ್ಟು ಮಾಡಿದರೆ ಅಷ್ಟು ಫಲವು ಉಂಟೇ ಉಂಟು. ಆದ್ದರಿಂದಲೇ ಶಾಸ್ತ್ರದಲ್ಲಿ ಸಾಯುಜ್ಯ, ಸಾರೂಪ್ಯ, ಸಾಲೋಕ್ಯ ಮುಂತಾಗಿ ಉಪಾಸನೆಗನುಗುಣವಾಗಿ ಫಲಭೇದವನ್ನು ತಿಳಿಸಿರುತ್ತದೆ. ಆದರೆ ಪೂರ್ಣ ಫಲ ಪ್ರಾಪ್ತಿಗೆ ಸಾಕ್ಷಾತ್ಕಾರವೇ ಆಗಬೇಕು.

ಈ ವಿರಾಟ್ ಪುರುಷನನ್ನೇ ವಿಷ್ಣುವೆಂತಲೂ ಪುರಾಣದಲ್ಲಿ ವರ್ಣನೆಮಾಡಿದೆ.

ಭಗವದ್ಗೀತೆಯ ಹತ್ತು ಮತ್ತು ಹನ್ನೊಂದನೆಯ ಅಧ್ಯಾಯಗಳ ಅರ್ಥವನ್ನು ನಿರಂತರ ಸ್ಮರಣೆಮಾಡುವುದೂ ಈ ಉಪಾಸನಾರೂಪವೇ ಆಗಿರುತ್ತದೆ. ಇದರಿಂದ ನಮ್ಮ ಮನಸ್ಸಿಗೆ ಪರಮಾತ್ಮನ ಧ್ಯೇಯ ರೂಪವನ್ನೇ ಕೊಟ್ಟಂತೆ ಆಗುತ್ತದೆ. ಇದನ್ನು ಸರ್ವದಾ ಅನುಸಂಧಾನದಲ್ಲಿ ಮಾಡುತ್ತಿದ್ದರೆ ನಮಗೂ ಅರಿವು ಆಗದ ಹಾಗೆ (ಗೊತ್ತಿಲ್ಲದೇ) ಮೆಲ್ಲ ಮೆಲ್ಲಗೆ ಶರೀರಾದಿಪರಿಚ್ಛಿನ್ನ ಭಾವನೆಯೂ ಪ್ರಾಪಂಚಿಕ ವಿಷಯದಲ್ಲಿ ರಾಗದ್ವೇಷಭಾವನೆಯೂ ಮಂಜು ಸೂರ್ಯನಕಿರಣಕ್ಕೆ ಕರಗಿ ಹೋಗುವಂತೆ ಹೋಗುತ್ತದೆ. ಆನಂತರ ಭಗವಂತನ ಸಗುಣದರ್ಶನಕ್ಕೂ ಆದರಿಂದ ಪರಮಾರ್ಥತತ್ತ್ವದ ಅನುಭವವಾಗುವುದಕ್ಕೂ ನಿರಾಬಾಧವಾಗಿ ಅವಕಾಶ ವಾಗುತ್ತದೆ. ಇಂಥಹ ಒಂದು ಸುಯೋಗವನ್ನು ನಾವು ಉಪಾಸನೆಯನ್ನು ಮಾಡಿ ಪಡೆಯೋಣ. ಇದನ್ನು ಇನ್ನಷ್ಟು ತಿಳಿಯಬೇಕೆನ್ನುವವರು ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರು ಬರೆದಿರುವ **ಮಾಂಡೂಕ್ಯೋಪನ್ಯಾಸ ಮಂಜರಿಯನ್ನಾಗಲೀ ಗೀತೋಪನ್ಯಾಸವನ್ನಾಗಲೀ** ಓದಿ ತಿಳಿದು ಕೊಳ್ಳಬಹುದು.

* * * * *

# 43. ದಾನದ ಮಾಹಾತ್ಮ್ಯೆ

ಸ್ವಲಂಕೃತೇಭ್ಯೋ ಗುಣಶೀಲವದ್ಭ್ಯಃ
ಸೀದತ್ಕುಟುಂಬೇಭ್ಯ ಋತವ್ರತೇಭ್ಯಃ ।
ತಪಃಶ್ರುತಬ್ರಹ್ಮವದಾನ್ಯಸದ್ಭ್ಯಃ
ಪ್ರಾದಾಂ ಯುವಭ್ಯೋ ದ್ವಿಜಪುಂಗವೇಭ್ಯಃ ॥

– ಶ್ರೀಮದ್ಭಾಗವತ 10-64-14

(ಇಕ್ಷ್ವಾಕುಮಹಾರಾಜನಾದ ನೃಗರಾಜನು ಹೇಳುವು ದೇನೆಂದರೆ-) ಸ್ವಚ್ಛವಾಗಿ ಅಲಂಕಾರಗೊಂಡವರಾದ, ಸಾತ್ವಿಕಗುಣಶೀಲವಂತರಾದ, ಕುಟುಂಬ ಪೋಷಣೆ ಮಾಡುವುದರಲ್ಲಿ ಕಷ್ಟಪಡುತ್ತಿರುವವರಾದ, ಸತ್ಯವಾದ ವ್ರತವನ್ನು ಹೊಂದಿರುವವರಾದ, ತಪಸ್ಸು, ವಿದ್ಯೆ, ಬ್ರಹ್ಮವಿಚಾರವನ್ನು ಮಾಡುವವರೂ ಆದ ಸತ್ಪುರುಷರಾದ ಬ್ರಾಹ್ಮಣ ಶ್ರೇಷ್ಠರಿಗೆ ದಾನವನ್ನು ಮಾಡಿರುತ್ತೇನೆ.

[ಭಗವಂತನು ಗೀತೆಯ 17ನೇ ಅಧ್ಯಾಯದಲ್ಲಿ - ದೇಶೇ ಕಾಲೇ ಚ ಪಾತ್ರೇ ಚ ತದ್ದಾನಂ ಸಾತ್ವಿಕಂ ಸ್ಮೃತಮ್ ಎಂದು ಹೇಳಿರುವುದನ್ನು ನಾವಿಲ್ಲಿ ಸ್ಮರಿಸಿಕೊಳ್ಳಬೇಕು]

## ನೃಗೋಪಾಖ್ಯಾನ

ಒಮ್ಮೆ ಸಾಂಬ, ಪ್ರದ್ಯುಮ್ನ, ಗದನೇ ಮುಂತಾದ ಯಾದವ ಬಾಲಕರು ಆಟವಾಡಬೇಕೆಂದು ಊರ ಮುಂದಿರುವ ಒಂದು ಉದ್ಯಾನಕ್ಕೆ ಹೋಗುತ್ತಾರೆ. ಅಲ್ಲಿ ಅವರೆಲ್ಲಾ ಬಹಳ ಹೊತ್ತು ಆಟವನ್ನಾಡಿದ್ದರಿಂದ ಬಳಲಿದವರಾಗಿ ಬಾಯಾರಿಕೆಗಾಗಿ ನೀರನ್ನು ಕುಡಿಯುವುದಕ್ಕಾಗಿ ಒಂದು ಬಾವಿಯ ಹತ್ತಿರ ಬರುತ್ತಾರೆ. ಆದರೆ ಆ ಬಾವಿಯೊಳಗೆ ಇಣುಕಿ ಎಲ್ಲರೂ ನೋಡಲಾಗಿ ಅಲ್ಲೊಂದು ಅದ್ಭುತಕಾರದ ಓತಿಕೇತನನ್ನು ಕಾಣುತ್ತಾರೆ. ಅದನ್ನೆತ್ತಲು ಅವರೆಲ್ಲಾ ಎಷ್ಟು ಪ್ರಯತ್ನಪಟ್ಟರೂ ಆಗದೇ ಇದ್ದಾಗ ಶ್ರೀ ಕೃಷ್ಣಪರಮಾತ್ಮನಿಗೆ ಈ ವಿಷಯವನ್ನು ತಿಳಿಸುತ್ತಾರೆ. ಸರ್ವಶಕ್ತನಾದ ಆ ಪರಮಾತ್ಮನು ಲೀಲಾಜಾಲವಾಗಿ ಅದನ್ನು ಹೊರಕ್ಕೆ ತೆಗೆಯುವಷ್ಟರ ಒಳಗೆ ಅದು ಆ ತನ್ನ ಹೀನಜನ್ಮವಾದ ಓತಿಕೇತರೂಪವನ್ನು ಬಿಟ್ಟು ಶ್ರೀಕೃಷ್ಣನ ಕರಸ್ಪರ್ಶದ ಪ್ರಭಾವದಿಂದ ಒಂದು ದಿವ್ಯವಾದ ದೇವರೂಪವನ್ನು ಹೊಂದುತ್ತದೆ. ಸರ್ವಜ್ಞನಾದ ಪರಮಾತ್ಮನಿಗೆ ಎಲ್ಲವೇ ತಿಳಿದೇ ಇರುತ್ತದೆಯಾದರೂ ಜನರಿಗೆ ತಿಳಿಸುವುದಕ್ಕಾಗಿ ಆತನ ಪೂರ್ವವೃತ್ತಾಂತದ ವಿಚಾರವಾಗಿ ಶ್ರೀಕೃಷ್ಣನು ಆತನನ್ನು ಕೇಳುತ್ತಾನೆ. ಆತನು ಶ್ರೀಕೃಷ್ಣನ ಆಜ್ಞಾನುಸಾರವಾಗಿ ತನ್ನ ಪೂರ್ವಕಥೆಯನ್ನು ಹೇಳುತ್ತಾನೆ. ಅವನು ಹೇಳಿದ್ದು ಏನೆಂದರೆ- ಆತನು ಹಿಂದೆ ಒಬ್ಬ ರಾಜನಾಗಿದ್ದಾಗ ಬಹಳವಾಗಿ ಗೋದಾನವನ್ನು ಮಾಡುತ್ತಿದ್ದನು. ಆತನ ಹೆಸರು ''ನೃಗರಾಜ''ನೆಂದು. ಆತ ಪ್ರತಿಯೊಂದು ಗೋವಿಗೂ ಬಂಗಾರದ ಗೆಜ್ಜೆಯನ್ನು ಕೋಡಿಗೆ ಶೃಂಗರಿಸಿ, ಉತ್ತಮವಾದ ವಸ್ತ್ರಗಳಿಂದ ಅಲಂಕರಿಸಿ ಕರುಸಮೇತವಾಗಿ ದಾನಮಾಡುತ್ತಿದ್ದನು. ಹೀಗೆ ಮಾಡುತ್ತಿರುವಾಗ ಒಮ್ಮೆ ಒಬ್ಬ ಬ್ರಾಹ್ಮಣನಿಗೆ ಕೊಟ್ಟ ಒಂದು ಹಸುವು ಹೇಗೋ ಆ ಬ್ರಾಹ್ಮಣನಿಂದ ತಪ್ಪಿಸಿಕೊಂಡು ಮತ್ತೆ ಈ ರಾಜನ ಹತ್ತಿರ ಇರುವ ಹಸುಗಳೊಂದಿಗೆ ಸೇರಿಕೊಂಡಿತ್ತು. ಅದು ಈ ರಾಜನಿಗೆ ತಿಳಿದಿರಲಿಲ್ಲ. ಮತ್ತೆ ಆ ಹಸುವನ್ನೇ ಇನ್ನೊಬ್ಬ ಬ್ರಾಹ್ಮಣನಿಗೆ ದಾನಮಾಡಿದನು. ಅಷ್ಟು ಹೊತ್ತಿಗೆ ಮೊದಲನೆಯ ಬ್ರಾಹ್ಮಣನು ಬಂದು ಇದು ನನಗೆ ನೀನು ಕೊಟ್ಟ ಹಸು, ಇದು ನನ್ನದು, ಅವನಿಗೆ ಹೇಗೆ ಕೊಟ್ಟೆ? ಎಂದು ಕೇಳಲು ರಾಜನು ನನಗೆ ತಿಳಿಯದು, ಇದಕ್ಕೆ ಪ್ರತಿಯಾಗಿ ಬೇರೆ ಇನ್ನೊಂದು

ಲಕ್ಷ ಹಸುವನ್ನು ಕೊಡುವೆನು ಎನ್ನಲಾಗಿ ಅದಕ್ಕೆ ಆ ಬ್ರಾಹ್ಮಣನು ಒಪ್ಪಲಿಲಲ್ಲ. ಎರಡನೇ ಬ್ರಾಹ್ಮಣನೂ ಸಹ ಈ "ಮೊದಲನೆಯ ಬ್ರಾಹ್ಮಣನಿಗೆ ಕೊಡು, ಇದಕ್ಕೆ ಬದಲಾಗಿ ನಿನಗೆ ಲಕ್ಷ ಹಸುವನ್ನು ಕೊಡುತ್ತೇನೆಂದು" ರಾಜನು ಹೇಳಿದರೂ ಒಪ್ಪಲಿಲ್ಲ. ಕೊನೆಗೆ ಧರ್ಮಸಂಕಟದಿಂದ ಪಾರಾಗದೇ ರಾಜನು ಮೃತ್ಯುವಶ ವಾದನು. ಆಮೇಲೆ ಯಮದೂತರು ರಾಜನ ಹತ್ತಿರ ದಾನದ ಪುಣ್ಯಫಲವನ್ನು ಮೊದಲು ಅನುಭವಿಸುವೆಯೋ ದತ್ತಾಪಹಾರದ ಪಾಪಫಲವನ್ನು ಅನುಭವಿಸುವೆಯೋ? ಎಂದು ಕೇಳಲಾಗಿ ಪಾಪದ ಫಲವನ್ನೇ ಮೊದಲು ಅನುಭವಿಸುವೆನು ಎಂದು ಹೇಳಿದ್ದಕ್ಕೆ ಸರಿ ಹಾಗೆ ಆಗಲಿ ಎಂದು ನನಗೆ ಓತಿಕೇತದ ಜನ್ಮವನ್ನಿತ್ತು ಭಗವಂತನ ದರ್ಶನ ಸ್ಪರ್ಶದ ನಂತರ ಈ ಜನ್ಮನಿವೃತ್ತಿಯಾಗುವುದೆಂದು ಹೇಳಿದನು. ಅದರಂತೆ ಇಂದು ನಿನ್ನ ಅನುಗ್ರಹದಿಂದ ಈ ಹೀನಜನ್ಮದ ನಿವೃತ್ತಿಯಾಯಿತು, ನಾನಿನ್ನು ಹೋಗಿ ಬರುವೆನು ಅನುಮತಿಯನ್ನು ಕೊಡು ಎಂದು ಭಗವಂತನಾದ ಶ್ರೀಕೃಷ್ಣನನ್ನು ಪ್ರಾರ್ಥಿಸಿಕೊಳ್ಳಲಾಗಿ ದಿವ್ಯವಾದ ತೇಜೋಮಯ ವಾದ ಶರೀರವನ್ನು ಧರಿಸಿ ಸ್ವಲಂಕೃತನಾಗಿ ಸ್ವರ್ಗಕ್ಕೆ ಹೋದನು.

ಈ ಉಪಾಖ್ಯಾನದಲ್ಲಿ ತಿಳಿಯಬೇಕಾದದ್ದೇನೆಂದರೆ ದಾನವೆಂಬುದು ಪರಮ ಶ್ರೇಷ್ಠವಾದ ತಪಸ್ಸಾದರೂ ಪ್ರತ್ಯವಾಯವುಂಟಾಗದಂತೆ ಆಚರಿಸಬೇಕು. ಯಾವುದೇ ಕರ್ಮ, ತಪಸ್ಸು ದಾನಾದಿಕೆಲಸವನ್ನು ಮಾಡಿದರೂ ಪಾಪಾಚರಣೆಯನ್ನು ಇಟ್ಟುಕೊಂಡಿದ್ದರೆ, ಆ ಪುಣ್ಯಫಲಪ್ರಾಪ್ತಿಗೆ ಅಡ್ಡಿಯಾಗುವುದು ಅದರಲ್ಲೂ ದಾನ ಕರ್ಮದಲ್ಲಿ ಬಹಳ ಅಡ್ಡಿಯಿರುತ್ತದೆ. ಲೋಭಭೂಯಿಷ್ಠರಾದ ಇಂದಿನ ಜನಾಂಗದವರಿಗೆ ದಾನವೆಂದರೆ ಪ್ರಾಣವನ್ನೇ ಕಿತ್ತುಕೊಟ್ಟಷ್ಟು ಸಂಕಟ ವಾಗುತ್ತಿರುತ್ತದೆ. ಅದೂ ಅಲ್ಲದೆ ಕೆಲವರು ದಾನವನ್ನು ತಮ್ಮ ಹತ್ತಿರದ ಆಳಿಯು, ಗೆಳೆಯರಾಗಲಿ ತಾವು ಒಪ್ಪಿಕೊಂಡ ಸಂಘಸಂಸ್ಥೆಗಳಿಗಾಗಲೀ ಕೊಡುವವರೇ ಜಾಸ್ತಿಯೇ ಹೊರತು ಶಾಸ್ತ್ರದ ಚೌಕಟ್ಟಿನಲ್ಲಿ ನಡೆದುಕೊಳ್ಳುವವರು ಬಹು ವಿರಳ. ಆ ಸಂಘ ಸಂಸ್ಥೆಗಳಿಗಾಗಲೀ ಬೇರೊಂದು ಸ್ಥಳಕ್ಕಾಗಲೀ ಕೊಡುವಾಗಲೂ ಕೀರ್ತಿ, ಸ್ಥಾನಮಾನ ಪ್ರತಿಷ್ಠಾದಿಗಳನ್ನು ಮನಸ್ಸಿನಲ್ಲಿಟ್ಟುಕೊಂಡೇ ಕೊಡುತ್ತಾರೆಯೇ ಹೊರತು "ದಾತವ್ಯಮಿತಿ ಯದ್ದಾನಂ ದೀಯತೇ ಅನುಪಕಾರಿಣೇ" (ಭ.ಗೀ. 17) ಎಂದು ಪರಮೇಶ್ವರನಿಗೆ ಸಂತೋಷವಾಗಲೀ, ಎಂದಾಗಲೀ, ಸ್ವಧರ್ಮಾ ಚಾರಣೆ ಮಾಡಿದಂತಾಗುತ್ತದೆಯೆಂದಾಗಲೀ, ಪ್ರತ್ಯುಪಕಾರಾದಿಗಳನ್ನು ನಿರೀಕ್ಷಿಸದೇ

ಕೊಡಬೇಕೆಂದಾಗಲೀ ತಿಳಿದು ಕೊಡುವುದಿಲ್ಲ. ಹಾಗಾಗಿ ಎಲ್ಲಾ ದಾನವೂ ರಾಜಸವೋ ತಾಮಸವೋ ಆಗುತ್ತಿದೆ. ಅಧ್ಯಾತ್ಮಜ್ಞಾನಕ್ಕೆ ಉಪಕಾರಕವಾಗಲಿ ಎಂದೂ ಯೋಚಿಸುವವರು ತೀರ ವಿರಳರೆಂದರೂ ಅತಿಶಯೋಕ್ತಿ ಇಲ್ಲ.

ಪ್ರಜಾಪತಿಬ್ರಹ್ಮನು ದೇವಾಸುರಮನುಷ್ಯರಿಗೆ ದ,ದ,ದ, ಎಂದು ಉಪದೇಶಿಸುವಾಗ ಮನುಷ್ಯರಿಗೆ ದಾನವನ್ನೇ ಪ್ರಧಾನ ಸಾಧನವಾಗಿ ಉಪದೇಶಿಸಿರುತ್ತಾನೆ. ಆ ಉಪದೇಶದಲ್ಲಿ ಮನುಷ್ಯರಾದವರೂ ದಯೆ, ದಮವನ್ನು ಕಲಿಯಬೇಕೆಂಬುದು ನಿಜವಾದರೂ ವಿಶೇಷವಾಗಿ ದಾನವನ್ನು ಸಾಧನವಾಗಿ ಉಪದೇಶಿಸಿರುವುದನ್ನು ಗಮನಿಸಬೇಕು. ದಾನದಿಂದಾಗುವ ಅಧ್ಯಾತ್ಮಸಾಧನೆ ಏನೆಂದರೆ (1) ಪ್ರಾಪಂಚಿಕ ಭೋಗವಸ್ತುಗಳ ಮೇಲಿನ ಮತ್ತು ತನ್ನ ಸಂಪತ್ತಿನ ಮೇಲಿನ ಮಿತಿಯಿಂದ ಮಮತೆಯು ಕಡಮೆಯಾಗುತ್ತಾ ಬರುವುದು. (2) ಪ್ರಕೃತಿ ನಿಯಮದಂತೆ ಎಲ್ಲವೂ ಬಿಟ್ಟುಹೋಗುತ್ತಿರುವುದನ್ನು ಕಂಡು ನಾವಾಗಿಯೇ ಬುದ್ಧಿಪೂರ್ವಕವಾಗಿ ಬಿಡುವುದರಿಂದ ವಿವೇಚನಾ ಶಕ್ತಿಯು ಬೆಳೆಯುವುದು (3) ಸರ್ವತ್ರ ಭಗವತ್ಸ್ವರೂಪವನ್ನು ಕಂಡು ಸರ್ವರಲ್ಲೂ ಪ್ರೇಮವು ಉಕ್ಕುವುದಕ್ಕೆ ಆರಂಭವಾಗುವುದು. (4) ಸಂನ್ಯಾಸಜೀವನಕ್ಕೆ ಅಣಿಯಾಗುವುದು, (5) ಸರ್ವರಲ್ಲಿ ಮೈತ್ರತೆಯನ್ನು ಹೊಂದುವುದು (6) ಸತ್ಕಾರ್ಯಗಳಿಗೆ ನೆರವಾಗುವುದು (7) ಭೋಗಾಸಕ್ತಿಯು ಕಡಿಮೆಯಾಗುವುದು, (8) ಸಂಪತ್ತಿನ ನಿಮಿತ್ತದಿಂದಾಗುವ ಚಿತ್ತಚಾಂಚಲ್ಯತೆಯನ್ನು ತೊಲಗಿಸಿಕೊಂಡು ಶಾಂತಿಯಿಂದಲೂ ನೆಮ್ಮದಿಯಿಂದಲೂ ಬಾಳುವುದೇ ಮುಂತಾದ ಉತ್ತಮೋತ್ತಮವಾದ ಅಧ್ಯಾತ್ಮಜೀವನವನ್ನು ನಡೆಸುವುದೆಂಬ ಪ್ರಯೋಜನವಾಗುತ್ತದೆ. ಕೊನೆಗೆ ಅಧ್ಯಾತ್ಮಜ್ಞಾನದಿಂದ ಪರಮಶಾಂತಿಯನ್ನು ಹೊಂದಿ ಕೃತಾರ್ಥನಾಗುವವರೆಗೂ ಪರಂಪರೆಯಿಂದ ದಾನವು ಸಾಧನೆಯಾಗಿರುತ್ತದೆ ಎಂದು ಶಾಸ್ತ್ರದಲ್ಲಿ ಹೇಳಿರುತ್ತದೆ. "ನಾರ್ಥಸ್ಯ ಧರ್ಮೈಕಾಂತಸ್ಯ ಕಾಮೋ ಲಾಭಾಯ ಹಿ ಸ್ಮೃತಃ" (ಭಾಗ 1-10) ಹಣವು ಧರ್ಮಕ್ಕಾಗಿಯೇ ಹೊರತು ಲೌಕಿಕ ಬಯಕೆಯ ಪ್ರಾಪ್ತಿಗಾಗಿ ಅಲ್ಲ, ಎಂಬುದರ ಅಭಿಪ್ರಾಯವೂ ಇದೇ ಆಗಿದೆ. "ತೇನ ತ್ಯಕ್ತೇನ ಭುಂಜೀಥಾಃ" (ಈಶ) ಎಂದು ಶ್ರುತಿಯೂ ಹೇಳುತ್ತಿದೆ.

ಮನುಷ್ಯನಿಗೆ ಲೋಭವು ಹುಟ್ಟು ಗುಣವಾಗಿದೆ. ಆ ಲೋಭತನದಿಂದಲೇ ಆತನಿಗೆ ಕೀಳುಸ್ಥಿತಿಯುಂಟಾಗಿರುತ್ತದೆ. ಅನೇಕರಿಗೆ ದಾನವೆಂದರೆ, ಅದಕ್ಕಾಗಿಯೇ

ಕೆಲವು ಕಳಪೆಯಾದ ವಸ್ತ್ರ ಪಂಚಪಾತ್ರೆಗಳನ್ನಿಟ್ಟಿರುವ ವಾಡಿಕೆ ಬಂದಿದೆ. ಹೀಗೆಯೇ ಪ್ರತಿಗ್ರಹವೂ ಸಹ ಸುಲಿಗೆಯ ಉಪಾಯವಾಗಿ ಮಾರ್ಪಟ್ಟಿದೆ. ಇಂತಹ ದಾನವಾಗಲೀ ಪ್ರತಿಗ್ರಹವಾಗಲೀ ಯಾವ ಆಧ್ಯಾತ್ಮಕ್ಕೂ ಪುರುಷಾರ್ಥಕ್ಕೂ ಸಾಧನವಲ್ಲ. ಅದು ಅಂತಃಕರಣದ ಕಲ್ಮಶವನ್ನುಂಟು ಮಾಡುತ್ತದೆ. ಆದರೆ ಯಾರ ದಾನವು ಕೇವಲ ದಾನಕ್ಕಾಗಿಯೇ ಇದ್ದು ಪರಮೇಶ್ವರನ ಪ್ರೀತಿಗಾಗಿಯೇ ಇರುತ್ತದೋ ಅಂತಹ ದಾನವು ಉತ್ತಮವೂ ಸಾತ್ವಿಕವೂ ಆಗಿರುತ್ತದೆ. ಕಲಿಯುಗದಲ್ಲಿ ದಾನವು ಬಹುಮುಖ್ಯ ಮತ್ತು ಶ್ರೇಷ್ಠಸಾಧನವೆಂದು ಪದೇ ಪದೇ ಮಹಾಭಾರತದಲ್ಲಿ ಹೇಳಿರುತ್ತದೆ. ಸರಿಯಾದ ದೇಶಕಾಲ ಪಾತ್ರರಲ್ಲಿ ಅಹಂಕಾರ ಮಮಕಾರ ಬಿಟ್ಟು ಉದಾರಭಾವದಿಂದ ಕೊಡುವುದೇ ನಿಜವಾದ ದಾನವು. ಇದರಿಂದ ಖಂಡಿತಾ ಭಗವಂತನು ಸುಪ್ರೀತನಾಗುವನು.

* * * * *

## 44. ಶ್ರೀ ಕೃಷ್ಣನ ಚರಣ ಮಹಿಮೆ

ದೃಷ್ಟಂ ತವಾಂಘ್ರಿಯುಗಳಂ ಜನತಾಪವರ್ಗಂ
ಬ್ರಹ್ಮಾದಿಭಿರ್ಹೃದಿ ವಿಚಿನ್ತ್ಯಮಗಾಧಬೋಧೈಃ ।
ಸಂಸಾರಕೂಪಪತಿತೋತ್ತರಣಾವಲಂಬಂ
ಧ್ಯಾಯಂಶ್ಚರಾಮ್ಯನುಗೃಹಾಣ ಯಥಾ ಸ್ಮೃತಿಸ್ಸ್ಯಾತ್ ॥
- ಶ್ರೀಮದ್ಭಾಗವತ 10-69-18

ಭಾವಾರ್ಥ:- ಪರಮಾತ್ಮ! ಯಾವ ನಿನ್ನ ಚರಣಕಮಲವನ್ನು ಮಿಗಿಲಿಲ್ಲದ ಜ್ಞಾನಸಂಪನ್ನರಾದ ಬ್ರಹ್ಮಾದಿಗಳೂ (ಸಹ ನೇರಾಗಿ ಕಾಣದೇ ತಮ್ಮ) ಹೃದಯದಲ್ಲಿ ಧ್ಯಾನಿಸುತ್ತಿರುವರೋ, ಹುಟ್ಟುಸಾವೆಂಬ ಪ್ರವಾಹರೂಪವಾದ ಸಂಸಾರವೆಂಬ ಬಾವಿಯಲ್ಲಿ ಬಿದ್ದವರನ್ನೆತ್ತುವುದಕ್ಕೆ ಯಾವ ಪಾದವು ಪರಮೋಪಾಯವೆನಿಸಿದೆಯೋ, ಮತ್ತು ಮೋಕ್ಷ ಸಾಮ್ರಾಜ್ಯವನ್ನೇ ಕೊಡುವುದೋ (ಅಂತಹ ನಿನ್ನ ಪಾದಕಮಲವನ್ನು ಕಂಡೆನು). ಈ ನೆನಪು ಯಾವ ರೀತಿ ಎಂದೆಂದಿಗೂ ನನ್ನಲ್ಲಿ ಇದ್ದೀತೋ ಹಾಗೆ ಅದನ್ನು ಅನುಗ್ರಹಿಸು!

(ಸಂಸಾರಕೂಪದಲ್ಲಿ ಬಿದ್ದು ತೊಳಲಾಡುತಿತರುವವರಿಗೆ ಪರಮಾತ್ಮನ ಚರಣಕಮಲಗಳೇ ಆಶ್ರಯಸ್ಥಾನವು. ಅದನ್ನು ಬಿಡಬಾರದು.)

## ನಾರದರಿಗೆ ತೋರಿದ ಅದ್ಭುತ!

ಒಮ್ಮೆ ಬ್ರಹ್ಮರ್ಷಿಗಳಾದ ನಾರದರು ಶ್ರೀಕೃಷ್ಣನು ತನ್ನ ಹದಿನಾರು ಸಹಸ್ರ ಮಡದಿಯರೊಂದಿಗೆ ಹೇಗೆ ಸಂಸಾರವನ್ನು ಮಾಡುತ್ತಿರುತ್ತಾನೆಂಬುದನ್ನು ನೋಡಬೇಕೆಂದು ಬಯಸಿ ದ್ವಾರಕಾನಗರಕ್ಕೆ ಹೋದರು. ಏಕೆಂದರೆ ಒಂದು ಮಡದಿಯೊಂದಿಗೆ ಸಂಸಾರವನ್ನು ನಡೆಸುವುದೇ ಅಪಾರಕಷ್ಟ! ಇನ್ನು ಇದು ಹೇಗೆ? ಎಂದು ನೋಡಲು ಕುತೂಹಲಿಗಳಾಗಿ ಹೋದರು. ಆ ದ್ವಾರಕಾನಗರವೋ ಅತ್ಯದ್ಭುತವಾದ ನಗರವಾಗಿತ್ತು. ಈ ಊರ ಮುಂದೆ ಅತಿ ಸುಂದರವಾದ ಉದ್ಯಾನವನವೂ ಉಪವನಗಳೂ ಇದ್ದವು. ಆ ಉದ್ಯಾನವನದಲ್ಲಿ ಸಮಸ್ತ ವಿಧವಾದ ಸುಗಂಧದಿಂದ ಕೂಡಿದ ಹೂ, ಗಿಡ ಮರ ಬಳ್ಳಿಗಳೂ ಆ ಉಪವನಗಳಲ್ಲಿ ಸಮಸ್ತ ವಿಧವಾದ ಸಾರ್ವಕಾಲಿಕ ಫಲಭರಿತವಾದ ಹಣ್ಣು ಹಂಪಲಿನಿಂದ ಕೂಡಿದ ಗಿಡಮರಗಳೂ ತುಂಬಿಹೋಗಿದ್ದವು. ಇದನ್ನು ನೋಡಿಯೇ ಶ್ರೀ ನಾರದರು ದಿಗ್ಭ್ರಮೆಗೊಂಡರು. ಇನ್ನು ಅಲ್ಲಿನ ಅನೇಕ ಅರಮನೆಗಳನ್ನು ಕಂಡರು. ಒಂದೊಂದು ಅರಮನೆಯ ಸಹ ಸ್ಫಟಿಕಮಣಿಗಳಿಂದಲೂ, ಮರಕತಮಣಿಗಳಿಂದಲೂ, ವಜ್ರವೈಡೂರ್ಯಾದಿಗಳಿಂದಲೂ ಕಂಗೊಳಿಸುತ್ತಿತ್ತು. ರತ್ನಖಚಿತ ಸ್ತಂಬಗಳೂ, ಚಂದ್ರಕಾಂತಾದಿಶಿಲೆಗಳಿಂದಲೂ ಆ ಅರಮನೆಗಳು ಅಲಂಕೃತವಾಗಿದ್ದವು. ಉತ್ತಮೋತ್ತಮವಾದ ಮುತ್ತುರತ್ನಹವಳಗಳ ಹಾರಗಳಿಂದಲೂ, ದಂತದ ಪೀಠಗಳಿಂದಲೂ ದಂತದ ಮಂಚಗಳಿಂದಲೂ ಕೂಡಿದ್ದು ಚಿನ್ನದ ಮಾಲೆಗಳಿಂದಲೂ ಕಂಗೊಳಿಸುತ್ತಿದ್ದು ಇದು ಭೂಲೋಕದ ಅಮರಾವತಿಯೋ ಎಂಬಂತೆ ವಿರಾಜಮಾನವಾಗುತ್ತಿತ್ತು. ಅಲ್ಲಿನ ದಾಸಿದಾಸವರ್ಗದವರೂ ಸಹ ಅತ್ಯುತ್ತಮ ವಾದ, ದುಕೂಲದ ಸೀರೆವಸ್ತ್ರಗಳಿಂದಲೂ ಮಣಿಕುಂಡಲಗಳಿಂದಲೂ ಅಲಂಕೃತರಾಗಿದ್ದರು. ಇದನ್ನು ಕಂಡ ನಾರದರು, ಇನ್ನು ಶ್ರೀ ಕೃಷ್ಣನು ತನ್ನ ಪರಿವಾರದೊಂದಿಗೆ ಹೇಗಿರಬೇಡ! ಎಂದು ಆಲೋಚಿಸುತ್ತಾ ಶ್ರೀಕೃಷ್ಣನ ಅರಮನೆ ಕಡೆಗೆ ಬಂದರು. ಆ ಅರಮನೆಯಲ್ಲಿ ಶ್ರೀಕೃಷ್ಣಪರಮಾತ್ಮನು ತನ್ನ ಪಟ್ಟದ ರಾಣಿಯಾದ ಶ್ರೀ ರುಕ್ಮಿಣೀದೇವಿಯೊಡನೆ ರತ್ನಖಚಿತವಾದ ಮಂಚದ ಮೇಲೆ- ಕುಳಿತು ಗುಣ, ರೂಪ, ಯೌವನಸಂಪನ್ನರಾದ

ದಾಸಿಯವರಿಂದ, ಬಂಗಾರದ ಹಿಡಿಯುಳ್ಳ ರತ್ನಖಚಿತ ಚಾಮರದಿಂದ ಸೇವಿಸಲ್ಪಡುತ್ತಿರುವುದನ್ನು ಕಂಡರು. ತತ್‌ಕ್ಷಣವೇ ನಾರದರನ್ನು ಕಂಡ ಶ್ರೀಕೃಷ್ಣನು ರುಕ್ಮಿಣಿಯೊಡನೆ ಮಂಚದಿಂದಿಳಿದು ನಾರದರನ್ನು ಸ್ವಾಗತಿಸಿ ಅರ್ಘ್ಯಪಾದ್ಯದಿಗಳನ್ನು ಕೊಟ್ಟು ಸತ್ಕರಿಸಿದನು. ಶ್ರೀಕೃಷ್ಣನು ನಾರದರ ಯೋಗಕ್ಷೇಮವನ್ನು ವಿಚಾರಿಸಿದನು. ನಾರದರೂ ಸಹ ಶ್ರೀಕೃಷ್ಣನನ್ನು ನಾನಾ ಪ್ರಕಾರವಾಗಿ ಸ್ತುತಿಸಿ ಮತ್ತೊಂದು ಮನೆಗೆ ಹೋದರು. ಅಲ್ಲೂ ಶ್ರೀಕೃಷ್ಣನು ಇನ್ನೊಬ್ಬ ಪತ್ನಿಯೊಡನೆಯೂ ಭಕ್ತನಾದ ಉದ್ಧವನೊಡನೆಯೂ ಪಗಡೆಯಾಟ ವನ್ನಾಡುತ್ತಿರುವುದನ್ನು ಕಂಡರು. ಅಲ್ಲೂ ಶ್ರೀಕೃಷ್ಣನು ಏನೂ ಅರಿಯದವನಂತೆ ನಾರದರ ಆಗಮನದ ಬಗ್ಗೆಯೂ, ಯೋಗಕ್ಷೇಮದ ಬಗ್ಗೆಯೂ ವಿಚಾರಿಸಿದನು. ಅದೇ ರೀತಿ ಬೇರೆ ಬೇರೆ ಅರಮನೆಗಳಿಗೆ ಹೋದಂತೆಲ್ಲಾ ಒಂದೊಂದು ಅರಮನೆಯಲ್ಲೂ ಶ್ರೀಕೃಷ್ಣಪರಮಾತ್ಮನು ಕೆಲವು ಮನೆಯಲ್ಲಿ ಮಕ್ಕಳೊಂದಿಗೆ ಆಟವಾಡುತ್ತಿರುವಂತೆಯೂ, ಅಗ್ನಿಹೋತ್ರಾದಿ ಕರ್ಮಗಳನ್ನು ಮಾಡುತ್ತಿರುವಂತೆಯೂ, ಬ್ರಾಹ್ಮಣರೊಡನೆ ಭೋಜನ ಮಾಡುತ್ತಿರುವಂತೆಯೂ, ರಾಜ್ಯಭಾರದ ಕೆಲಸದಲ್ಲಿ ವ್ಯಾಪೃತ ನಾದಂತೆಯೂ, ಕೆಲವಲ್ಲಿ ಗೋ ಅಶ್ವಾದಿಗಳ ಪರಿಚರ್ಯೆಯಲ್ಲಿ ಇರುವಂತೆಯೂ, ಇನ್ನೊಂದು ಕಡೆಯಲ್ಲಿ ಪ್ರಿಯರಾದವರೊಡನೆ ಹಾಸ್ಯ, ವಿನೋದಾದಿಗಳನ್ನು ಮಾಡುವಂತೆಯೂ, ದಾನಧರ್ಮಾದಿಗಳನ್ನು ಮಾಡುವಂತೆಯೂ, ಇದೇ ರೀತಿ ಇನ್ನೂ ಅನೇಕ ಪ್ರಕಾರವಾಗಿ ಒಂದೊಂದು ಅರಮನೆಯಲ್ಲೂ ಒಬ್ಬೊಬ್ಬ ಹೆಂಡತಿಯೊಡನೆ ವಿಹರಿಸುತ್ತಿರುವ ದೃಶ್ಯವನ್ನು ಕಂಡು ಅತ್ಯಂತವಾಗಿ ಆಶ್ಚರ್ಯಚಕಿತರಾದರು. ಕೊನೆಗೆ ಶ್ರೀಕೃಷ್ಣಪರಮಾತ್ಮನ ಹತ್ತಿರ ಯೋಗೇಶ್ವರ, ನಿನ್ನ ಮಹಾಮಾಯೆ ಎಂಬುದು ಯಾವ ಯೋಗಿಗಳಿಗೂ ಅರ್ಥವಾಗುವಂಥದ್ದಲ್ಲ. ಇನ್ನು ನಿನ್ನ ತತ್ತ್ವವೆಂಬುದು ಅತ್ಯಂತವಾಗಿ ಅಗೋಚರ ವೆಂಬುದನ್ನು ಬೇರೆ ಹೇಳಬೇಕಾಗಿಯೇ ಇಲ್ಲ. ನಾನೇನೋ ಕುತೂಹಲದಿಂದ ನೋಡಬೇಕೆಂದು ಬಂದೆ, ನನ್ನನ್ನು ದಯವಿಟ್ಟು ಕ್ಷಮಿಸು ಎಂದು ಪ್ರಾರ್ಥಿಸಿಕೊಳ್ಳಲಾಗಿ ಶ್ರೀಕೃಷ್ಣಪರಮಾತ್ಮನು ತನ್ನ ಯೋಗಶಕ್ತಿಯನ್ನು, ಪರತತ್ತ್ವವನ್ನು ಉಪದೇಶಿಸಿ ಅನುಗ್ರಹಿಸಿದನು.

ಇದುವರೆಗೆ ವರ್ಣನೆಮಾಡಿದ ವಿಚಾರವು ಯಾವುದೋ ಒಂದು ಯುಗಾಂತರದ ಇತಿಹಾಸವೆಂದು ನಮ್ಮಂಥವರಿಗೆ ತೋರಬಹುದು. ಆದರೆ ಶ್ರೀಕೃಷ್ಣವತಾರದ ನಂತರವೂ ಈ ಮಧ್ಯಕಾಲದಲ್ಲಿ ಬಂದ ಅನೇಕ ಯೋಗಿಗಳ

ಚರಿತ್ರೆಯಲ್ಲಿ ನಾವು ಈ ತರಹದ ಒಂದೇ ಕಾಲದಲ್ಲಿ ಅನೇಕ ಶರೀರವನ್ನು ತೆಗೆದುಕೊಂಡ ಕಥೆಯನ್ನು ಕೇಳಿರುತ್ತೇವೆ. ಉದಾ: ಗೋಂದಾವಳಿ ಶ್ರೀ ಬ್ರಹ್ಮಚೈತನ್ಯಮಹಾರಾಜರು ಮತ್ತು ಹಿಮಾಲಯದ ಯೋಗಿಗಳ ಕಥೆ, ಮುಂತಾದವರಲ್ಲಿ ನಾವು ಕಾಣಬಹುದು. ಈಗಿನ ಯೋಗಿಗಳೂ ಆ ಪರಮಾತ್ಮನಿಂದಲೇ ಯೋಗಸಿದ್ಧಿಯು ಸಿದ್ಧವಾಗುವುದೆಂಬುದು ನಿಜವಾದರೆ ಆ ಪರಮಾತ್ಮನಲ್ಲಿ- ಸರ್ವಜ್ಞನೂ ಸರ್ವಶಕ್ತನಾದವನಲ್ಲಿ- ಇನ್ನೆಷ್ಟು ಯೋಗಶಕ್ತಿಯ ಮಹಾತ್ಮ್ಯೆಯು ಇರಬಹುದೆಂದಾಯಿತು! ಇದೆಲ್ಲ ಅಚಿಂತ್ಯ. ಮನೋವಾಚಾಮ ಗೋಚರವಾದದ್ದು.

ಇನ್ನು ಅಧ್ಯಾತ್ಮದೃಷ್ಟಿಯಿಂದ ಈ ವಿಭೂತಿಗಳ ಕಡೆಗೆ ದೃಷ್ಟಿಯನ್ನು ಹಾಯಿಸಿದರೆ, ಇದೇನು ಅಸಂಭಾವಿತವೂ ಅಲ್ಲ, ಆಶ್ಚರ್ಯಕರವೂ ಅಲ್ಲ. ಏಕೆಂದರೆ ಪ್ರತಿಯೊಬ್ಬನೂ ಇಂಥಹ ಮಹಾಪುರುಷನೇ ಆಗಿರುತ್ತಾನೆ. ಆದರೆ ಅವರವರು ಮಾಡಿಕೊಂಡ ಜೀವರೂಪದಿಂದಲ್ಲ, ಮತ್ತೇನೆಂದರೆ ಅವರವರ ಪರಮಾರ್ಥವಾದ ಪರಮಾತ್ಮರೂಪದಿಂದ ಪ್ರತಿಯೊಬ್ಬರೂ ಇಂತಹ ಪವಾಡಪುರುಷರೇ ಆಗಿರುತ್ತಾರೆ. ಏಕೆಂದರೆ ಅಖಂಡ ಈ ಜಗದ್ಬಿಂಬದ ರಚನೆಯೂ ಮತ್ತು ಅದಕ್ಕೆ ಸಾಕ್ಷಿಯಾಗಿರುವುದೂ ನಾನಲ್ಲದೇ ಮತ್ಯಾರು ಇರುತ್ತಾರೆ? ನಿಜವಾಗಿ ನನ್ನಿಂದಲೇ ಈ ಸಮಸ್ತ ಪ್ರಪಂಚವೂ ಬಂದಿರುವುದು, ನನ್ನಲ್ಲೇ ಇರುವುದು, ಕೊನೆಗೆ ನನ್ನಲ್ಲೇ ಅಡಕವಾಗುವುದು. ಏಕೆಂದರೆ ನನ್ನನ್ನು ಬಿಟ್ಟರೆ ಇದು ತೋರಲೇ ಆರದು. ನನ್ನ ಸಂಬಂಧವಿಲ್ಲದೇ ಇದು ಇರಲೇ ಆರದು. ನಾನಲ್ಲದೇ ಈ ತೋರುವ ಪ್ರಪಂಚಕ್ಕೆ ಬೇರೊಂದು ಕಾರಣವನ್ನು ಯಾರಿಂದಲೂ ತೋರಿಸಲಾಗದು. ನಾನೇ ಸ್ಥಾವರಜಂಗಮನಾಗಿಯೂ, ಪಂಚಭೂತವಾಗಿಯೂ, ಸಮಸ್ತ ಪದಾರ್ಥ ಮತ್ತು ಜೀವರಾಶಿಯಾಗಿಯೂ ತೋರುತ್ತಿರುವುದು. ನಾನೆಂದರೆ ಈ ದೇಹೇಂದ್ರಿಯ ಮನೋಬುದ್ಧಿಗಳ ಕಟ್ಟಿಗೆ ಸಿಕ್ಕಿಕೊಂಡ ಪ್ರಮಾತೃವೂ ಕರ್ತೃಭೋಕ್ತೃವೂ ಆಗಿರುವವನಲ್ಲ, ಮತ್ತೇನೆಂದರೆ ಇವಕ್ಕೂ ಸಾಕ್ಷಿಯಾಗಿ ಈ ಮೂರನ್ನೂ- ಇದಕ್ಕೆ ತೋರುವ ಪ್ರಪಂಚವನ್ನೂ ಒಂದೇ ಕೈನಲ್ಲಿ ಮೂರು ನಾಲ್ಕು ನೆಲ್ಲಿಕಾಯಿಯನ್ನು ಹಿಡಿದಿಟ್ಟುಕೊಳ್ಳುವಂತೆ- ಉಂಡೆಯಾಗಿ ಅರಿಯುತ್ತಿರುವ ನಿತ್ಯಚಿನ್ಮಾತ್ರ ಸ್ವರೂಪನು. ಇದು ನಮ್ಮಗಳೆಲ್ಲರ ಅನುಭವದಲ್ಲಿರುವ ವಿಚಾರವು. ಇದಕ್ಕೆ ಸ್ವಪ್ನಾವಸ್ಥೆಯ ಅನುಭವದೇ ದೃಷ್ಟಾಂತವು. ಅಲ್ಲಿ ನೋಡಿ, ಎಚ್ಚರದೃಷ್ಟಿಯಿಂದ ಹೇಳುವುದಾದರೆ

ಅಲ್ಲಿಗೆ ಯಾವುದನ್ನು ಇಲ್ಲಿಂದ ಒಯ್ದಿದ್ದಿಲ್ಲ, ಅಲ್ಲಿನ ಪ್ರಪಂಚವನ್ನು ನಾವು ಏತರಿಂದಲೂ ಮಾಡಿರುವುದಿಲ್ಲ. ನಿಜವಾಗಿ ನಾವು ಒಬ್ಬರೇ ಹೋದದ್ದು, ಮತ್ತು ನಾವೊಬ್ಬರೆ ನೋಡಿದ್ದು, ಅದೂ ಅಲ್ಲದೆ ಅದೆಲ್ಲವೂ ನಾವೊಬ್ಬರೇ ಆದದ್ದು. ಇದೆಲ್ಲವೂ ನಮ್ಮೆಲ್ಲರ ನಿತ್ಯಜೀವನದಲ್ಲಿ ನಡೆಯುತ್ತಿರುವಂಥದ್ದು. ಪ್ರತಿನಿತ್ಯ ನಾವು ಹಾಗೆಯೇ ಅನುಭವಿಸುತ್ತಿರುವೆವು. ಆದರೂ ನಾವು ಈ ಪ್ರಪಂಚದ ಯಾವುದೋ ಒಂದು ಮೂಲೆಯಲ್ಲಿ ಎಂದೋ ಹುಟ್ಟಿ ಕೆಲವಷ್ಟು ದಿನಗಳವರೆಗೆ ಇದ್ದುಹೋಗುವೆವೆಂತಲೂ ನಾವು ಹೋದರೂ ಈ ಪ್ರಪಂಚವು ಅದರ ಪಾಡಿಗೆ ನಡೆದುಕೊಂಡು ಹೋಗುತ್ತಿರುತ್ತದೆಯೆಂತಲೂ ನಾವು ಭಾವಿಸಿಕೊಂಡಿರುವೆವಲ್ಲಾ ಇದೆಂಥಾ ಮಾಯೆ! ಈ ಮಾಯೆಯನ್ನು ಕೊಸರಿಕೊಳ್ಳುವುದು ಹೇಗೆ? ಅದಕ್ಕೆ ಉಪಾಯವೇನು? ಎಂಬುದನ್ನು ತಿಳಿಸುವುದೇ ಉಪನಿಷತ್ತುಗಳ ಗುರಿ. ಆದಕ್ಕಾಗಿಯೇ ಅವಶ್ಯವಾಗಿ ನಾವುಗಳೆಲ್ಲರೂ ಉಪನಿಷತ್ತಿನ ವಿಚಾರವನ್ನು ಮಾಡಬೇಕು. ಅವು ಹೇಳುವ ಪ್ರಕಾರದಿಂದ ತತ್ತ್ವವನ್ನರಿತು ಕೃತಾರ್ಥರಾಗಬೇಕು.

* * * * *

## 45. ಭಕ್ತನ ಸ್ತೋತ್ರ

ಸ್ವಪ್ನಾಯಿತಂ ನೃಪಸುಖಂ ಪರತಂತ್ರಮೀಶ
ಶಶ್ವದ್ಭಯೇನ ಮೃತಕೇನ ಧುರಂ ವಹಾಮಃ।
ಹಿತ್ವಾ ಯದಾತ್ಮನಿ ಸುಖಂ ತ್ವದನೀಹಲಭ್ಯಂ
ಕ್ಲಿಶ್ಯಾಮಹೇಽತಿ ಕೃಪಣಾಃ ತವ ಮಾಯಯೇಹ ॥

\- ಶ್ರೀಮದ್ಭಾಗವತ 10-70-28

ಪರಮೇಶ್ವರ! ರಾಜರುಗಳ ಸುಖವೆಂಬುದೇನುಂಟು ಅದೆಲ್ಲವೂ ಪರತಂತ್ರವಾದುದರಿಂದ ನಮಗೆ ಸುಖವೆಂಬುದು ಸ್ವಪ್ನಸಮಾನ ವಾಯಿತು. ಪ್ರತಿ ಕ್ಷಣದಲ್ಲೂ ಹೆದರುತ್ತಾ ಜೀವಚ್ಛವದಂತಿರುವ ಈ ಶರೀರದಿಂದ (ಪತ್ನಿ ಪುತ್ರಾದಿಗಳ ಚಿಂತೆಯೆಂಬ) ಭಾರವನ್ನು ಹೊತ್ತಿರುವೆವು. ನಿಷ್ಕಾಮ ಕರ್ಮದಿಂದ ಲಭ್ಯವಾದ ನಿನ್ನಲ್ಲಿ ಸ್ವತಃ ಸಿದ್ಧವಾದ ಪರಮಾನಂದರೂಪವಾದ ಯಾವ ಮೋಕ್ಷವೆಂಬುದಿದೆಯೋ

ಆದನ್ನು ಪಡೆಯದೇ ನಿನ್ನ ಮಾಯೆಯೆಂಬ ಬಲೆಗೆ ಸಿಕ್ಕಿ ಅತ್ಯಂತ ದಿನರಾಗಿ ಶೋಕಪಡುತ್ತಿರುವೆವು!

[ಸ್ವತಃಸಿದ್ಧವಾದ ಎಲ್ಲರ ಸ್ವರೂಪವಾದ ಆನಂದದ ಕಡೆಗೆ ಗಮನಹರಿಸದೇ ಮೃಗಮರೀಚಿಕೆಯಂತಿರುವ ವಿಷಯಾನಂದಕ್ಕೆ ಜನರು ಹೋಗುತ್ತಿರುವರಲ್ಲಾ! ಇದೆಂಥ ಅವಿವೇಕತನ! ಎಂದು ಭಾಗವತಕಾರರು ಮರುಕವನ್ನುತೋರಿಸುತ್ತಿದ್ದಾರೆ!]

## ಶ್ರೀಕೃಷ್ಣನ ದಿನಚರಿ

ಮನುಷ್ಯನ ದಿನಚರಿ ಹೇಗಿರಬೇಕು? ಹೇಗಿರಬಾರದು? ಸರಿಯಾದದ್ದನ್ನವ ಲಂಬಿಸಲು ಏನು ಮಾಡಬೇಕು? ಎಂಬುದೀಗ ಪ್ರಶ್ನೆ. ಪ್ರತಿನಿತ್ಯ ಮಲಗುವ ಮುಂಚೆ ತನ್ನ ದಿನಚರಿಯ ಅವಲೋಕನೆಯನ್ನು ಮಾಡಿಕೊಳ್ಳಬೇಕು. ಬರೆಯುವ ಹವ್ಯಾಸವಿದ್ದರೆ ಇನ್ನೂ ಉತ್ತಮ. ಇದರಿಂದ ಆಯಾ ದಿನ ಏನನ್ನಾದರೂ ತಪ್ಪು ಮಾಡಿದ್ದರೆ ಅದನ್ನು ಬಿಡುವುದಕ್ಕೆ ಸಹಾಯವಾಗುತ್ತದೆ. ಮಾಡಿದ ತಪ್ಪನ್ನೆಲ್ಲಾ ಮರೆಯುತ್ತಾ ಹೋದರೆ ತಿದ್ದಿಕೊಳ್ಳುವುದಕ್ಕೆ ಅವಕಾಶವಿರುವುದಿಲ್ಲ. ಆದರೆ ಬರೆಯುವ ಹವ್ಯಾಸವಿದ್ದರೆ ತಪ್ಪನ್ನೇನನ್ನಾದರೂ ಆದಿನ ಮಾಡಿದ್ದರೆ ಅದನ್ನು ಮುಚ್ಚುಮರೆ ಇಲ್ಲದೆ ಬರೆಯುತ್ತಿದ್ದರೆ ಆಗ ಸಹಜವಾಗಿ ನಾಚಿಕೆಯೂ ಜುಗುಪ್ಸೆಯೂ ಉಂಟಾಗುತ್ತದೆ. ಇದನ್ನು ಪ್ರತಿನಿತ್ಯಬರೆದ ನಂತರ ಭಗವಂತನಿಗೆ ಒಪ್ಪಿಸುವ ವಾಡಿಕೆಯನ್ನು ಇಟ್ಟುಕೊಳ್ಳಬೇಕು. ಇದರಿಂದ ಇನ್ನಷ್ಟು ಬೇಗ ಮನುಷ್ಯನು ಶುದ್ಧನಾಗುವುದಕ್ಕೆ ಅಣಿಯಾಗುತ್ತಾನೆ. ಹಾಗಾದರೆ ದಿನಚರಿ ಹೇಗಿರಬೇಕು? ಎಂದರೆ ಶ್ರೀಕೃಷ್ಣಪರಮಾತ್ಮನು ನಡೆದು ತೋರಿಸಿಕೊಟ್ಟಿರುತ್ತಾನೆ. ಇಲ್ಲಿ ಎಲ್ಲರಿಗೂ ಶ್ರೀಕೃಷ್ಣನಂತೆ ಎಲ್ಲವನ್ನೂ ಮಾಡುವುದಕ್ಕಾಗದಿದ್ದರೂ ಅವರವರಿಗೆ ಹೊಂದುವಷ್ಟನ್ನು ಮಾಡುವುದಕ್ಕೆ ಯಾರಿಗೂ ಏನೂ ಅಡ್ಡಿ ಇರುವುದಿಲ್ಲ. ಶ್ರೀಮದ್ಭಾಗವತದಲ್ಲಿ (10-70) ವರ್ಣಿಸಿದ ಶ್ರೀಕೃಷ್ಣನ ದಿನಚರಿ ಬಹು ಸುಂದರವಾಗಿದೆ. ಆತ ಸ್ವಯಂ ಕೃತಾರ್ಥನಾದವನಾದರೂ (ಭಗವಂತನಾದರೂ) ಎಲ್ಲರೂ ನಡೆಸಬಹುದಾದ ಕೆಲವು ನಡವಳಿಕೆಯನ್ನು ಮಾರ್ಗದರ್ಶಕನಾಗಿ ತೋರಿಸಿಕೊಟ್ಟಿರುವುದನ್ನು ನೋಡೋಣ.

ಶ್ರೀಕೃಷ್ಣನು ಪ್ರತಿನಿತ್ಯ ಬ್ರಾಹ್ಮೀಮುಹೂರ್ತದಲ್ಲಿ ಏಳುತ್ತಿದ್ದನು. (ಅಂದರೆ ಬೆಳಗಿನ ಝಾವ 4 ಗಂಟೆಗೆ) ಎದ್ದು ಕೈಕಾಲುಗಳನ್ನು ತೊಳೆದು ಶುದ್ಧಾಚಮನವನ್ನು

ಮಾಡಿ ಬ್ರಹ್ಮಾನುಸಂಧಾನಕ್ಕೆ ಕೂರುತ್ತಿದ್ದನು. ಬ್ರಹ್ಮಾನುಸಂಧಾನವನ್ನು ಮಾಡುವಾಗ ಮಾಯಾತೀತವಾದ ನಾಮರೂಪಗಳನ್ನು ಮೀರಿದ ಮನೋವಾಗಗೋಚರವಾದ ಶುದ್ಧಚೈತನ್ಯಸ್ವರೂಪದಲ್ಲೇ ನೆಲೆನಿಂತು ಬಿಡುವುದು. ಇದು ಎಚ್ಚರದಲ್ಲಿದ್ದಾಗಲೂ ಆತನಿಗೆ ಮರೆಯಾಗುವುದಲ್ಲವಾದರೂ ಇದು ಸಹಜವಾದದ್ದಾರೂ ಇಂದ್ರಿಯ ಮನೋವ್ಯಾಪಾರವನ್ನು ನಿಲ್ಲಿಸಿ ಆತ್ಮಸ್ವರೂಪದಲ್ಲಿ ನೆಲೆನಿಲ್ಲುವುದೇ ಬಾಕಿ ಲೋಕದ ಸಾಧಕರಿಗೆ ಪರಂಬ್ರಹ್ಮಪ್ರಾಪ್ತಿಗ್ತೆ ಉಪಾಯವಾಗಿರುವುದರಿಂದ ಅದನ್ನು ನಾವು ಮಾಡಬೇಕೆಂದು ಸೂಚಿಸುವುದಕ್ಕಾಗಿ ಆತನು ಅದನ್ನು ಹಾಗೆ ಮಾಡುತ್ತಿದ್ದನು. ಯಾವ ಬ್ರಹ್ಮಚೈತನ್ಯವು ನಿರುಪಾಧಿಕವಾದುದರಿಂದ ಅಖಂಡವೂ ಸ್ವಪ್ರಕಾಶವೂ ನಾಶರಹಿತವೂ ಪ್ರಪಂಚಾತೀತವೂ ಆಗಿದೆಯೋ ಯಾವುದು ಇಡಿ ಜಗತ್ತಿನ ಉತ್ಪತ್ತಿಸ್ಥಿತಿಲಯಗಳಿಗೆ ಕಾರಣವಾಗಿದೆಯೋ, ಯಾವುದು ಸತ್ಯಜ್ಞಾನಾನಂತಸ್ವರೂಪ ವಾಗಿದೆಯೋ ಆ ಪರತತ್ತ್ವವನ್ನು ಅನುಸಂಧಾನಮಾಡುತ್ತಿದ್ದನು. ಅನಂತರ? ಅರುಣೋದಯ ಕಾಲಕ್ಕೆ ಸ್ವಲ್ಪ ಮುಂಚೆಯೇ (5 ಗಂಟೆಗೆ) ಸ್ನಾನವನ್ನು ಮಾಡಿ ಶುದ್ಧವಸ್ತ್ರವನ್ನು ಧರಿಸಿ ಸಂಧ್ಯಾವಂದನಾದಿ ನಿತ್ಯಕರ್ಮವನ್ನು ಒಂದು ಹಂತಕ್ಕೆ ನಿಲ್ಲಿಸಿ ಸರಿಯಾಗಿ ಸೂರ್ಯೋದಯಕಾಲಕ್ಕೆ ಅಗ್ನಿಹೋತ್ರಾಹುತಿಗಳನ್ನು ಕೊಡುತ್ತಿದ್ದನು. ಅನಂತರ ಸೂರ್ಯೋದಯವಾಗಿ ಸೂರ್ಯನು ಕೆಂಪುಬಣ್ಣವನ್ನು ಬಿಟ್ಟ ನಂತರ ಸೂರ್ಯೋಪಸ್ಥಾನವನ್ನು ಮಾಡುತ್ತಿದ್ದನು. ಸೂರ್ಯನು ಕೆಂಪಾಗಿರುವವರೆಗೂ ಗಾಯತ್ರಿಯನ್ನು ಮೌನವಾಗಿ ಜಪಿಸುತ್ತಿದ್ದನು. ಅನಂತರ ದೇವತೆಗಳಿಗೂ ಋಷಿಗಳಿಗೂ ಪಿತೃಗಳಿಗೂ ತರ್ಪಣವನ್ನು ಕೊಟ್ಟು ಪಂಚಮಹಾಯಜ್ಞಗಳನ್ನು ಮಾಡಿ ಪ್ರತಿನಿತ್ಯ ಗೋ, ಭೂ, ಹಿರಣ್ಯ, ವಸ್ತ್ರಗಳನ್ನು ಯೋಗ್ಯರಾದವರಿಗೆ ದಾನವನ್ನು ಮಾಡುತ್ತಿದ್ದನು. ಅನಂತರ ತನ್ನದೇ ಅಷ್ಟವಿಭೂತಿಗಳಾದ ಪಂಚಮಹಾಭೂತವೇ ಮುಂತಾದವುಗಳಿಗೆ ನಮಸ್ಕರಿಸಿ, ಗುರುಹಿರಿಯರಿಗೂ ದೇವಬ್ರಾಹ್ಮಣರಿಗೂ ನಮಸ್ಕರಿಸುತ್ತಿದ್ದನು. ಪ್ರತಿನಿತ್ಯ ಗೋಸ್ಪರ್ಶವನ್ನು ಮಾಡುತ್ತಿದ್ದನು. ಅನಂತರ ಲೋಕದ ವ್ಯವಹಾರವನ್ನು ಮಾಡುವಾಗ, ಮನೆಯಿಂದ ಹೊರಗಡೆಗೆ ಹೋಗುವಾಗ ಪ್ರತಿನಿತ್ಯ ಅಲಂಕಾರವನ್ನು ಮಾಡಿಕೊಂಡೇ ಹೋಗುತ್ತಿದ್ದನು. ಪೀತಾಂಬರಧಾರಿ ಯಾಗಿಯೂ ಶ್ರೀವತ್ಸಕೌಸ್ತುಭಧರನಾಗಿಯೂ ಇರುತ್ತಿದ್ದನು. ತುಪ್ಪದಲ್ಲೂ ಕನ್ನಡಿಯಲ್ಲೂ ತನ್ನ ಪ್ರತಿಬಿಂಬವನ್ನು ನೋಡಿಕೊಂಡು, ಎಲ್ಲಾ ಅವಯವಗಳಿಗೂ ತಕ್ಕ ಆಭರಣಗಳನ್ನು ಧರಿಸಿಕೊಂಡು ಸ್ವಭಾವದಿಂದಲೇ ಸುಂದರನಾದರೂ ಸುಂದರವಾಗಿ ಅಲಂಕಾರವನ್ನು

ಮಾಡಿಕೊಂಡೇ ಹೊರಗೆ ಹೋಗುತ್ತಿದ್ದನು. ಈತನನ್ನು ಕಾಣಲು ಬಂದಂತಹ ಜನರನ್ನು ಸಹ ಅವರವರ ಕಷ್ಟಕಾರ್ಪಣ್ಯಗಳನ್ನು ಕೇಳಿ ತಿಳಿದು, ಅವರವರಿಗೆ ಸೂಕ್ತ ಪರಿಹಾರೋಪಾಯಗಳನ್ನು ಅನುಗ್ರಹವನ್ನು ಮಾಡಿ ಕಳುಹಿಸಿಕೊಡುತ್ತಿದ್ದನು. ರಾಜಕಾರ್ಯದಲ್ಲೂ ಸಹ ನಿರ್ವ್ಯಾಜನಾಗಿ ಪ್ರಾಮಾಣಿಕವಾಗಿ ಆಯಾ ಕೆಲಸಗಳನ್ನು ನಿರ್ವಹಿಸುತ್ತಿದ್ದನು. ಸ್ವಯಂರಾಜನಲ್ಲದಿದ್ದರೂ ಸಮಸ್ತರಾಜರೂ ಈತನ ಸಲಹೆ ಸೂಚನೆಯ ಮೇಲೆ ನಡೆಯುತ್ತಿದ್ದರು. ಎಲ್ಲಿ ದುಷ್ಟಶಕ್ತಿಯು ತಲೆದೋರಿದ್ದರೂ ಅದಕ್ಕೆ ತಕ್ಕ ಉಪಾಯದಿಂದಲೇ ಅದನ್ನು ನಿಗ್ರಹಿಸುತ್ತಿದ್ದನು. ಎಲ್ಲವನ್ನೂ ತಾನೇ ನೇರಾಗಿ ಮಾಡಬೇಕೆಂಬ ನಿಯಮವಿಲ್ಲ. ಆತನು ಮಾಡಿದ ಕೆಲವು ಕೃತ್ಯವು ಅತಿಮಾನುಷ ವಾದರೂ ಆತನು ಜನಸಾಮಾನ್ಯರೊಡನೆಯೂ ರಾಜಾದಿಗಳೊಡನೆ ಇದ್ದ ವರ್ತನೆಯೂ ಅನುಕರಣೀಯವೇ ಆಗಿದೆ. ಆತನ ಮಿತ್ರರಲ್ಲಿನ ಪ್ರೇಮ, ಪ್ರಜೆಗಳ ಮೇಲಿನ ಅನುಕಂಪ ಗುರುಹಿರಿಯರ ಮೇಲಿನ ಗೌರವ ತಾಯಂದಿರು ಪತ್ನಿಯರು ಸಖಿಯರ ಮೇಲಿನ ಅವರವರ ಸ್ಥಾನಕ್ಕೆ ತಕ್ಕಂತೆ ತೋರಿಸಿರುವ ಪ್ರೀತಿವಾತ್ಸಲ್ಯಾದಿಗಳು ಅನುಕರಣೀಯವೇ ಆಗಿದೆ. ಕೆಲವೊಮ್ಮೆ ಆತನ ವರ್ತನೆ ಲೋಕೋತ್ತರವಾಗಿದ್ದು ನಮ್ಮಂತಹವರಿಗೆ ಅದು ಅರ್ಥವಾಗದಷ್ಟು ಮಹತ್ತರವೂ ಗಹನವೂ ಆಗಿದ್ದರೂ ಆತನ ನಿಷ್ಕಪಟತೆ, ಸರಳತೆ, ಅಮಾಯಾವಿತನ, ಧೈರ್ಯ, ಸಾಹಸೋತ್ಸಾಹಾದಿಗಳು ಲೋಕೋತ್ತರವಾಗಿದೆ.

ಜರಾಸಂಧನಿಂದ ಬಂಧಿತರಾದ ರಾಜಕುಮಾರರನ್ನು ಬಿಡಿಸುವುದು, ತನ್ನ ತಾಯಿಯ ತಂದೆ- ಉಗ್ರಸೇನರನ್ನು ವಿಮುಕ್ತಿಗೊಳಿಸುವುದು, ಎಂತಹ ಮನಮೋಹಕ ಪ್ರಸಂಗ! ಹೀಗೆ ಶ್ರೀಕೃಷ್ಣನ ಪ್ರತಿಯೊಂದು ವರ್ತನೆಯೂ ಧರ್ಮರೂಪವಾಗಿಯೇ ಇರುವಂಥದ್ದು, ಅವಿವೇಕಿಗಳು ಮಾತ್ರ ಈತನನ್ನು ಕಪಟಸೂತ್ರಧಾರಿಯೆಂದು ಹೇಳುವರೇ ಹೊರತು ಸರಿಯಾಗಿ ಭಾಗವತ ಮತ್ತು ಮಹಾಭಾರತಗ್ರಂಥವನ್ನು ಅವಲೋಕಿಸಿದವರು ಸ್ವಪ್ನದಲ್ಲೂ ಈ ತರಹದ ಮಾತನ್ನು ಹೇಳುವುದಿಲ್ಲ.

ಇನ್ನು ನಮ್ಮಂತಹ ಸಾಮಾನ್ಯ ಜನರ ದಿನಚರಿ ಇದಕ್ಕೆ ಹೊಂದುವ ಹಾಗೆ ಯಾವ ರೀತಿ ಇರಬಹುದು ಎಂದು ಕೇಳಿದರೆ, ನಾವೂ ಸಹ ಬ್ರಾಹ್ಮೀಮುಹೂರ್ತ ದಲ್ಲೇ (ಅಂದರೆ ಬೆಳಗಿನ ಝಾವ 4 ಗಂಟೆಗೆ) ಏಳುವ ಅಭ್ಯಾಸವನ್ನಿಟ್ಟುಕೊಳ್ಳಬೇಕು. ಈಗ ಆಫೀಸ್‌ಗಳಿಗೆ ಹೋಗುವಂಥವರಿಗೆ ಬೆಳಿಗ್ಗೆ 7 ಗಂಟೆಗೆ ಉಪಹಾರಾದಿಗಳಾಗಿರ ಬೇಕು. ಅವರಿಗೆ ಯಾವುದೇ ಅನುಷ್ಠಾನವನ್ನು ಮಾಡುವುದಕ್ಕೆ ಅವಕಾಶವೂ

ಇರುವುದಿಲ್ಲ. ಅದರ ಬಗ್ಗೆ ಏನೂ ಗೊತ್ತಿರುವುದೂ ಇಲ್ಲ. ಆದರೂ ಸಹ ಅಂಥವರೂ ಬೆಳಿಗ್ಗೆ ಬೇಗನೇ ಎದ್ದು ಶೌಚಾದಿಗಳನ್ನು ಮುಗಿಸಿಕೊಂಡು ಸಮಾಧಾನದಿಂದ ಶಾಂತಮನಸ್ಕರಾಗಿ ತಮ್ಮ ಇಷ್ಟದೇವತೆಯನ್ನು ಅರ್ಧಗಂಟೆ ಕಾಲವಾದರೂ ಸ್ಮರಿಸಿಕೊಳ್ಳಬೇಕು (ಧ್ಯಾನವನ್ನು ಮಾಡಬೇಕು). ಅನಂತರ ಸ್ನಾನವನ್ನು ಮಾಡಿ ಅರ್ಧಗಂಟೆಕಾಲ ದೇವರಕೋಣೆಯೊಳಗೆ ಹೋಗಿ ತನಗೆ ಬರುವ ಶ್ಲೋಕಗಳಿಂದ ಲಾಗಲೀ ಸ್ತೋತ್ರದಿಂದಲಾಗಲೀ ಪ್ರೇಮಪೂರ್ವಕವಾಗಿ ಭಗವಂತನನ್ನು ಪೂಜಿಸ ಬೇಕು. ನಮ್ಮ ಮನೆಯ ಮಕ್ಕಳಿಗೂ ಸಹ ಸ್ತೋತ್ರಪಾಠಗಳನ್ನು ಭಕ್ತಿವರ್ಧಕ ಶ್ಲೋಕ ಗಳನ್ನು ಹೇಳಿಕೊಡಬೇಕು. ಸಂಜೆ ಆಫೀಸಿನಿಂದಲಾಗಲೀ ಮತ್ತೊಂದು ಕಡೆಯಿಂದಲಾಗಲೀ ಮನೆಗೆ ಬಂದನಂತರವೂ ಕೈಕಾಲುಗಳನ್ನು ತೊಳೆದು ಬೇರೆ ಶುದ್ಧ ಬಟ್ಟೆಯನ್ನುಟ್ಟು ದೇವರ ದೀಪವನ್ನು ಹಚ್ಚಿ ಅರ್ಧಗಂಟೆ ಕಾಲವಾದರೂ ಮನೆಯವರೆಲ್ಲಾ ಸೇರಿ ಭಜನೆಯನ್ನು ಮಾಡಬೇಕು. ಮನೆಯ ಚಿಕ್ಕಮಕ್ಕಳಿಗೆ ತಾಯಿಯಂದಿರರು ಕೂರಿಸಿಕೊಂಡು ರಾಮಾಯಣದ ಮಹಾಭಾರತದ ಅಥವಾ ಶ್ರೀಮದ್ಭಾಗವತಾದಿಗಳ ಕಥೆಯನ್ನು ಹೇಳಬೇಕು. ಮನೆಯವರೆಲ್ಲರೂ ನೀತಿ ನಿಯಮವಂತರಾಗಿ ಬಾಳುವಂತೆ ಕಲಿಸಬೇಕು. ಮಕ್ಕಳೇನಾದರೂ ದುರ್ಮಾರ್ಗವನ್ನವ ಲಂಬಿಸಿದರೆ ತಾನು ಗಳಿಸಿದ ಎಲ್ಲಾ ಐಶ್ವರ್ಯಕ್ಕೂ ತಿಲಾಂಜಲಿ ಕೊಟ್ಟರಾಯಿತು. ಅದರಿಂದ ಸಮಾಜಕ್ಕೂ ಘಾತವುಂಟಾಗುತ್ತದೆ. ಎಲ್ಲರೂ ಉದ್ಧಾರವಾಗುವ ಮಾರ್ಗವನ್ನು ಅವಲಂಬಿಸಬೇಕೇ ಹೊರತು ಇಂದ್ರಿಯದಾಸರಾಗಿ ಭೋಗಾಸಕ್ತರಾಗಿ ಅಧೋಜನ್ಮಕ್ಕೆ ಕಾರಣವಾಗುವ ಮಾರ್ಗವನ್ನವಲಂಬಿಸಬಾರದು. ಇದನ್ನು ಚೆನ್ನಾಗಿ ನಾವು ತಿಳಿದಿರಬೇಕು. ಬದುಕು ಅತ್ಯಲ್ಪವಾದ್ದರಿಂದ ಇದನ್ನು ಸಾರ್ಥಕಗೊಳಿಸಿ ಹತ್ತು ಜನಕ್ಕೆ ಮಾರ್ಗದರ್ಶಕರಾಗಿ ಆತ್ಮೋದ್ಧಾರವನ್ನು ಮಾಡಿಕೊಳ್ಳಬೇಕು. ಪ್ರಾಕೃತರ ಮಾತು, ಸಿನಿಮಾ ನಾಟಕಾದಿಗಳು ತತ್ಕಾಲಕ್ಕೆ ಆಪ್ಯಾಯಮಾನವಾಗಿ ತೋರಿದರೂ ಇದರಿಂದಾಗುವ ಅನರ್ಥವು ಅತ್ಯಂತ ಘೋರವಾದದ್ದು. "ಅನಿತ್ಯಂ ಅಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವಮಾಮ್" "ಅನಿತ್ಯವೂ ಅಸುಖವೂ ಆದ ಈ ಲೋಕವನ್ನು ಪಡೆದು ಭಗವಂತನನ್ನು ಭಜಿಸು" ಎಂದು ಭಗವಂತನು ಹೇಳಿರುವಂತೆ ಈ ಸಂಸಾರಸಾಗರದಿಂದ ಉದ್ಧಾರವಾಗುವ ಮಾರ್ಗವನ್ನು ಹುಡುಕಬೇಕು ಭಗವದ್ಭಕ್ತಿಯನ್ನು ಬೆಳೆಸಿಕೊಳ್ಳಬೇಕು. ಇದೇ ಪುರುಷಾರ್ಥ.

* * * * *

## 46. ಆರ್ತರ ಸ್ತೋತ್ರ

ತಂ ನಃ ಸಮಾದಿಶೋಪಾಯಂ ಯೇನ ತೇ ಚರಣಾಬ್ಜಯೋಃ।
ಸ್ಮೃತಿರ್ಯಥಾ ನ ವಿರಮೇತ್ ಅಪಿ ಸಂಸರತಾಮಿಹ ॥
ಕೃಷ್ಣಾಯ ವಾಸುದೇವಾಯ ಹರಯೇ ಪರಮಾತ್ಮನೇ।
ಪ್ರಣತಕ್ಲೇಶನಾಶಾಯ ಗೋವಿಂದಾಯ ನಮೋ ನಮಃ॥

- ಶ್ರೀಮದ್ಭಾಗವತ 10-73-15, 16

(ಪರಮಾತ್ಮ!) ನಾವು ಈ ಲೋಕದಲ್ಲಿ ಸಂಸಾರಿ ಗಳಾಗಿದ್ದರೂ ಭಗವಂತನಾದ ನಿನ್ನಪಾದಕಮಲದ ಸ್ಮರಣೆಯು ತಪ್ಪದೇ ಇರುವಂತೆ ಒಂದು ಉಪಾಯವನ್ನು (ನೀನೇ ನಮಗೆ) ಗೊತ್ತುಮಾಡು. (ನೀನು) ಕೃಷ್ಣನು ಎಂದರೆ ಪಾಪನಿವಾರಕನು, ಸರ್ವರಲ್ಲೂ ವಾಸಿಸಿರುವನು, ದುಃಖ ನಿವಾರಕನು, ಅಕಲ್ಪಿತನಾದ ಸ್ವರೂಪನು, ನಿನಗೆ ಬಾಗಿದವರ ಸರ್ವವಿಧ ಕ್ಲೇಶವನ್ನೂ ಪರಿಹರಿಸುವನು. ಗೋವಿಂದನಾದ ನಿನಗೆ ಮತ್ತೆ ಮತ್ತೆ ನಮಸ್ಕಾರವು.

**(ಗೋವಿಂದನೆಂದರೆ ಗೋವುಗಳನ್ನೂ, ಭೂಮಿಯನ್ನೂ ಕಾಪಾಡತಕ್ಕವನು)**

### ಆರ್ತ ಭಕ್ತರು

ಜರಾಸಂಧನೆಂಬ ರಾಜನು ಭಾರತದೇಶದ ಎಲ್ಲಾ ಕಡೆಯ ರಾಜರನ್ನೆಲ್ಲಾ ಸೆರೆಹಿಡಿದು ಅವರನ್ನೆಲ್ಲಾ ಒಂದಾನೊಂದು ಯಜ್ಞದಲ್ಲಿ ಯಜ್ಞಪಶುವನ್ನಾಗಿ ಬಲಿಕೊಡಬೇಕೆಂದಿದ್ದನು. ಒಟ್ಟು ನೂರು ಜನ ರಾಜಕುಮಾರರ ತಲೆಯನ್ನು ಕತ್ತರಿಸಿ ಯಜ್ಞಕುಂಡಕ್ಕೆ ಸಮರ್ಪಿಸಬೇಕೆಂದು ಸಂಕಲ್ಪಿಸಿ, ಅಷ್ಟು ಜನರನ್ನು ಸೆರೆಹಿಡಿದಮೇಲೆ ಅವನು ಯಜ್ಞದೀಕ್ಷಿತನಾಗಿ ಕುಳಿತಿದ್ದನು. ಇನ್ನೊಂದು ಕಡೆ ಧರ್ಮರಾಜನು ರಾಜಸೂಯ ಯಜ್ಞವನ್ನು ಮಾಡಬೇಕೆಂದು ಸಂಕಲ್ಪಿಸಿ ಶ್ರೀಕೃಷ್ಣಪರಮಾತ್ಮನನ್ನು ಯಜ್ಞದ ಸಮಾಲೋಚನೆಗಾಗಿ ಹೇಳಿ ಕಳಿಸಿದನು. ಆತನ ಆದೇಶದಂತೆ ಶ್ರೀಕೃಷ್ಣನು ಬಂದು ಧರ್ಮರಾಯನ ಸಂಕಲ್ಪವನ್ನು ತಿಳಿದು ಬಹಳ ಸಂತುಷ್ಟನಾದನು. ಶ್ರೀಕೃಷ್ಣನು ಧರ್ಮರಾಯನ ಹತ್ತಿರ ಸಂಪೂರ್ಣ ಭೂಮಂಡಲವನ್ನು ಜಯಿಸದೇ ರಾಜಸೂಯ ಯಾಗವನ್ನು ಮಾಡುವುದಕ್ಕೆ ಬರುವುದಿಲ್ಲ- ಎಂದು ತಿಳಿಸಿ ಜರಾಸಂಧನ

ಸಮಾಚಾರವನ್ನು ತಿಳಿಸುತ್ತಾನೆ. ಜರಾಸಂಧನು ಸೆರೆಹಿಡಿದಿದ್ದ ಎಲ್ಲಾ ರಾಜಕುಮಾರರೂ ಶ್ರೀಕೃಷ್ಣನ ಭಕ್ತರಾಗಿದ್ದರು. ಅವರನ್ನುದ್ಧಾರಮಾಡುವುದು ಮತ್ತು ಜರಾಸಂಧನ ವಧೆ ಮಾಡುವುದು ಎರಡೂ ಭಗವಂತನ ಮನಸ್ಸಿನಲ್ಲಿತ್ತು. ಹೀಗಾಗಿ ಆತನ ಸಂಹಾರಕ್ಕಾಗಿ ಭೀಮಾರ್ಜುನರೊಡನೆ ಮಗಧದೇಶಕ್ಕೆ ಶ್ರೀಕೃಷ್ಣನು ಹೋಗುತ್ತಾನೆ. ಆಗ ಜರಾಸಂಧನು ಮೇಲೆ ತಿಳಿಸಿದ ಯಜ್ಞಕ್ಕಾಗಿ ದೀಕ್ಷಿತನಾಗಿದ್ದನು. ಶ್ರೀಕೃಷ್ಣಭೀಮಾರ್ಜುನರು ರಾತ್ರಿಹೊತ್ತಿನಲ್ಲಿ ಜರಾಸಂಧನ ಅರಮನೆಯ ಹಿಂದುಗಡೆಯ ದ್ವಾರದಿಂದ ಒಳಕ್ಕೆ ಪ್ರವೇಶಿಸಿದರು. ಅನಂತರ ಜರಾಸಂಧನು ಅವರ ಆಗಮನೋದ್ದೇಶವನ್ನು ಕೇಳಲಾಗಿ, ಶ್ರೀಕೃಷ್ಣನು ನಿನ್ನೊಡನೆ ಯುದ್ಧಕ್ಕಾಗಿ ಬಂದಿರುವೆವು ಎನ್ನುತ್ತಾನೆ. ನೀವು ಹಿಂದುಗಡೆ ಬಾಗಿಲಿಂದ ಅರಮನೆಗೆ ಪ್ರವೇಶಿಸಿದ ಉದ್ದೇಶವೇನೆಂಬುದಕ್ಕೆ ಶತ್ರುಗಳ ಮನೆಗೆ ಹಾಗೆಯೇ ಬರತಕ್ಕದ್ದೆಂದು ಶ್ರೀಕೃಷ್ಣನು ಹೇಳುತ್ತಾನೆ. ಆಮೇಲೆ ತನ್ನೊಡನೆ ಯುದ್ಧಮಾಡಲು ಕೃಷ್ಣಾರ್ಜುನರು ತಕ್ಕವರಲ್ಲವೆಂದು ಆತನೇ ಹೇಳಿ ಭೀಮನೊಡನೆ ಮಲ್ಲಯುದ್ಧವು ಪ್ರಾರಂಭಮಾಡುತ್ತಾನೆ. ಕೊನೆಗೆ ಕೃಷ್ಣನ ಸಲಹೆಯಂತೆ ಜರಾಸಂಧನನ್ನು ಭೀಮನು ಸಾಯಿಸುತ್ತಾನೆ. ಅನಂತರ ಜರಾಸಂಧನಿಂದ ಬಂಧಿತರಾದ ನೂರು ಜನ ರಾಜಕುಮಾರರನ್ನು ಶ್ರೀಕೃಷ್ಣನು ಬಿಡಿಸುತ್ತಾನೆ. ಅವರಿಗೆಲ್ಲಾ ಪುನರ್ಜನ್ಮ ಬಂದಷ್ಟು ಸಂತೋಷವಾಗುತ್ತದೆ. ಅನಂತರ ಅವರೆಲ್ಲರೂ ಶ್ರೀಕೃಷ್ಣನನ್ನು ಸ್ತುತಿಸುತ್ತಾರೆ.

ಇಲ್ಲಿ ನಾವು ನಿಜವಾಗಿ ಭಗವಂತನು ಆರ್ತರನ್ನು ಯಾವ ರೀತಿ ಸಲಹುತ್ತಾನೆಂಬುದನ್ನು ಗಮನಿಸಬೇಕು. ಭಗವಂತನು ಗೀತೆಯಲ್ಲಿ ''ಚತುರ್ವಿಧಾ ಭಜನ್ತೇ ಮಾಂ ಜನಾಃ ಸುಕೃತಿನೋಽರ್ಜುನ'' ಎಂದು ನಾಲ್ಕುವಿಧದ ಭಕ್ತರನ್ನು ಗುರುತಿಸುತ್ತಾನೆ. ಸಾಮಾನ್ಯವಾಗಿ ಪ್ರತಿಯೊಬ್ಬನಿಗೂ ಜೀವನದಲ್ಲಿ ಒಂದಲ್ಲಾ ಒಂದು ದಿನ ಕಷ್ಟ ಪರಿಸ್ಥಿತಿ ಎಂಬುದು ಬಂದೇ ಬರುತ್ತದೆ. ಆದರಲ್ಲೂ ಆ ಕಷ್ಟದಿಂದ ಪಾರಾಗುವುದಕ್ಕೆ ಭಗವಂತನಿಂದಲ್ಲದೇ ಇನ್ನು ಯಾರಿಂದಲೂ ಸಾಧ್ಯವಿಲ್ಲ. ಇದೆಲ್ಲಾ ನಮಗೆಲ್ಲರಿಗೂ ಗೊತ್ತಿರುವ ಸಂಗತಿ. ಆದರೂ ಅದೇನು ಮಾಯೆಯೋ ತಿಳಿಯದು, ಕಷ್ಟಕಾಲ ಹೋದ ನಂತರ ಪುನಃ ನಾವೆಲ್ಲರೂ ಆ ಭಗವಂತನನ್ನು ಮರೆತುಬಿಡುವೆವು. ಇನ್ನೊಂದು ರೀತಿ ಹೇಳಬೇಕಾದರೆ ನಾವೆಲ್ಲಾ ಆತನ ವಿಷಯಕ್ಕೆ ಮಾಡುತ್ತಿರುವ ಕೃತಘ್ನತೆ ಇದು!

ಆದರೆ ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋದರೆ ಆ ಆರ್ತಭಕ್ತಿಯೂ ಸಹ

ನಿಜವಾದ ಭಕ್ತಿಯಲ್ಲ. ಏಕೆಂದರೆ ಈ ಭಕ್ತಿಯಲ್ಲಿ ಭಗವಂತನೇ ಕೇಂದ್ರವೆಂಬುದಿಲ್ಲ. ಕೇವಲ ಇಲ್ಲಿ ಭಗವಂತನು ಮಧ್ಯವರ್ತಿಮಾತ್ರವಾಗಿರುತ್ತಾನೆ. ಆದರೆ ಯಾವ ಭಕ್ತಿಯಲ್ಲಿ ಭಗವಂತನಿಗಿಂತ ಬೇರೆಯಾದದ್ದು ಬೇಕಿರುವುದಿಲ್ಲವೋ, ಯಾವ ಭಕ್ತಿಯು ನಿಜವಾಗಿ ಭಕ್ತಿಗಾಗಿಯೇ ಭಕ್ತಿಯಾಗಿರುವುದೋ, ಯಾವ ಭಕ್ತಿಯ ಪರಾಕಾಷ್ಠತೆಯಲ್ಲಿದ್ದಾಗ ಆನಂದಸಾಗರವಾದ ಪರಮಾತ್ಮನಲ್ಲಿಯೇ ನಾವೂ ಬೆರೆತುಹೋಗುವವೋ, ಯಾವ ಭಕ್ತಿಯ ಗರಿಮೆಯಲ್ಲಿ ಭಜಕ- ಭಕ್ತಿ- ಭಗವಂತನೆಂಬ ತ್ರಿಪುಟಿಯೇ ಇರುವುದಿಲ್ಲವೋ ಅದೇ ನಿಜವಾದ ಭಕ್ತಿ. ಅದನ್ನು ತೋರಿಸುವುದೇ ನಿಜವಾಗಿ ಭಾಗವತಗ್ರಂಥದ ಉದ್ದೇಶವು. ಭಕ್ತಿಶಾಸ್ತ್ರವೆಲ್ಲವೂ ಇದಕ್ಕಾಗಿಯೇ ಹೊರಟಿರುತ್ತದೆ. ಭಗವಂತನು ಯಾವ ರೀತಿ ಜ್ಞಾನ ಸ್ವರೂಪನೋ ಅದೇ ರೀತಿ ಆನಂದಸ್ವರೂಪನೂ ಆಗಿರುತ್ತಾನೆ. ಆತನ ಜ್ಞಾನವು (ಅರಿವು) ಅಂತಃಕರಣದಲ್ಲಿ ಇಂದ್ರಿಯಗಳಲ್ಲಿ ಹೇಗೆ ತೋರಿಕೊಳ್ಳುತ್ತದೋ ಹಾಗೆಯೇ ಆತನ ಆನಂದವೂ ಪ್ರೇಮವೃತ್ತಿಯಾಗಿ ಅದೇ ಅಂತಃಕರಣವೇ ಮುಂತಾದದ್ದರಲ್ಲಿ ತೋರಿಕೊಳ್ಳುತ್ತದೆ. ಹೇಗೆ ವೇದಾಂತಚಿಂತಕರು ಸರಿಯಾದ ವಿಚಾರಕ್ರಮದಿಂದ ಜ್ಞಾನಸ್ವರೂಪವಾದ ಬ್ರಹ್ಮವನ್ನೇ ತಿಳಿದು ಸೇರುತ್ತಾರೋ ಅದೇ ರೀತಿ ಭಕ್ತರು ಸಮಸ್ತದಲ್ಲೂ ಪ್ರೇಮಭಾವವನ್ನು ಹೊಂದಿ ಇಡೀ ಜಗತ್ತನ್ನೇ ಪ್ರೇಮಮಯನಾದ ಭಗವಂತನ ರೂಪದಿಂದ ಕಾಣುತ್ತಾ ಆನಂದರೂಪಬ್ರಹ್ಮದಲ್ಲಿ ಒಂದಾಗುವರು. ಜ್ಞಾನಿಗಳು- ''ನಾನೆಂಬುದಿಲ್ಲ, ಅದು ಕೇವಲ ಹುಸಿತೋರಿಕೆ, ನಿಜವಾಗಿ ಅದರ ಪರಮಾರ್ಥವು ಪರಬ್ರಹ್ಮವೇ''- ಎಂದು ತಿಳಿಯುವಂತೆ, ಭಕ್ತರೂ- ''ನಾನೂ ನಿನ್ನವನೇ, ನೀನೇ ನಿಜವಾಗಿ ಎಲ್ಲವೂ ಆಗಿರುವೆ, ನಿನ್ನ ಹೊರತು ಈ ಜಗತ್ತಿನಲ್ಲಿ ಬೇರೆ ಯಾವುದೂ ಇಲ್ಲವೇ ಇಲ್ಲ''- ಎಂದು ಭಜಿಸುತ್ತಾರೆ. ಒಟ್ಟಿನ ಮೇಲೆ ಇಬ್ಬರ ಅಭಿಪ್ರಾಯವೂ ಒಂದೇ ಆಯಿತು. ಪ್ರೇಮವಿಲ್ಲದ ಜ್ಞಾನವಿಲ್ಲ, ವಿವೇಕವಿಲ್ಲದ ಭಕ್ತಿ ಇಲ್ಲ. ಪ್ರೇಮವಿಲ್ಲದ ಜ್ಞಾನ ಶುಷ್ಕಜ್ಞಾನವಾಗುತ್ತದೆ. ವಿವೇಕವಿಲ್ಲದ ಭಕ್ತಿ, ಮೂಢಭಕ್ತಿಯಾಗುತ್ತದೆ. ಆದ್ದರಿಂದ ಎರಡರಲ್ಲೂ ಎರಡೂ ಇದ್ದೇ ಇರುತ್ತದೆ. ಹೀಗಿರುವುದರಿಂದ ಭಕ್ತಿ ಹೆಚ್ಚೋ? ಜ್ಞಾನ ಹೆಚ್ಚೋ? ಎಂದು ಕೇಳುವವರು ನಿಜವಾಗಿ ಭಕ್ತಿಜ್ಞಾನದ ಸ್ವರೂಪವನ್ನರಿಯದವರೆಂದೇ ಹೇಳಬೇಕಾಗುತ್ತದೆ.

ಕೊನೆಯಲ್ಲಿ ಮತ್ತೊಮ್ಮೆ ಆ ರಾಜಕುಮಾರರು ಸ್ತುತಿಸಿರುವ ಶ್ಲೋಕದಲ್ಲಿ ಒಂದು ಶ್ಲೋಕವನ್ನು ವಿಚಾರಮಾಡೋಣ. ಕೃಷ್ಣಾಯ ವಾಸುದೇವಾಯ ಹರಯೇ ಪರಮಾತ್ಮನೇ! ಪ್ರಣತಕ್ಲೇಶನಾಶಾಯ ಗೋವಿಂದಾಯ ನಮೋ ನಮಃ ॥ ಈ ಒಂದು

ಶ್ಲೋಕದಿಂದ ಭಗವಂತನ ಆರು ಗುಣಗಳನ್ನು ಸ್ತುತಿಸಿದೆ. ಆದ್ದರಿಂದ ಒಂದು ಸಲ ಈ ಶ್ಲೋಕವನ್ನು ಪ್ರೇಮಪೂರ್ವಕವಾಗಿ ಹೇಳಿದರೆ ಆರು ನಾಮದ ಜಪವನ್ನು ಮಾಡಿದಂತಾಗುತ್ತದೆ. ದಿನಕ್ಕೆ ನೂರಾರು ಬಾರಿ ಹೇಳುವುದರಿಂದ ಖಂಡಿತವಾಗಿ ಭಗವದ್ಭಕ್ತಿಯು ಬೇರೂರಿದ್ದಾಗಿ ಜನ್ಮಸಾರ್ಥಕವಾಗುತ್ತದೆ, ಭಗವದ್ಭಕ್ತಿ ಎಂಬುದು ಕೃತ್ರಿಮವಾದದ್ದೇನಲ್ಲ. ವಿಷಯಾಸಕ್ತಿಯಿಂದ ಎಂದರೆ ಭೋಗವಸ್ತುವಿನ ಮೇಲಿರುವ ಪ್ರೇಮದಿಂದ ಅದು ಮರೆಯಾಗಿರುತ್ತದೆ. ಆದ್ದರಿಂದ ನಾವು ಮೊದಲು ಭಕ್ತಿಯು ಬೆಳೆಯುವುದಕ್ಕೆ ಏನು ಮಾಡಬೇಕೆಂದರೆ ಪ್ರಾಪಂಚಿಕವಸ್ತುವಿನ ಮೇಲಿನ ಪ್ರೇಮವನ್ನು ಕಡಿಮೆ ಮಾಡುತ್ತಾ ಹೋಗಬೇಕು. ಆಗ ಅದು (ಮನಸ್ಸು) ಸಹಜವಾಗಿ ಪರಮಾತ್ಮನ ಕಡೆಗೆ ತಿರುಗುವುದಕ್ಕೆ ಮೊದಲು ಮಾಡುತ್ತದೆ. ಆದರೆ ಬರೀ ವಸ್ತುವಿನ ಮೇಲಿನ ಪ್ರೇಮವನ್ನು ಮಾತ್ರ ಕಡಿಮೆಮಾಡುವುದು ಎಂದರೆ ಅದಕ್ಕೆ (ಮನಸ್ಸಿಗೆ) ಕಷ್ಟವಾಗುತ್ತದೆ. ಏಕೆಂದರೆ ಅದಕ್ಕೆ ಏನಾದರೊಂದು ಅವಲಂಬನೆ ಬೇಕೇಬೇಕಾಗಿರುತ್ತದೆ. ಆದ್ದರಿಂದಲೇ ಹಿರಿಯವರು ಮತ್ತು ಪುರಾಣಕಾರರು ಭಗವದ್ಭಕ್ತಿಗೆ ಅನುಕೂಲವಾಗುವಂತೆ ಭಗವಂತನ ಕಥಾಶ್ರವಣ, ಭಜನೆ, ಜಪ, ನಾಮಸಂಕೀರ್ತನೆ ಇತ್ಯಾದಿಗಳನ್ನು ಗೊತ್ತುಮಾಡಿದ್ದಾರೆ. ನಾವು ಪ್ರತಿನಿತ್ಯ ಅವುಗಳನ್ನು ನಡೆಸುವುದರಿಂದ ಖಂಡಿತವಾಗಿಯೂ ನಮಗೂ ಅರಿಯದಂತೆ ಭಕ್ತಿಯು ಬೆಳೆಯುತ್ತಾ ಹೋಗುವದು. ಭಕ್ತಿಯು ಬೆಳೆದಂತೆ ಸ್ವಾಭಾವಿಕವಾದ ವಿಷಯಾಸಕ್ತಿಯೂ ತಗ್ಗುತ್ತಾ ಹೋಗುವುದು. ಅನಂತರ ಭಗವದ್ದರುಶನದ ಭಾಗ್ಯವು ನಮ್ಮದಾಗುವುದು. ಅಂಥಹ ಭಾಗ್ಯವನ್ನು ಭಗವಂತನು ನಮಗೆಲ್ಲರಿಗೂ ಕರುಣಿಸಲಿ ಎಂದು ನಾವುಗಳೆಲ್ಲರೂ ಅಂಗಲಾಚಿ ಆತನನ್ನು ಬೇಡೋಣ.

* * * * *

## 47. ಸುದಾಮನ ಪ್ರಾರ್ಥನೆ

ತಸ್ಯೈವ ಮೇ ಸೌಹೃದಸಖ್ಯಮೈತ್ರೀ
ದಾಸ್ಯಂ ಪುನರ್ಜನ್ಮನಿ ಜನ್ಮನಿ ಸ್ಯಾತ್ ।
ಮಹಾನುಭಾವೇನ ಗುಣಾಲಯೇನ
ವಿಷಜ್ಜತಸ್ತತ್ಪುರುಷಪ್ರಸಂಗಃ ॥

- ಶ್ರೀಮದ್ಭಾಗವತ 10-81-36

ಜನ್ಮಜನ್ಮಾಂತರಗಳಲ್ಲೂ ಆ ಶ್ರೀಕೃಷ್ಣ ಭಗವಂತನಲ್ಲಿಯೇ ನನಗೆ ಸುಹೃದ್ಭಾವವೂ ಸ್ನೇಹವೂ ವಿಶ್ವಾಸವೂ (ಹಾಗೆಯೇ) ಸೇವಾಭಾಗ್ಯವೂ ಉಂಟಾಗುತ್ತಿರಲಿ. ಆ ಮಹಾನುಭಾವನಾದ ಸಕಲ(ಕಲ್ಯಾಣ)ಗುಣಗಳಿಗೂ ಆಶ್ರಯನಾದ (ಶ್ರೀಕೃಷ್ಣನೊಡನೆಯೂ), ಆಗಾಗ್ಗೆ ವಿಷಾಯಸಕ್ತನಾಗುತ್ತಿರುವ ನನಗೆ ಆ ಪರಮಾತ್ಮನ ಭಕ್ತರೊಡನೆಯೂ ಸಂಗವುಂಟಾಗುತ್ತಿರಲಿ.

**[ನಿಜವಾಗಿ ಭಕ್ತನಾದವನು ಭಗವಂತನ ಹತ್ತಿರ ಬೇಡ ಬೇಕಾದದ್ದೇ ಇದು. ನಮಗೆ ನಮ್ಮ ನಿತ್ಯಜೀವನದಲ್ಲಿ ತುಂಬಾ ಆಗಿಹೋಗುವಂಥವುಗಳಿರುತ್ತದೆ. ಮಾನಾಪಮಾನಗಳೂ ಆಗುತ್ತಿರುತ್ತದೆ. ಇಂಥ ಸಂದರ್ಭಗಳಲ್ಲಿ ಭಗವಂತನನ್ನು ಮರೆಯುವವರೇ ಹೆಚ್ಚು ಜನರು.]**

### ಭಕ್ತಿಯ ಶುದ್ಧಮಾರ್ಗ

ಶ್ರೀಕೃಷ್ಣನು ಜರಾಸಂಧನು ಸೆರೆಯಲ್ಲಿದ್ದ ರಾಜರನ್ನೆಲ್ಲಾ ಬಿಡಿಸಿ ಅವರನ್ನೆಲ್ಲಾ ತನ್ನ ಭಕ್ತರನ್ನಾಗಿ ಮಾಡಿಕೊಂಡು ಅವರಿಗೆ ಧರ್ಮರಾಯನ ರಾಜಸೂಯದಲ್ಲಿ ಸಹಕರಿಸುವಂತೆ ಹೇಳಿ ತನ್ನ ಪುರಕ್ಕೆ ತೆರಳುತ್ತಾನೆ. ಪುನಃ ಧರ್ಮರಾಯನ ರಾಜಸೂಯ ಸಂದರ್ಭದಲ್ಲಿ ಬಂದು ಅಲ್ಲಿ ಅಗ್ರಪೂಜಾ ಸಂದರ್ಭದಲ್ಲಿ ಶ್ರೀಕೃಷ್ಣನಿಗೆ ಕೊಟ್ಟ ಪೂಜೆಯನ್ನು ಸಹಿಸದೇ ಇದ್ದ ಶಿಶುಪಾಲನೊಂದಿಗೆ ವಾಗ್ಯುದ್ಧವನ್ನಾರಂಭಿಸಿ ಅನಂತರ ತನ್ನ ಚಕ್ರವನ್ನು ಸ್ಮರಿಸಿ ಆತನನ್ನು ಸಂಹಾರ ಮಾಡುತ್ತಾನೆ. ಅನಂತರ ರಾಜಸೂಯಯಾಗವು ನಿರ್ವಿಘ್ನವಾಗಿ ನೆರವೇರುತ್ತದೆ. ಆಮೇಲೆ ಶ್ರೀಕೃಷ್ಣನು ಸಾಲ್ವನನ್ನು ಕೊಂದು ಆತನ ವಿಮಾನವನ್ನು ಭಗ್ನಗೊಳಿಸುತ್ತಾನೆ. ತರುವಾಯ ಶ್ರೀಕೃಷ್ಣನು

ದಂತವಕ್ರನನ್ನೂ ಅವನ ತಮ್ಮನಾದ ವಿದೂರಥನನ್ನೂ ಸಂಹಾರಮಾಡುತ್ತಾನೆ. ಇನ್ನೊಂದು ಕಡೆ ಬಲರಾಮನು ಸೂತಪುರಾಣಿಕನನ್ನು ಕೊಂದು ಅದಕ್ಕಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುತ್ತಾನೆ. ಆಮೇಲೆ ಪ್ರಕೃತವಾದ ಕುಚೇಲೋಪಾಖ್ಯಾನವು ಬರುತ್ತದೆ. ಆ ಕುಚೇಲನಿಗೆ ಸುದಾಮನೆಂದೂ ಹೆಸರು. ಆತನು ಕಡುಬಡವನಾದ ಬ್ರಾಹ್ಮಣನಾಗಿದ್ದು ಉಡುವುದಕ್ಕೂ ಒಳ್ಳೆ ಬಟ್ಟೆ ಇಲ್ಲದೇ ಹರಕು ಬಟ್ಟೆಯನ್ನೇ ಉಡುತ್ತಿದ್ದರಿಂದ ಆತನಿಗೆ ಕುಚೇಲನೆಂಬ ಹೆಸರು ಬಂದಿರುತ್ತದೆ.

ಆತನೂ ಶ್ರೀಕೃಷ್ಣನೂ ಇಬ್ಬರು ಸಾಂದೀಪಿನಿಮುನಿಯ ಹತ್ತಿರ ವಿದ್ಯಾಭ್ಯಾಸವನ್ನು ಮಾಡುತ್ತಿದ್ದರು. ಶ್ರೀಕೃಷ್ಣನು ಅರವತ್ತನಾಲ್ಕೇ ದಿನಕ್ಕೆ ಸಮಸ್ತ ವೇದಗಳೂ ವೇದಾಂಗಗಳು ಸೇರಿ ಅರವತ್ತನಾಲ್ಕು ವಿದ್ಯೆಗಳಲ್ಲೂ ಪಾರಂಗತನಾಗುತ್ತಾನೆ. ಒಂದು ದಿನ ಶ್ರೀಕೃಷ್ಣ ಮತ್ತು ಸುದಾಮರು ಗುರುಕುಲದಲ್ಲಿದ್ದಾಗ ಗುರುಪತ್ನಿಯ ಆದೇಶದಂತೆ ಕಾಡಿಗೆ ಸೌದೆಯನ್ನು ತರಲು ಹೋಗಿರುತ್ತಾರೆ. ಆಗ ಸಂಜೆಯೂ ಮಳೆಗಾಲವೂ ಆದ್ದರಿಂದ ವಿಪರೀತವಾಗಿ ಮಳೆ ಬಂದು ಅವರಿಗೂ ಹಿಂದಿರುಗಿ ಬರುವುದಕ್ಕೇ ಆಗದಷ್ಟು ಮಳೆ ಬಂದು ಹಳ್ಳ ಕಾಲುವೆಗಳೆಲ್ಲಾ ತುಂಬಿ ತುಂಬಿ ಹರಿಯುತ್ತಿರುವುದರಿಂದ ಕಾಡಿನಲ್ಲೇ ಒಂದು ರಾತ್ರೆ ಕಳೆಯುವಂತಾಯಿತು. ಮಾರನೆ ದಿನ ಗುರುಗಳೇ (ಸಾಂದೀಪಿನಿಮುನಿಗಳೇ) ಅವರಿಬ್ಬರನ್ನೂ ಹುಡುಕಿಕೊಂಡು ಕಾಡಿಗೆ ಹೋದರು. ಅವರಿಬ್ಬರೂ ಸೌದೆಯನ್ನು ತೆಗೆದುಕೊಂಡು ಬರುವುದಕ್ಕಾಗಿ ಒದ್ದಾಡುತ್ತಿರುವುದನ್ನು ಕಂಡು ಬಹಳ ಖಿನ್ನರಾಗಿ ಅವರು ಅಲ್ಲೇ ಅವರಿಗೆ ಎಲ್ಲಾ ವಿದ್ಯೆಗಳನ್ನೂ ಅನುಗ್ರಹಮಾಡುತ್ತಾರೆ. ಅವರ ಗುರುಭಕ್ತಿಯನ್ನು ಕಂಡು ತುಂಬಾ ಮೆಚ್ಚುಕೊಳ್ಳುತ್ತಾರೆ. ಇದೆಲ್ಲವನ್ನೂ ಶ್ರೀಕೃಷ್ಣನೇ ಕುಚೇಲನಿಗೆ ಜ್ಞಾಪಕಮಾಡಿಕೊಡುತ್ತಾನೆ. ಅದಲ್ಲದೇ ಆತನನ್ನು ತನ್ನ ಅರಮನೆಯಲ್ಲೇ ಕೆಲವು ದಿನಗಳ ಉಳಿಸಿಕೊಂಡು ರುಕ್ಮಿಣಿಯೊಡನೆ ಎಲ್ಲಾ ಆದರೋಪಚಾರವನ್ನು ಮಾಡುತ್ತಾನೆ. ಇದನ್ನೆಲ್ಲಾ ಕಾಣುತ್ತಿದ್ದ ಸುದಾಮನು ದಿಗ್ಭ್ರಾಂತನಾಗುತ್ತಾನೆ.

ಬರುವಾಗ ಸುದಾಮನು ಶ್ರೀಕೃಷ್ಣನಿಗಾಗಿ ಅವಲಕ್ಕಿಯನ್ನು ತನ್ನ ಪಂಚೆಯ ತುದಿಗೆ ಗಂಟುಹಾಕಿಕೊಂಡು ತಂದಿದ್ದನು. ''ಇದು ಕೃಷ್ಣನಿಗೆ ತುಂಬಾ ಇಷ್ಟವಾದದ್ದು, ಅವನಿಗೆ ಕೊಡುತ್ತೇನೆಂದು'' ಕೊಂಡಿದ್ದನು. ಆದರೆ ಶ್ರೀಕೃಷ್ಣನ ವೈಭವವನ್ನು ಕಂಡು ಅದನ್ನು ಕೊಡಲು ನಾಚಿಕೆಪಡುತ್ತಾನೆ. ಆದರೆ ಸರ್ವಾಂತರ್ಯಾಮಿಯಾದ ಶ್ರೀಕೃಷ್ಣನೇ ನನಗಾಗಿ

ಏನನ್ನು ತಂದಿದ್ದೀಯಾ? ಎಂದು ತಾನೇ ಕೇಳಿ ಅದನ್ನು ಕೊಡಲು ನಾಚಿಕೆಪಟ್ಟುಕೊಂಡಾಗ ತಾನೇ ಆತನ ಪಂಚೆಯಿಂದ ಗಂಟನ್ನು ಬಿಚ್ಚಿಕೊಂಡು ಅದನ್ನು ತಿನ್ನುತ್ತಾನೆ. ಕೆಲವು ದಿನದ ನಂತರ ಮನೆಯ ಕಡೆಗೆ ಹೋಗುವ ದಿನ ಬಂದರೂ ತಾನು ಬಂದ ಉದ್ದೇಶವನ್ನು ಹೇಳುವುದೇ ಇಲ್ಲ. ಶ್ರೀಕೃಷ್ಣನೇ ಅದನ್ನು ಅರ್ಥಮಾಡಿಕೊಂಡು ಅವನಿಗೆ ಸಕಲ ಐಶ್ವರ್ಯವನ್ನು ಅನುಗ್ರಹಿಸುತ್ತಾನೆ. ಕುಚೇಲನು ದಾರಿಯಲ್ಲಿ ನಡೆಯುವಾಗ ಯೋಚಿಸಿದ್ದೇನೆಂದರೆ- ಶೀಕೃಷ್ಣನು ಸರ್ವಪ್ರದನಾದರೂ ಭಕ್ತನು ಭಾಗ್ಯವಂತನಾದಲ್ಲಿ ಆದರ ಮದದಿಂದ ಭಗವಂತನನ್ನು ಮರೆತಾನು! ಐಶ್ವರ್ಯವನ್ನು ಕೊಡಲಿಲ್ಲ ಎಂದುಕೊಂಡು ಸಮಾಧಾನದಿಂದಲೇ ಶ್ರೀಕೃಷ್ಣನ ಆತಿಥ್ಯಗಳನ್ನು ಸ್ಮರಿಸುತ್ತಾ ಶ್ರೀಕೃಷ್ಣನ ಗುಣಗಾನ ಮಾಡುತ್ತಾ ಮನೆಯ ಹತ್ತಿರಕ್ಕೆ ಬರುತ್ತಾನೆ. ಆದರೆ ಅವನು ಅಲ್ಲಿಗೆ ಬಂದನಂತರ ಕಂಡ ದೃಶ್ಯವೇ ಬೇರೆ ತರಹವಾಗಿತ್ತು. ಅವನಿಗೆ ತನ್ನ ಮನೆಯೇ ಗುರ್ತಾಗಲಿಲ್ಲ. ಅದು ಅರಮನೆಯಾಗಿತ್ತು. ಸಕಲ ವೈಭವೋಪೇತ ವಾಗಿತ್ತು. ಇದೆಲ್ಲಾ ಆ ಮಹಾಮಹಿಮನ ವಿಭೂತಿ! ಅನುಗ್ರಹವೇ ಎಂದು ಕೊಂಡನು ಕುಚೇಲನು.

ಪ್ರಕೃತ, ಈ ಕಥೆಯಿಂದ ನಾವು ಅರಿಯಬೇಕಾದದ್ದೇನೆಂದರೆ- ಆ ಸುದಾಮನು ಬಯಸಿದ್ದೇನೆಂದರೆ ಭೌತಿಕವಾಗಿ ಎಷ್ಟೇ ಸಂಪತ್ತಿರಲಿ, ಅಥವಾ ಎಂತಹ ಕಷ್ಟವೇ ಇರಲಿ, ಶ್ರೀಕೃಷ್ಣಪರಮಾತ್ಮನ ಸ್ಮರಣೆ ನನಗೆ ನಿರಂತರವಾಗಿದ್ದುತಪ್ಪದೇ ಹೋಗಲಿ. ಸದಾ ಆತನ ಭಕ್ತರ ಸಂಗವನ್ನು ಕೊಟ್ಟು ಕಾಪಾಡುತ್ತಿರಲಿ ಎಂಬುದನ್ನು ಮನಃಪೂರ್ವಕವಾಗಿ ಪ್ರತಿನಿತ್ಯ ನಾವು ಬೇಡುತ್ತಿರಬೇಕು. ಆ ಮಹಾಮಹಿಮನ ಗುಣಗಣಗಳು ನಮ್ಮ ಮನಸ್ಸನ್ನು ಅಪಹರಿಸುವಂತೆ ಇರಬೇಕು. ಅದರ ಹೊರತು ನಮಗೆ ಇನ್ಯಾವ ಚಿಂತೆಯು ಬರಬಾರದು. ನಾವು ಎಷ್ಟೇ ಸತ್ ಗ್ರಂಥವನ್ನು ಓದಿದ್ದರೂ ಹಿರಿಯರ ಮತ್ತು ಮಹಾತ್ಮರ ಮಾತನ್ನು ಕೇಳುತ್ತಲೇ ಇದ್ದರೂ ತತ್ಕಾಲಕ್ಕೆ ಅದರಲ್ಲೇ ಇದ್ದು ಬಿಡೋಣ ಎನ್ನುವಷ್ಟು ಮಟ್ಟಿಗೆ ಅನ್ನಿಸುತ್ತಿದ್ದರೂ ಮತ್ತೆ ಯಥಾಪ್ರಕಾರ ನಮ್ಮ ಮನಸ್ಸು ಪ್ರಕೃತಿಯೆಂಬ ಮಹಾಮಾಯೆಯ ನೋಟಕ್ಕೆ ಸಿಲುಕಿ ಅದರ ಚಿಂತೆಯಲ್ಲೇ ಮುಳುಗಿ ಭಗವಂತನ ಚಿಂತೆಯನ್ನೂ ಮರೆತೆ ಬಿಡುತ್ತದೆ. ನಾವು ಅದಕ್ಕೆ ಎಷ್ಟು ಬುದ್ಧಿವಾದವನ್ನು ಹೇಳಿದರೂ ಅದು ಕೇಳುವುದೇ ಇಲ್ಲ. ತತ್ಕಾಲಕ್ಕೆ ಒಪ್ಪಿದಂತಾಗಿ ಭಗವಂತನ ಭಜನೆ, ನಾಮಸ್ಮರಣೆ, ಜಪ, ಪಾರಾಯಣಾದಿಗಳಿಗೆ

ಒಲಿದಂತೆ ಕಂಡಬಂದರೂ ಬಲು ಬೇಗನೆ ಅದಕ್ಕೆ ಅದರಲ್ಲಿ ಬೇಸರವಾಗಿಬಿಡುತ್ತದೆ. ಕೋಟಿ ಕೋಟಿ ಜನ್ಮಾಂತರಗಳ ದುರ್ವಾಸನೆಯಿಂದ ಅದಕ್ಕೆ ವಿಷಯಚಿಂತನೆ ಎಂಬ ಕಲಾಯವು ಬಳಿದುಕೊಂಡಿರುವುದರಿಂದ ನಮ್ಮಂತಹ ಪ್ರಾಕೃತಜನರಿಗೆ ಭಗವಚ್ಚಿಂತನೆ ಸ್ಮರಣೆ ಎಂದರೆ ಬಲುಕಷ್ಟವಾಗಿ ತೋರುತ್ತದೆ. ಆದ್ದರಿಂದ ಅದನ್ನು ಪಡೆಯುವುದಕ್ಕೂ ಅವನನ್ನೇ ಮೊರೆ ಹೊಕ್ಕಬೇಕು. ''ರಾಮ ರಾಮ ಹರೇ ಹರೇ ರಘುರಾಮ ರಾಮ ಹರೇ ಹರೇ। ಭಕ್ತಿಮೇವ ಪದಾಂಬುಜೇ ತವ ದೇಹಿ ರಾಮ ಹರೇ ಹರೇ''॥ ಎಂದು ಮತ್ತೆ ಮತ್ತೆ ಕೇಳಿಕೊಳ್ಳುತ್ತಲೇ ಇರಬೇಕು. ಯಾವುದೇ ಕಾರಣಕ್ಕೂ ಎದೆಗುಂದಬಾರದು, ಹಿಡಿದ ಮಾರ್ಗವನ್ನು ಕೈಬಿಡಬಾರದು. ಆತನಲ್ಲದೇ ನಮಗೆ ಈ ಸಂಸಾರದಲ್ಲಿ ಯಾರು ತಾನೇ! ಸಹಾಯಕರಿದ್ದಾರೆ! ಆತನೇ ಅಲ್ಲವೆ ನಮ್ಮನ್ನುದ್ಧರಿಸಬೇಕು. ನೋ ಸೋದರೋ ನ ಜನಕೋ ಜನನೀ ನ ಜಾಯಾ। ನೈವಾತ್ಮಜೋ ನ ಚ ಕುಲಂ ವಿಪುಲಂ ಬಲಂ ವಾ । ಸಂದೃಶ್ಯತೇ ಕಿಲ ನ ಕೋಪಿ ಸಹಾಯಕೋ ಮೇ । ತಸ್ಮಾತ್ತ್ವಮೇವ ಶರಣಂ ಮಮ ಶಂಖಪಾಣೇ॥ ಎಂದು ಪ್ರೇಮಪೂರ್ವಕವಾಗಿ ಹೇಳಿಕೊಳ್ಳುತ್ತಿರಬೇಕು. ಈ ತರಹದ ನಿರಂತರ ಪ್ರೇಮವು ಭಗವಂತನಲ್ಲಿ ಆರು ತಿಂಗಳಿದ್ದರೆ ಸಾಕು! ನಾವು ಉದ್ಧಾರರಾಗುತ್ತೇವೆ. ಭಗವಂತನ ಸಗುಣ ಸಾಕಾರರೂಪ ಮೊದಲು ನಮಗೆ ತೋರಿ ಅನಂತರ ಆತನ ಪರತತ್ತ್ವವೂ ಅನುಭವ ವೇದ್ಯವಾಗುತ್ತದೆ ಎಂದು ಎಲ್ಲಾ ಸಂತರೂ ಹೇಳಿರುತ್ತಾರೆ. ಇದನ್ನು ನಾವು ಮಾಡಿಯೇ ನೋಡಬೇಕೇ ಹೊರತು, ಇದು ಹೇಗಾದೀತು? ಸಾಧ್ಯವೇ ಇಲ್ಲವಲ್ಲ! ಎಂದು ತರ್ಕವನ್ನು ಮಾಡುವುದಕ್ಕೆ ಹೋಗಬಾರದು. ಶ್ರದ್ಧೆಯು ಬಹಳ ಮುಖ್ಯ. ಖಂಡಿತಾ ಆಗಿಯೇ ಆಗುತ್ತದೆ. ಅಂತಹ ಸುಯೋಗವು ನಮ್ಮದಾಗುವಂತೆ ಸರ್ವಾತ್ಮನಾದ ಭಗವಂತನು ನಮಗೆ ಅನುಗ್ರಹಿಸಲಿ.

* * * * *

## 48. ಸತ್ಸಂಗ

ನ ಹ್ಯಮ್ಮಯಾನಿ ತೀರ್ಥಾನಿ ನ ದೇವಾ ಮೃಚ್ಛಿಲಾದಯಃ।
ತೇ ಪುನನ್ತ್ಯುರುಕಾಲೇನ ದರ್ಶನಾದೇವ ಸಾಧವಃ॥
ನಾಗ್ನಿರ್ನ ಸೂರ್ಯೋ ನ ಚ ಚಂದ್ರತಾರಕಾಃ
ನ ಭೂರ್ಜಲಂ ಖಂ ಶ್ವಸನೋಽಥ ವಾಙ್ಮನಃ।
ಉಪಾಸಿತಾ ಭೇದಕೃತೋ ಹರನ್ತ್ಯಘಂ
ವಿಪಶ್ಚಿತೋ ಘ್ನನ್ತಿ ಮುಹೂರ್ತಸೇವಯಾ ॥

– ಶ್ರೀಮದ್ಭಾಗವತ 10-49-11, 12

ತೀರ್ಥಗಳು ಎಂದರೆ (ಬರೀ) ನೀರಿನ ಜಲಾಶಯ ಎಂದಾಗಲೀ, ದೇವತೆಗಳು (ಎಂದರೆ) ಕಲ್ಲುಮಣ್ಣಿನಗೊಂಬೆಗಳು) ಎಂದಾಗಲೀ ಅರ್ಥವಲ್ಲ. ಅವೂ (ಆರಾಧಿಸಿದರೆ) ದೀರ್ಘಕಾಲದ ನಂತರ ಪವಿತ್ರಗೊಳಿಸುತ್ತವೆ. ಆದರೆ ಸತ್ಪುರುಷರು ದರ್ಶನಮಾತ್ರದಿಂದಲೇ ಪವಿತ್ರಗೊಳಿಸುತ್ತಾರೆ. ಅಗ್ನ್ಯಾದಿಗಳು ಭೇದಬುದ್ಧಿಯಿಂದಾದ ಪಾಪವನ್ನು (ಬಹಳ ಕಾಲ) ಉಪಾಸನೆಮಾಡಿದ ಮೇಲೆ ಪರಿಹರಿಸುವವರಾಗುತ್ತಾರೆ. (ಆದರೆ) ಜ್ಞಾನಿಗಳು- ಒಂದು ಮುಹೂರ್ತಕಾಲ ನಾವು ಮಾಡುವ ಸೇವೆಯಿಂದಲೇ ನಮ್ಮ ಪಾಪವನ್ನು ಪರಿಹರಿಸುವವರಾಗುತ್ತಾರೆ!

**(ನೀರುಗಳಿಗೆ ತೀರ್ಥ ಎಂಬ ಹೆಸರು ಬಂದಿರುವದೇ ಜ್ಞಾನಿಗಳಾದ ಋಷಿಮುನಿಗಳು, ಸಾಧುಸಂತರಿಂದ. ಅಂತಹ ಜ್ಞಾನಿಗಳ ಪರಿಚರ್ಯೆಯನ್ನು ಮಾಡಿ ಕೃತಾರ್ಥರಾಗಬೇಕು.)**

### ಮಹಾತ್ಮರ ಸಹವಾಸ

ಸತ್ಪುರುಷರ ಸಹವಾಸವನ್ನು ಎಲ್ಲಾ ಮತದವರೂ ಕೊಂಡಾಡುತ್ತಾರೆ. ಆದರಲ್ಲಿ ಕ್ರಿಶ್ಚಿಯನ್, ಮುಸಲ್ಮಾನ್, ಫಾರ್ಸಿ, ಹಿಂದೂ ಎಂಬ ಭೇದವಿಲ್ಲ. ಈ ಎಲ್ಲಾ ಮತದವರೂ ಸಜ್ಜನರ ಸಹವಾಸದಿಂದಲೇ ಮನುಷ್ಯನು ಸಚ್ಚಾರಿತ್ರ್ಯದವನಾಗುತ್ತಾನೆ ಎಂದು ಹೇಳುತ್ತಾರೆ. ಪ್ರತಿಯೊಬ್ಬ ಮನುಷ್ಯನೂ ಹುಟ್ಟುವಾಗ ಪ್ರಾಣಿಯಂತೆ ಹುಟ್ಟುತ್ತಾನೆ, ಹಾಗೂ ಅವುಗಳಂತೆ ಬೆಳೆಯುತ್ತಾನೆ. ಆದರೆ ಮನುಷ್ಯನಿಗೆ ಪ್ರಾಣಿಗಳಿಗಿರುವಷ್ಟೇ ಸ್ವಭಾವವಲ್ಲ, ಆತ ಆಲೋಚಿಸುತ್ತಾನೆ, ಆದರಂತೆ

ಮಾತನಾಡುತ್ತಾನೆ, ಹಾಗೆಯೇ ನಡೆದುಕೊಳ್ಳುತ್ತಾನೆ. ಓದು ಬರಹವನ್ನು ಕಲಿತವನಾಗುತ್ತಾನೆ. ಬುದ್ಧಿಶಕ್ತಿಯಲ್ಲಿ ಪ್ರಾಣಿಗಳಿಗಿಂತಲೂ ನೂರುಪಟ್ಟು ಅಥವಾ ಸಾವಿರಪಟ್ಟು ಹೆಚ್ಚಿನವನೆಂದರೂ ತಪ್ಪಾಗುವುದಿಲ್ಲ. ಮಾನಾಪಮಾನಗಳು ಕಾರ್ಯಾಕಾರ್ಯವಿವೇಕಗಳು ಪ್ರಾಣಿಗಳಿಂತ ಮನುಷ್ಯನಲ್ಲೇ ಅಸಾಧಾರಣವಾಗಿರುವ ವಿಶೇಷವು. ಇಷ್ಟೆಲ್ಲಾ ವಿಶೇಷವಿದ್ದರೂ ಇಷ್ಟುಮಾತ್ರದಿಂದಲೂ ಆತನು ತನ್ನ ಜನ್ಮದ ಮತ್ತು ಬುದ್ಧಿಯ ಪೂರ್ಣಪ್ರಯೋಜನವನ್ನು ಪಡೆದಂತಾಗುವುದಿಲ್ಲ. ಏಕೆಂದರೆ ಇದೆಲ್ಲಾ ವಿಶೇಷವೂ ಕೇವಲ ಐಹಿಕ ಜೀವನದ ವಿಶೇಷವಾಗುತ್ತದೆಯೇ ಹೊರತು ಬೇರೆ ಇನ್ನಾವುದೂ ಆಗುವುದಿಲ್ಲ. ಇದರಿಂದ ಸಮಾಜಕ್ಕೆ ಎಷ್ಟೇ ಪ್ರಯೋಜನವೂ ಉಪಕಾರವೂ ಆಗಬಹುದಾದರೂ ಇದಕ್ಕಿಂತ ಹೆಚ್ಚಿನದಾದ ವಿಚಾರವನ್ನು ಶಾಸ್ತ್ರವು ಈ ಮನುಷ್ಯನ ಮುಂದೆಯೇ ಇಟ್ಟಿರುತ್ತದೆ. ಇದನ್ನು ಗಮನಿಸುವುದರಿಂದಲೂ ಅನುಸರಿಸುವುದರಿಂದಲೂ ಲೌಕಿಕ ಪ್ರಯೋಜನಕ್ಕಿಂತ ಹೆಚ್ಚು ಪ್ರಯೋಜನವಾಗುತ್ತದೆ. ಇದನ್ನು ಮನುಷ್ಯನಾದವನು ಯೋಚಿಸಬೇಕು. ಆದರೆ ಇಲ್ಲೂ ಒಂದು ಸಮಸ್ಯೆ ಇದ್ದೇ ಇರುತ್ತದೆ. ಅದೇನೆಂದರೆ ಶಾಸ್ತ್ರವೆಂದರೆ ಯಾವುದು? ಅದು ಯಾರಿಗೆ? ಅಂದರೆ ಕ್ರಿಶ್ಚಿಯನ್-ಮುಸಲ್ಮಾನರೆಂಬ ಅನೇಕ ಪಂಗಡವಿರುವಾಗ ಯಾರ ಮತ್ತು ಯಾವ ಶಾಸ್ತ್ರವನ್ನು ಅನುಸರಿಸಬೇಕು? ಹಿಂದೂಗಳ ಶಾಸ್ತ್ರದಲ್ಲೂ ಅನೇಕವಾದ ಒಂದಕ್ಕೊಂದು ವಿರುದ್ಧವಾದ ಶಾಸ್ತ್ರಗಳಿರುವಾಗ ಯಾವ ಶಾಸ್ತ್ರವು ಸರಿಯಾದದ್ದು? ಯಾವ ಪಂಗಡದ ಸತ್ಪುರುಷರನ್ನು ಅನುಸರಿಸಬೇಕು? ಯಾವುದು ಸರಿ, ಯಾವುದು ತಪ್ಪು? ಇದನ್ನು ಹೇಗೆ ನಿರ್ಣಯಿಸಬೇಕು? ಎಂಬಿವೇ ಮುಂತಾದ ಪ್ರಶ್ನೆಗಳ ಸುರಿಮಳೆಗಳು ಸಾಮಾನ್ಯಜನರ ಕಣ್ಣ ಮುಂದೆ ಬಂದು ನಿಲ್ಲುತ್ತದೆ. ಇದಕ್ಕೆ ಸರಿಯಾದ ಉತ್ತರವನ್ನು ಕಂಡುಕೊಳ್ಳದ ಹೊರತು ಶಾಸ್ತ್ರವೂ ನಿರ್ಣಯವಾಗುವುದಿಲ್ಲ. ಸತ್ಪುರುಷರೂ ನಿರ್ಣೀತರಾಗುವುದಿಲ್ಲ.

ಈ ಮೇಲಿನ ಪ್ರಶ್ನೆಗಳಿಗೆ ಪರಿಹಾರವೇನೆಂದರೆ ಮೊಟ್ಟಮೊದಲು ಎಲ್ಲರೂ ತಮ್ಮ ತಮ್ಮ ಅನುಭವವನ್ನು ಪ್ರಮಾಣವಾಗಿ ಒಪ್ಪಲೇಬೇಕು. ಅನುಭವದಲ್ಲಿದ್ದುದನ್ನೂ "ನಾನು ಒಪ್ಪುವುದಿಲ್ಲ" ಎಂದರೆ ಅವರಿಗೆ ಯಾವ ಉತ್ತರವನ್ನೂ ಕೊಡುವುದಕ್ಕಾಗುವುದಿಲ್ಲ. ಅನುಭವವನ್ನೇ ಒಪ್ಪದವನಿಗೆ ಈ ಲೋಕದ ವ್ಯವಹಾರವನ್ನು ತಿಳಿಸಿಕೊಡುವುದಕ್ಕಾಗು ವುದಿಲ್ಲ! ಇನ್ನು ಅತೀಂದ್ರಿಯದ ವಿಚಾರವು ಅವರಿಗೆ ದೂರವೇ ಸರಿ. ಆದರೆ ಅನುಭವವನ್ನೇ ಒಪ್ಪದವರು ಯಾರೂ ಇಲ್ಲ ಎಂದರೆ ತಪ್ಪಾಗಲಾರದು. ಹೀಗಿರುವಾಗ ಅನುಭವ ಎಂಬ ಮಾತಿಗೆ ಯಾವ ಅರ್ಥವನ್ನು ಮಾಡಬೇಕಾಗುತ್ತದೆ? ಎಂದರೆ

ಅನುಭವವೂ ಎರಡು ವಿಧ (1) ವೈಯಕ್ತಿಕಾನುಭವ (2) ಇನ್ನೊಂದು ಸಾರ್ವತ್ರಿಕಾನುಭವ. ಈ ಎರಡು ಅನುಭವಕ್ಕೂ ನಾವು ಬೆಲೆಯನ್ನು ಕೊಡಲೇಬೇಕು. ಆದರೆ ವೈಯಕ್ತಿಕಾನುಭವವು ಸಾರ್ವತ್ರಿಕಾನುಭವಕ್ಕೆ ವಿರುದ್ಧವಾದರೆ ವೈಯಕ್ತಿಕಾನುಭವವನ್ನೇ ಕೈಬಿಡಬೇಕಾಗುತ್ತದೆ. ಉದಾ: ಕೆಲವರಿಗೆ ಇದ್ದಕ್ಕಿದ್ದ ಹಾಗೆ ತನ್ನನ್ನು ಯಾರೋ ಕೂಗುತ್ತಿರುವಂತೆ ಕೇಳಿಸುತ್ತದೆ. ಹಾಗೆಯೇ ಯಾರೋ ತನ್ನ ಮುಂದೆ ನಿಂತಿರುವಂತೆ ಭಾಸವಾಗುತ್ತಿರುತ್ತದೆ. ಕೆಲವೊಮ್ಮೆ ಮೆಣಸಿನಕಾಯಿಯೂ ಕೆಲವರಿಗೆ ಕಾರವೇ ಆಗುವುದಿಲ್ಲ. ಇತ್ಯಾದಿ, ಇತ್ಯಾದಿ. ಆದರೆ ಅಲ್ಲೇ ಅನೇಕರು ಇದ್ದರೂ ಆ ಕೂಗು ಕೇಳಿಸುತ್ತಿರುವುದಿಲ್ಲ, ಹಾಗೆಯೇ ಮುಂದೆ ಯಾರೂ ಇರುವುದೇ ಇಲ್ಲ. ನಾಲಿಗೆಯ ದೋಷದಿಂದ ಕಾರವಾಗುತ್ತಿರುವುದಿಲ್ಲವೆಂಬುದಿಲ್ಲ. ಆದ್ದರಿಂದ ಇದೆಲ್ಲಾ ಭ್ರಾಂತಿಜ್ಞಾನವೆಂದೇ ಹೇಳಬೇಕಾಗುತ್ತದೆ. ಆದರೆ ಸಾರ್ವತ್ರಿಕಾನುಭವವು ಹೇಗೆಂದರೆ- ಎಲ್ಲರಿಗೂ ಬೆಂಕಿಯು ಬಿಸಿಯಾಗಿರುವುದು, ಸಕ್ಕರೆ ಸಿಹಿಯಾಗಿರುವುದು, ಸೂರ್ಯನು ಪ್ರಕಾಶರೂಪದವನಾಗಿರುವದು. ಇತ್ಯಾದಿ ಇತ್ಯಾದಿ. ಇದರಲ್ಲಿ ವಿಮತಿ (ಭಿನ್ನಾಭಿಪ್ರಾಯ) ಇಲ್ಲ, ವಿಮತಿಯಾದರೆ ಆ ವಿಮತಿಯಾದದ್ದು ಭ್ರಾಂತಿಜ್ಞಾನವು ಎಂದು ತಿಳಿಯಬೇಕು.

ಪ್ರಕೃತ, ಶಾಸ್ತ್ರವು ಯಾವುದೆಂದರೆ- ಸಾರ್ವತ್ರಿಕಾನುಭವವನ್ನು ತಿಳಿಸುವ ಗ್ರಂಥವೇ ಶಾಸ್ತ್ರವು. ಅದು ಎಲ್ಲರಿಗೂ ಸಂಬಂಧಪಟ್ಟ ವಿಷಯದ್ದಾಗಿರಬೇಕು. ಯಾವ ದೇಶ, ಕಾಲ, ಜಾತಿ, ಮತಕ್ಕೂ- ಕಟ್ಟುಪಡೆದದ್ದಾಗಿರಬಾರದು. ಅಂಥ ಶಾಸ್ತ್ರವು ಯಾವುದೆಂದರೆ ವೇದಗಳೇ. ಆ ವೇದಗಳಲ್ಲಿ ಕರ್ಮೋಪಾಸಾನಾಕಾಂಡ ಮತ್ತು ಜ್ಞಾನಕಾಂಡ ಎಂದು ಎರಡು ಪ್ರಧಾನ ವಿಭಾಗವಿರುತ್ತದೆ. ಜ್ಞಾನಕಾಂಡದ ಸಂಬಂಧವೇ ಇಲ್ಲದ್ದಾದ ಬರೀ ವೇದಭಾಗವನ್ನು ಬೈಬಲ್- ಕುರಾನ್‌ಗೆ ಹೋಲಿಸಿ ಅದಕ್ಕೆ ಸಮಾನ ಎಂದು ಯಾರಾದರೂ ವಾದ ಮಾಡಿದರೂ ಮಾಡಬಹುದು. ಆದರೆ ಜ್ಞಾನಕಾಂಡದ ಅಥವಾ ಉಪನಿಷತ್ತಿನ ವಿಚಾರವನ್ನು ಮಾತ್ರ ಯಾವ ಮತ ಗ್ರಂಥದಲ್ಲೂ ಹೇಳಿಲ್ಲವೆಂದು ಧೈರ್ಯವಾಗಿ ಹೇಳಬಹುದು. ಇಂತಹ ಸಾರ್ವತ್ರಿಕಾನುಭವದ ಜ್ಞಾನವಿಚಾರವನ್ನು ಇದೇ ವೇದವೇ ಹೇಳುತ್ತಿರುವುದರಿಂದ ಈಗ ವೇದಕ್ಕೂ ಒಂದು ಅಸಾಧಾರಣವಾದ ಸ್ಥಾನವು ಬಂದಂತಾಯಿತು. ಇಷ್ಟು ವಿಚಾರವನ್ನು ಮಾಡಿದ್ದರಿಂದ ಪ್ರಕೃತಕ್ಕೆ ಏನಾಯಿತು? ಎಂದರೆ ಇಂತಹ ತತ್ತ್ವವಿಚಾರವನ್ನು ಹೇಳುವ ಗ್ರಂಥವೇ ಸದ್ಗ್ರಂಥವು. ಇದರಲ್ಲಿ ಹೇಳಿದ ವಿಚಾರವನ್ನು ತಮ್ಮ ಅನುಭವಕ್ಕೆ ತಂದುಕೊಂಡ ಮಹಾತ್ಮರೇ ಸತ್ಪುರುಷರು.

ಅವರನ್ನನುಸರಿಸುವುದರಿಂದಲೇ ಬೇರೆಯವರಿಗೂ ಪರಮಪುರುಷಾರ್ಥವಾದ ನಿತ್ಯಾನಂದವನ್ನು ಹೊಂದುವುದಕ್ಕೆ ಅವಕಾಶವಿರುತ್ತದೆ. ಇಂಥವರ ಸಹವಾಸವನ್ನೇ ಸತ್ಸಹವಾಸ ಎನ್ನುತ್ತಾರೆ. ಇದನ್ನೇ ಈ ಪ್ರಕೃತವಾದ ಭಾಗವತ ಶ್ಲೋಕದಲ್ಲಿ ಹೇಳಿರುವುದು, ಗಂಗಾದಿನದಿಗಳೂ ತೀರ್ಥಗಳೇ ಸರಿ. ದೇವಸ್ಥಾನಗಳೂ ಸಹ ಒಳ್ಳೆಯ ಪರಿಣಾಮವನ್ನು ಭಕ್ತರಿಗೆ ಉಂಟುಮಾಡಿಯೇ ತೀರುತ್ತದೆ. ಆದರೆ ತೀರ್ಥದ ತೀರ್ಥತ್ವ ಬರೀ ನೀರಿನಿಂದ ಬಂದದ್ದಲ್ಲ, ಮತ್ತೇನೆಂದರೆ ಆ ನದಿಗಳಲ್ಲಿ ಎಷ್ಟೋ ಮಹಾತ್ಮರು, ತಪಸ್ವಿಗಳು, ಜ್ಞಾನಿಗಳು ಸ್ನಾನವನ್ನು ಮಾಡಿರುವುದರಿಂದ ಅವರ ಸಂಗದಿಂದ ಆ ನದಿಗಳೂ ತೀರ್ಥವೆನಿಸುವವು. ಹಾಗೆಯೇ ''ಅರ್ಚಕಸ್ಯ ತಪೋ ಬಲಾತ್ ದೇವೋ ದೇವತ್ವಮಾಪ್ನೋತಿ'' (ಪೂಜೆ ಮಾಡುವಾತನ ತಪಸ್ಸಿನ ಬಲದಿಂದ ಶಿಲೆಯೂ ಸಹ ದೇವತ್ವವನ್ನು ಹೊಂದುತ್ತದೆ) ಎಂದು ಹೇಳಿರುವುದರಿಂದ ಮಹಾತ್ಮರೇ ಪ್ರಧಾನವೆಂದಾಯಿತು. ಅಂತಹ ಮಹಾತ್ಮರ ಸಹವಾಸವು ದೊರಕಿದರೆ ಅದಕ್ಕೆ ಸಮಾನವಾದ ಲಾಭವು ಲೋಕದಲ್ಲಿ ಮತ್ತೊಂದಿರುವುದಿಲ್ಲ. ಅಜ್ಜನು ಮೊಮ್ಮಗನನ್ನು ಕತ್ತಲೆಹೊತ್ತಿನಲ್ಲಿ ಕೈಹಿಡಿದುಕೊಂಡು ಆತನಿಗೆ ಹೆದರಿಕೆಯುಂಟಾಗದಂತೆ ಮನೆಗೆ ನಡೆಸಿಕೊಂಡು ಹೋಗುವಂತೆ ಮಹಾತ್ಮರು ನಮ್ಮನ್ನು ಈ ಅಧ್ಯಾತ್ಮಮಾರ್ಗದ ತುದಿಯನ್ನು ಮುಟ್ಟಿಸುವರು. ಅವರ ಉಪದೇಶವೆಲ್ಲಾ ಉಪನಿಷದ್ವಾಕ್ಯರೂಪವಾಗಿಯೇ ಇದ್ದು ಅವರ ಲೌಕಿಕಮಾತೂ ಸಹ ಅಧ್ಯಾತ್ಮವಿಚಾರಕ್ಕೆ ಉಪಕಾರಮಾಡುವ ದಿವ್ಯವಾಣಿಯಾಗಿರುತ್ತದೆ. ಅವರ ಚರ್ಯೆಯೆಲ್ಲಾ ಯಜ್ಞಮಯ ವಾಗಿದ್ದು ಅಧ್ಯಾತ್ಮಸಾಧಕರಿಗೆ ಉತ್ತಮ ಮಾರ್ಗದರ್ಶನವಾಗಿರುತ್ತದೆ. ಈ ಭಾಗವತದಲ್ಲಂತೂ ಸತ್ಪುರುಷರ ಸಂಗವನ್ನು ಕೊಂಡಾಡಿರುವುದು ಅಷ್ಟಿಷ್ಟಲ್ಲ. ಅವರು ಸಾಕ್ಷಾತ್ ಓಡಾಡುವ ಮತ್ತು ನಮ್ಮೊಡನೆ ಮಾತನಾಡುವ ಪರಮಾತ್ಮರೇ ಆಗಿರುತ್ತಾರೆ. ಅಂಥವರನ್ನು ಹೊಂದಿದ ಸಾಧಕರೇ ನಿಜವಾಗಿ ಜೀವನದಲ್ಲಿ ಧನ್ಯರು. ನಮಗೆಲ್ಲರಿಗೂ ಅಂತಹ ಸದವಕಾಶವು ದೊರಕಲಿ ಎಂದು ಭಗವಂತನನ್ನು ಪ್ರಾರ್ಥಿಸೋಣ.

* * * * *

# 49. ಭಗವತ್ಕೃಪಾ[1]

ತೇಭ್ಯಸ್ಸ್ವವೀಕ್ಷಣ ವಿನಷ್ಟ ತಮಿಸ್ರದೃಗ್ಭ್ಯಃ
ಕ್ಷೇಮಂ ತ್ರಿಲೋಕಗುರುರರ್ಥದೃಶಂ ಚ ಯಚ್ಛನ್ ।
ಶೃಣ್ವನ್ ದಿಗಂತಧವಲಂ ಸ್ವಯಶೋಽಶುಭಘ್ನಂ
ಗೀತಂ ಸುರೈರ್ನೃಭಿರಗಾತ್ ಶನಕೈರ್ವಿದೇಹಾನ್ ॥

– ಶ್ರೀಮದ್ಭಾಗವತ 10-86-22

(ಪರಮಾತ್ಮನು) ತನ್ನ ದರ್ಶನವನ್ನು (ಕೊಟ್ಟ ಮಾತ್ರದಿಂದಲೇ) (ಭಕ್ತರು) ಅಜ್ಞಾನವನ್ನೂ, ಕತ್ತಲೆಯನ್ನೂ ಕಳೆಯುತ್ತಾ (ಆ ಭಕ್ತರಿಗೆ) ಹೆದರಿಕೆ ಇಲ್ಲದಿರುವಿಕೆಯನ್ನು ಅಭಯವನ್ನೂ ಅನುಗ್ರಹಿಸುತ್ತಾ, ದೇವದಾನವರಿಂದಲೂ ಗಾನವನ್ನು ಕೇಳುತ್ತಾ ಎಲ್ಲಾ ದಿಕ್ಕುಗಳಿಗೂ ತನ್ನ ಪಾಪ ಹರವಾದ ಕೀರ್ತಿಯನ್ನು ಹರಡಿ ಮೆಲ್ಲಮೆಲ್ಲಗೆ ವಿದೇಹರಾಜ್ಯಕ್ಕೆ ಶ್ರೀಕೃಷ್ಣನು ಹೊರಟುಹೋದನು.

**(ನಿಜವಾಗಿ ಭಗವಂತನ ಅನುಗ್ರಹ ಎಂದರೆ ಮಕ್ಕಳು ಐಶ್ವರ್ಯಾದಿಗಳನ್ನು ಪಡೆಯುವುದಲ್ಲ. ಏಕೆಂದರೆ ಅದನ್ನು ಬೇರೆ ಲೌಕಿಕೋಪಾಯದಿಂದಲೂ ಪಡೆಯಬಹುದು. ಆದರೆ ನಿಜವಾದ ಅನುಗ್ರಹವೆಂದರೆ, ಸಂಪೂರ್ಣ ಭಯವೂ, ಭಯಕ್ಕೆ ಕಾರಣವಾದ ಅಜ್ಞಾನವೂ ತೊಲಗುವುದೇ ಆಗಿದೆ.)**

## ಭಗವತ್ಪ್ರಸಾದ

ಭಗವತ್ಸ್ವರೂಪವೇ ಒಂದು ರೀತಿಯಿಂದ ಭಕ್ತಾನುಗ್ರಹರೂಪವಾಗಿದೆ. ಏಕೆಂದರೆ ಹೊರಗಡೆಯಿಂದ ಗಾಳಿ ನೀರು ಅನ್ನಬೆಳಕುಗಳನ್ನು ಕೊಡುತ್ತಲೂ ಒಳಗಡೆಯಿಂದ ಇಂದ್ರಿಯ ಮನಸ್ಸು ಪ್ರಾಣಗಳಿಗೆ ಶಕ್ತಿಯನ್ನು ತುಂಬುವುದು ಆಯಾ ವಿಷಯದಲ್ಲಿ ವ್ಯಾಪಾರವನ್ನು ಮಾಡುವಂತೆ ಪ್ರೇರಿಸುವುದು ಇವೆಲ್ಲ ಅವನ ಕೆಲಸವೇ ಆಗಿದೆ. ಆದರೂ ಕಾಮ್ಯಭಕ್ತರು ಇವೆಲ್ಲಕ್ಕಿಂತ ಬೇರೆಯಾಗಿ ಲೌಕಿಕವಾಗಿಯೂ ತಮ್ಮದೇ

---

1. ಈ ಲೇಖನದಿಂದ ಮುಂದೆ ಶ್ರೀಚಂದ್ರಮೌಳಿ ಅವಧಾನಿ (ಶ್ರೀ ಅದ್ವಯಾನಂದೇಂದ್ರ ಸರಸ್ವತೀ)ಗಳು ಬರೆದು ಈ ವಿಚಾರಸರಣಿಯನ್ನು ಪೂರ್ತಿಗೊಳಿಸಿರುತ್ತಾರೆ.

ಆದ ಒಂದಾನೊಂದು ವಿಶೇಷರೂಪದಿಂದಿರುವುದಕ್ಕೆ ಭಗವಂತನನ್ನು ಆಶ್ರಯಿಸುವರು. ಅದನ್ನೂ ಕೂಡ ಭಕ್ತರ ಆರಾಧನೆಗೆ ಸಂತುಷ್ಟನಾದ ಭಗವಂತನೇ ಕರುಣಿಸುವನು.

ಪ್ರಕೃತದಲ್ಲಿ ಶ್ರೀಕೃಷ್ಣನು ಕುಚೇಲನಿಗೆ ಅನುಗ್ರಹಮಾಡಿದ ನಂತರ, ಬೇರೆ ಬೇರೆ ರಾಜರು ಕುರುಕ್ಷೇತ್ರದಲ್ಲಿ ಸೇರಿದಾಗ ಯಾದವರಿಂದ ಶ್ರೀಕೃಷ್ಣನ ಕಥೆಯನ್ನು ಕೇಳುತ್ತಾರೆ. ಅಲ್ಲಿ ಕುಂತೀದೇವಿಯು ತನ್ನ ಅಣ್ಣನಾದ ವಸುದೇವನನ್ನು ಕಂಡು ತುಂಬಾ ಸಂತುಷ್ಟಳಾಗಿ, ಕೌರವರಿಂದ ತಾನು ಅನುಭವಿಸಿದ ಕಷ್ಟಕ್ಕೆ ಶ್ರೀಕೃಷ್ಣಾದಿ ಯಾದವರ ಸಹಾಯವು ದೊರಕದೇ ಇರುವುದಕ್ಕೆ ತುಂಬಾ ವ್ಯಥೆಯನ್ನು ಪಟ್ಟು ತನ್ನನ್ನೇ ತಾನು ನಿಂದಿಸಿಕೊಳ್ಳುತ್ತಾಳೆ. ಅನಂತರ ವಸುದೇವನು ಕಂಸಾದಿಗಳಿಂದ ತಮಗುಂಟಾದ ಕಷ್ಟಗಳನ್ನೆಲ್ಲಾ ವಿವರಿಸಿ, ಕುಂತಿಯವರ ಕಷ್ಟಕಾಲಕ್ಕೆ ಸಹಾಯಕ್ಕಾಗಿ ಬರದೇ ಇರುವುದಕ್ಕೆ ಸಕಾರಣವನ್ನು ತಿಳಿಸುತ್ತಾನೆ. ಹಾಗೆಯೇ ಮುಂದಕ್ಕೆ ಕೃಷ್ಣನ ಎಂಟು ಜನ ಪಟ್ಟ ಮಹಿಷಿಯರಿಗೂ ದ್ರೌಪದಿಗೂ ಸಂವಾದವು ನಡೆಯುತ್ತದೆ. ಅಲ್ಲಿ ಆ ಎಂಟು ಜನರೂ ತಮಗೆ ಶ್ರೀಕೃಷ್ಣನೊಡನೆ ಆದ ವಿವಾಹದ ವೃತ್ತಾಂತವನ್ನು ದ್ರೌಪದಿಗೆ ಸಂಗ್ರಹವಾಗಿ ತಿಳಿಸುತ್ತಾರೆ. ಅನಂತರ ವಸುದೇವನು ಯಜ್ಞವನ್ನು ಮಾಡಬೇಕೆಂದು ಸಂಕಲ್ಪಿಸಿ ಅದನ್ನು ಬಹಳ ವೈಭವದಿಂದ ಮಾಡಿ ಬಂದ ಬಂಧುಗಳಿಗೆಲ್ಲಾ ತಕ್ಕ ಮರ್ಯಾದೆಯನ್ನು ಕೊಟ್ಟು ಅವರನ್ನು ತಮ್ಮ ತಮ್ಮ ಮನೆಗೆ ಕುಳಿಹಿಸಿಕೊಡುತ್ತಾನೆ. ಆಮೇಲೆ ದೇವಕೀದೇವಿಯು ಶ್ರೀಕೃಷ್ಣಬಲರಾಮರೊಂದಿಗೆ ತನ್ನ ಹಿಂದಿನ ಕಥೆಯನ್ನೆಲ್ಲಾ ಹೇಳಿ ಅವರ ಹತ್ತಿರ ತನ್ನ ಕಂಸನಿಂದ ಹತರಾದ ಮಕ್ಕಳನ್ನು ತಂದು ತೋರಿಸುವಂತೆ ಪ್ರಾರ್ಥಿಸುತ್ತಾಳೆ. ಅದರಂತೆ ಅವರಿಬ್ಬರೂ ಸುತ್ತಲೋಕಕ್ಕೆ ಹೋಗುತ್ತಾರೆ. ಅಲ್ಲಿ ಬಲಿಚಕ್ರವರ್ತಿಯು ರಾಜ್ಯಭಾರವನ್ನು ಮಾಡುತ್ತಿರುತ್ತಾನೆ. ಇವರು ಬಂದದ್ದನ್ನು ತಿಳಿದ ಕೂಡಲೇ ಆ ರಾಜನು ತನ್ನ ಪತ್ನೀಪುತ್ರ ಸಮೇತನಾಗಿ ಸಮಸ್ತ ಆದರೋಪಚಾರಗಳನ್ನು ಮಾಡುತ್ತಾನೆ. ಅನಂತರ ಶ್ರೀಕೃಷ್ಣಪರಮಾತ್ಮನು ತಾನು ಬಂದ ಕಾರಣವನ್ನು ತಿಳಿಸಿ ನಿನ್ನ ಲೋಕದಲ್ಲಿರುವ ದೇವಿಕಿಯ ಮಕ್ಕಳನ್ನು ನಾವು ಕರೆದುಕೊಂಡು ಹೋಗುತ್ತೇವೆ, ಅನಂತರ ಅವರು ತಮ್ಮ ಲೋಕಕ್ಕೆ ವಾಪಸ್ಸು ಹೋಗಲಿ ಎಂದುಹೇಳಿ ಅಲ್ಲಿಂದ ತಂದು ತೋರಿಸುತ್ತಾನೆ. ಅವರನ್ನು ಕಂಡು ದೇವಿಕಿಗೆ ತುಂಬಾ ಸಂತೋಷವಾಗುತ್ತದೆ. ಅನಂತರ ಅರ್ಜುನನ ಸುಭದ್ರಾಪರಿಣಯದ (ವಿವಾಹದ) ನಂತರ ಶ್ರೀಕೃಷ್ಣ ಪರಮಾತ್ಮನು ತನ್ನ ಭಕ್ತರಾದ ಶ್ರುತದೇವನೆಂಬ ಬ್ರಾಹ್ಮಣನಿಗೂ ಬಹುಳಾಶ್ವನೆಂಬ ರಾಜನಿಗೂ ಅನುಗ್ರಹವನ್ನು ಮಾಡಬೇಕೆಂದು ವಿದೇಹರಾಜ್ಯಕ್ಕೆ ಪ್ರಯಾಣವನ್ನು ಮಾಡುತ್ತಾನೆ. ಆ ಸಂದರ್ಭದಲ್ಲೇ

ಈ ಪ್ರಕೃತಶ್ಲೋಕವು ಬಂದಿರುತ್ತದೆ. ಈ ಶ್ಲೋಕದಲ್ಲಿರುವ ಮೂರು ವಿಶೇಷಣಗಳನ್ನು ಚೆನ್ನಾಗಿ ಲಕ್ಷ್ಯದಲ್ಲಿಡಬೇಕು.

(1) ಶ್ರೀಕೃಷ್ಣನ ದರ್ಶನಮಾತ್ರದಿಂದಲೇ ಅಜ್ಞಾನಪರಿಹಾರವಾಗುತ್ತದೆ, ಎಂದಿದೆ. ವಿಚಾರಪ್ರಧಾನರಾದವರು ತತ್ತ್ವವಿಷಯವನ್ನು ವಿಚಾರಕ್ಕೆ ಹೊಂದಿಸಿಕೊಳ್ಳುವದಕ್ಕೆ ಸಮರ್ಥರಾದವರಾದರೂ ಅದು ಕಠಿನತರವು, ಎಲ್ಲರಿಗೂ ಆಗುವದಲ್ಲ ಎಂಬುದನ್ನು ನಾವೆಲ್ಲರೂ ನಮ್ಮ ನಿತ್ಯಜೀವನದಲ್ಲಿ ತಿಳಿದೇ ಇದ್ದೇವೆ. ಆದರೆ ಭಕ್ತರಾದವರಿಗೆ ಈ ತರಹದ ಕ್ಲೇಶವಿರುವದಿಲ್ಲ. ಏಕೆಂದರೆ ಅವರ ಯೋಗಕ್ಷೇಮವೆಲ್ಲಾ ಭಗವಂತನಿಗೆ ಸೇರಿದ್ದಾಗಿರುತ್ತದೆ. (2) ಇನ್ನು ಅಭಯವನ್ನು ಹೊಂದುವರಾಗುತ್ತಾರೆ ಎಂಬುದು ಎರಡನೇಯದು. ಮನುಷ್ಯನಿಗೆ ಭಯವೆಂಬುದು ತಪ್ಪಿಸಿಕೊಳ್ಳುವುದಕ್ಕಾಗದ ದೊಡ್ಡ ಅನರ್ಥವು. ಅದಕ್ಕೆ ನೂರಾರು ನಿಮಿತ್ತಗಳಿವೆ. ಅದನ್ನು ಬರೀ ವಿಚಾರದಿಂದಲಾಗಲೀ ಪರೋಪದೇಶದಿಂದಲಾಗಲಿ ತಪ್ಪಿಸಿಕೊಳ್ಳುವುದಕ್ಕಾಗು ವುದೇ ಇಲ್ಲ. ''ಭಯಾನ್ಮುಚ್ಯೇತ ಭೀತಸ್ತು'' ಭೀತನಾದವನು ಭಯದಿಂದ ಮುಕ್ತನಾಗುತ್ತಾನೆಂದು ವಿಷ್ಣುಸಹಸ್ರನಾಮದಲ್ಲಿ ಹೇಳಿರುವಂತೆ ಭಗವಂತನ ಅನುಗ್ರಹದಿಂದಲೇ ಆ ಭಯ ನಿವೃತ್ತಿಯಾಗುವುದು. ತತ್ತ್ವಜ್ಞಾನದಿಂದ ಭಯ ನಿವೃತ್ತಿಯಾಗುವುದಾದರೂ ಆ ತತ್ತ್ವಜ್ಞಾನವು ಅಷ್ಟೊಂದು ಸುಲಭವೆ? ಸಾಮಾನ್ಯರಿಗೆ ಅದು ಅರ್ಥವೇ ಆಗುವುದಿಲ್ಲ. ಆದ್ದರಿಂದ ಭಗವದ್ಭಕ್ತಿಯನ್ನು ಚೆನ್ನಾಗಿ ಬೆಳೆಸಿಕೊಂಡರೆ ಭಯದಿಂದ ನಿವೃತ್ತರಾಗಬಹುದು. (3) ಸಮಸ್ತ ಅಶುಭವನ್ನು ಪರಿಹರಿಸುವ ತತ್ತ್ವಜ್ಞಾನ ಪ್ರಾಪ್ತಿ ಆಗುವುದು. ಇದು ಎಲ್ಲಕ್ಕಿಂತ ಹೆಚ್ಚಿನದು. ಭಕ್ತ್ಯಾಮಾಮಭಿಜಾನಾತಿ (ಭಕ್ತಿಯಿಂದ ನನ್ನನ್ನು ಗುರುತಿಸುತ್ತಾನೆ, ಗೀ. 18-55) ಎಂದು ಭಗವಂತನೇ ಅಪ್ಪಣೆ ಕೊಡಿಸಿದ್ದಾನೆ. ಆದ್ದರಿಂದ ಈ ಶ್ಲೋಕದಲ್ಲಿರುವ ಮೂರು ವಿಶೇಷಣವನ್ನು ಚೆನ್ನಾಗಿ ಮನದಂದುಕೊಂಡು ಭಗವದ್ಭಕ್ತಿಯನ್ನು ಚೆನ್ನಾಗಿ ಬೆಳಸಿಕೊಳ್ಳುವುದಕ್ಕೆ ಪ್ರಯತ್ನಿಸಬೇಕು.

ತತ್ತ್ವಜ್ಞಾನ ವೆಂಬುದು ಮನುಷ್ಯನ ಸ್ವಾತಂತ್ರ್ಯಕ್ಕೆ ಒಳಪಟ್ಟಿಲ್ಲ, ಎಷ್ಟೇ ಪ್ರಯತ್ನಪಟ್ಟರೂ ಈ ಜನ್ಮದಲ್ಲೇ ಆಗದೆಯೂ ಹೋಗಬಹುದು. ಆದ್ದರಿಂದಲೇ ಅರ್ಜುನನು ಯೋಗಭ್ರಷ್ಟನಾದವನಿಗೆ ಏನು ಗತಿ? ಎಂದು ಕೇಳಿರುತ್ತಾನೆ. ಜ್ಞಾನವೆಂಬುದು ವಸ್ತುತಂತ್ರ, ಪುರುಷನ ಇಷ್ಟಕ್ಕೆ ಒಳಪಟ್ಟಿಲ್ಲ. ಲೋಕದಲ್ಲೂ ಸಹ ಲೌಕಿಕವಾದ ಸೂಕ್ಷ್ಮ ವಿಷಯವನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನಮಾಡುವಾಗ

ಕೆಲವೊಮ್ಮೆ ಜ್ಞಾನವುಂಟಾಗುತ್ತದೆ, ಕೆಲವೊಮ್ಮೆ ಉಂಟಾಗುವುದೇ ಇಲ್ಲ. ಆಗ ಏನು ಮಾಡುವುದಕ್ಕೂ ಆಗುವುದಿಲ್ಲ. ಕೆಲವೊಮ್ಮೆ ಅದನ್ನೇ ಯೋಚನೆಮಾಡುತ್ತಿದ್ದಾಗ- ಅಥವಾ ಬೇರೆ ಸಂದರ್ಭದಲ್ಲೂ ಸಹ ಇದ್ದಕ್ಕಿದ್ದಹಾಗೆ ಆ ವಿಚಾರವು ಹೊಳೆದುಬಿಡುತ್ತದೆ. ಇಂಥ ಸಂದರ್ಭದಲ್ಲಿ ಆಗ ಏಕೆ ಹೊಳೆಯಲಿಲ್ಲ? ಈಗ ಏಕೆ ಹೊಳೆಯಿತು ಎಂದು ಪ್ರಶ್ನೆಮಾಡಿದರೆ ಅದಕ್ಕೆ ಉತ್ತರವಿಲ್ಲ. ಲೌಕಿಕ ವಿಷಯದಲ್ಲೇ ಈ ರೀತಿ ಇರುವಾಗ ಇನ್ನು ಪರಮಾರ್ಥದ ವಿಷಯದ ಬಗ್ಗೆ ಕೇಳಬೇಕೆ? ಆದ್ದರಿಂದ ತತ್ತ್ವಜಿಜ್ಞಾಸುಗಳಿಗೂ ವಿಚಾರದ ಜೊತೆಗೆ ಭಗವದ್ಭಕ್ತಿ ಎಂಬುದು ಬೇಕೇ ಬೇಕು. ಅವರದೇ ನಿಜವಾದ ಭಕ್ತಿಯು. ಸಾಮಾನ್ಯಜನರಿಗಂತು ನೂರಕ್ಕೆ ನೂರು ಭಕ್ತಿಮಾರ್ಗವು ಅತಿಮುಖ್ಯ ಮತ್ತು ಶ್ರೇಷ್ಠಸಾಧನವು. ಕಾಲಕ್ರಮೇಣ ಆತನ ಅನುಗ್ರಹದಿಂದಲೇ ತತ್ತ್ವವಿಚಾರವು ಸಹ ತಾನಾಗಿಯೇ ಅಥವಾ ಭಗವಂತನು ಅನುಗ್ರಹಿಸಿದ ಸತ್ಪುರುಷರ ಸಹವಾಸದಿಂದಲೋ ತಿಳಿಯುವುದಕ್ಕೆ ಮೊದಲಾಗುತ್ತದೆ. ನಾವುಗಳೆಲ್ಲಾ ಸಾಮಾನ್ಯಜನರೇ ಆಗಿರುತ್ತೇವೆ. ನಚಿಕೇತನಂತಹ ಮಹಾತ್ಮರು ಯುಗಾಂತರದಲ್ಲೇ ಇರುವಂಥವರು. ಈ ಘೋರಕಲಿಕಾಲದಲ್ಲಿ ಭಗವಂತನಲ್ಲಿ ಭಕ್ತಿಶ್ರದ್ಧೆಯುಳ್ಳವರೇ ಅತಿ ವಿರಳ. ಅದರಲ್ಲೂ ತತ್ತ್ವಜ್ಞಾನಕ್ಕಾಗಿಯೇ ಹಾತುವರೆಯು ವಂಥವರು ಇಲ್ಲವೇ ಇಲ್ಲ ಎಂದರೂ ಸಲ್ಲುವಷ್ಟು ವಿರಳಾಗಿರುತ್ತಾರೆ. ಇಂತಹ ಬಯಕೆಯೂ ಸಹ ಭಗವತ್ಕೃಪೆಯಿಂದಲೇ ಉಂಟಾಗಬೇಕಾಗಿದೆ.

* * * * *

# 50. ಶ್ರುತಿಗೀತಾ

**ದುರವಗಮಾತ್ಮತತ್ತ್ವನಿಗಮಾಯ ತವಾತ್ತತನೋಃ।**
**ಚರಿತಮಹಾಮೃತಾಬ್ಧಿಪರಿವರ್ತಪರಿಶ್ರಮಣಾಃ॥**
**ನ ಪರಿಲಷನ್ತಿ ಕೇಚಿದಪವರ್ಗಮಪೀಶ್ವರ ತೇ।**
**ಚರಣಸರೋಜಹಂಸಕುಲಸಂಗವಿಸೃಷ್ಟಗೃಹಾಃ॥**

**- ಶ್ರೀಮದ್ಭಾಗವತ 10-87-21**

ಹೇ ಪರಮೇಶ್ವರ, ತಿಳಿಯಲುಸಾಧ್ಯವಾದ ನಿನ್ನ ಸ್ವರೂಪದ ರಹಸ್ಯವನ್ನು

ಅರಿಯುವುದಕ್ಕಾಗಿ ಲೀಲಾವತಾರವನ್ನು ಕೈಗೊಂಡ ನಿನ್ನ ದಿವ್ಯಚರಿತ್ರೆ ಎಂಬ ಅಮೃತಸಾಗರದಲ್ಲಿ ಮಿಂದು ಸಂಸಾರದುಃಖಗಳನ್ನು ಕಳೆದುಕೊಂಡ ಮಹಾತ್ಮರು, ನಿನ್ನ ಪಾದಕಮಲದಲ್ಲಿ ಹಂಸಗಳಂತೆ- ನಲಿದಾಡುವ ಭಕ್ತರೊಡನೆ ಸೇರಿ ಕಥಾಮೃತಪಾನದಿಂದ ಗೃಹಸಂಗವನ್ನೂ ಬಿಟ್ಟು ಮೋಕ್ಷವನ್ನೂ ಸಹ ಕಡೆಗಣಿಸಿರುತ್ತಾರೆ.

**(ಆದ್ದರಿಂದ ಭಕ್ತಿಗಿಂತ ಹೆಚ್ಚಿನ ಪುರುಷಾರ್ಥವಿಲ್ಲ)**

## ಶ್ರುತಿಗೀತೆಯ ವಿಶೇಷ

ಪ್ರಕೃತವಾದ ಈ ಶ್ರುತಿಗೀತೆಯು ತತ್ತ್ವ ಪ್ರಧಾನವಾಗಿಯೇ ಇದೆ. ಈ ಶ್ಲೋಕದ ವಿಶೇಷಗಳನ್ನು ಮನನಮಾಡಿದರೆ ಸಾಕ್ಷಾತ್ ಉಪನಿಷದರ್ಥವನ್ನೇ ತಿಳಿಸುವವೆಂದು ಗೊತ್ತಾಗುತ್ತದೆ. (1) ಪರಮಾರ್ಥತತ್ತ್ವವು ತಿಳಿಯಲಸಾಧ್ಯವು, ಏಕೆಂದರೆ ತಿಳಿಯಬೇಕಾದರೆ ಅದಕ್ಕೆ ನಾಮರೂಪಗಳಿರಬೇಕು, ಇಂದ್ರಿಯ ಅಥವಾ ಮನಸ್ಸಿಗೆ ವಿಷಯವಾಗಿರಬೇಕು, ತಿಳಿಯುವಾತನಿಗಿಂತ ಭಿನ್ನವಾಗಿರಬೇಕು, ಆದರೆ ಪರಮಾರ್ಥತತ್ತ್ವಕ್ಕೆ ಇದು ಯಾವುದೂ ಇರುವುದಿಲ್ಲ. ಸ್ವಯಂ ಅದು ಜ್ಞಾನಸ್ವರೂಪವಾಗಿರುವುದರಿಂದಲೂ ಅದೇ ಎಲ್ಲವನ್ನೂ ಅರಿಯುವಂಥದ್ದಾದ್ದರಿಂದಲೂ ಅದನ್ನರಿಯಲು ಸಾಧ್ಯವಿಲ್ಲ. ಆದರೂ ಶ್ರುತಿಗಳು ಆ ಸ್ವರೂಪದ ಮೇಲೆ ನಾವು ಹುಟ್ಟುಹಾಕಿಕೊಂಡ ಕಲ್ಪಿತಾಂಶವನ್ನು ತೆಗೆದುಹಾಕುವುದರ ಮೂಲಕ ತಿಳಿಸಿಕೊಡುತ್ತವೆ. ಸ್ವರೂಪದಿಂದ ಹೀಗಿದ್ದರೂ ಭಕ್ತಾನುಗ್ರಹಕ್ಕಾಗಿ ಆ ತತ್ತ್ವವೇ (2) ಲೀಲಾರೂಪವಾದ ಶರೀರವನ್ನು ಸ್ವೀಕರಿಸುತ್ತದೆ. ಇದನ್ನೇ ಅವತಾರವೆಂದು ಕರೆಯುವರು. ಈ ಅವತಾರ ಕಥೆಗಳೆಲ್ಲಾ ಅಜ್ಞಾನಿಗಳಾದ ಸಂಸಾರಿಗಳ ಸ್ವಭಾವಕ್ಕೆ ಹತ್ತಿರವಾದ್ದರಿಂದ ಸಾಮಾನ್ಯಜನರಿಗೆ ಇದರ ಮೇಲೆ ಬಲು ಬೇಗನೆ ಪ್ರೀತಿಶ್ರದ್ಧೆಗಳು, ಭಾವನೆಗಳು ಬರುತ್ತವೆ. ಪರಮಾತ್ಮನು ನಮ್ಮಗಳ ಅವಿದ್ಯಾದೃಷ್ಟಿಯಿಂದ ಲೀಲಾವರೂಪವನ್ನು ಪಡೆದಂತೆ ತೋರಿಬಂದರೂ ಆತನು ತನ್ನ ಪಾರಮಾರ್ಥಿಕರೂಪವನ್ನು ಮರೆತಿರುವುದಿಲ್ಲ. ಇದನ್ನೇ ಗೀತೆಯಲ್ಲಿ ಭಗವಂತನು "ಸಂಭವಾಮ್ಯಾತ್ಮಮಾಯಮಾ" ಎಂದಿರುತ್ತಾನೆ. ಆ ರೂಪದಿಂದ ಆತನು ಜನರಿಗೆ ತತ್ತ್ವೋಪದೇಶವನ್ನು ಮಾಡುವಾಗಲೂ ತನ್ನ ಪರತತ್ತ್ವವನ್ನೇ ಉಪದೇಶಿಸುತ್ತಾನೆಯೇ ಹೊರತು ತನ್ನ ಸಗುಣ ಸಾಕಾರರೂಪದಲ್ಲಿ ಯಾರನ್ನೂ ಸ್ಥಿರಗೊಳಿಸುವುದಿಲ್ಲ. ಇದರಂತೆಯೇ ಕೆಲವರು ನಿನ್ನ ಭಕ್ತರು (3)

ಮೋಕ್ಷವನ್ನೂ ಸಹ ಇಷ್ಟಪಡುವುದಿಲ್ಲ. ಇದರ ಅಭಿಪ್ರಾಯವೇನೆಂದರೆ, ಮೋಕ್ಷದಲ್ಲಿ ಅದ್ವೈತವಿರುತ್ತದೆಯಾದ್ದರಿಂದ ಅಲ್ಲಿ ದೇಹಾದಿಗಳು ಇರುವುದಿಲ್ಲ. ಆಗ ಭಗವದ್ಭಕ್ತರಿಗೆ ಭಗವನ್ನಾಮ ಸಂಕೀರ್ತನೆ ಮತ್ತು ಕಥಾಶ್ರವಣಾದಿಗಳಿಂದಾಗುವ ಆನಂದಕ್ಕೆ ಅವಕಾಶವಿರುವುದಿಲ್ಲ. ಯದ್ಯಪಿ ಆ ಭಗವತ್ಸ್ವರೂಪವನ್ನೇ ಪಡೆದವರಿಗೆ ಅಲ್ಲಿ ಆನಂದಾನಾದಿಗಳ ವಿಚಾರವೇ ಎದ್ದುಕೊಳ್ಳುವುದಿಲ್ಲ, ಅಷ್ಟೇ ಅಲ್ಲ, ಪರಮಾರ್ಥವಾಗಿ ಹೇಳಬೇಕಾದರೆ ಎಲ್ಲಿ ಈ ತ್ರಿಪುಟಿ ಇದ್ದುಕೊಂಡಿರುವುದೋ. ಅದು ಅವಿದ್ಯಾಕ್ಷೇತ್ರವಾದ್ದರಿಂದ ಅಲ್ಲಾಗುವ ಆನಂದವು ಪರಮಾರ್ಥವಾದದ್ದಲ್ಲವೆಂಬುದು ತತ್ತ್ವದೃಷ್ಟಿಯಿಂದ ನಿಜವಾದರೂ ವ್ಯವಹಾರದ ದೃಷ್ಟಿಯಿಂದ ಭಗವದ್ಭಕ್ತರು ಸದಾ ಭಗವನ್ನಾಮಸಂಕೀರ್ತನ ಭಜನಾನಂದದಲ್ಲಿ ಮುಳುಗಿರುತ್ತಾರೆಂಬ ದೃಷ್ಟಿಯನ್ನಿಟ್ಟುಕೊಂಡು ಅವರು ಮೋಕ್ಷಾನಂದವನ್ನೂ ಬಯಸುವುದಿಲ್ಲ ಎಂದು ಉಪಚಾರಕ್ಕಾಗಿ ಹೇಳಿದೆಯೆ ಹೊರತು, ಮೋಕ್ಷದಲ್ಲಿ ಆನಂದವಿಲ್ಲವೆಂತಾಗಲೀ ಅದನ್ನವರು ಇಷ್ಟಪಡುವುದೇ ಇಲ್ಲಾಂತಾಗಲೀ ಅಭಿಪ್ರಾಯವಲ್ಲ. ಮೋಕ್ಷವೇ ಬೇರೆ ಎಂಬುದಲ್ಲ, ಆನಂದಸ್ವರೂಪನಾದ ಆತ್ಮಸ್ವರೂಪವೇ ಮೋಕ್ಷಸ್ವರೂಪ, ಮೋಕ್ಷವೇ ಆನಂದಸ್ವರೂಪ. ಅವು ಪರಸ್ಪರ ಬೇರೆ ಅಲ್ಲ. ಇಂಥ ಮೋಕ್ಷರೂಪವಾದ ಆನಂದ ಸ್ವರೂಪದಲ್ಲಿರುವವರು ಏಕಾಂತಭಕ್ತರು. (4) ಅವರು ಭಗವಂತನ ಪಾದಕಮಲದಲ್ಲಿರುವ ಪ್ರೇಮದಿಂದ ಹೆಂಡತಿ, ಮಕ್ಕಳು ಮನೆಮಠಾದಿಗಳನ್ನೂ ತ್ಯಜಿಸಿ ತಾವೂ ಸತ್ಪುರುಷರಾಗಿ ಬೇರೆ ಸತ್ಪುರುಷರೊಡನೆಯೂ ಇದ್ದು ವಿಶ್ವಶಾಂತಿದಾಯಕರಾಗಿರುತ್ತಾರೆ. ಇದನ್ನೇ ಭಗವಂತನು "ಕಥಯನ್ತಶ್ಚಮಾಂ ನಿತ್ಯಂ ತುಷ್ಯನ್ತಿ ಚ ರಮನ್ತಿ ಚ" ಎಂದಿರುತ್ತಾನೆ. ಆ ಜ್ಞಾನಿಗಳಿಗೆ ಅತ್ಯಂತ ಪರಮಪ್ರೇಮಕ್ಕೆ ಪಾತ್ರನಾದ ಆತ್ಮನಾದ ಭಗವಂತನು ದೊರಕಿರುವಾಗ ಬೇರೆ ಇನ್ನಾವ ವಸ್ತುವಿನ ಪ್ರಾಪ್ತಿಗಾಗಿ ಅವರು ಹಾತುವರೆಯುತ್ತಾರೆ! "ತದೇತತ್ ಪ್ರೇಯಃ ಪುತ್ರಾತ್, ಪ್ರೇಯಃ ವಿತ್ತಾತ್, ಪ್ರೆಯೋಽನ್ಯಸ್ಮಾತ್ ಸರ್ವಸ್ಮಾತ್ ಅನ್ತರತಮಂ ಯದಯಮಾತ್ಮಾ" (ಬೃ) ಎಂದು ಶ್ರುತಿಯು ಹೇಳುತ್ತಿರುವುದರಿಂದ ಅತ್ಯಂತವಾಗಿ ಪ್ರೇಮಕ್ಕೆ ಪಾತ್ರನಾದವನು ಆತ್ಮನೇ. "ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ" (ಬೃ) ಎಂದಿರುವುದರಿಂದ ಲೋಕದ ಸಮಸ್ತವಸ್ತುವಿನ ಪ್ರಿಯತ್ವಕ್ಕೂ ಕಾರಣ. ಅವು ಆತ್ಮನಿಗೆ ಸುಖವನ್ನುಂಟುಮಾಡುತ್ತದೆ ಎಂಬ ಕಾರಣದಿಂದಲೇ ಅಂದಮೇಲೆ ಆತ್ಮನು ಇನ್ನೆಷ್ಟು ಪ್ರಿಯತಮನು! ಎಂಬುದು ಇದರಿಂದಲೇ ಗೊತ್ತಾಗುತ್ತದೆ. ಯಾವಾದಾದರೂ ಎಲ್ಲಾದರೂ ಹೇಗಾದರೂ ಒಂದು ವಸ್ತು ಆತ್ಮನ ಅಪ್ರಿಯತ್ವಕ್ಕೆ (ಅಂದರೆ ದುಃಖಕ್ಕೆ)

ಕಾರಣವೆಂದಾದರೆ ತತ್‌ಕ್ಷಣವೇ ಆ ವಸ್ತುವು ಎಂಥದ್ದೇ ಆದರೂ (ತಂದೆ ತಾಯಿ ಹೆಂಡತಿ ಮಕ್ಕಳು ದುಡ್ಡೆ ಆದರೂ) ತನ್ನ ದ್ವೇಷಕ್ಕೆ ಅದು ಕಾರಣವಾಗುತ್ತದೆ. ಇದು ಒಂದು ರೀತಿಯಿಂದ ಲೋಕದವರಿಗೆ ಸ್ವಾರ್ಥವಾಗಿ ತೋರಿಬಂದರೂ ವಸ್ತುಸ್ಥಿತಿಯಾದ್ದರಿಂದ ಇದರಲ್ಲಿ ಬದಲಾವಣೆಯೇ ಇಲ್ಲ. ದೇಹವು ನಾನಾಗಿ ಅದಕ್ಕೆ ವಿರೋಧವಾಗಿರುವುದು ದ್ವೇಷಕ್ಕೆ ಕಾರಣವಾಗಿದ್ದರೆ ಅದನ್ನು ಲೋಕದವರು ಸ್ವಾರ್ಥವೆಂದು ಕರೆಯುವುದು ಸರಿಯಾಗುವುದಾದರೂ ನಿಜವಾದ ಆತ್ಮನಲ್ಲಿರುವ ಪ್ರೇಮಕ್ಕೆ ಸ್ವಾರ್ಥವೆಂದು ಕರೆಯುವುದಕ್ಕಾಗುವುದಿಲ್ಲ. ಏಕೆಂದರೆ ಇದು ವಸ್ತುಸ್ಥಿತಿ. ವಸ್ತುಸ್ಥಿತಿಯನ್ನು ಯಾರಿಗೂ ಬದಲಾಯಿಸುವುದಕ್ಕೆ ಬರುವುದಿಲ್ಲ. ಅದರ ಮೇಲೆ ಯಾವ ಪ್ರಶ್ನೆಗಳನ್ನೂ ಹಾಕುವುದಕ್ಕೆ ಬರುವುದಿಲ್ಲ. ಇಂತಹ ಉತ್ತಮವಾದ ತತ್ತ್ವವಿಚಾರವನ್ನು ಈ ಶ್ರುತಿಗೀತೆಯು ಒಳಗೊಂಡಿದೆ.

* * * * *

## 51. ಶ್ರುತಿಸಂದೇಶ

ಸತ ಇದಮುತ್ಥಿತಂ ಸದಿತಿ ಚೇನ್ನನು ತರ್ಕಹತಂ
ವ್ಯಭಿಚರತಿ ಕ್ವಚ ಕ್ವಚ ಮೃಷಾ ನ ತಥೋಭಯಯುಕ್ ।
ವ್ಯವಹೃತಯೇ ವಿಕಲ್ಪ ಇಷಿತೋಽಂಧ ಪರಂಪರಯಾ
ಭ್ರಮಯತಿ ಭಾರತೀ ತ ಉರುವೃತ್ತಿಭಿರುಕ್ಥಜಡಾನ್ ॥

- ಶ್ರೀಮದ್ಭಾಗವತ 10-87-36

ಈ ಜಗತ್ತು ಸದ್ರೂಪದಿಂದ ಹುಟ್ಟಿರುವುದರಿಂದ ಸತ್ಯವೇ ಆಗಿರಬೇಕೆಂಬುದು ತರ್ಕಕ್ಕೆ ವಿರುದ್ಧವು. ಏಕೆಂದರೆ ಲೋಕದಲ್ಲಿ ಕೆಲವು ಕಡೆಯಲ್ಲಿ (ಹಗ್ಗದ ಹಾವು ಮುಂತಾದ ಸ್ಥಳದಲ್ಲಿ) ಸುಳ್ಳಾಗಿರುವುದು ಕಂಡಿದೆಯಾದ್ದರಿಂದ ಇದಕ್ಕೆ ಅಪವಾದವಿದೆ. ನಿಜವೂ ಸುಳ್ಳೂ ಎರಡೂ ಕೂಡಿಕೊಂಡಿದೆ ಎಂಬುದೂ ಸರಿಯಲ್ಲ, ಏಕೆಂದರೆ ಇದು ವಿರುದ್ಧವು. ವಿಕಲ್ಪವು ಕುರುಡುಪರಂಪರೆಯಾದ್ದರಿಂದ ವ್ಯವಹಾರಕ್ಕೆ ಮಾತ್ರ (ಸತ್ಯವು). (ವೈದಿಕ ಲೌಕಿಕ) ಮಾತೆಂಬುದು (ಗೌಣ, ಲಕ್ಷಣಾದಿಗಳಿಂದ) ಕರ್ಮಾಸಕ್ತ ಜನರನ್ನು ಭ್ರಾಂತಿಗೊಳಿಸುತ್ತದೆ ಅಷ್ಟೆ!

## ಶ್ರುತಿಯ ವಿಚಾರಧಾರೆ

ಉಪನಿಷತ್ತುಗಳು ಒಕ್ಕೊರಳಿಂದ ಸದ್ರೂಪನಾದ ಪರಮಾತ್ಮನಿಂದಲೇ ಜಗತ್ತು ಹುಟ್ಟಿರುತ್ತದೆ ಎಂದು ಹೇಳುತ್ತಿವೆ. ಸತ್ತಿನಿಂದ ಹುಟ್ಟಿದ ಜಗತ್ತೂ ಸದ್ರೂಪವೇ (ಸತ್ಯವಾದದ್ದೇ) ಆಗಿರಬೇಕೆಂಬುದು ಸಾಮಾನ್ಯನಿಯಮವು. ವ್ಯವಹಾರದಲ್ಲೂ ಸಹ ಯಾವುದರಿಂದ ಏನು ಹುಟ್ಟಿರುತ್ತದೋ ಆ ಹುಟ್ಟಿದ ವಸ್ತುವೂ ಅದೇ ರೂಪವಾಗಿರುತ್ತದೆ. ಉದಾ।। ಮಣ್ಣಿನಿಂದ ಗಡಿಗೆ ಹುಟ್ಟಿದಾಗ, ಚಿನ್ನದಿಂದ ಆಭರಣಗಳು ಹುಟ್ಟಿದಾಗ, ಆ ಗಡಿಗೆ, ಆಭರಣಗಳೂ ಸಹ ವ್ಯವಹಾರದಲ್ಲಿ ನಿಜವಾಗಿರುವಂಥದ್ದೆಂದೇ ತಿಳಿಯುತ್ತಾರೆ. ಸಾಮಾನ್ಯವಾದ ಕುಂಬಾರ ಚಿನಿವಾರಾದಿಗಳು ಮಾಡಿದ ಗಡಿಗೆ ಆಭರಣಗಳೇ ಸುಳ್ಳಾಗದೇ ಇರುವಾಗ ಸರ್ವಜ್ಞನೂ ಸರ್ವಶಕ್ತನೂ ಸತ್ಯಸಂಕಲ್ಪನೂ ಆದ ಪರಮಾತ್ಮನು ಸೃಷ್ಟಿಮಾಡಿರುವ ಜಗತ್ತು ಹೇಗೆ ತಾನೆ ಸುಳ್ಳಾದೀತು! ಕುಂಬಾರ ಚಿನಿವಾರರಿಗಿಂತ ಪರಮಾತ್ಮನು ನಿಕೃಷ್ಟನೆ? ಮಾಯಾರೂಪವಾಗಿ ಸೃಷ್ಟಿಮಾಡಿರುತ್ತಾನೆಂದು ಹೇಳುವುದೂ ಸಹ ಹೇಗೆ ಸರಿಯಾದೀತು? ಅವನೇತಕ್ಕೆ ಮಾಯಾರೂಪವಾಗಿ ಸೃಷ್ಟಿಮಾಡಬೇಕು? ಜನರಿಗೆಲ್ಲಾ ಮೋಸಮಾಡುವುದರಿಂದ ಅವನಿಗೇನು ಆಗಬೇಕಾಗಿದೆ? ಹಾಗೇನಾದರೂ ಮೋಸಮಾಡುವವನಾದರೆ ಆತನು ಮಹಾಕರುಣಾಳುವು ದಯಾಪರನು ಎಂದು ಹೇಳುವ ಶ್ರುತಿ ಸ್ಮೃತಿ ಪುರಾಣೇತಿಹಾಸ ವಚನಗಳಿಗೆ ಏನರ್ಥ? ಆದ್ದರಿಂದ ಸತ್ಯವಾಗಿಯೇ ಪರಮಾತ್ಮನು ಜಗತ್ತನ್ನು ಸೃಷ್ಟಿಮಾಡಿರುತ್ತಾನೆಂದೇ ತಿಳಿಯಬೇಕು.

ಈ ಮೇಲಿನ ಆಕ್ಷೇಪಗಳು ನೋಡುವುದಕ್ಕೆ ಸರಿಯಾಗಿ ತೋರಿದರೂ ವಿಚಾರದ ಹೊಡೆತಕ್ಕೆ ನಿಲ್ಲುವುದಿಲ್ಲ. ಏಕೆಂದರೆ ಸರ್ವಗತನೂ ಸರ್ವಾತ್ಮನೂ ಆದ ಭಗವಂತನು ಪ್ರಪಂಚವನ್ನು ಸೃಷ್ಟಿಮಾಡಿರುತ್ತಾನೆಂದರೆ ಏನರ್ಥ? ಏಕೆಂದರೆ ಆತನು ಈ ಪ್ರಪಂಚಕ್ಕಿಂತ- ಕುಂಬಾರ ಚಿನಿವಾರನು ಗಡಿಗೆ ಆಭರಣಕ್ಕಿಂತ ಬೇರೆಯಾಗಿರುವ ಹಾಗೆ- ಬೇರೆಯಾಗಿದ್ದುಕೊಂಡು ಮಾಡಿರುತ್ತಾನೆಂಬುದು ಹೊಂದುತ್ತದೆಯೆ? ಹಾಗೇನಾದರೂ ಬೇರೆಯಾದರೆ ಆತನು ಪರಿಚ್ಛಿನ್ನನೆಂದಾಗುವುದಿಲ್ಲವೆ? ಪರಿಚ್ಛಿನ್ನನಾದರೆ ನಾಶವಾಗುವವನಾಗುತ್ತಾನೆನ್ನಬೇಕಾಗುತ್ತದೆ. ಏಕೆಂದರೆ ಲೋಕದಲ್ಲಿ ಪರಿಚ್ಛಿನ್ನವಾಗಿರುವುದೆಲ್ಲಾ ನಾಶವಾಗುವುದು ಕಂಡುಬಂದಿದೆ. ಇದೂ ಅಲ್ಲದೆ ಪ್ರಪಂಚವೆಂದರೆ ದೇಶ, ಕಾಲ, ಕಾರ್ಯಕಾರಣ, ಪಂಚಭೂತಗಳು, ನಾಮರೂಪಗಳ

ಒಟ್ಟು ಉಂಡೆಗೇ ಪ್ರಪಂಚವೆಂದು ಹೆಸರು. ಇಂತಹ ಪ್ರಪಂಚವು ಹುಟ್ಟುವಾಗ ''ಯಾವಾಗ'' ಎಂಬ ಕಾಲವಾಗಲೀ ''ಎಲ್ಲಿ''? ಎಂಬ ದೇಶವಾಗಲೀ ''ಹೇಗೆ'' ಎಂಬ ''ಪ್ರಕಾರವಾಗಲೀ'' ಇರುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಇವೆಲ್ಲಾ ಪ್ರಪಂಚದ ಒಳಗೆ ಇರುವುದು! ಇಡೀ ಪ್ರಪಂಚಕ್ಕೇ ಸೃಷ್ಟಿಯಾಗುವುದೆಂದು ನಾವು ವಿಚಾರವನ್ನು ಮಾಡುವಾಗ ಪ್ರಪಂಚದೊಳಗಿನ ಯಾವ ಕಾಲ ದೇಶಾದಿಗಳನ್ನೂ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ.

ಇದೂ ಅಲ್ಲದೆ ಕುಂಬಾರ ಚಿನಿವಾರರಂತೆ ಭಗವಂತನು ಪ್ರಪಂಚವನ್ನು ಸೃಷ್ಟಿಸುತ್ತಾನೆನ್ನುವುದಾದರೆ, ಅವರಿಗೆ ಅವುಗಳನ್ನು ಮಾಡುವಾಗ ತಮಗಿಂತ ಬೇರೆಯಾದ ಮಣ್ಣುಚಿನ್ನ ಮತ್ತು ಬೇರೆ ಬೇರೆ ಉಪಕರಣಗಳು ಇರುತ್ತವೆ. ಹಾಗೆಯೇ ಭಗವಂತನಿಗೂ ಪ್ರಪಂಚವನ್ನು ಸೃಷ್ಟಿಸುವಾಗ ಅವುಗಳೆಲ್ಲಾ ಇರುತ್ತವೆ ಎನ್ನಬೇಕಾಗುತ್ತದೆ. ಆದರೆ ಅದು ಸರಿಯಾಗುವುದಿಲ್ಲ. ಏಕೆಂದರೆ ಅವುಗಳು- ಭಗವಂತನಿಗಿಂತ ಬೇರೆಯಾಗಿ ಸ್ವತಂತ್ರವಾಗಿ ಇವೆ ಎನ್ನುವುದಾದರೆ ಅವುಗಳನ್ನು ಭಗವಂತನು ಸೃಷ್ಟಿಸಿಲ್ಲವೆಂತಲೂ ಅವುಗಳನ್ನು ಉಪಯೋಗಿಸಿಕೊಂಡದ್ದರಿಂದ ಅಷ್ಟರಮಟ್ಟಿಗೆ ಅವನು ಪರತಂತ್ರನೆಂತಲೂ, ಕುಂಬಾರಾದಿಗಳಂತೆ ಆತನಿಗೂ ಕೈಕಾಲುಗಳಿವೆಯಂತಲೂ ಇನ್ನೂ ಅನೇಕ ರಾಗದ್ವೇಷಾದಿ ದೋಷಗಳೂ ಗಂಟುಬೀಳುವವು. ಆದ್ದರಿಂದ ಕುಂಬಾರಾದಿಗಳ ದೃಷ್ಟಾಂತವು ಭಗವಂತನಿಗೆ ಹೊಂದುವುದಿಲ್ಲ.

ಹಾಗಾದರೆ ಉಪನಿಷತ್ತುಗಳು ಒಕ್ಕೊರಳಿಂದ ಎಲ್ಲವೂ ಬ್ರಹ್ಮದಿಂದಲೇ ಬಂದಿರುತ್ತದೆ ಎಂದು ಏತಕ್ಕೆ ಹೇಳಿರುತ್ತದೆ? ಅದರ ಅಭಿಪ್ರಾಯವೇನು? ಎಂದರೆ ಅವುಗಳು ಆತ್ಮೈಕತ್ವವನ್ನು ತಿಳಿಸುವುದಕ್ಕೆ ಉಪಾಯವಾಗಿ ಹೇಳಿರುತ್ತದೆ ಎಂದು ತಿಳಿಯಬೇಕು. ಹೇಗೆಂದರೆ ಯಾವುದರಿಂದ ಏನು ಹುಟ್ಟಿರುತ್ತದೆ ಎಂದು ಲೋಕದಲ್ಲಿ ತಿಳಿದುಬಂದಿರುತ್ತದೋ ಆ ಹುಟ್ಟಿದ ವಸ್ತುವು ತನ್ನ ಕಾರಣಕ್ಕಿಂತ ಬೇರೆಯಾಗಿರುವುದಿಲ್ಲ ಎಂದು ಗೊತ್ತಾಗಿದೆ. ಉದಾ॥ ಮಣ್ಣಿನಿಂದ- ಗಡಿಗೆ, ಚಿನ್ನದಿಂದ- ಆಭರಣಗಳು ಹುಟ್ಟುವಾಗ ಆ ಗಡಿಗೆಯಾಗಲೀ ಆಭರಣಗಳಾಗಲೀ ಹೇಗೆ ಮಣ್ಣು ಚಿನ್ನಕ್ಕಿಂತ ಬೇರೆಯಾಗಿಲ್ಲವೊ ಅದರಂತೆ ಈ ಸೃಷ್ಟವಾದ ಪ್ರಪಂಚವು ಸ್ರಷ್ಟೃವಾದ ಪರಮಾತ್ಮನಿಗಿಂತ ಬೇರೆಯಾಗಿಲ್ಲ ಎಂದು ನಿಶ್ಚಯಿಸಿಕೊಳ್ಳಬೇಕು. ಮಣ್ಣು ಚಿನ್ನಗಳು ದೃಷ್ಟಾಂತ ಮಾತ್ರವೇ ಹೊರತು ಪರಮಾತ್ಮನೂ ಸಹ ಆ ಮಣ್ಣು ಚಿನ್ನದಂತೆ ಸಾವಯವನಾಗಿಯೂ

ಜಡನಾಗಿಯೂ ಇರುತ್ತಾನೆಂದು ತಿಳಿಯಬಾರದು. ದೃಷ್ಟಾಂತದಲ್ಲಿ ವಿವಕ್ಷಿತಾಂಶವನ್ನು ಮಾತ್ರ ಸ್ವೀಕರಿಸಬೇಕೇ ಹೊರತು ಪೂರ್ಣವಾಗಿ ದೃಷ್ಟಾಂತ ದಾರ್ಷ್ಟಾಂತಿಕಗಳಿಗೆ ಸರ್ವಸಾಮ್ಯತೆಯಿರುವುದಿಲ್ಲ. ಹಾಗೇನಾದರೂ ಇದ್ದುಬಿಟ್ಟರೆ ಅದು ದೃಷ್ಟಾಂತವೇ ಆಗುವುದಿಲ್ಲ. ಶ್ರುತಿಯೂ ಸಹ ''ಬ್ರಹ್ಮನಿಂದ ಜಗತ್ತು ಹುಟ್ಟಿರುತ್ತದೆ'' ಎಂದು ಹೇಳುವಾಗ ''ಹುಟ್ಟಿರುತ್ತದೆ'' ಎಂಬ ಕ್ರಿಯಾಪದಕ್ಕೆ ಅವಧಾರಣೆಯನ್ನು ಮಾಡಿಕೊಂಡಿರುವುದಿಲ್ಲ. ಮತ್ತೇನೆಂದರೆ ''ಬ್ರಹ್ಮದಿಂದ'' ಎಂಬುದಕ್ಕೆ ಅವಧಾರಣೆ ಇರುತ್ತದೆ. ಇಡೀ ವೇದಾಂತದಲ್ಲಿ ಎಲ್ಲೂ ಕ್ರಿಯಾಪದಕ್ಕೆ ಅವಧಾರಣೆ ಇರುವುದಿಲ್ಲ ಎಂಬುದನ್ನು ಮೊದಲು ಚೆನ್ನಾಗಿ ನಾವು ತಿಳಿದಿರಬೇಕು. ಕ್ರಿಯಾಪದಕ್ಕೆ ಅವಧಾರಣೆಯು ಕರ್ಮಕಾಂಡದಲ್ಲೂ ಉಪಾಸನಾಕಾಂಡದಲ್ಲೂ ಇರುತ್ತದೆಯೇ ಹೊರತು ಜ್ಞಾನಕಾಂಡದಲ್ಲಿರುವುದಿಲ್ಲ. ಏಕೆಂದರೆ ಕರ್ಮೋಪಾಸನಾಕಾಂಡಕ್ಕೆ ಮಾಡುವುದೇ ಪ್ರಧಾನವಾಗಿರುತ್ತದೆಯಾದ್ದರಿಂದ ಅಲ್ಲಿ ಅದಕ್ಕೆ ಅವಧಾರಣೆ ಇರುವುದು ಸಹಜವಾಗಿರುತ್ತದೆ. ಆದರೆ ಜ್ಞಾನಕಾಂಡದಲ್ಲಿ ಜ್ಞಾನವನ್ನು ಹೇಳುವ ವಾಕ್ಯಗಳಿಗೆ ಕ್ರಿಯಾಪದಕ್ಕೆ ಅವಧಾರಣೆ ಇರುವುದಿಲ್ಲ. ಇಲ್ಲಿ ಕ್ರಿಯಾಪದವು ಕೇವಲ ವಾಕ್ಯಪೂರಣೆಗಾಗಿ ಬಂದಿರುತ್ತದೆಯೇ ಹೊರತು ಅವಧಾರಣೆಗೆ ಅಲ್ಲ. ಏಕೆಂದರೆ ಜ್ಞಾನವೆಂಬುದು ವಸ್ತುತಂತ್ರವೇ ಹೊರತು ಕರ್ತೃತಂತ್ರವಲ್ಲ, ಅದು ಜ್ಞಾಪಕವೇ ಹೊರತು ಕಾರಕವಲ್ಲ, ಆದ್ದರಿಂದ ''ಬ್ರಹ್ಮದಿಂದ ಹುಟ್ಟಿದೆ'' ಎಂಬಲ್ಲಿ ''ಬ್ರಹ್ಮದಿಂದ'' ಎಂಬ ಪದಕ್ಕೆ ಅವಧಾರಣೆ ಇದ್ದು, ಆ ವಾಕ್ಯವು ಅಣುವಿನಿಂದಾಗಲೀ ಪ್ರಧಾನದಿಂದಲಾಗಲೀ ಶೂನ್ಯಾದಿಗಳಿಂದಲಾಗಲೀ ಹುಟ್ಟಿದ್ದಲ್ಲವೆಂಬ ಅಪವಾದಕ್ಕಾಗಿಯೂ ಇದೆಲ್ಲವೂ ಬ್ರಹ್ಮವೇ ಆಗಿದೆ ಎಂಬ ಅಧ್ಯಾರೋಪಕ್ಕಾಗಿಯೂ ಬಂದದ್ದೆಂದೂ ತಿಳಿಯಬೇಕು. ಹೀಗೆ ಅಧ್ಯಾರೋಪಾಪವಾದವೆಂಬ ಕ್ರಮವನ್ನಿಟ್ಟುಕೊಂಡೇ ವೇದಾಂತಗಳು ವಾಕ್ಕುಮನಸ್ಸಿಗೆ ಗೋಚರವಲ್ಲದ ಬ್ರಹ್ಮಾತ್ಮತತ್ತ್ವವನ್ನು ತಿಳಿಸುತ್ತದೆ. ನಾವುಗಳೆಲ್ಲ ಅವಿದ್ಯಾದೃಷ್ಟಿಯಿಂದ ಒಪ್ಪಿಕೊಂಡ ಪ್ರಪಂಚಸತ್ಯತ್ವವನ್ನು ಹಾಗೆಯೇ ಅನುವಾದಮಾಡಿಕೊಂಡು ಇದರ ಸತ್ಯತ್ವವನ್ನು ತಿಳಿಸಿಕೊಡುವುದಕ್ಕಾಗಿ ಈ ರೀತಿಯಾಗಿ ಹೇಳುತ್ತದೆ. ಆದ್ದರಿಂದಲೇ ಮಾಯಾರೂಪವಾಗಿ ಸೃಷ್ಟಿಯಾಗಿರುತ್ತದೆ ಎನ್ನುವಾಗಲೂ ಮಾಯೆ ಎಂಬುದು ನಿಜವಾದ ಒಂದು ಕಾರಣವೆಂತಾಗಲೀ ಸಾಧನವೆಂತಾಗಲೀ ಅಭಿಪ್ರಾಯವಲ್ಲ, ಮತ್ತೇನೆಂದರೆ ಸೃಷ್ಟಿಯಾಗಿದೆ ಎಂದು ತಿಳಿಯುವುದು ಮಾಯೆಯೇ ಎಂದರ್ಥವೇ ಹೊರತು ಮಾಯೆಯಿಂದ ಸೃಷ್ಟಿಯಾಗಿದೆ ಎಂದರ್ಥವಲ್ಲ. ಏಕೆಂದರೆ ಮಾಯೆ ಎಂದರೆ ಇಲ್ಲದ್ದು''

ಅವಿದ್ಯಮಾನಸ್ಯ ಆಖ್ಯಾ ಮಾಯಾ'' (ಮಾಂ.ಭಾ.) ಎಂದು ಆಚಾರ್ಯರು ಅಪ್ಪಣೆ ಕೊಡಿಸಿರುತ್ತಾರೆ. ಇದು ಯುಕ್ತವೂ ಆಗಿದೆ. ಎಷ್ಟೋ ಜನರು ಈಗಲೂ ಸಹ ''ಈಶ್ವರನು ಮಾಯೋಪಾಧಿಯೆಂತಲೂ'' ''ಜೀವನು ಅವಿದ್ಯೋಪಾಧಿ ऽಯೆಂತಲೂ ಹೇಳುತ್ತಿದ್ದಾರೆ! ಆದರೆ ಇದಕ್ಕೆಲ್ಲಾ ಅರ್ಥವಿಲ್ಲ. ಪ್ರಸ್ಥಾನತ್ರಯಭಾಷ್ಯದಲ್ಲಿ ಆಚಾರ್ಯರು ಎಲ್ಲೂ ಈ ರೀತಿ ಹೇಳಿರುವುದಿಲ್ಲ. ಇದೆಲ್ಲ ಈ ವಾದಿಗಳ ಮನೋರಥಮಾತ್ರ. ಆದ್ದರಿಂದ ಏನು ತೀರ್ಮಾನವಾಗುತ್ತದೆಂದರೆ ಇರುವ ಪರಮಾರ್ಥವನ್ನು ಇರುವ ಹಾಗೆ ತಿಳಿಯುವವರೆಗೂ ಈ ಪರಮಾರ್ಥವನ್ನೇ ಹೀಗೆ ಪ್ರಪಂಚವಾಗಿಯೇ ತೋರಿಸುವುದು ಅವಿದ್ಯೆಯ ಸ್ವಭಾವವು ಅವಿದ್ಯೆಯು ನಿವೃತ್ತವಾದರೆ ಎಂದೂ ಹೇಗೂ ಯಾವ ಪ್ರಪಂಚವು ಉಂಟಾಗಿಯೇ ಇರುವುದಿಲ್ಲ. ಇರುವುದೆಲ್ಲಾ ''ಏಕಮೇವಾ ದ್ವಿತೀಯಂ ಬ್ರಹ್ಮ'' ಎಂಬುದೇ ಪರಮಾರ್ಥ ಸತ್ಯ. ಆದ್ದರಿಂದ ಮಾಯಾರೂಪವಾಗಿ ಪರಮಾತ್ಮನು ಏತಕ್ಕೆ ಸೃಷ್ಟಿಮಾಡಿದ? ಆತನು ಕರುಣಾಳು ದಯಾಮಯನೂ ಅಲ್ಲವೆ? ಎಂಬುದಾಗಿರುವ ಆಕ್ಷೇಪಗಳಿಗೆ ಅವಕಾಶವಿಲ್ಲ.

* * * * *

## 52. ಅಭಯ ಸಂದೇಶ

**ಭಯಂ ದ್ವಿತೀಯಾಭಿನಿವೇಶತಃ ಸ್ಯಾತ್**
**ಈಶಾದಪೇತಸ್ಯ ವಿಪರ್ಯಯೋಽಸ್ಮೃತಿಃ।**
**ತನ್ಮಾಯಯಾತೋ ಬುಧ ಆಭಜೇತ್ತಂ**
**ಭಕ್ತ್ಯೈಕಯೇಶಂ ಗುರುದೇವತಾತ್ಮಾ॥**

**- ಶ್ರೀಮದ್ಭಾಗವತ 11-2-37**

ಪರಮೇಶ್ವರನಿಂದ ವಿಮುಖಚಿತ್ತನಾದವನಿಗೆ ಹಾಗೂ ದ್ವೈತವಸ್ತುವಿನಲ್ಲಿಯೇ (ಮಿತಿಮೀರಿದ) ಅಭಿಮಾನವನ್ನು ಹೊಂದಿದವನಿಗೆ ಭಯವೂ, ತಪ್ಪುತಿಳಿವಳಿಕೆಯೂ ಆಗಿರುತ್ತದೆ. ಹಾಗೆಯೇ ಆತನ ಮಾಯೆಯಿಂದಲೇ ಆತನ ಸ್ವರೂಪದ ವಿಸ್ಮೃತಿಯೂ ಉಂಟಾಗಿರುತ್ತದೆ. ಆದ್ದರಿಂದ ವಿವೇಕಿಯಾದ (ಭಕ್ತನು) ಆ ಪರಮೇಶ್ವರನನ್ನೇ ಅತಿಶಯವಾದ ಭಕ್ತಿಯಿಂದ ಸೇವಿಸುತ್ತಿರಬೇಕು.

ಹಾಗೆಯೇ ಗುರುಗಳ ವಿಷಯಕ್ಕೂ ದೇವತಾಭಾವನೆಯನ್ನು ಹೊಂದಿರುವವನಾಗಿರಬೇಕು.

## ಅಭಯಪ್ರಾಪ್ತಿಯ ಪ್ರಕಾರ

ಈ ಪ್ರಪಂಚದಲ್ಲಿ ಯಾವ ಪ್ರಾಣಿಗೆ ತಾನೆ ಭಯವಿಲ್ಲ! ಹಾಗೆಯೇ ಭಯ ಪರಿಹಾರಕ್ಕಾಗಿಯೇ ಅಲ್ಲವೇ ಎಲ್ಲರೂ ಶ್ರಮಪಡುತ್ತಿರುವುದು? ಹಣ ಸಂಪಾದನೆ, ಗೃಹಾದಿಗಳ ನಿರ್ಮಾಣವನ್ನು ಮಾಡಿಕೊಳ್ಳುವುದು, ಅಧಿಕಾರವನ್ನು ಹೊಂದುವುದಕ್ಕಾಗಿ ಒದ್ದಾಡುತ್ತಿರುವುದು ಎಲ್ಲವೂ ಒಂದು ರೀತಿಯಿಂದ ವಿಚಾರವನ್ನು ಮಾಡಿದರೆ ಭಯಪರಿಹಾರಕ್ಕಾಗಿಯೇ ಎಂಬುದು ಗೊತ್ತಾಗುತ್ತದೆ. ಹಸಿವಿನ ಭಯ ನಿವೃತ್ತಿಗಾಗಿಯೂ ಮಾನಮರ್ಯಾದೆಯು ಹೋಗಿಬಿಡುವುದೆಂಬ ಭಯ ನಿವೃತ್ತಿಗಾಗಿಯೂ ಹಣವನ್ನು ಬಯಸುತ್ತಾರೆ. ಶೀತವಾತ, ಕಳ್ಳಕಾಕರ, ಹುಳುಹುಪ್ಪಟಗಳ ಭಯನಿವಾರಣೆಗಾಗಿ ಗೃಹನಿರ್ಮಾಣವನ್ನು ಮಾಡಿಕೊಳ್ಳುತ್ತಾರೆ. ತಾನು ಅತಿಯಾಗಿ ಗಳಿಸಿದ ಸಂಪತ್ತಿನ ನಿವೃತ್ತಿಯು ಎಲ್ಲಿ ಆದೀತೋ- ಹಾಗೆಯೇ ತನ್ನ ಜೀವದ ರಕ್ಷಣೆ ಬೇರೆಯವರಿಂದ ಸರಿಯಾಗಿ ಆಗುವುದಿಲ್ಲವೋ ಎಂಬ ಅಂಜಿಕೆಯಿಂದ ಅಧಿಕಾರವನ್ನು ಹಿಡಿಯಲು ಒದ್ದಾಡುತ್ತಾರೆ. ಹೀಗೆಯೇ ಮನುಷ್ಯನು ಏನೇನನ್ನು (ವಿದ್ಯೆ-ವಾಹನ- ಸಂಸ್ಥೆಗಳನ್ನು) ಹೊಂದುತ್ತಾನೋ ಅವೂ ಸಹ ಸೂಕ್ಷ್ಮವಾಗಿ ವಿಚಾರವನ್ನು ಮಾಡಿದರೆ ಭಯನಿವೃತ್ತಿಗಾಗಿಯೇ ಎಂಬುದು ಗೊತ್ತಾಗುತ್ತದೆ. ಹೀಗೆ ಪ್ರಪಂಚದ ಪ್ರತಿಯೊಬ್ಬರ ಪ್ರತಿಯೊಂದು ಕ್ರಿಯೆಯೂ ಒಂದಾನೊಂದು ರೀತಿಯ ಭಯನಿವೃತ್ತಿಗಾಗಿಯೇ ನಡೆಯುತ್ತದೆ. ಆದರೆ ಇಲ್ಲಿ ಸ್ವಾರಸ್ಯವೇನೆಂದರೆ, ಯಾರಿಗೂ ಯಾವುದೊಂದು ಕೆಲಸದಿಂದಲೂ ಸಂಪೂರ್ಣವಾದ ಶಾಶ್ವತವಾದ ಭಯನಿವೃತ್ತಿಯಾಗುತ್ತಿಲ್ಲವೆಂಬುದು ಎಲ್ಲರಿಗೂ ಗೊತ್ತಿರುವ ವಿಚಾರವಾಗಿದೆ. ಅಷ್ಟೇ ಅಲ್ಲ, ಸಂಪೂರ್ಣವಾದ ಶಾಶ್ವತವಾದ ಭಯನಿವೃತ್ತಿಯು ಯಾವುದಾದರೊಂದರಿಂದ ಆಗುತ್ತದೆ ಎಂದು ಯಾರಾದರೂ ಹೇಳಿದರೆ ಅದು ಹಾಸ್ಯಾಸ್ಪದವೆಂದೂ ಅಸಂಭಾವನೀಯವೆಂದೂ ಹೇಳುತ್ತಾ ಜರೆಯುತ್ತಾರೆ.

ಆದರೆ ಉಪನಿಷತ್ತುಗಳು ಮಾತ್ರ ''ಅಭಯಂ ಪ್ರತಿಷ್ಠಾಂ ವಿಂದತೇ'', ''ಅಭಯಂ ಗತೋ ಭವತಿ'' ''ಅಭಯಂ ಹಿ ವೈ ಬ್ರಹ್ಮ ಭವತಿ'' ಎಂದು ಮುಂತಾಗಿ ನೂರಾರು ಮಾತುಗಳಿಂದ ಅಭಯವೆಂಬುದು ಈ ಮನುಷ್ಯನ ಆ ಜನ್ಮಸಿದ್ಧಹಕ್ಕು,

ಸಹಜ ಸ್ಥಿತಿ, ಇದನ್ನು ಹೊಸದಾಗಿ ಹೊರಗಿನಿಂದ ಪಡೆಯಬೇಕಾಗಿಲ್ಲ, ನಿತ್ಯಪ್ರಾಪ್ತವಾಗಿಯೇ ಇದೆ ಎಂದು ಹೇಳುತ್ತಿವೆ. ಇದನ್ನು ಕೇಳಿ ನಕ್ಕರೆ ಅಥವಾ ಹಾಸ್ಯವನ್ನು ಮಾಡಿದರೆ ತಾನೆ ಇದು ಇಲ್ಲದೇ ಹೋದೀತೆ? ನಾವು ವಿಚಾರಮಾಡುತ್ತಿರುವ ಅಥವಾ ತಿಳಿದುಕೊಂಡಿರುವ ಕ್ರಮವೇ ಸರಿಯಾದದ್ದೆಂತಲೂ ಮಿಕ್ಕವರಿಗೆ ಇದರ ಬಗ್ಗೆ ಏನೂ ಗೊತ್ತಿಲ್ಲವೆಂತಲೂ ತಿಳಿಯುವದು ಎಂಥಮೂರ್ಖತನವಾದೀತು? ಲೌಕಿಕರಾದ ನಮ್ಮ ತಿಳಿವಳಿಕೆಯೂ ವಿಚಾರವೂ ಲೋಕದ ಪದಾರ್ಥದ ಕ್ಷೇತ್ರದಲ್ಲಿ ಮಾತ್ರ ಇದ್ದುಕೊಂಡಿರುವುದೇ ಹೊರತು ಅದನ್ನು ಮೀರಿ ಹೋಗಿಯೇ ಇಲ್ಲ. ಆದರೆ ವಿಚಾರಕ್ಕೆ ವಿಷಯವು ಆಧಿಭೌತಿಕ ಮಾತ್ರವಾಗಿರದೇ ಆಧಿದೈವಿಕವೂ ಅಧ್ಯಾತ್ಮವೂ ಇದೆ ಎಂಬುದನ್ನು ಗಮನಿಸಿದರೆ ನಮ್ಮಗಳ ದೃಷ್ಟಿಯು ವಿಶಾಲವಾಗುವುದು. ವಿಜ್ಞಾನಶಾಸ್ತ್ರವು ದೇಹೇಂದ್ರಿಯಾಪ್ರಾಣ ಮನಸ್ಸುಗಳ ವಿಚಾರವನ್ನು ಮಾಡುವುದಾದರೂ ಮನಸ್ಸನ್ನು ಮೀರಿದ ಆತ್ಮನ ವಿಚಾರವು ಮಾತ್ರ ಅದಕ್ಕೆ ಗೊತ್ತೇ ಇಲ್ಲ. ವ್ಯವಹಾರಪ್ರಸಿದ್ಧವಾದ ನಾನು ಎಂಬುದರ ಬಗ್ಗೆ- ಅದರ ಸ್ವಭಾವ ಸ್ವರೂಪದ ವಿಷಯವಾಗಿಯೇ- ನಮಗೆ ಸರಿಯಾದ ತಿಳಿವಳಿಕೆಯು ಇಲ್ಲದಿರುವಾಗ, ನಾನೆಂಬ ವಿಷಯವೂ ಇಲ್ಲದ ನಿರ್ವಿಶೇಷ್ವನಾದ ಪರಮಾರ್ಥಸತ್ಯದ ಬಗ್ಗೆ ಸರಿಯಾದ ತಿಳಿವಳಿಕೆ ಇಲ್ಲ ಎಂಬುದನ್ನು ಏನುಹೇಳುವುದು!

ಹೀಗಾಗಿ ಅಭಯವೆಂಬುದು ನಮ್ಮ ಸ್ವರೂಪವೇ ಎಂದು ಉಪನಿಷತ್ತುಗಳು ಹೇಳುತ್ತಿದ್ದರೆ ಅದನ್ನು ಕಡೆಗಣಿಸುವುದಕ್ಕೆ ಏನು ಕಾರಣವಿಲ್ಲ. ಅದನ್ನು ಕಂಡುಕೊಳ್ಳುವ ದೃಷ್ಟಿ ವಿಶೇಷವನ್ನು ಮಾತ್ರ ಸಂಪಾದಿಸಿಕೊಳ್ಳಬೇಕಾಗುತ್ತದೆ. ಈ ಸಂದರ್ಭದಲ್ಲಿ ನಾವು ಒಂದೇ ಒಂದು ಮುಖ್ಯ ವಿಚಾರವನ್ನು ಗಮನದಲ್ಲಿಟ್ಟುಕೊಂಡಿರಬೇಕು, ಅದೇನೆಂದರೆ- ಭಯವೆಂಬುದು ನಮ್ಮ ಸ್ವಭಾವವೋ, ಅಭಯವೆಂಬುದು ನಮ್ಮ ಸ್ವಭಾವವೋ? ಇದನ್ನು ಚೆನ್ನಾಗಿ ವಿಚಾರಮಾಡಬೇಕು. ಹೇಗೆಂದರೆ, ಸ್ವಭಾವವಾದದ್ದು ಬಿಟ್ಟುಹೋಗುವುದಿಲ್ಲ. ಬಿಟ್ಟುಹೋಗುವುದು ಸ್ವಭಾವವಲ್ಲ, ಎಂಬುದನ್ನು ನೆನಪಿನಲ್ಲಿಟ್ಟುಕೊಂಡಿರಬೇಕು. ಈಗ ನನಗೆ ಭಯವಾಗುವುದಿಲ್ಲ, ಮತ್ತು ನನ್ನದಾಗಿರುವುದು (ಹಣ, ಬಂಧುಗಳು- ಶರೀರೇಂದ್ರಿಯಗಳು, ಮಾನ ಹೋಗಿ ಅಪಮಾನವಾಗುವುದೇ ಮುಂತಾದದ್ದು) ಬಿಟ್ಟುಹೋದೀತೆಂಬ ಕಲ್ಪನೆಯೂ ಭಯಕ್ಕೆ ಕಾರಣವು. ಆದರೆ ಸರಿಯಾಗಿ ವಿಚಾರವನ್ನು ಮಾಡಿದರೆ, ಇವುಗಳು ನನ್ನ ಸ್ವರೂಪಕ್ಕೂ ಸ್ವಭಾವಕ್ಕೂ ಸೇರಿದ್ದೆ? ಹೋಗುತ್ತಿರುವುದೇ ಇವುಗಳ ಸ್ವಭಾವವಾಗಿದ್ದರೆ ಇದಕ್ಕೆ ನಾನೇಕೆ ತಲೆಯನ್ನು ಕೆಡಸಿಕೊಳ್ಳಬೇಕು? ಹೋಗುವುದನ್ನು ಎಷ್ಟು ಬಿಗಿಯಾಗಿ ಅಪ್ಪಿಕೊಂಡರೂ ಅದು ಹೋಗದೇ ಇರುವುದಿಲ್ಲ.

ಹೀಗೊಂದು ರೀತಿಯ ಸಮಾಧಾನ. ಆದರೆ ಇದರಿಂದಲೂ ಆತ್ಯಂತಿಕಾಭಯಪ್ರಾಪ್ತಿಯಾಗುವುದಿಲ್ಲ. ಇದು ಕೇವಲ ನಿಜವಾದ ಅಭಯವನ್ನು ಹುಡುಕಿಕೊಳ್ಳುವುದಕ್ಕೆ ಸಾಧನ ಮಾತ್ರ. ಆದರೆ ಅಭಯವೆಂಬುದು ಸತ್ಯವನ್ನು ಕಂಡುಕೊಳ್ಳದ ಹೊರತು ಉಂಟಾಗುವುದೇ ಇಲ್ಲ. ಸತ್ಯವನ್ನು ಕಂಡುಕೊಳ್ಳುವುದಕ್ಕೂ ಅಭಯಪ್ರಾಪ್ತಿಗೂ ಏನು ಸಂಬಂಧ ಎಂದು ಕೇಳಿದರೆ, ಭಯವಾಗುವುದಕ್ಕೆ ಸುಳ್ಳಾದ ವಸ್ತುವನ್ನು ನೆಚ್ಚಿಕೊಂಡಿರುವುದೂ ಮತ್ತು ಅದರ ಮೇಲಿನ ಅಭಿನಿವೇಶವೇ ಕಾರಣವಾಗಿರುತ್ತದೆ. ಸುಳ್ಳಾದದ್ದು ಯಾವುದು? ಎಂದು ಕೇಳಿದರೆ (1) ಯಾವ ವಸ್ತುವು ಮಾರ್ಪಡುತ್ತಲೇ ಇರುವುದೋ (2) ಯಾವುದು ಒಮ್ಮೆ ಇದೆ ಎಂದು ತೋರಿ ಮತ್ತೊಮ್ಮೆ ಇಲ್ಲವೆನಿಸುವುದೋ ಮತ್ತು (3) ಯಾವುದಕ್ಕೆ ಎಲ್ಲಾ ದೇಶ ಕಾಲ ಅವಸ್ಥೆಗಳಲ್ಲೂ ಇದೆ ಎಂದೆನಿಸಿಕೊಳ್ಳುವುದಕ್ಕೆ ಯೋಗ್ಯತೆ ಇಲ್ಲವೋ ಅದೆಲ್ಲಾ ಸುಳ್ಳಾಗಿದೆ. ಹೀಗೆ ವಿಚಾರವನ್ನು ಮಾಡುತ್ತಾ ಹೋದರೆ ಎಚ್ಚರದ ಯಾವ ದೇಹೇಂದ್ರಿಯಕಾಲದೇಶಾದಿಸಹಿತವಾದ ಪ್ರಪಂಚವೂ ಸ್ವಪ್ನದಲ್ಲಿರುವುದಿಲ್ಲ. ಅಲ್ಲಿನದು ಎಚ್ಚರದಲ್ಲಿರುವುದಿಲ್ಲ, ಸುಷುಪ್ತಿಯಲ್ಲಂತೂ ಈ ಎರಡೂ ಅವಸ್ಥೆಯ ಪ್ರಪಂಚವೂ ಇರುವುದಿಲ್ಲ ಎಂದು ಗೊತ್ತಾಗುತ್ತದೆ. ಹಾಗಾಗಿ ಕಾಲದೇಶಸಹಿತವಾದ ಪ್ರಪಂಚವೇ ಮಿಥ್ಯೆಯು, ಸುಳ್ಳು, ಆತ್ಮನು ಮಾತ್ರ ಮೂರು ಅವಸ್ಥೆಯಲ್ಲೂ ಇರುವವನಾಗಿರುತ್ತಾನೆ, ಹಾಗೆನ್ನುವುದಕ್ಕಿಂತ ಆತ್ಮನಲ್ಲೇ ಮೂರು ಅವಸ್ಥೆಯೂ ತೋರುತ್ತಲಿದೆ, ಆತ್ಮನು ಮಾತ್ರ ಅವುಗಳಿಗಿಂತ ವಿಲಕ್ಷಣನಾಗಿರುತ್ತಾನೆ, ಈ ಮೂರು ಅವಸ್ಥೆಗಳು ಇಲ್ಲದಿದ್ದರೂ ಆತ್ಮನು ತನ್ನ ಸಚ್ಚಿದಾನಂದರೂಪದಿಂದ ಇದ್ದೇ ಇರುತ್ತಾನಾದ್ದರಿಂದ ಆತನೊಬ್ಬನೇ ಪರಮಾರ್ಥಸತ್ಯನು, ಆತನ ಹೊರತಾಗಿ ಎಲ್ಲವೂ ತೋರಿಕೆ ಮಾತ್ರವಾಗಿದೆ ಎಂಬ ಸತ್ಯವನ್ನು ಕಂಡುಕೊಂಡಾಗ ಆತ್ಯಂತಿಕವಾದ ಪರಿಪೂರ್ಣವಾದ ಅಭಯವು ಪ್ರಾಪ್ತವಾದಂತಾಗುತ್ತದೆ. ಆದರೆ ಅದೂ ನಿಜವಾಗಿ ಹೊಸದಾಗಿ ಪ್ರಾಪ್ತಿಯಾಗಬೇಕಾಗಿಲ್ಲ. ಏಕೆಂದರೆ ಆತ್ಮನೆಂದರೆ ನಾವೇ, ನಮ್ಮಗಳ ಉಪಾಧಿಸಂಬಂಧವಿಲ್ಲದ ಪರಮಾರ್ಥಸ್ವರೂಪವಾಗಿರುತ್ತದೆ. ಅಲ್ಲಿ ದ್ವೈತವೇ ಇಲ್ಲದಿರುವುದರಿಂದ ಭಯದ ಸಂದರ್ಭವಾದರೂ ಹೇಗಾಗುತ್ತದೆ? ಹೀಗೆ ನಮ್ಮಗಳ ನಿಜಸ್ವರೂಪದ ಜ್ಞಾನವೇ ಅಭಯತ್ವಕ್ಕೆ ಕಾರಣವೆಂದು ತಿಳಿಯಬೇಕು. ಹೀಗಲ್ಲದೆ ಲೌಕಿಕವಾದ ಯಾವ ವಸ್ತುವಿನ ಪ್ರಾಪ್ತಿಯಾದರೂ ತಾತ್ಕಾಲಿಕವಾಗಿ ಅಭಯವಾದಂತಾಗಿ ಮತ್ತೆ ಭಯವು ನಮ್ಮನ್ನಟ್ಟಿಸಿಕೊಂಡು ಬಂದೇ ತೀರುತ್ತದೆ. ಶಾಶ್ವತಾಭಯವಾಗುವುದೇ ಇಲ್ಲ. ಉಪನಿಷತ್ತುಗಳಲ್ಲಿ ಹೇಳಿರುವ ಬ್ರಹ್ಮಾತ್ಮಜ್ಞಾನದಿಂದಲೇ ಆ ಅಭಯಪ್ರಾಪ್ತಿಯಾಗುವುದು.

* * * * *

# 53. ಅವಧೂತನ ಉಪದೇಶ

**ಸುಖಮೈಂದ್ರಿಯಕಂ ರಾಜನ್ ಸ್ವರ್ಗೇ ನರಕ ಏವ ಚ।**
**ದೇಹಿನಾಂ ಯದ್ಯಥಾದುಃಖಂ ತಸ್ಮಾನ್ನೇಚ್ಛೇತ ತದ್ಬುಧಃ॥**

**- ಶ್ರೀಮದ್ಭಾಗವತ 11-8-1**

ಎಲೆ ರಾಜನೆ, ಇಂದ್ರಿಯ (ವಿಷಯ) ಸಂಪರ್ಕದಿಂದುಂಟಾಗುವ ಸುಖವೆಂಬುದು ಏನಿದೆಯೋ ಅದು ಈ ಲೋಕದಲ್ಲಿ ಜೀವರಿಗೆ ಹೇಗೆ ದುಃಖವನ್ನು ಉಂಟುಮಾಡಿಯೇ ತೀರುತ್ತದೋ ಅದರಂತೆ ಸ್ವರ್ಗದಲ್ಲೂ ನರಕದಲ್ಲೂ ದುಃಖವನ್ನುಂಟುಮಾಡಿಯೇ ತೀರುತ್ತದೆ. ಆದ್ದರಿಂದ ಪಂಡಿತನಾದವನು ಆ ಸುಖದಿಂದ ಜುಗುಪ್ಸೆಯನ್ನು ಹೊಂದಬೇಕು.

**(ಆದ್ದರಿಂದ ಪ್ರಾರಬ್ಧಕರ್ಮಶೇಷವಿರುವವರೆಗೂ ತಾನಾಗಿಯೇ ಒದಗಿಬಂದ ಆಹಾರದಿಂದ ಯಾವ ರಾಗದ್ವೇಷವನ್ನೂ ಹೊಂದದೇ ಶರೀರಯಾತ್ರೆಗಾಗಿ ಸೇವಿಸುತ್ತಾ ಕಾಲಯಾಪನೆ ಮಾಡುತ್ತಿರಬೇಕು)**

## ಪ್ರಕೃತಿಯೇ ಗುರು

ಶ್ರೀಮದ್ಭಾಗವತದಲ್ಲಿ ಈ ಪ್ರಪಂಚದಲ್ಲಿರುವ 24 ಪದಾರ್ಥಗಳೇ ಗುರುಗಳಾಗಿರುತ್ತವೆ ಎಂದು ಹೇಳಿದೆ. ಇದನ್ನು ಆಲೋಚಿಸಿದರೆ ಸಾಧಕರು ಸದ್ಗುರುವು ಎಲ್ಲಿರುತ್ತಾನೆ? ಅವರನ್ನು ಹೇಗೆ ಹುಡುಕುವುದು? ಅವರು ಏನನ್ನು ಉಪದೇಶಿಸುತ್ತಾರೆ? ಎಂಬುದಾಗಿ ಯಾವ ಪ್ರಶ್ನೆಯನ್ನು ಕೇಳುವುದೂ ಅರ್ಥವೇ ಇಲ್ಲ ಎಂದು ಗೊತ್ತಾಗುತ್ತದೆ. ಉಪನಿಷತ್ತುಗಳಲ್ಲಿ ಮತ್ತು ಗೀತೆಯಲ್ಲಿ ತತ್ತ್ವಜ್ಞಾನಿಗಳ ಲಕ್ಷಣವನ್ನೂ ಅವರ ಆವಶ್ಯಕತೆಯನ್ನೂ ಹೇಳಿರುವುದು ನಿಜ. ಅಂಥವರು ಸಿಕ್ಕಿದರೆ ಖಂಡಿತಾ ಅವರನ್ನು ಆ ಸಾಧಕರು ಆಶ್ರಯಿಸಲೇಬೇಕು. ಇದರ ವಿಷಯಕ್ಕೆ ಯಾವ ಸಂದೇಹವೂ ಇಲ್ಲ, ಆದರೆ ಅಂಥವರು ಈಗ ನಮಗೆ ದೊರಕದೇ ಇದ್ದಾಗ ಅಂಥವರನ್ನು ನಮಗೆ ಗುರುತಿಸುವುದಕ್ಕೆ ಆಗದೇ ಇದ್ದಾಗ ಬೇರೆ ಇನ್ನಾವ ಉಪಾಯವನ್ನು ಕೈಗೊಳ್ಳಬಹುದು? ಎಂದರೆ ಇಲ್ಲಿ ಬಹು ಸುಂದರವಾಗಿ ಅದರ ವರ್ಣನೆ ಇರುತ್ತದೆ.

ಆ ಗುರುಗಳು ಯಾರು ಯಾರು? ಎಂದರೆ (1) ಭೂಮಿ, (2) ನೀರು, (3) ಅಗ್ನಿ, (4) ವಾಯು, (5) ಆಕಾಶ, (6) ಚಂದ್ರನು, (7) ಸೂರ್ಯನು, (8) ಕಪೋತ (ಪಾರಿವಾಳ), (9) ಹೆಬ್ಬಾವು, (10) ಸಮುದ್ರ, (11) ದೀಪದ ಹುಳ, (12) ದುಂಬಿ, (13) ಆನೆ, (14) ಜೇನನ್ನು ಕೀಳುವವನು, (15) ಜಿಂಕೆ, (16) ಮೀನು (17) ಪಿಂಗಳೆ ಎಂಬ ಹೆಂಗಸು, (18) ಕುರರ ಪಕ್ಷಿ (19) ಮಗು (20) ಕುಮಾರಿ, (21) ಬಿಲ್ಲುಗಾರ (22) ಹಾವು, (23) ಜೇಡರಹುಳು (24) ರೇಷ್ಮೆಹುಳ ಇವರೇ ಆ ಗುರುಗಳಾಗಿರುತ್ತಾರೆ.

ಅಜಗರನೆಂಬ ಗುರುವಿನಿಂದ ಕಲಿಯಬೇಕಾದದ್ದೇನೆಂದರೆ, ದೇಹೇಂದ್ರಿಯ ಮನಶ್ಶಕ್ತಿಗಳು ಚೆನ್ನಾಗಿದ್ದರೂ ಆಹಾರಕ್ಕಾಗಿ ಒದ್ದಾಡದೇ ಹೆಚ್ಚಿನ ನಿದ್ದೆಗೂ ಅವಕಾಶವನ್ನು ಕೊಡದೇ ಇಂದ್ರಿಯಗಳಿಂದ ವಿಷಯವನ್ನು ಗ್ರಹಿಸದೇ ತತ್ತ್ವವಿಚಾರದಲ್ಲಿಯೇ ದೃಷ್ಟಿಯನ್ನಿಟ್ಟವನಾಗಿರುವುದು. ಸಮುದ್ರವೆಂಬ ಗುರುವಿನಿಂದಲಾದರೋ-ಸಮುದ್ರದಂತೆ ಗಂಭೀರನಾಗಿಯೂ, ಸಮುದ್ರಕ್ಕೆ ಎಷ್ಟೇ ನದಿಗಳು ಮಳೆನೀಲುಗಳು ಸೇರಿದರೂ ಉಬ್ಬರವಿಳಿತವಿಲ್ಲದಂತೆ ಇರುವ ಹಾಗೆ ರಾಗದ್ವೇಷದಿಂದ ಧೃತಿಗೆಡದವನಾಗಿರುವುದು. ದೀಪದ ಹುಳ, ಜೇನುಹುಳ, ಆನೆ, ಜಿಂಕೆ, ಮೀನುಗಳಿಂದ ಕಲಿಯಬೇಕಾದದ್ದೇನೆಂದರೆ ಅವು ಒಂದೊಂದು ಇಂದ್ರಿಯದ ಪಾಟವವನ್ನು ಹೊಂದಿರುವುದರಿಂದ ತಮ್ಮ ಜೀವನವನ್ನೇ ಅದರಿಂದ ಕಳೆದುಕೊಳ್ಳುವವೆಂದಮೇಲೆ ಐದೂ ಇಂದ್ರಿಯದ ಪಾಟವವನ್ನು ಹೊಂದಿರುವ ಮನುಷ್ಯನ ಪಾಡೇನಾಗುವುದು! ಆದ್ದರಿಂದ ಆ ಐದು ಇಂದ್ರಿಯಗಳನ್ನೂ ಬಿಗಿಯಾಗಿ ತನ್ನ ಸ್ವಾಧೀನದಲ್ಲಿಟ್ಟು ಕೊಳ್ಳುವುದಕ್ಕೆ ಪ್ರಯತ್ನಿಸುತ್ತಿರುವಾತನಾಗಬೇಕು. ಜೇನುಹುಳದ ವಿಶೇಷ ಬೋಧೆ ಏನೆಂದರೆ ಅದು ಹೂವಿಗೆ ಹಿಂಸೆ ಮಾಡದೇ ಮಕರಂದವನ್ನು ಹೀರುವಂತೆ ಸಂನ್ಯಾಸಿಯಾದ ಸಾಧಕನು, ಅಥವಾ ಸಾಮಾನ್ಯಸಾಧಕನು, ಯಾರಿಗೂ ಯಾವ ತರಹದ ಹಿಂಸೆಯನ್ನುಂಟುಮಾಡದೇ ಜೀವನವನ್ನು ನಿರ್ವಹಿಸುತ್ತಿರುವದು, ಅಥವಾ ದುಂಬಿಯು ಒಂದೇ ಕಮಲದ ಪೂರ್ಣರಸವನ್ನು ಹೀರುವೆನೆಂದುಕೊಂಡರೆ ಸಂಜೆಯಾಗಿ ಸೂರ್ಯಾಸ್ತಮಾನವಾಗಿ ಕಮಲವು ಮುದುಡಿಕೊಂಡು ಬಂಧನಕ್ಕೊಳಗಾಗಿ ಅಲ್ಲೇ ಸಾಯುವ ಸಂದರ್ಭವು ಬರಬಹುದಾಗಿರುವಂತೆ ಸಂನ್ಯಾಸಿಯು ಒಂದೇ ಮನೆಯಲ್ಲಿ ಅಥವಾ ಒಂದೇ ಗ್ರಾಮದಲ್ಲಿದ್ದುಕೊಂಡರೆ ಅವರ ಬಂಧನದಿಂದ ತನ್ನ ಸಾಧನಮಾರ್ಗಕ್ಕೆ ಚ್ಯುತಿಯಾಗುವ ಅಪಾಯ ವಿರಬಹುದಾಗಿದೆ. ಆದ್ದರಿಂದ ಆ ರೀತಿ ಇರಬಾರದು. ಸಂನ್ಯಾಸಿಯಾದವನು ಮರದಿಂದಲಾಗಲೀ ಲೋಹದಿಂದಲಾಗಲೀ

ಅಥವಾ ಬೇರೆ ಇನ್ಯಾವ ಸಾಧನದಿಂದಲಾಗಲೀ ಮಾಡಿದ ಸ್ತ್ರೀ ವಿಗ್ರಹವನ್ನು ಸಹ ಸೋಂಕಿಸಿಕೊಳ್ಳಬಾರದು. ಸೋಂಕಿಸಿಕೊಂಡರೆ ಹೆಣ್ಣಾನೆಯ ಸಂಗಕ್ಕಾಗಿ ಹೋಗಿ ಗಂಡಾನೆಯು ಬಂಧನಕ್ಕೊಳಗಾಗುವಂತೆ ಒಳಗಾಗಬಹುದೆಂಬುದೇ **ಆನೆಯೆಂಬ** ಗುರುವಿನಿಂದ ಕಲಿಯಬೇಕಾದ ವಿಚಾರವು. **ಜೇನನ್ನು ಕೀಳುವಾತನೆಂಬ** ಗುರುವಿನಿಂದ ಏನನ್ನು ಕಲಿಯಬೇಕೆಂದರೆ, ದುಂಬಿಗಳು ಸಂಗ್ರಹಿಸಿದ್ದ ಜೇನನ್ನು ಜೇನು ಕೀಳುವಾತನು ಅಪಹರಿಸುವಂತೆ ಸಾಧಕನೇನಾದರೂ ಹಣ ಮುಂತಾದವನ್ನು ಗಳಿಸಿಟ್ಟರೆ ಅದನ್ನು ಬೇರೆಯವರು ಅಪಹರಿಸಿ ಅದನ್ನನುಭವಿಸಿಯಾರು! ಅಷ್ಟೆ ಅಲ್ಲದೆ, ಆ ಗಳಿಸಿದ ಪದಾರ್ಥಗಳಿಂದ ತನಗೆ ಅಪಾಯವೇ ಸಂಭವಿಸಬಹುದು! **ಪಿಂಗಳೆ** ಎಂಬುವಳು ಹೇಗೆ ಗುರು? ಎಂದರೆ- ಮಿಥಿಲಾಪುರದಲ್ಲಿದ್ದ ವೇಶ್ಯವೃತ್ತಿಯನ್ನು ಮಾಡಬೇಕೆಂದುಕೊಂಡಿದ್ದ ಆಕೆಗೆ ಆಕೆಯ ಅತಿಯಾದ ಹಣದ ಆಸೆಯಿಂದ ಒಬ್ಬರೂ ಆಕೆಯ ಹತ್ತಿರಕ್ಕೆ ಬರದೇ ಇರಲಾಗಿ ಇಡೀ ರಾತ್ರಿಯೆಲ್ಲಾ ಕಾದರೂ ಒಬ್ಬರೂ ಸಿಗದೆ ಇದ್ದಾಗ ಬಹಳ ವ್ಯಥೆಗೊಂಡು ತನ್ನ ಆಸೆಗೆ ತಾನೇ ಪಶ್ಚಾತ್ತಾಪವನ್ನು ಹೊಂದಿ ಕೊನೆಗೆ ನಾರಾಯಣನನ್ನು ಆಶ್ರಯಿಸಿದಂತೆ, ಯಾವ ವಿಷಯದಲ್ಲಿ ಸಾಧಕನಾದವನು ಆಸೆಪಟ್ಟರೂ ತನ್ನ ಬಯಕೆಗೆ ತಕ್ಕಂತೆ ಅದು ಸಿಗುವುದಿಲ್ಲವೆಂಬುದನ್ನು ತಿಳಿದು ಅವಳಂತೆ ಆಸೆಯನ್ನೆಲ್ಲಾ ತೊರೆದು ಶ್ರೀಮನ್ನಾರಾಯಣನನ್ನು ಆಶ್ರಯಿಸಬೇಕೆಂಬುದೇ ಆಕೆಯಿಂದ ಕಲಿಯಬೇಕಾದ ವಿಷಯವು. **ಕುರರಪಕ್ಷಿಯು** ತಾನು ಬಾಯಿಯಲ್ಲಿ ಒಂದು ಮಾಂಸದ ತುಂಡನ್ನು ಇಟ್ಟುಕೊಂಡಿದ್ದರಿಂದ ಅದನ್ನು ಕಂಡ ಗಿಡುಗಪಕ್ಷಿಯು ಅದನ್ನು ಕೊಂದಾದರೂ ಆ ಮಾಂಸವನ್ನು ತಿನ್ನುವನೆಂದು ಅಟ್ಟಿಸಿಕೊಂಡು ಬರುತ್ತಿರುವುದನ್ನು ಕಂಡು ಆ ಕುರರಪಕ್ಷಿಯು ಆ ಮಾಂಸವನ್ನು ಬಿಸುಟು ತಾನು ಸುಖವಾಗಿದ್ದಂತೆ ಸಾಧಕನಾದವನು ಯಾವ ಭೋಗ ವಸ್ತುವನ್ನು ಸಂಗ್ರಹಿಸಿದ್ದರೂ ಅದರಿಂದ ತನಗೆ ಅಪಾಯವಿದೆಯೆಂದು ತಿಳಿದಿರಬೇಕು. **ಕುಮಾರಿಯೆಂಬ** ಗುರುವು ಮನೆಗೆ ಬಂದ ಅತಿಥಿಗೆ ಸತ್ಕಾರವನ್ನು ಮಾಡುವಾಗ ಕೈಯಲ್ಲಿ ಬಳೆಗಳಿದ್ದರೆ ಅದು ಬಡತನವನ್ನು ಸೂಚಿಸುತ್ತದೆ ಎಂದು ತಿಳಿದು ಎರಡು ಕೈನಲ್ಲೂ ಒಂದೊಂದೇ ಬಳೆಯನ್ನು ತೊಟ್ಟು ಮನೆಗೆಲಸವನ್ನು ಮಾಡಿದಂತೆ ಸಾಧಕರಾದವರು ಒಬ್ಬೊಬ್ಬರೇ ಇದ್ದು ಸಾಧನೆಯನ್ನು ಮಾಡಬೇಕೇ ಹೊರತು ಅನೇಕರು ಸೇರಿದರೆ ಬರೀ ಮಾತು, ಚಿತ್ತಚಾಂಚಲ್ಯಾದಿಗಳಿಗೆ ಅವಕಾಶವಾಗುವುದೆಂಬುದನ್ನು ತಿಳಿಯಬೇಕು. **ಬಿಲ್ಲುಗಾರನು** ತನ್ನ ಲಕ್ಷ್ಯದಲ್ಲೇ ದೃಷ್ಟಿಯನ್ನಿಟ್ಟು ಬಾಣಪ್ರಯೋಗವನ್ನು ಮಾಡುವಂತೆ ಸಾಧಕನು ತನ್ನ ಗುರಿಯನ್ನು ಸಾಧಿ

ಸುವುದರಲ್ಲಿಯೇ ಮಗ್ನನಾಗಿರಬೇಕು. ಹಾವು ಬೇರೆಯದಾದ ಗೆದ್ದಲು ಹುಳುವೇ ಮುಂತಾದದ್ದು ಮಾಡಿದ ಜಾಗದಲ್ಲಿ ವಾಸವನ್ನು ಮಾಡುವಂತೆ ಹಾಳುಮನೆ, ದೇವಾಲಯ, ನದೀಪುಲಿನ, ಗುಹೆ ಮುಂತಾದ ಸ್ಥಳದಲ್ಲಿ ಸಾಧಕನು ಇದ್ದು ಸಾಧನೆಯನ್ನು ಮುಂದುವರೆಸಬೇಕು. ತನ್ನದೆಂಬುದನ್ನು ವಾಸಕ್ಕಾಗಿ ಕಟ್ಟಿಕೊಳ್ಳಬಾರದು. ಜೇಡರಹುಳವು ತನ್ನಿಂದಲೇ ಬಲೆಯನ್ನು ಸೃಷ್ಟಿಸಿ ತನ್ನಲ್ಲಿಯೇ ಅಡಗಿಸಿಕೊಳ್ಳುವಂತೆ ನಾರಾಯಣನೇ ಈ ವಿಶ್ವವನ್ನು ತನ್ನಿಂದಲೇ ಸೃಷ್ಟಿಸಿ ತನ್ನಲ್ಲಿಯೇ ಅಡಗಿಸಿಕೊಳ್ಳುವನೆಂಬ ತತ್ತ್ವವನ್ನು ಯಾವಾಗಲೂ ಅನುಸಂಧಾನವನ್ನು ಮಾಡುತ್ತಿರಬೇಕು. ಪೇಶಸ್ಕರವೆಂಬ ಕೀಟವು ನಿರಂತರ ಒಂದು ಹುಳದ ಮುಂದೆ ತನ್ನ ಶಬ್ದವನ್ನೇ ಮಾಡುತ್ತಾ ಆ ಹುಳುವನ್ನು ತನ್ನ ಜಾತಿಯಾಗಿ ಮಾಡಿಕೊಳ್ಳುವಂತೆ ನಿರಂತರ ಭಗವದ್ಧ್ಯಾನದಿಂದ ಭಗವನ್ಮಯನಾಗುವನೆಂದರಿಯಬೇಕು. ಇದಕ್ಕೆ ಭ್ರಮರಕೀಟನ್ಯಾಯವೆಂತಲೂ ಹೇಳುವರು. ಇನ್ನು ಪಂಚಭೂತಗಳು ಮತ್ತು ಸೂರ್ಯಚಂದ್ರರು ಹೇಗೆ ಪರೋಪಕಾರಕ್ಕಾಗಿಯೇ ಇದ್ದು ಎಲ್ಲೂ ಅಹಂಕಾರದಿಗಳನ್ನು ಮಾಡದೇ ತಮ್ಮ ತಮ್ಮ ಕರ್ತವ್ಯದಲ್ಲಿರುವಂತೆ ಸಾಧಕನಾದವನೂ ಸಹ ಸರ್ವಭೂತಹಿತೈಷಿಯಾಗಿದ್ದು ನಿರಹಂಕಾರದಿಂದಿರಲು ಪ್ರಯತ್ನಿಸುತ್ತಿರಬೇಕು. ರೇಷ್ಮೆಹುಳುವು ತಾನೇ ಸೃಷ್ಟಿಸಿಕೊಂಡ ನೂಲಿನಿಂದ ತಾನು ಸಿಕ್ಕಿಹಾಕಿಕೊಂಡು ಸತ್ತುಹೋಗುವಂತೆ ಕರ್ಮಮಾರ್ಗದಲ್ಲೇ ಯಾವಾಗಲೂ ಇರುತ್ತಿದ್ದರೆ ಅದು ಈ ಸಾಧಕನಿಗೆ ಬಂಧನವನ್ನೇ ಉಂಟುಮಾಡಿ ಸಂಸಾರಬಂಧನದಿಂದ ಬಿಡುಗಡೆಯಾಗುವುದಕ್ಕೆ ಅವಕಾಶವಿಲ್ಲದಂತೆ ಆಗುತ್ತದೆ. ಆದ್ದರಿಂದ ಕರ್ಮಯೋಗದಿಂದ ಕರ್ಮವನ್ನು ಮಾಡುತ್ತಲಿದ್ದು ಆದಷ್ಟು ಬೇಗ ಅದರಿಂದ ನಿವೃತ್ತನಾಗುವುದಕ್ಕೆ ಪ್ರಯತ್ನಿಸುತ್ತಿರಬೇಕು. ಹೀಗೆ ಪ್ರಕೃತಿಯಲ್ಲೇ ಇರುವ ಇಪ್ಪತ್ತನಾಲ್ಕು ಗುರುಗಳಿಂದ ಸರಿಯಾದ ನಡವಳಿಕೆಯನ್ನು ಕಲಿತುಕೊಳ್ಳಬೇಕು.

* * * * *

## 54. ಭಕ್ತನ ಕೃತಾರ್ಥತೆ

**ನ ಪಾರಮೇಷ್ಠ್ಯಂ ನ ಮಹೇಂದ್ರಧಿಷ್ಣ್ಯಂ**
**ನ ಸಾರ್ವಭೌಮಂ ನ ರಸಾಧಿಪತ್ಯಮ್।**
**ನ ಯೋಗಸಿದ್ಧೀರಪುನರ್ಭವಂ ವಾ**
**ಮಯ್ಯರ್ಪಿತಾತ್ಮೇಚ್ಛತಿ ಮದ್ವಿನಾನ್ಯತ್ ॥**

**- ಶ್ರೀಮದ್ಭಾಗವತ 10-14-14**

ನನ್ನಲ್ಲಿ ಸಂಪೂರ್ಣವಾಗಿ ಮನಸ್ಸನ್ನಿಟ್ಟ ಭಾಗವತೋತ್ತಮನು ಪರಮಾತ್ಮನಾದ ನನ್ನ ಹೊರತು ಬೇರೆ ಇನ್ನಾವ ಬ್ರಹ್ಮಲೋಕದ ಒಡೆತನವನ್ನಾಗಲೀ ಇಂದ್ರನ ಪದವಿಯನ್ನಾಗಲೀ, ಸಾರ್ವಭೌಮರ ಸ್ಥಾನವನ್ನಾಗಲೀ, ಸೋಮಲೋಕವನ್ನಾಗಲೀ, ಅಣಿಮಾದಷ್ಟಯೋಗಸಿದ್ಧಿಯನ್ನಾಗಲೀ ಕೊನೆಗೆ ಮೋಕ್ಷವನ್ನಾಗಲೀ ಹೊಂದುವದಕ್ಕೆ ಇಷ್ಟಪಡುವುದಿಲ್ಲ.

**(ಅತ್ಯಂತ ಹೆಚ್ಚಿನದಾದ ಭಗವಂತನ ಸ್ವರೂಪದ ಪರಿಚಯ ಹೊಂದಿದ ಮಹಾತ್ಮನಿಗೆ ಪರಮಾತ್ಮನಿಗಿಂತ ಬೇರೆಯಾದುದೆಲ್ಲಾ ತೋರಿಕೆ ಮಾತ್ರ ಎಂಬ ನಿಶ್ಚಯುವಿರುವುದರಿಂದ ಪುನಃ ಯಾವ ಪ್ರಾಪಂಚಿಕ ವಸ್ತುವನ್ನೂ ಬಯಸುವುದಿಲ್ಲವೆಂಬುದು ಸಹಜವೇ ಆಗಿದೆ.)**

### ಭಕ್ತನ ಕೃತಕೃತ್ಯತೆ

ಪ್ರಪಂಚದ ಪ್ರತಿಯೊಬ್ಬ ಮನುಷ್ಯನೂ ಬೆಳಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೂ ಒಂದಲ್ಲ ಒಂದನ್ನು ಪಡೆಯಲು ಹವಣಿಸುತ್ತಲೇ ಇರುವನು. ಇದಕ್ಕಾಗಿ ಎಷ್ಟೋಂದು ದಿವಸ ಏನೇನೆಲ್ಲಾ ಪ್ರಯತ್ನವನ್ನು ಮಾಡಿ ಏನನ್ನಾದರೂ ಪಡೆಯುತ್ತಲೇ ಇದ್ದರೂ ಕೊನೆಗೆ ಶಾಂತಿ ಇಲ್ಲ, ತೃಪ್ತಿಯೂ ಇಲ್ಲ. ಇನ್ನೂ ಪಡೆಯಲೇಬೇಕೆಂಬ ಆಸೆಯು ಮಾತ್ರ ಹೆಚ್ಚುತ್ತಲೇ ಇರುವುದು. ತನ್ನ ಕಣ್ಣು ಮುಂದೆಯೇ ತನ್ನ ಬಂಧುಗಳು ಮತ್ತು ಇತರರು ಇಹಲೋಕವನ್ನು ತೆರಳಿಹೋಗುತ್ತಿದ್ದರೂ ತಾನೂ ಹೀಗೆ ಒಂದಲ್ಲ ಒಂದು ದಿನ ಹೋಗಲೇಬೇಕೆಂದೂ ಗೊತ್ತಿದ್ದರೂ ಅದೇನು ಮಾಯೆಯೋ ತಿಳಿಯದು ಒಬ್ಬರಿಗೂ ತಮ್ಮ ಪ್ರವೃತ್ತಿಯ ಬಗ್ಗೆ ಅರಿವೇ ಬಾರದು.

ನಾನು ಸತ್ತುಹೋದ ಮೇಲೂ ನನ್ನ ಮಕ್ಕಳು ಮೊಮ್ಮಕ್ಕಳು ಮರಿಮಕ್ಕಳಿಗೆ ಆಗುತ್ತದೆ ಎಂದು ಸಂಗ್ರಹಿಸುತ್ತಲೇ ಇರುತ್ತಾನೆ, ಆ ಮಕ್ಕಳು ಮೊಮ್ಮಕ್ಕಳೂ ಮರಿಮಕ್ಕಳೂ ಇದೇ ರೀತಿ ಸಂಗ್ರಹಿಸುತ್ತಲೇ ಇರುತ್ತಾರೆಯೇ ಹೊರತು ಯಾರಿಗೂ ನಾನೇ ಹೋದ ಮೇಲೆ ಇವರು ಹೇಗೆ ನನ್ನ ಮಕ್ಕಳು ಮುಂತಾದವರಾಗುತ್ತಾರೆ! ಎಂದಾಗಲೀ ನನ್ನ ಜನ್ಮಾಂತರದಲ್ಲೂ ಇರುವವರು ಹೇಗೆ ನನಗೆ ಸಂಬಂಧಪಟ್ಟವರಾಗುತ್ತಾರೆಂದಾಗಲೀ ಒಬ್ಬರಿಗೂ ಯೋಚನೆಗೇ ಬರುತ್ತಿಲ್ಲವಲ್ಲ! ಇದೆಂತಹ ಮಹಾಮಾಯೆ? ಕೇವಲ ವಿವೇಕಶೂನ್ಯರಾಗಿ ''ಗತಾನುಗತಿಕೋ ಲೋಕಃ'' ಎಂಬಂತೆ ಎಲ್ಲರೂ ಹೇಗೆ ಹೋಗುತ್ತಿದ್ದರೋ ನಾವೂ ಹಾಗೆ ಹೋಗಬೇಕೆಂದುಕೊಂಡಿದ್ದಾರೆಯೇ ಹೊರತು ಯಾರೂ ವಿಚಾರವನ್ನು ಮಾಡುತ್ತಿಲ್ಲ. ಈಗ ನಾವು ನಮ್ಮದೆಂದು ಅನುಭವಿಸುತ್ತಿರುವ ದೇಹೇಂದ್ರಿಯ ಮನೋಬುದ್ಧಿಗಳೇ ನಾವಲ್ಲ ನಮ್ಮದಲ್ಲವೆಂದಾದ ಮೇಲೆ ಅದಕ್ಕೆ ಸಂಬಂಧಪಟ್ಟ ಮಕ್ಕಳು ಮೊಮ್ಮಕ್ಕಳಾಗಲೀ ಬಂಧು ಬಾಂಧವರಾಗಲೀ ಹೇಗೂ ನಮ್ಮವರಾಗುವುದಕ್ಕೆ ಸಾಧ್ಯವಿಲ್ಲ. ತಪ್ಪು ತಿಳಿವಳಿಕೆಯಿಂದಲೇ ಈ ದೇಹೇಂದ್ರಿಯಾದಿಗಳು ನಾವಾಗಿರುವಂತೆ ತೋರುತ್ತಿದೆಯೇ ಹೊರತು ಸರಿಯಾಗಿ ವಿಚಾರವನ್ನು ಮಾಡಿದರೆ ಇದರ ಸತ್ಯವು ಬಯಲಾಗುವುದು. ಇದನ್ನು ಮತ್ತೆ ಮತ್ತೆ ಚೆನ್ನಾಗಿ ವಿಚಾರವನ್ನು ಮಾಡುತ್ತಿರಬೇಕು. ಸ್ವತಃ ವಿಚಾರವನ್ನು ಮಾಡುವುದಕ್ಕಾಗದಿದ್ದರೆ ಸದ್ಗ್ರಂಥದ ಸಹಾಯದಿಂದಲಾಗಲೀ ತಿಳಿದವರ ಸಹಾಯದಿಂದಲಾಗಲೀ ಈ ವಿಚಾರವನ್ನು ಮನಸ್ಸಿಗೆ ತಂದುಕೊಳ್ಳುತ್ತಿರಬೇಕು. ಆಗ ಈ ಪ್ರಾಪಂಚಿಕ ಮೋಹವು ಕಮ್ಮಿಯಾಗುತ್ತಾ ಹೋಗುತ್ತದೆ.

ಪ್ರಕೃತ, ಭಕ್ತರ ವಿಚಾರವನ್ನು ತೆಗೆದುಕೊಂಡರೆ ವಿಶೇಷವಾಗಿ ಭಕ್ತನಾದ ಉದ್ಧವನಿಗೆ ಶ್ರೀಕೃಷ್ಣನು ಧ್ಯಾನಯೋಗದ ಸ್ವರೂಪವನ್ನು ವಿವರಿಸುವಾಗ ಭಕ್ತರ ಮನಸ್ಸಿನ ಸ್ಥಿತಿಯನ್ನು ವರ್ಣಿಸಿರುತ್ತಾನೆ. ಆ ಏಕಾಂತಭಕ್ತರು ಭಗವಂತನ ಹೊರತು ಪ್ರಾಪಂಚಿಕ ಯಾವುದೇ ಪದಾರ್ಥವನ್ನೂ ಹಾಗೆಯೇ ಯಾವುದೇ ಸ್ಥಾನಮಾನವನ್ನೂ ಬಯಸುವುದಿಲ್ಲ. ಅಷ್ಟೇ ಅಲ್ಲ ಆ ಪದಾರ್ಥವಾಗಲೀ ಸ್ಥಾನಮಾನವಾಗಲೀ ತಮ್ಮ ಭಕ್ತಿಮಾರ್ಗಕ್ಕೆ ಅಡ್ಡಿಯಾದವುಗಳೆಂದು ಚೆನ್ನಾಗಿ ಬಲ್ಲವರಾಗಿರುತ್ತಾರಾದ್ದರಿಂದ ಅವನ್ನೂ ಬಯಸುವುದಿಲ್ಲ. ಅದೇ ರೀತಿ ಭಗವಂತನೂ ಸಹ ನಿರಂತರವಾಗಿ ತನ್ನನ್ನೇ ಧ್ಯಾನಿಸುತ್ತಿರುವ ಭಕ್ತರನ್ನು ಎಷ್ಟರ ಮಟ್ಟಿಗೆ ಹಚ್ಚಿಕೊಳ್ಳುತ್ತಾನೆಂದರೆ, ''ಭಕ್ತಾಸ್ತೇಽತೀವ ಮೇ ಪ್ರಿಯಾಃ'' (ಆ ಭಕ್ತರು ನನಗೆ ಅತ್ಯಂತ ಪ್ರಿಯರು) ''ಅಹಂ ಸ ಚ ಮಮ

ಪ್ರಿಯಃ'' (ಅವರಿಬ್ಬರಿಗೂ ಪರಸ್ಪರ ಅತ್ಯಂತ ಪ್ರೇಮವಿರುತ್ತದೆ) ಎಂದೂ ಭಗವಂತನೇ ಭಗವದ್ಗೀತೆಯಲ್ಲಿ ಹೇಳಿಕೊಂಡಿರುತ್ತಾನೆ. ಉದ್ಧವನಿಗೆ ಭಗವಂತನು ಹೇಳುವಾಗ ''ನ ತಥಾ ಮೇ ಪ್ರಿಯತಮಃ ಆತ್ಮಯೋನಿರ್ನ ಶಂಕರಃ। ನ ಚ ಸಂಕರ್ಷಣೋ ನ ಶ್ರೀಃ ನೈವಾತ್ಮಾ ಚ ಯಥಾ ಭವಾನ್'' ಬ್ರಹ್ಮನಾಗಲೀ ಶಿವನಾಗಲೀ ಸಂಕರ್ಷಣನಾಗಲೀ, ಸಾಕ್ಷಾತ್ ಲಕ್ಷ್ಮೀದೇವಿಯೇ ಆಗಲಿ ಅವರು ಯಾರೂ ನೀನೆಷ್ಟು ಪ್ರಿಯನೋ ಅಷ್ಟು ಪ್ರಿಯರಲ್ಲ ಎಂದು ಹೇಳಿರುತ್ತಾನೆ! ಅಂದಮೇಲೆ ಭಕ್ತರು ಎಂದರೆ ಎಷ್ಟರಮಟ್ಟಿನ ಪ್ರಿಯತಮರಾದವರು! ಎಂಬುದನ್ನು ನಾವೇ ಊಹೆಮಾಡಿಕೊಳ್ಳಬೇಕು. ಭಕ್ತರು ಭಗವಂತನನ್ನು ಆತ್ಮರೂಪದಿಂದ ಕಂಡುಕೊಂಡು ಪ್ರೇಮಿಸುವವರಾದ್ದರಿಂದ ಪ್ರೇಮಕ್ಕೆ ವಿಷಯವಾದವುಗಳಲ್ಲಿ ಆತ್ಮನಷ್ಟು ಪ್ರಿಯವಾದದ್ದು ಯಾವುದೂ ಇಲ್ಲವಾದ್ದರಿಂದ ಭಕ್ತರು ಅತ್ಯಂತ ಪ್ರಿಯರು ಎಂದು ಹೇಳಿದ್ದು ಸರಿಯಾಗಿದೆ.

ಭಗವಂತನಿಗಿಂತ ಬೇರೆಯಾದದ್ದನ್ನು ಪ್ರಿಯವೆಂದು ಎಣಿಸಿದರೆ ನಿಜವಾಗಿ ಪ್ರಿಯವಾದದ್ದು ನಮ್ಮ ಕೈಬಿಟ್ಟು ಹೋದಂತಾಗುವುದಲ್ಲದೆ ಅಪ್ರಿಯವಾದದ್ದನ್ನು ಪ್ರಿಯವೆಂದು ನೆಚ್ಚಿಕೊಂಡದ್ದರೆ ಆ ಅಪ್ರಿಯವಾದ ವಸ್ತುವೂ ನಮಗೆ ದುಃಖವನ್ನು ಕೊಟ್ಟೇ ತೀರುವುದೆಂಬುದನ್ನು ನಾವು ಎಂದಿಗೂ ಮರೆಯಬಾರದು. ಏಕೆಂದರೆ ಭಗವಂತನಿಗಿಂತ ಬೇರೆಯಾಗಿರುವುದೆಲ್ಲಕ್ಕೂ ಅಸತ್ಯತೆ ಅನಿತ್ಯತೆ ಎಂಬುದು ಕಟ್ಟಿಟ್ಟ ಬುತ್ತಿಯಾಗಿದೆ. ಆ ಅನಿತ್ಯವಾದ ವಸ್ತುವೇ ನಮಗೆ ಕಣ್ಮರೆಯಾಗುವುದರ ಮೂಲಕ ನಮ್ಮ ದುಃಖಕ್ಕೆ ಕಾರಣವಾಗುತ್ತದೆ. ಆದ್ದರಿಂದ ವಿವೇಕಿಯಾದವನು ಈ ಪ್ರಪಂಚದಲ್ಲಿರುವುದೆಲ್ಲದರ ನಿತ್ಯಾನಿತ್ಯತೆಯನ್ನು ವಿವೇಚನೆಯನ್ನು ಮಾಡಿ ಅನಿತ್ಯವಾದದ್ದನ್ನೆಲ್ಲಾ ಕೈಬಿಟ್ಟು ನಿತ್ಯವಾದದ್ದರ ಕಡೆಗೆ ದೃಷ್ಟಿಯನ್ನು ಹಾಯಿಸುವುದಕ್ಕೆ ಆರಂಭಿಸಬೇಕು. ಒಂದೇ ಸಲಕ್ಕೆ ಅನಿತ್ಯವಾದದ್ದನ್ನೆಲ್ಲಾ ಬಿಟ್ಟು ಬಿಟ್ಟು ಹೋಗುವುದಕ್ಕಾಗದಿದ್ದರೂ ಅವುಗಳಲ್ಲಿ ಸಂಗ ಅಭಿಮಾನಾದಿಗಳನ್ನು ಕಮ್ಮಿ ಮಾಡಿಕೊಳ್ಳುತ್ತಾ ಸತ್ಸಂಗಾದಿಗಳನ್ನು ಬಯಸುತ್ತಾ ಆರ್ತತೆಯಿಂದ ಭಗವಂತನಲ್ಲಿ ಮೊರೆಯಿಡುವುದರಿಂದಲೂ ಭಗವದ್ಭಕ್ತಿಯನ್ನು ಬೆಳಸಿಕೊಳ್ಳಬೇಕು. ಒಂದು ಸಲ ಬಲವಾಗಿ ನಮ್ಮ ಹೃದಯದಲ್ಲಿ ಭಗವದ್ಭಕ್ತಿಯು ಬೇರೂರಿದಂತಾಯಿತಾದರೆ ಇನ್ನು ಮೇಲೆ ಹೆದರಿಕೆ ಇಲ್ಲ. ಆ ಪರಮಕರುಣಾಮಯನಾದ ಅಖಿಲಾತ್ಮನಾದ ಭಗವಂತನೆಂಬ ಚುಂಬಕವು ಸಮಸ್ತ ಭಕ್ತಜನರ ಹೃದಯಾಂತರಾಳವನ್ನು ಎಳೆದುಕೊಂಡು ಬಿಡುತ್ತದೆ. ಅಲ್ಲಿಯವರೆಗೇ ನಮ್ಮ ಪ್ರಯತ್ನವು, ಅಲ್ಲಿಂದ ಮುಂದಕ್ಕೆ ಆತನೆ ನಮ್ಮ- ''ಯೋಗಕ್ಷೇಮಂ

ವಹಾಮ್ಯಹಮ್'' ಎಂದು ಹೇಳಿರುವುದರಿಂದ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾನೆ. ಅಲ್ಲಿಂದ ಮುಂದಕ್ಕೆ ಈತ ಕೃತಾರ್ಥನಾದಂತೆಯೇ.

ಹೀಗೆ ಭಗವದ್ಭಕ್ತಿ ಎಂಬುದು ಅತ್ಯಂತ ಸುಖದಾಯಕವೂ ಪರಮ ಪಾವನಕರವೂ ಆಗಿರುವುದರಿಂದಲೂ ಆಚರಿಸುವುದಕ್ಕೂ ಅತ್ಯಂತ ಸುಲಭತಮವಾದ್ದರಿಂದಲೂ ಈ ಘೋರ ಕಲಿಯುಗಲ್ಲಿ ಅದಕ್ಕಿಂತ ಉತ್ತಮವಾದ ಮತ್ತೊಂದು ಸಾಧನೆ ಇರುವುದಿಲ್ಲ. ಪ್ರತಿನಿತ್ಯ ಮನಃಪೂರ್ವಕ ಬಹಳ ಆರ್ತತೆಯಿಂದ ಪರಮಾತ್ಮನ ಹತ್ತಿರ ''ಭಕ್ತಿಮೇವ ಪದಾಂಬುಜೇ ತವ ದೇಹಿ ರಾಮ ಹರೇ ಹರೇ'' ಎಂದು ಕೇಳಿಕೊಳ್ಳುತ್ತಿರಬೇಕು. ಇದೇ ಸಮಸ್ತಪುರುಷಾರ್ಥದಾಯಕ ವಾಗಿದೆ.

* * * * *

# 55. ಸಾಧಕನ ಲಕ್ಷಣ

**ಏಕಶ್ಚರೇನ್ಮಹೀಮೇತಾಂ ನಿಸ್ಸಂಗಸ್ಸಂಯತೇಂದ್ರಿಯಃ।**
**ಆತ್ಮಕ್ರೀಡಶ್ಚಾತ್ಮರತಃ ಆತ್ಮವಾನ್ ಸಮದರ್ಶನಃ॥**
**ವಿವಿಕ್ತಕ್ಷೇಮಶರಣಃ ಮದ್ಭಾವವಿಮಲಾಶಯಃ।**
**ಆತ್ಮಾನಂ ಚಿನ್ತಯೇದೇಕಂ ಅಭೇದೇನ ಮಯಾ ಮುನಿಃ॥**

**- ಶ್ರೀಮದ್ಭಾಗವತ 10-18-20,21**

ಯಾವುದಕ್ಕೂ ಅಂಟಿಕೊಳ್ಳದೇ, ಇಂದ್ರಿಯಗಳನ್ನೆಲ್ಲಾ ಬಿಗಿಹಿಡಿದು, ಆತ್ಮನಲ್ಲೇ ಕ್ರೀಡಿಸುತ್ತಲೂ, ತನ್ನನ್ನೇ ಪ್ರೀತಿಸುತ್ತಲೂ, ಸ್ಥಿರಮನಸ್ಕನಾಗಿ, (ಎಲ್ಲೆಲ್ಲೂ) ಸಮದೃಷ್ಟಿಯನ್ನು ಹೊಂದಿ ಒಬ್ಬಂಟಿಗನಾಗಿ ಈ ಭೂಮಿಯನ್ನು ಸಂಚರಿಸುತ್ತಿರಬೇಕು. ನಿರ್ಜನವೂ ನಿರ್ಭಯವೂ ಆದ (ಸ್ಥಳವನ್ನು) ಆಶ್ರಯಿಸಿ ಪರಮಾತ್ಮನಲ್ಲಿ ಪವಿತ್ರವಾದ ಭಾವನೆಯನ್ನು ಹೊಂದಿ ನನ್ನೊಡನೆ ಅಖಂಡರೂಪದಿಂದ ಮುನಿಯಾದವನು ಆತ್ಮನನ್ನು ಚಿಂತಿಸುತ್ತಿರಬೇಕು.

## ಸಂನ್ಯಾಸಿಯ ಚರ್ಯೆ

ಈಗ ನಾವು ಲೋಕದಲ್ಲಿ ಕಾಣುತ್ತಿರುವ ಸಂನ್ಯಾಸಿಗಳಿಗೂ ಶಾಸ್ತ್ರದಲ್ಲಿ ಪ್ರತಿಪಾದಿಸಿರುವ ಸಂನ್ಯಾಸಿಗಳಿಗೂ ಅಜಗಜಾಂತರ ವ್ಯತ್ಯಾಸವಿರುತ್ತದೆ. ನಿಸ್ಸಂಗನಾಗಿರಬೇಕೆಂಬ ಮೊದಲನೇಯ ನಡವಳಿಕೆಯನ್ನು ಪಾಲಿಸುವುದೇ ಅತ್ಯಂತ ಕಷ್ಟಕರವಾಗಿರುತ್ತದೆ. ಯಾವುದಾದರೊಂದು ಹೇಗಾದರೊಂದು ರೀತಿಯಿಂದ ಬಂದು ಸಾಧಕನನ್ನು ವಿಷಯಗಳು ಬಹಳ ಗೋಳುಗುಟ್ಟಿಸುತ್ತವೆ. ಅದನ್ನು ಅನುಭವಿಸುವವರೆಗೂ ಅದರಲ್ಲಿದ್ದೇನೆಂಬ ಅರಿವೇ ಇಲ್ಲದಂತೆ ಮಾಡಿ ಬಹಳಷ್ಟು ಮಾನಸಿಕ ವಿಕ್ಷೇಪಗಳನ್ನುಭವಿಸಿದ ಮೇಲೆ ನನಗಿದು ಬೇಡವಾಗಿತ್ತು! ನಾನಲ್ಲಿಗೆ ಹೋಗಬಾರದಾಗಿತ್ತು ಎಂದೀ ಪರಿಯಾಗಿ ಪ್ರತಿಯೊಂದು ಸಲದ ವಿಷಯದ ಸಂಬಂಧದಲ್ಲೂ ಪಶ್ಚಾತ್ತಾಪವಾಗುತ್ತಿರುತ್ತದೆ. ಜೀವನದುದ್ದಕ್ಕೂ ತಪ್ಪನ್ನು ಮಾಡುತ್ತಿರುವುದು ಪಶ್ಚಾತ್ತಾಪವನ್ನು ಹೊಂದುವುದು ಇಷ್ಟೆ ಮಾಡಲ್ಪಡುತ್ತಿರುತ್ತದೆಯೇ ಹೊರತು ಇತಃ ಪರಂ ಇನ್ನು ಏನು ಮಾಡಿದರೂ ಅಂತಹ ಸಂದರ್ಭಕ್ಕೆ ನಾನು ಒಳಗಾಗುವುದೇ ಇಲ್ಲ ಎಂದು ನಿಶ್ಚಯಿಸಿಕೊಳ್ಳುವುದಕ್ಕೆ ಆಗುತ್ತಿರುವುದಿಲ್ಲ. ಆದರೆ ಮೇಲಿನ ಎರಡು ಶ್ಲೋಕದ ಅಭಿಪ್ರಾಯಗಳನ್ನು ಮತ್ತೆ ಮತ್ತೆ ಅನುಸಂಧಾನವನ್ನು ಮಾಡುತ್ತಿದ್ದರೆ ಸಾಧಕರಾದ ಪ್ರತಿಯೊಬ್ಬರ ಮಟ್ಟವೂ ಎಷ್ಟು ಅಧೋಸ್ಥಿತಿಯಲ್ಲಿದೆ ಎಂಬುದು ಮನವರಿಕೆಯಾಗುತ್ತದೆ. ಇನ್ನು ಅಧ್ಯಾತ್ಮಜ್ಞಾನಸ್ಥಿತಿಯಲ್ಲಿ ನೆಲೆನಿಲ್ಲುವುದೆಂತಾದೀತು! ಅದು ಬಲುದೂರ! ಆದರೆ ಇಷ್ಟುಮಾತ್ರದಿಂದ ಧೃತಿಗೆಡಬೇಕಾಗಿಲ್ಲ, ಇಂದಾದರೂ ಸ್ವಚ್ಛಹೃದಯದಿಂದ ಪ್ರಾಮಾಣಿಕವಾಗಿ ಸಾಧನೆಯನ್ನು ಕೈಗೊಂಡ ಪಕ್ಷದಲ್ಲಿ ಖಂಡಿತವಾಗಿಯೂ ಗುರಿಯನ್ನು ಸಾಧಿಸುವುದರಲ್ಲಿ ಸಂಶಯವಿಲ್ಲ. ತೀವ್ರ ಅಪೇಕ್ಷೆಯಿದ್ದು ಸಾಧನೆಯನ್ನು ಕೈಗೊಂಡ ಪಕ್ಷದಲ್ಲಿ ಆಗಿಯೇ ತೀರುತ್ತದೆ. ಈಗ ಆ ಸಾಧನೆಗಳಲ್ಲಿ ಪ್ರಧಾನವಾಗಿ ಈ ಶ್ಲೋಕದಲ್ಲಿ ಹೇಳಿರುವ ಕೆಲವನ್ನು ವಿಚಾರ ಮಾಡೋಣ.

ಇಲ್ಲಿ ಸಂಯತೇಂದ್ರಿಯಃ ಎಂದಿದೆ, ಎಂದರೆ ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟು ಕೊಂಡಿರುವವನು, ಎಂದರ್ಥವು. ಸ್ವಭಾವದಿಂದಲೇ ಇಂದ್ರಿಯಗಳು ವಿಷಯಸುಖವನ್ನು ಬೇಟೆಯಾಡುವುದಕ್ಕೆ ಪ್ರಪಂಚದ ಕಡೆಗೆ ಓಡುತ್ತಿರುತ್ತದೆ. ಕತ್ತಲೆಯಲ್ಲಿ ಕಳೆದುಕೊಂಡ ಪದಾರ್ಥವನ್ನು ಕೈಯಿಂದ ತಡಕಾಡುವಂತೆ ವಿಷಯಸುಖವನ್ನು ಇಂದ್ರಿಯಗಳು ತಡಕಾಡುತ್ತವೆ. ಅವಕ್ಕೆ ಸುಖದ ಮೂಲವೇ ಗೊತ್ತಿಲ್ಲವಾದ್ದರಿಂದ ಬೆಳಗ್ಗೆ ಎದ್ದಾಗಿನಿಂದ ರಾತ್ರಿಯವರೆಗೂ ಮಾಡಿದ್ದನ್ನೇ ಮಾಡುತ್ತಾ ರಾತ್ರಿ ಹೊತ್ತಿಗೆ ಶ್ರಾಂತವಾಗಿ

ವಿಶ್ರಾಂತಿಗಾಗಿ ನಿದ್ದೆಗೈಯುತ್ತವೆ. ಮತ್ತೆ ನಿದ್ರೆಯಿಂದ (ಬ್ಯಾಟರಿಯನ್ನು ಛಾರ್ಜ್‌ಮಾಡುವಂತೆ) ಶಕ್ತಿಯನ್ನು ತುಂಬಿಕೊಂಡು ಬಂದು ಮತ್ತೆ ಹಿಂದಿನ ದಿನಗಳಂತೆಯೇ ವಿಷಯದ ಕಡೆಗೆ ಓಡುವುದಕ್ಕಾರಂಭಿಸು ತ್ತವೆ. ಹೀಗೆ ಜೀವನ ಪೂರ್ತಿ ಇದೇ ರೀತಿ ಅವು ವರ್ತಿಸುವುದರಿಂದಲೂ ಅದನ್ನುಪಯೋಗಿಸುವವನಿಗೂ ಇದಕ್ಕಿಂತ ಹೆಚ್ಚಿನದಾದ್ದು ಗೊತ್ತೇ ಇರುವುದಿಲ್ಲವಾದ್ದರಿಂದಲೂ ಇಂಥವರ ವಿಷಯದಲ್ಲಿ ''ಸಂಯತೇಂದ್ರಿಯಃ'' ಎಂಬ ಪದವೇ ಅರ್ಥವಿಲ್ಲದ ಪದವಾಗಿರುತ್ತದೆ.

ಇನ್ನು ಈ ವೇದಾಂತವಿಚಾರವನ್ನು ತಿಳಿದವರಾಗಿದ್ದರೂ ಅವರಿಗೂ ಸಹ ಇದನ್ನು ಹತೋಟಿಯಲ್ಲಿಟ್ಟುಕೊಂಡು ಸರ್ವದಾ ಆತ್ಮಚಿಂತನೆಯನ್ನು ಮಾಡುತ್ತಿರುವುದೆಂಬುದೂ ತುಂಬಾ ಕಷ್ಟಕರವಾದ ವಿಚಾರವಾಗಿರುತ್ತದೆ. ಒಂದು ಕ್ಷಣಕಾಲವಾದರೂ ಆತ್ಮಚಿಂತನೆಯಲ್ಲಿ ಮನಸ್ಸನ್ನು ಸ್ಥಿರಗೊಳಿಸಬೇಕೆಂದುಕೊಂಡರೂ ಅಷ್ಟು ಹೊತ್ತರಲ್ಲಿಯೇ ಇಂದ್ರಿಯಮನಸ್ಸುಗಳು ಎತ್ತಲೋ ಈತನನ್ನು ಒಯ್ದಾಗಿರುತ್ತದೆ. ಬಾಲ್ಯದಿಂದನುಭವಿಸಿದ ವಿಷಯವಾಸನಾ ಸಂಸ್ಕಾರದಿಂದಲಾಗಲೀ ಜನ್ಮಜನ್ಮಾಂತರದ ವಿಷಯಾನುಭವದ ಸಂಸ್ಕಾರದಿಂದಲಾಗಲೀ ಕ್ಷಣಮಾತ್ರಕ್ಕೆ ನಮ್ಮ ಕಣ್ಣನ್ನೂ ತಪ್ಪಿಸಿಕೊಂಡು ಎಲ್ಲಿಗೋ ಹೋಗಾಗಿರುತ್ತದೆ. ಇದನ್ನು ಪ್ರತಿನಿತ್ಯ ಮೆಲ್ಲಮೆಲ್ಲಗೆ ''ಶನೈಃ ಶನೈರುಪನಮೇತ್'' (ಗೀ.6) ಎಂದು ಹೇಳಿದ ಹಾಗೆ ಮನಸ್ಸನ್ನು ಸ್ವಾಧೀನಕ್ಕೆ ತಂದುಕೊಳ್ಳಬೇಕು. ಅದಕ್ಕೂ ಮುಂಚಿತವಾಗಿ ವಿಷಯಗಳಲ್ಲಿರುವ ದೋಷಗಳನ್ನು ಚೆನ್ನಾಗಿ ಮನದಂದುಕೊಂಡು ಇಂದ್ರಿಯಗಳನ್ನು ವಿಷಯಗಳಿಂದ ಹಿಮ್ಮೆಟ್ಟಿಸಿಕೊಂಡು ಬಿಗಿಯಾಗಿ ಜಗ್ಗಿಹಿಡಿದಿರಬೇಕು. ಆಗ ಮನಸ್ಸು ತೀರ ಒಳಗಿರುವ ಆತ್ಮಚಿಂತನೆಗೆ ಅಣಿಯಾಗುತ್ತದೆ. ಹೇಗೆ ಹಾಲನ್ನು ಕಾಯಿಸಬೇಕಾದರೆ ಪಾತ್ರೆಯನ್ನು ಅವಶ್ಯವಾಗಿ ಮುಂಚೆ ಕಾಯಿಸಲೇ ಬೇಕೋ ಅದೇ ರೀತಿ ಮನೋನಿಗ್ರಹವನ್ನು ಮಾಡಬೇಕೆನ್ನುವವನು ಮೊದಲು ಇಂದ್ರಿಯಗಳನ್ನು ಬಿಗಿಹಿಡಿಯಲೇಬೇಕು. ಒಂದು ಜಾಗದಲ್ಲಿ ಸಫಲನಾದರೆ ಮುಂದಿನ ಹಂತದಲ್ಲಿ ಬಹಳ ಬೇಗನೆ ಮುಂದುವರೆಯುತ್ತಾನೆ. ಈ ರೀತಿಯಾಗಿ ಇಂದ್ರಿಯ ಜಯವನ್ನು ಮೊದಲು ಸಂಪಾದಿಸಿಕೊಳ್ಳಬೇಕು. ಅನೇಕ ಸಾಧನೆಗಳಲ್ಲಿ ಒಂದನ್ನು ಸಂಪೂರ್ಣವಾಗಿ ಗೆದ್ದವನಾದ ಎಂದರಾದರೆ ನಿಸ್ಸಂಗನಾಗಿರುವುದು, ಆತ್ಮಕ್ರೀಡನಾಗಿರುವುದು, ಆತ್ಮರತನಾಗಿರುವುದು, ಸಮದರ್ಶನನಾಗಿರುವುದು ಮುಂತಾದ ಎಲ್ಲಾ ಗುಣಗಳೂ ತಾವಾಗಿಯೇ ಜಿತವಾಗುತ್ತಾ ಹೋಗುತ್ತವೆ. ಈ ಸಾಧನೆಗಳು ಒಂದೊಂದು ಇನ್ನೊಂದಕ್ಕೆ ಪೂರಕವಾಗಿವೆಯೇ ಹೊರತು ಬೇರೆಬೇರೆ ಅಲ್ಲ. ಹೀಗಾಗಿ ಆತ್ಮಕ್ರೀಡನು ಆತ್ಮರತಿಯು ಎಂದರೆ ತನ್ನ ನಿಜವಾದ ಸುಖಕ್ಕೆ ಸಾಧನವು ತನ್ನ ವಿಚಾರವೇ ಹೊರತು ಬೇರೆ ಇನ್ಯಾವುದೂ ಅಲ್ಲ ಎಂದು ತಿಳಿದಿರುತ್ತಾನೆ

ಎಂದರ್ಥವು ಯಾವಾಗ ಸುಖವು ಮೂಲವು, ತನ್ನ ಸ್ವರೂಪವೇ ಎಂಬುದನ್ನು ಎಷ್ಟೆಷ್ಟರ ಮಟ್ಟಿಗೆ ಆತನು ಅರ್ಥಮಾಡಿಕೊಳ್ಳುತ್ತಾನೋ, ಹಾಗೆಯೇ ಪ್ರಾಪಂಚಿಕ ಸುಖವೆಂಬುದೆಲ್ಲಾ ಕೇವಲ ಸುಖಾಭಾಸವೆಂಬುದನ್ನು ತಿಳಿದವನಾಗಿರುತ್ತಾನೋ, ಆತನು ಇನ್ಯಾವ ಕಾರಣಕ್ಕೂ ವಿಷಯಾನಂದಕ್ಕಾಗಿ ಹಾತುವರೆಯುವುದಿಲ್ಲ. ಆದರೂ (ಗೊತ್ತಿದ್ದರೂ) ಹಾತುವರೆಯುತ್ತಿರುತ್ತಾನೆಂದಾದರೆ ಆತನಿಗೆ ಖಂಡಿತಾ ಅದು ಗೊತ್ತಿಲ್ಲ ಕೇವಲ ಶಬ್ದಜ್ಞಾನವನ್ನು ಹೊಂದಿರುತ್ತಾನೆನ್ನಬೇಕಾಗುತ್ತದೆ. ಇದು ತನಗೂ ವಂಚನೆ ಸಮಾಜಕ್ಕೂ ಅನ್ಯಾಯ. ಶಾಸ್ತ್ರಕ್ಕೂ ಅಪಚಾರ. ನಿಜವಾದ ಸಾಧಕನು ಯಾವ ಕಾರಣಕ್ಕೂ ತಾನು ಹಿಡಿದ ಮಾರ್ಗವನ್ನು ಬಿಡುವುದಿಲ್ಲ.

ಹಾಗೆಯೇ ಸಮದರ್ಶನನಾಗಿರುತ್ತಾನೆ, ಏಕಾಕಿಯಾಗಿರುತ್ತಾನೆ, ಎಂಬುದೂ ಸಹ ಆತ್ಮನ ಸ್ವಭಾವವೇ ಆಗಿರುವುದರಿಂದ ಕಾಲಕ್ರಮೇಣ ಅದು ಆತನಿಗೆ ಆನಂದದಾಯಕವಾದ ಸಾಧನೆಯೇ ಆಗಿರುತ್ತದೆಯೇ ಹೊರತು ಮತ್ತೊಬ್ಬರ ಬಲಾತ್ಕಾರಕ್ಕಾಗಿ ಕಷ್ಟಪಟ್ಟು ಮಾಡುತ್ತಿರುವುದಿಲ್ಲ. ವಿಷಮವಾಗಿ ಅಂದರೆ ಮೇಲುಕೀಳಾಗಿ ಕಾಣುವುದಕ್ಕೆ ರಾಗದ್ವೇಷಗಳೂ ಉಪಾಧಿದೃಷ್ಟಿಯೂ ಕಾರಣವೇ ಹೊರತು ವಸ್ತುತಃ (ನಿಜವಾಗಿ) ಅಲ್ಲಿ ಏನೂ ಆತರಹದ ಸನ್ನಿವೇಶಗಳೂ ಇರುವುದಿಲ್ಲ. ಎಷ್ಟರ ಮಟ್ಟಿಗೆ ಪರಮಾತ್ಮಭಾವವು ಅಥವಾ ತನ್ನದಾದ ಸರ್ವಾತ್ಮಭಾವವು ಮನದಟ್ಟಾಗುತ್ತಾ ಹೋಗುತ್ತದೋ ಅಷ್ಟಷ್ಟರ ಮಟ್ಟಿಗೆ ಸರ್ವಭೂತಗಳಲ್ಲೂ ಪ್ರೇಮವು ಉಕ್ಕುವುದಕ್ಕಾರಂಭಿಸುತ್ತದೆ. ಯಾವ ಕಾರಣಕ್ಕೂ ಯಾವುದನ್ನೂ ಜುಗುಪ್ಸೆಪಡುವುದಿಲ್ಲ. ತಿರಸ್ಕರಿಸುವುದಿಲ್ಲ. ತನ್ನ ಏಕಾತ್ಮತೆಯನ್ನು ಅನುಸಂಧಾನವನ್ನು ಮಾಡುತ್ತಾ ಆತನು ಎಲ್ಲಿದ್ದರೂ ಏಕಾಕಿಯಾಗಿಯೇ ಇರುತ್ತಾನೆ. ಇದು ಅವನ ಸಹಜ ಸ್ವಭಾವ. ಆರಂಭದ ಹಂತದಲ್ಲಿ ಇದರ ಅಭ್ಯಾಸ ವಾಗುವುದಕ್ಕಾಗಿ ವ್ಯಾವಹಾರಿಕವಾಗಿಯೂ ಆದಷ್ಟು ಮಟ್ಟಿಗೆ ಏಕಾಕಿಯಾಗಿರುವುದಕ್ಕೆ ಹಂಬಲಿಸುತ್ತಾನೆ. ಆತ್ಮನು ಹೇಗೆ ಎಲ್ಲಾ ತರಹದ ಅನಾತ್ಮಸಂಬಂಧವೂ ಇಲ್ಲದೇ ಇರುವಂಥದ್ದೋ ಅಂತಹ ಆತ್ಮನನ್ನು ಕಾಣುವುದಕ್ಕೆ ಅದೇ ತರಹದ ಪ್ರಾಪಂಚಿಕ ಜನರ ಮತ್ತು ಭೋಗ ವಿಷಯದ ಸಂಪರ್ಕವಿಲ್ಲದಂತಿರುವುದಕ್ಕಾಗಿಯೇ ಹಾತುವರೆಯುತ್ತಿರುತ್ತಾನೆಂಬುದು ಸಹಜವಾದದ್ದು. ಇದರಲ್ಲೇನೂ ಆಶ್ಚರ್ಯವಿಲ್ಲ. ''ತದೀಯೋ ಧರ್ಮಃ ಶಮದಮಾದಿಃ'' ''ಜ್ಞಾನಾಭ್ಯಾಸಶ್ಚ'' ಎಂಬ (ಸೂ.ಭಾ.) ವಾಕ್ಯಕ್ಕೂ ಇದೇ ಅಭಿಪ್ರಾಯವು. ಇದೇ ನಿಜವಾದ ಸಂನ್ಯಾಸಧರ್ಮದ ನಡವಳಿಕೆ.

* * * * *

# 56. ಸಾಧಕನ ಧರ್ಮ

**ಕ್ಷಿಪ್ತೋಽವಮಾನಿತೋಽಸದ್ಭಿಃ ಪ್ರಲಬ್ಧೋಽಸೂಯಿತೋಽಥವಾ।**
**ತಾಡಿತಸ್ಸನ್ನಿಬದ್ಧೋ ವಾ ವೃತ್ತ್ಯಾ ವಾ ಪರಿಹಾಪಿತಃ॥**
**ನಿಷ್ಠ್ಯುತೋ ಮೂತ್ರಿತೋ ವಾಜ್ಞೈಃ ಬಹುಧೈವಂ ಪ್ರಕಂಪಿತಃ।**
**ಶ್ರೇಯಸ್ಕಾಮಃ ಕೃಚ್ಛ್ರಗತಃ ಆತ್ಮನಾತ್ಮಾನಮುದ್ಧರೇತ್॥**

**- ಶ್ರೀಮದ್ಭಾಗವತ 11-22-57, 58**

ದುಷ್ಟರಾದವರು ತಳ್ಳಿದರೂ, ಅವಮಾನಗೊಳಿಸಿದರೂ, ಹಾಸ್ಯಮಾಡಿದರೂ, ಅಸೂಯೆಯನ್ನು ಪಟ್ಟರೂ, ಹೊಡೆದರೂ, ಕಟ್ಟಿಹಾಕಿದರೂ, ಜೀವಿಕಾವೃತ್ತಿಯನ್ನು ಹಾಳುಮಾಡಿದರೂ (ತನ್ನ ಮೈಮೇಲೆ) ಉಗುಳಿದರೂ, ಮೂತ್ರವಿಸರ್ಜನೆ ಮಾಡಿದರೂ ಬಹಳವಾಗಿ ಹೆದರಿಸಿದರೂ, ಕಷ್ಟಪ್ರಾಪ್ತವಾದರೂ ಸಹ ಸಾಧಕನಾದವನು ತನಗೆ ಶ್ರೇಯಸ್ಸು ಆಗಲೇಬೇಕೆಂದುಕೊಂಡವನು ತನ್ನನ್ನು ತಾನು ಉದ್ಧಾರವನ್ನು ಮಾಡಿಕೊಳ್ಳಬೇಕೆ ಹೊರತು ಅಜ್ಞರಾದವರು ತನಗೆ ಮಾಡಿದ ಅಪಕಾರಾದಿಗಳನ್ನು ಸ್ಮರಿಸುತ್ತಿರಬಾರದು.

**(ಇದು ಅತ್ಯಂತ ಕಷ್ಟತಮವಾದ ಸಾಧನೆಯು, ಇದನ್ನು ಅಳವಡಿಸಿ ಕೊಂಡವನು ಖಂಡಿತಾ ಮುಕ್ತನಾಗಲು ಅರ್ಹನಾಗುತ್ತಾನೆ.)**

## ಸಾಧಕನ ಸಮುಚಿತ್ತತೆ

ಲೌಕಿಕ ವಿದ್ಯಾಭ್ಯಾಸದಲ್ಲಿ ನಡವಳಿಕೆ ಬಗ್ಗೆ ಶಾಲಾ ಕಾಲೇಜುಗಳಲ್ಲಿ ಯಾವ ಪ್ರಶ್ನೆಗಳನ್ನೂ ಕೇಳುವುದಿಲ್ಲ. ಅಷ್ಟೆ ಅಲ್ಲ, ಶಾಸ್ತ್ರಸಂಮತ ನಡವಳಿಕೆಗಳಿದ್ದರೆ ಆ ವಿದ್ಯಾಭ್ಯಾಸವು ಉತ್ತಮವಾಗುವುದಾದರೂ ಶಾಸ್ತ್ರಸಂಮತವಾದದ್ದಿಲ್ಲದ್ದಿರೆ ಆಗುವುದೇ ಇಲ್ಲ ಎಂಬುದೇನಿಲ್ಲ. ಇಂದಿನ ವಿದ್ಯಾರ್ಥಿಗಳಿಗೆ ಅವು ಇಲ್ಲವೇ ಇಲ್ಲವೆಂದರೂ ತಪ್ಪಾಗಲಾರದು. ಆದರೆ ಈ ವೇದಾಂತಾಧ್ಯಯನಕ್ಕೆ ಮಾತ್ರ ಸದಾಚಾರ, ಒಳ್ಳೆಯ ನಡವಳಿಕೆಯು ಅತಿ ಮುಖ್ಯವಾದದ್ದಾಗಿದೆ. ಇದಿಲ್ಲದ್ದಿರೆ ಆ ಅಧ್ಯಯನದ ಫಲವಾಗುವುದೇ ಇಲ್ಲ. ಹೀಗಾಗಿ ಅಧ್ಯಾತ್ಮಶಾಸ್ತ್ರದಲ್ಲಿ ಎಷ್ಟರ ಮಟ್ಟಿಗೆ ತತ್ತ್ವದ ಪ್ರತಿಪಾದನೆ ಮಾಡಲಾಗುತ್ತದೋ ಅಷ್ಟು ಮಟ್ಟಿಗೆ ಸಾಧನವಿಚಾರವನ್ನೂ ತುಂಬಾ ಆಗ್ರಹಪೂರ್ವಕವಾಗಿ ತಿಳಿಸುತ್ತಾರೆ. ಶಮಾದಿಷಟ್ಕ, ಅಮಾನಿತ್ವಾದಿಸಾಧನಗಣ,

ಸ್ಥಿತಪ್ರಜ್ಞನ ಮತ್ತು ಅಕ್ಷರೋಪಾಸಕನ ಲಕ್ಷಣಗಲನ್ನೂ, ಬುದ್ಧಿವಿಶುದ್ಧತ್ವಾದಿಗಳನ್ನೂ ಸಾಗ್ರಹಪೂರ್ವಕವಾಗಿಯೇ ಪ್ರತಿಪಾದಿಸುತ್ತಾರೆ.

ಈ ಸಾಧನೆಗಳನ್ನು ಮಾಡುವುದಕ್ಕೂ ಸಾಧಿಸಿಕೊಳ್ಳುವುದಕ್ಕೂ ಮೊದಲು ಎಷ್ಟೇ ಕಷ್ಟಕರವಾಗಿ ತೋರಿಬಂದರೂ ಅಭ್ಯಾಸವನ್ನು ಮಾಡುತ್ತಾ ಸಾಧನೆಮಾಡುತ್ತಿದ್ದರೆ ಕಾಲಕ್ರಮೇಣ ನಮಗೆ ಅದು ಜಿತವಾಗುತ್ತದೆ. ಅಷ್ಟೇ ಅಲ್ಲ. ಅದೇ ಸ್ವಾಭಾವಿಕವಾದ ನಡವಳಿಕೆಯಾಗಿ ರಕ್ತಗತವಾಗಿ ಬಿಡುತ್ತದೆ. ಆರಂಭದ ಸ್ವಲ್ಪ ಹಂತದಲ್ಲಿ ಕಷ್ಟಕರವಾಗಿ ತೋರುತ್ತದೆ ಅಷ್ಟೆ. ಯಾವುದೇ ಸಾಧನವಿಚಾರವಾದರೂ ಹೀಗೆಯೇ. ಮಕ್ಕಳಾಗಿದ್ದಾಗ ಆಟದ ಕ್ಷೇತ್ರವನ್ನು ಬಿಟ್ಟು ಓದಬೇಕು ಬರೆಯಬೇಕು ಚೆನ್ನಾಗಿ ವಿದ್ಯಾಭ್ಯಾಸವನ್ನು ಮಾಡಬೇಕೆಂದರೆ ಮಕ್ಕಳಿಗೆ ತುಂಬಾ ಬೇಸರವೇ ಆಗುತ್ತದೆ. ಎಷ್ಟೋ ಸಂದರ್ಭಗಳಲ್ಲಿ ತಂದೆತಾಯಂದಿರರಿಂದ ಹೊಡೆತವನ್ನು ತಿನ್ನಬೇಕಾಗುತ್ತದೆ. ಕ್ರಮೇಣ ಅದು ಸರಿಯಾಗುತ್ತದೆ. ಹೀಗೆಯೇ ಎಲ್ಲಾ ಕ್ಷೇತ್ರವೂ ಆರಂಭದಲ್ಲಿ ಕಷ್ಟಕರವೇ ಆಗಿರುತ್ತದೆ. ಆದರೆ ವೇದಾನ್ತಮಾರ್ಗದ ವಿಶೇಷವೇನೆಂದರೆ ಯಾವಜ್ಜೀವವೂ ಈ ನಡವಳಿಕೆಗಲು ಹೀಗೆಯೇ ಇರಬೇಕಾಗುತ್ತದೆ. ಲೋಕದ ಕೆಲ ಕೆಲವಕ್ಕೆ ತಾತ್ಕಾಲಿಕವಾಗಿ ಇದ್ದರೂ ಸಾಕಾಗುವಂತೆ ಇದಕ್ಕೆ ಹಾಗೆ ಬರುವುದಿಲ್ಲ. ಇಲ್ಲಿ ತತ್ತ್ವಜ್ಞಾನವೇ ಪ್ರಧಾನವಾದ್ದರಿಂದ ಆದಾಗುವವರೆಗೂ ಅವನ್ನು ಬಿಡುವುದಕ್ಕೆ ಬರುವುದಿಲ್ಲ. ಆದರೆ ಆರಂಭ ಹಂತದಲ್ಲಿ ಕಷ್ಟವಾಗುವಂತೆ ಸ್ವಲ್ಪದಿನದ ಅಭ್ಯಾಸವಾದ ಮೇಲೆ ಕಷ್ಟವಾಗುವುದಿಲ್ಲ. ಆಮೇಲೆ ಅದೇ ಸಹಜವಾಗುತ್ತಾ ಹೋಗುತ್ತದೆ. ಏಕೆಂದರೆ ಈ ಎಲ್ಲಾ ಸದ್ಗುಣಗಳು ಆತ್ಮನ ಗುಣಗಳಾಗಿವೆ. "**ಉತ್ಪನ್ನಾತ್ಮಪ್ರಬೋಧಸ್ಯ ಹ್ಯದ್ವೇಷ್ಟೃತ್ವಾದಯೋ ಗುಣಾಃ। ಅಯತ್ನತಃ ಪ್ರಸಿದ್ಧ್ಯನ್ತಿ ನ ತು ಸಾಧನರೂಪಿಣಃ ॥ (ನೈ.ಸಿ.4-69)** "ಆತ್ಮಜ್ಞಾನಿಗೆ ಅದ್ವೇಷ್ಟೃತ್ವಾದಿಗುಣಗಳು ಪ್ರಯತ್ನವಿಲ್ಲದೇ ಜಿತವಾಗಿರುತ್ತವೆ. ಅವು ಅವನಿಗೆ ಸಾಧನರೂಪವಾದದ್ದಲ್ಲ" ಎಂದು ಶ್ರೀಸುರೇಶ್ವರರು ಅಪ್ಪಣೆಯನ್ನು ಕೊಡಿಸಿರುತ್ತಾರೆ. ಆದ್ದರಿಂದ ಕೃತಕವಾಗಿರುವ ಈ ಗುಣಗಳನ್ನು ನಾವು ನಮ್ಮದನ್ನಾಗಿ ಮಾಡಿಕೊಳ್ಳುವುದಲ್ಲ ಮತ್ತೇನೆಂದರೆ ಇವೇ ನಮ್ಮಸ್ವಭಾವವು. ದೇಹೇಂದ್ರಿಯ ಮನೋಬುದ್ಧಿಗಳಿಗೆ ದಾಸರಾದ ನಮಗೆ ಇವು ಕಷ್ಟಕರವಾಗಿ ತೋರುತ್ತದೆ. ಅಷ್ಟೆ!

ಈ ಹಿಂದಿನ ಭಾಗವತ ಶ್ಲೋಕದ ಚರ್ಯೆಗೆ ಶ್ರೀ ಭಗವಾನ್ ರಮಣ ಮಹರ್ಷಿಗಳು ಪ್ರತ್ಯಕ್ಷೋದಾಹರಣೀಯರಾಗಿದ್ದರೆಂದು ಅವರ ಚರಿತ್ರೆಯಿಂದ ತಿಳಿದುಕೊಳ್ಳಬಹುದು. ಅವರ ತಮ್ಮ ಹದಿನಾರನೆ ವಯಸ್ಸಿನಲ್ಲೇ ತಿರುವಣ್ಣಾಮಲೆಗೆ ಬಂದು ಬೆಟ್ಟವನ್ನು ಹತ್ತಿದವರು ಕೊನೆಯ ಉಸಿರಿನವರಿಗೂ ಇಳಿಯಲೇ ಇಲ್ಲ ಎಂದೂ

ನಾವು ಕೇಳಿದ್ದೇವೆ. ಮೊದಮೊದಲು ಅವರು ಆ ಬೆಟ್ಟದಲ್ಲಿ ಧ್ಯಾನವನ್ನು ಮಾಡುತ್ತಿರುವಾಗ ಅಲ್ಲಿಗೆ ದನಕುರಿಗಳನ್ನು ಮೇಯಿಸಲು ಬಂದವರು ಅವರ ಮೇಲೆ ಮೂತ್ರ ವಿಸರ್ಜಿಸುವುದು, ಉಗುಳುವುದು, ಕಲ್ಲಿನಿಂದ ಹೊಡೆಯುವುದು ಮುಂತಾದ ಅನೇಕ ತರಹದ ಚಿತ್ರಹಿಂಸೆಗಳನ್ನು ಅವರಿಗೆ ಕೊಡುತ್ತಿದ್ದರಂತೆ! ಆದರೂ ಅವರು ಯಾರಿಗೂ ಯಾವ ತರಹದ ಪ್ರತೀಕಾರವನ್ನೂ ಮಾಡುತ್ತಿರಲಿಲ್ಲ. ಅಷ್ಟೇ ಅಲ್ಲ, ಭಗವಾನ್ ಶ್ರೀ ರಮಣರಿಗೆ ಅಲ್ಲಿ ಊಟೋಪಹಾರಕ್ಕಾಗಲೀ ಸ್ನಾನಾದಿಗಳಿಗಾಗಲೀ ಏನೂ ಅನುಕೂಲ ಇರಲಿಲ್ಲವಂತೆ. ಪ್ರಾಕೃತಿಕವಾದ ಮಳೆಯೇ ಸ್ನಾನ, ಕೌಪೀನವಷ್ಟೇ ಅವರ ವಸ್ತ್ರ, ಅಲ್ಲಿ ಒಂದು ಹಸುವು ಅವರಿಗಾಗಿ ಹಾಲನ್ನು ಕೊಡುತ್ತಿತ್ತಂತೆ, ಅಥವಾ ಯಾವತ್ತಾದರೂ ಯಾರಾದರೂ ಏನಾದರೂ ತಂದುಕೊಟ್ಟರೆ ಊಟೋಪಹಾರ! ಅದಷ್ಟೇ ಅವರ ಆಹಾರವು, ಹೀಗಿತ್ತು ಅವರ ಲೋಕೋತ್ತರವಾದ ಚರಿತ್ರೆಯು. ಅವರ ಕಾಲವೇನು ನೂರಾರು ವರ್ಷ ಕಳೆದ ಋಷಿಮುನಿಗಳ ಕಾಲವಲ್ಲ. ತುಂಬಾ ಇತ್ತೀಚಿನವರು ಆ ಮಹರ್ಷಿಗಳು! ಇದನ್ನೆಲ್ಲಾ ಕೇಳಿದರೆ ಅಥವಾ ಅವರ ಚರಿತ್ರೆಯನ್ನು ಓದಿದರೆ ನಮಗೂ ಹಾಗೇ ಇರಬೇಕು ಎನ್ನಿಸುತ್ತದೆ. ಆದರೆ ಸಾಧನೆಯ ಬಗ್ಗೆ ಆಗ್ರಹ, ತತ್ತ್ವಜ್ಞಾನವಾಗಬೇಕೆಂಬ ಉತ್ಕಟ ಇಚ್ಛೆ ಇರಬೇಕು. ಹೀಗಿದ್ದು ನಾವು ಸಾಧನೆಯೇ ಮುಂತಾದವುಗಳನ್ನು ಮಾಡಿದರೆ ಖಂಡಿತವಾಗಿಯೂ ಅವು ಜಿತವಾಗುವವು, ತತ್ತ್ವಜ್ಞಾನವು ಉಂಟಾಗುವದು, ಸಂದೇಹವಿಲ್ಲ. ಅಷ್ಟು ತೀವ್ರ ಆಸಕ್ತಿಯಿರಬೇಕು ಅಷ್ಟೆ! ಅದು ಉಂಟಾದರೆ ತನಗೆ ತಾನೇ ಎಲ್ಲ ಸಾಧನಗಳನ್ನೂ ಅಣಿಮಾಡಿಕೊಳ್ಳುತ್ತದೆ.

ಇಲ್ಲಿ ಇನ್ನೊಂದು ರಹಸ್ಯ ವಿಚಾರವೇನೆಂದರೆ ಈ ಅಧ್ಯಾತ್ಮಶಾಸ್ತ್ರಗಳಲ್ಲಿ ಅನೇಕ ಸಾಧನೆಗಳನ್ನು ಏನು ಪಟ್ಟಿ ಮಾಡಿರುತ್ತದೆ, ಅದೆಲ್ಲವನ್ನೂ ಎಲ್ಲರೂ ಮಾಡಕೂರಬೇಕೆಂದರ್ಥವಲ್ಲ. ಏಕೆಂದರೆ ಒಂದೊಂದನ್ನಾಗಿ ಮಾಡುತ್ತಾ ಕೂತರೆ ಜೀವನ ಪೂರ್ತಮಾಡಿದರೂ ಅವು ಮುಗಿಯುವುದಲ್ಲ, ಅಷ್ಟೇ ಅಲ್ಲ, ಅದರ ಆವಶ್ಯಕತೆಯೂ ಇರುವುದಿಲ್ಲ. ಮತ್ತೇನೆಂದರೆ ಇಲ್ಲಿ ಹೇಳಿದ ಅನೇಕ ಸಾಧನೆಗಳಲ್ಲಿ ಯಾವುದಾದರೊಂದನ್ನು ತನ್ನ ಆವಶ್ಯಕತೆ ಮತ್ತು ಯೋಗ್ಯತೆಗೆ ತಕ್ಕಂತೆ ಆರಿಸಿಕೊಂಡು ಸಾಧನೆಯನ್ನು ಮಾಡಿದರೂ ಸಿದ್ಧಿಸುತ್ತದೆ. ಎಲ್ಲರಿಗೂ ಎಲ್ಲಾ ಸಾಧನೆಯ ಆವಶ್ಯಕತೆಯೂ ಇರುವುದಿಲ್ಲ. ಏಕೆಂದರೆ ಪ್ರತಿಯೊಬ್ಬರಿಗೂ ಯಾವುದಾದರೊಂದು ಗುಣವು ಸಹಜವಾಗಿಯೇ ಇರುತ್ತದೆ. ''**ಅಯೋಗ್ಯಃ ಪುರುಷೋ ನಾಸ್ತಿ**'' ಎಂದಿರುವುದರಿಂದ ಯಾವ ಗುಣವೂ ಇಲ್ಲದ ಪುರುಷನೆಂಬುವನೇ ಇರುವುದಿಲ್ಲ. ಯಾರಲ್ಲಾದರೂ ಏನಾದರೊಂದು ಸದ್ಗುಣವಿದ್ದೇ ಇರುತ್ತದೆ. ಆದರೆ ಪ್ರಧಾನವಾದ ಅಧ್ಯಾತ್ಮಜ್ಞಾನಕ್ಕೆ ಬೇಕೇಬೇಕಾದ ಗುಣಗಳಲ್ಲಿ ಒಂದನ್ನು ಆರಿಸಿಕೊಂಡು ಬಲವಾಗಿ

ಸಾಧಿಸಿದರೆ ಅದೇ ಕಾಲಕ್ರಮೇಣ ಬೇರೆ ಎಲ್ಲಾ ಗುಣಗಳನ್ನು ಎಳೆದುಕೊಳ್ಳುತ್ತದೆ. ಆಗ ಬೇರೆ ಗುಣಸಂಪಾದನೆಯ ಸಾಧನೆಯೂ ಈತನಿಗೆ ಸುಲಭವಾಗುತ್ತದೆ. ಎಲ್ಲಕ್ಕಿಂತ ಯಾವಾಗಲೂ ವೇದಾಂತಗ್ರಂಥಗಳನ್ನೇ ಓದುತ್ತಲೂ ಆ ವಿಚಾರಗಳನ್ನೇ ಚಿಂತಿಸುತ್ತಲೂ ಇದ್ದರೆ ಅದೇ ಎಲ್ಲಾ ಗುಣಗಳನ್ನೂ ತಂದುಕೊಳ್ಳುತ್ತದೆ. ಏಕೆಂದರೆ ಪ್ರತಿಯೊಬ್ಬರಿಗೂ ಇರುವುದು ಮನಸ್ಸು ಒಂದೇ, ಆ ಮನಸ್ಸು ಸರ್ವದಾ ತತ್ತ್ವವಿಚಾರದಲ್ಲೇ ಮುಳುಗಿಬಿಟ್ಟಿದ್ದರೆ ಇನ್ನು ಕಾಮಾದಿಗಳಿಗೆ ಅವಕಾಶವು ತಾನೆ ಎಲ್ಲಿಂದ ಹೇಗೆ ಬರುತ್ತದೆ! ಆದ್ದರಿಂದ ಅದೊಂದೇ ಸಾಕು, ಅಥವಾ ಇದನ್ನು ಮಾಡುವುದಕ್ಕಾಗದಿದ್ದರೆ ಸರ್ವದಾ ಭಗವಂತನ ಚಿಂತನೆ, ಭಕ್ತಿ, ಭಜನೆ ನಾಮಸ್ಮರಣೆಯನ್ನು ಮಾಡುತ್ತಿದ್ದರೂ ಹೀಗೆಯೇ ಆಗುತ್ತದೆ. ಇದು ಎಲ್ಲರಿಗೂ ಸುಲಭವೂ ಆಗಿರುತ್ತದೆ. ಇದರಿಂದ ಬಲು ಬೇಗನೆ ಸಾಧನಮಾರ್ಗದಲ್ಲಿ ಪ್ರಗತಿಹೊಂದುವುದರ ಮೂಲಕ ಭಗವಂತನ ದರ್ಶನಕ್ಕೆ (ತತ್ತ್ವವನ್ನು ಕಂಡುಕೊಳ್ಳುವುದಕ್ಕೆ) ತಕ್ಕ ಅಧಿಕಾರಿಗಳಾಗುತ್ತೇವೆ.

* * * * *

## 57. ದುಃಖಕ್ಕೆ ಮನಸ್ಸೇ ಕಾರಣ

**ನಾಯಂ ಜನೋ ಮೇ ಸುಖದುಃಖಹೇತುಃ**
**ನ ದೇವತಾತ್ಮಾಗ್ರಹಕರ್ಮಕಾಲಾ।**
**ಮನಃ ಪರಂ ಕಾರಣಮಾಮನನ್ತಿ**
**ಸಂಸಾರಚಕ್ರಂ ಪರಿವರ್ತಯೇದ್ಯತ್॥**

**- ಶ್ರೀಮದ್ಭಾಗವತ 11-23-43**

(ಮನುಷ್ಯನ) ಸುಖದುಃಖಕ್ಕೆ ಈ ಪ್ರಪಂಚದ ಜನರು ಕಾರಣರಲ್ಲ, ಹಾಗೆಯೇ ದೇವತೆಗಳಾಗಲೀ, ಸೂರ್ಯಾದಿಗ್ರಹಗಳಾಗಲೀ ಕಾಲಕರ್ಮಗಳಾಗಲೀ ಯಾವುದೂ ಕಾರಣವಲ್ಲ. ಮತ್ತೇನೆಂದರೆ, ಈ ಸಂಸಾರವೆಂಬ ಚಕ್ರವನ್ನು ಯಾವ ಮನಸ್ಸು ಸುತ್ತುತ್ತಿರುವುದೋ ಆ ಮನಸ್ಸೇ ನಿಜವಾಗಿ ಸುಖದುಃಖಗಳಿಗೆ ಕಾರಣವೆಂದು ಜ್ಞಾನಿಗಳು ಹೇಳುತ್ತಾರೆ.

**(ಮನುಷ್ಯರ ಬಂಧಮೋಕ್ಷಕ್ಕೆ ಮನಸ್ಸೇ ಕಾರಣವು, ವಿಷಯಾಸಕ್ತವಾದ ಮನಸ್ಸು ಬಂಧಕ್ಕೂ ನಿರ್ವಿಷಯವಾದ ಮನಸ್ಸು ಮೋಕ್ಷಕ್ಕೂ ಕಾರಣವಾಗಿರುತ್ತದೆ.)**

## ಮನಸ್ಸಿನ ಸಂಯಮ

ಹಿಂದೆ ಮಾಳವವೆಂಬ ದೇಶದಲ್ಲಿ ಒಬ್ಬ ಬ್ರಾಹ್ಮಣನಿದ್ದನು. ಆತನು ಕೃಷಿಕರ್ಮ, ವ್ಯಾಪಾರಗಳಿಂದ ಅತ್ಯಂತ ಶ್ರೀಮಂತ ನಾಗಿದ್ದನು. ಆದರೆ ಆತನು ಅಷ್ಟೇ ಜಿಪುಣನೂ ಧರ್ಮರಹಿತನೂ ಆಗಿದ್ದನು. ಆತನು ಮನೆಗೆ ಬಂದ ಅತಿಥಿ ಅಭ್ಯಾಗತರನ್ನಾಗಲೀ ಬಂಧುಬಾಂಧವರನ್ನಾಗಲೀ ಒಳ್ಳೆಯ ಮಾತಿನಿಂದಲೂ ಸಹ ಆದರಿಸುತ್ತಿರಲಿಲ್ಲ. ಇವನ ಲೋಭಿತನವು ಈತನ ಹೆಂಡತಿ ಮಕ್ಕಳಿಗೂ ಬಂಧುಬಾಂಧವರಿಗೂ ಸಹ ಜುಗುಪ್ಸೆಯಾಗತೊಡಗಿತು. ಅವರೆಲ್ಲಾ ಸೇರಿ ಈತನಿಗೆ ದ್ರೋಹಮಾಡತೊಡಗಿದರು. ಬಹಳ ಆಯಾಸದಿಂದ ಗಳಿಸಿದ ಹಣವು ಈತನಲ್ಲಿ ಪುಣ್ಯಕರ್ಮವಿಲ್ಲದ್ದರಿಂದ ಕ್ಷಯವಾಗತೊಡಗಿತು. ಕೃಷಿವಾಣಿಜ್ಯದಲ್ಲಿ ಬಹಳವಾದ ನಷ್ಟವನ್ನನುಭವಿಸಿದನು. ಸ್ವಲ್ಪ ಹಣವನ್ನು ಹೆಂಡತಿ ಮಕ್ಕಳೂ ಕೆಲವನ್ನು ಕಳ್ಳಕಾಕರೂ ಅಪಹರಿಸಿದರು. ಇನ್ನು ಕೆಲವು ಧ್ಯಾನ್ಯಾದಿಗಳೂ ವಸ್ತುಗಳೂ ಮನೆಗೆ ಬೆಂಕಿ ಬಿದ್ದು ನಾಶವಾಯಿತು. ಅಲ್ಪಸ್ವಲ್ಪ ಉಳಿದಿದ್ದನ್ನು ರಾಜನ ಕಡೆಯವರೂ ಸಹ ಅಪಹರಿಸಿ ಈತನನ್ನು ನಿರ್ಗತಿಕನನ್ನಾಗಿ ಮಾಡಿದರು. ಈ ಬ್ರಾಹ್ಮಣನು ಹೀಗೆ ಹಣವನ್ನೆಲ್ಲಾ ಕಳೆದುಕೊಂಡ ನಂತರ ನಿರಂತರ ಆದರ ಬಗ್ಗೆಯೇ ಚಿಂತಿಸುತ್ತಾ ಕಣ್ಣೀರಿಡುತ್ತಾ ಸಂಕಟಪಡುತ್ತಾ ಕುಳಿತನು. ಆನಂತರ ಜನ್ಮಾಂತರದಲ್ಲಿ ಸಂಚಯಿಸಿದ ಪುಣ್ಯವಶಾತ್ ವಿವೇಕದಿಂದ ವಿಚಾರವನ್ನು ಮಾಡುತ್ತಾ ಹಣದ ವಿಷಯದಲ್ಲಿ ವೈರಾಗ್ಯವನ್ನು ಹೊಂದಿದನು. ಅನಂತರ ಪಶ್ಚಾತ್ತಾಪವನ್ನು ಹೊಂದಿ ಜೀವನವನ್ನು ಸಾರ್ಥಕಗೊಳಿಸಬೇಕೆಂದು ದೃಢಸಂಕಲ್ಪವನ್ನು ಹಣದಿಂದಾಗುವ ಅನರ್ಥವನ್ನು ಮನದಂದು ಶ್ರೀಹರಿಯನ್ನು ಶರಣುಹೊಕ್ಕನು. ಆಯುಷ್ಯದಲ್ಲಿ ಉಳಿದ ಅಲ್ಪಸ್ವಲ್ಪ ಕಾಲವನ್ನಾದರೂ ಪರಮಾತ್ಮನ ಚಿಂತನೆಗೆ ಉಪಯೋಗಿಸಿ ಅನರ್ಥಗಳಿಂದ ಪಾರಾದವನಾಗಿ ತಪಸ್ಸಿನಿಂದಲೇ ಶರೀರವನ್ನು ತ್ಯಜಿಸುವೆನೆಂದು ನಿಶ್ಚಯಿಸಿದನು. ಅಲ್ಲಿಂದ ಮುಂದಕ್ಕೆ ಸಮಸ್ತ ದೇವತೆಗಳನ್ನೂ ಪ್ರಾರ್ಥಿಸುತ್ತಾ ಅವರ ಅನುಮತಿಯ ಮೇರೆಗೋ ಎಂಬಂತೆ ಒಂದು ಕ್ಷಣ ಕಾಲವನ್ನು ವ್ಯರ್ಥವನ್ನು ಮಾಡದೇ ಭಗವಂತನ ಚಿಂತನೆಯಲ್ಲೇ ಮುಳುಗಿದನು. ಖಟ್ವಾಂಗನೆಂಬ ರಾಜನು ಒಂದು ಮುಹೂರ್ತಮಾತ್ರದ ಅವಕಾಶದಿಂದಲೇ ಬ್ರಹ್ಮಲೋಕವನ್ನು ಹೊಂದಿದನೆಂದಾದರೆ ನನ್ನ ಅವಶಿಷ್ಟಕಾಲದಲ್ಲಿ ಹೊಂದುವುದಕ್ಕೆ ಏಕೆ ಆಗುವುದಿಲ್ಲ? ಎಂದು ಆತ್ಮವಿಶ್ವಾಸವನ್ನು ಹೊಂದಿ ಅಹಂಕಾರಮಮಕಾರವನ್ನು ತೊರೆದು ಸಂನ್ಯಾಸವನ್ನುಪಡೆದನು. ಆತನು ಆ ಸಂನ್ಯಾಸಧರ್ಮದಲ್ಲಿ ಎಷ್ಟರ ಮಟ್ಟಿಗೆ ನಿಷ್ಠೆಯಿಂದಿದ್ದನೆಂದರೆ ಆತನನ್ನು ಕೆಲವರು

ದುಷ್ಟರು ಎಷ್ಟೆಷ್ಟಲ್ಲಾ ತೊಂದರೆಗಳನ್ನು ಕೊಟ್ಟರೂ ಅದೆಲ್ಲವನ್ನೂ ತನ್ನ ಪ್ರಾರಬ್ಧಕರ್ಮದ ಫಲವೆಂದೇ ತಿಳಿದು ಯಾರಿಗೂ ಯಾವ ತರಹದಪ್ರತೀಕಾರವನ್ನು ಮಾಡದೆ ಮೌನವಾಗಿಯೇ ಇರುತ್ತಿದ್ದನು. ಸರ್ವದಾ ಭಗವಂತನ ಚಿಂತನೆಯೇ ಹೊರತಾಗಿ ಇನ್ನು ಏನೇನನ್ನೂ ಮಾಡುತ್ತಿರಲಿಲ್ಲ. ಆತನ ಗಾಥೆ ಏನೆಂದರೆ- ಯಾರ ಸುಖದುಃಖಕ್ಕೂ ಬೇರೆ ಯಾರೂ ಕಾರಣರಲ್ಲ, ತನ್ನ ಮನಸ್ಸೇ ಕಾರಣವು ಎಂಬುದಾಗಿದೆ. ತನ್ನ ಸ್ವರೂಪದ ಬಗ್ಗೆ ಸರಿಯಾದ ತಿಳಿವಳಿಕೆ ಇಲ್ಲದರಿಂದಲೇ ಮನಸ್ಸೇ ತಾನೆಂತಲೂ ಅದರಲ್ಲಿ ತೋರುತ್ತಿರುವ ಕರ್ತೃತ್ವಭೋಕ್ತೃತ್ವ, ಜ್ಞಾತೃತ್ವವೇ ತನ್ನ ಸ್ವರೂಪವೆಂತಲೂ ತಿಳಿದು ಆದರಿಂದಾಗುವ ಅನರ್ಥಕ್ಕೂ ಗುರಿಯಾಗಿರುತ್ತಾನೆ. ಇದು ಹೇಗೆ ಉಂಟಾಯಿತೆಂದು ಆತನು ವಿಚಾರವನ್ನು ಮಾಡಿರುವುದೇ ಇಲ್ಲ. ಇದೇ ತನ್ನ ಸಹಜ ಸ್ವಭಾವವೆಂದೇ ಅರಿತಿರುತ್ತಾನೆ. ಇದನ್ನೆಲ್ಲಾ ಸಡಿಲಿಸಿಕೊಳ್ಳಬೇಕಾದರೆ ಮೊದಲು ಮನೋನಿಗ್ರಹವನ್ನು ಮಾಡಬೇಕು. ಮನೋನಿಗ್ರಹವೆಂದರೆ ಮನಸ್ಸನನ್ನು ದನಕರುಗಳನ್ನು ಕಟ್ಟಿಹಾಕುವ ಹಾಗೆ ಕಟ್ಟಿಹಾಕುವುದಕ್ಕಾಗುತ್ತದೆ ಎಂದು ತಿಳಿಯಬಾರದು, ಮತ್ತೇನೆಂದರೆ ಮೊದಮೊದಲು ತನಗೆ ಇಷ್ಟವಾದ ದೇವತೆಯಲ್ಲಿಯೇ (ರಾಮ-ಕೃಷ್ಣ ಶಿವ, ದೇವಿ, ಗಣಪತಿ ಮುಂತಾದವರಲ್ಲಿ) ಸ್ಥಿರವಾಗಿ ನಿಲ್ಲಿಸುವುದಕ್ಕೆ ಪ್ರಯತ್ನಿಸುತ್ತಿರಬೇಕು. ಆಯಾ ದೇವತೆಯನ್ನು ಶಾಸ್ತ್ರದಿಂದಲೂ ಗುರುಗಳ ಸಹಾಯದಿಂದಲೂ ಸರಿಯಾಗಿ ಅರಿತು ಆಯಾ ದೇವತೆಗಳು ಗುಣಗಳ ಪರಿಚಯವನ್ನೂ ಮಾಡಿಕೊಂಡು ಆಯಾ ದೇವತೆಯಲ್ಲಿ ಅತ್ಯಾದರದಿಂದಲೂ ಶ್ರದ್ಧಾಭಕ್ತಿಪುರಸ್ಸರವಾಗಿಯೂ ನಿರಂತರವಾಗಿ ಧ್ಯಾನಿಸುತ್ತಿರಬೇಕು. ಇದಕ್ಕೆ ಉಪಾಸನೆ ಎಂದು ಕರೆಯುತ್ತಾರೆ. ಇದು ಜಿತವಾದ ಮೇಲೆ ಈ ದೇವತೋಪಾಸನೆಯ ಅನುಗ್ರಹದಿಂದ ಉತ್ತಮ ಸಂಸ್ಕಾರವನ್ನೂ ವಿಚಾರವನ್ನು ಮಾಡುವುದಕ್ಕೆ ತಕ್ಕ ಯೋಗ್ಯತೆಯನ್ನೂ ಹೊಂದಿ ಆತನ ನಿಜಸ್ವರೂಪದ ಬಗ್ಗೆ ವಿಚಾರಿಸುವುದಕ್ಕೆ ತೊಡಗಬೇಕು.

ನಿಜವಾಗಿ ಯಾವಾತನ ಮನಸ್ಸು ಕಾಮಾದಿಗಳಿಗೆ ಒಳಗಾಗದೇ ಶಾಂತವಾಗಿರುತ್ತದೋ ಆತನು ಯಜ್ಞಯಾಗಾದಿಗಳಿಂದಲಾಗಲೀ ದಾನಧರ್ಮಾದಿ ಗಳಿಂದಾಗಲೀ ಸಾಧಿಸಿಕೊಳ್ಳಬೇಕಾದದ್ದಾದರೂ ಏನಿದೆ? ಹಾಗೆಯೇ ಯಾವಾತನ ಮನಸ್ಸು ಯಾವಾಗಲೂ ವಿಕ್ಷೇಪಾದಿಗಳಿಂದಲೇ ಕೂಡಿರುತ್ತದೋ ಹಾಗೆಯೇ ಆಲಸ್ಯಾದಿಗಳಿಂದಲೂ ನಿದ್ರೆಗೈಯುತ್ತಲೇ ಇರುತ್ತದೋ ಅವನಿಗೆ ದಾನಾದಿಗಳನ್ನು ಮಾಡಿದ್ದರಿಂದಲಾದರೂ ಏನು ಫಲವಾದಂತಾಯಿತು? ಎಲ್ಲಾ ಜಪ ಹೋಮ

ವ್ರತಾನುಷ್ಠಾನ, ದಾನಧರ್ಮದ ಫಲವು ಮನೋನಿಗ್ರಹವಾಗುವುದೇ ಆಗಿರುತ್ತದೆ. ಮನೋನಿಗ್ರಹವೆಂದರೆ ಪಾತಂಜಲಯೋಗಸೂತ್ರದಲ್ಲಿ ಹೇಳಿರುವಂತೆ ಚಿತ್ತವೃತ್ತಿಯು ನಿರೋಧವಾಗಿ ಸಮಾಧಿಯನ್ನು ಹೊಂದುವುದಲ್ಲ. ಮತ್ತೇನೆಂದರೆ, ಸತ್ಯವಾದ ವಸ್ತುವಿನ ಸ್ವರೂಪವನ್ನು ತನ್ನ ಅನುಭವಪರ್ಯಂತವಾಗಿ ಕಂಡುಕೊಳ್ಳುವುದಕ್ಕಾಗಿ ಮಾಡುವ ಪ್ರಯತ್ನ ವಿಶೇಷವಾಗಿರುತ್ತದೆ. ಇದನ್ನೇ ವೇದಾಂತಗಳಲ್ಲಿ ನಿದಿಧ್ಯಾಸನ, ಧ್ಯಾನಯೋಗ, ಆಧ್ಯಾತ್ಮಯೋಗವೆಂತಲೂ ಕರೆಯುತ್ತಾರೆ. ಇದು ಅಳವಟ್ಟರೆ ನಿಜವಾದ ಸಾಧನಮಾರ್ಗದಲ್ಲಿ ಜಯವನ್ನು ಸಾಧಿಸಿರುತ್ತಾನೆಂದಾಗುತ್ತದೆ.

ಮನಸ್ಸಿನ ವಶವೆಂದರೆ ಸುಲಭದ ಮಾತಲ್ಲ, ಎಂತಹ ಋಷಿಮುನಿಗಳೂ ಸಹ ಇದನ್ನೂ ಜಯಿಸಲಾರದೇ ಹೋದರೆಂದು ನಾವು ಪುರಾಣಗಳಿಂದ ಕೇಳಿರುತ್ತೇವೆ. ಆ ಮನಸ್ಸಿಗೆ ''ಭೀಷ್ಮೋ ಹಿ ದೇವಃ, ಸಹಸಸ್ಸಹೀಯಾನ್'' (ಈ ಮನೋದೇವನು ಅತ್ಯಂತ ಭಯಂಕರನು, ಬಲಿಷ್ಟರಿಗಿಂತಲೂ ಬಲಿಷ್ಠನು) ಎಂದು ವೇದವೇ ಹೇಳಿದ ಮೇಲೆ ಇದರ ನಿಗ್ರ ಎಷ್ಟು ದುಷ್ಕರ! ಎಂಬುದು ಗೊತ್ತಾಗುತ್ತದೆ.

ಜಯಿಸಲಸಾಧ್ಯವಾದ ಕಾಮಾದಿಗಳೊಡನೆ ಸೇರಿ ಯಾವ ಕೆಲಸವನ್ನಾದರೂ ಮಾಡಿಸುವಂಥದ್ದಾಗಿದೆ ಈ ಮನಸ್ಸು! ಚಂಚಲವಾದ ಮನಸ್ಸೆಂಬುದು ಮನಷ್ಯನಿಗೆ ಶತ್ರುವಿದ್ದಂತೆ. ಇದರಿಂದಲೇ ಅವಿವೇಕಿಗಳಿಗೆ ಸಂಸಾರವೂ ಸರಿಯಾದ ವಿವೇಕಿಯಾದ ಸಾಧಕರಿಗೆ ಮೋಕ್ಷವೂ ದೊರೆಯುವುದು. ಆದರೆ ಭಗವಂತನ ದಯೆಯಿಂದಲೂ ಸದ್ಗುರುಗಳ ಕೃಪಾಶೀರ್ವಾದಗಳಿಂದಲೂ ತನ್ನ ಸ್ಥಿರವಾದ ನಿಷ್ಠೆಯುಳ್ಳ ಪ್ರವೃತ್ತಿಯಿಂದಲೂ ಮನಸ್ಸು ಹತೋಟಿಗೆ ಬರುತ್ತದೆ. ಅದರಿಂದ ವಿಚಾರ ವಿವೇಕಗಳು ಮತ್ತು ತತ್ತ್ವಜ್ಞಾನವು ತತ್‌ಕ್ಷಣವೇ ಮೋಕ್ಷವೆಂಬ ಪರಮಪುರುಷಾರ್ಥವು ಆಗುತ್ತದೆ. ಮನಸ್ಸಿನ ಇನ್ನೊಂದು ರಹಸ್ಯವಾದ ಸ್ವಭಾವವೇನೆಂದರೆ ಯಾವುದನ್ನು ಅದು ಹೆಚ್ಚಿನದೆಂದು ದೊಡ್ಡದೆಂದು ಬಗೆಯುವುದೋ ಅದರ ಕಡೆಗೇ ಅದು ಹೋಗುತ್ತಿರುವುದು, ಆದರೆ ಅದಕ್ಕೆ ನಿಜವಾಗಿ ದೊಡ್ಡದಾಗಿರುವ ವಸ್ತುವು ಯಾವುದೆಂದು ಗೊತ್ತಿರುವುದಿಲ್ಲ. ಅದನ್ನು ಗೊತ್ತು ಮಾಡಿಸಿಕೊಟ್ಟರೆ ಅಲ್ಲಿಂದ ಮುಂದಕ್ಕೆ ಸಹಜವಾಗಿ ಆ ದೊಡ್ಡದಾದ ವಸ್ತುವಿನಲ್ಲೇ ಮುಳುಗಿರುತ್ತದೆ. ನಿಜವಾದ ಹೆಚ್ಚಿನದಾದ ವಸ್ತುವು ಭಗವಂತನೇ ಆಗಿರುತ್ತಾನೆ, ಅದನ್ನು ಸಚ್ಛಾಸ್ತ್ರಗಳಿಂದ ಸದ್ಗುರುಗಳಿಂದಲೂ ತಿಳಿಸಿಕೊಟ್ಟು ಸರ್ವದಾ ಅದರಲ್ಲೇ ನೆಲೆನಿಲ್ಲಿಸುವುದಕ್ಕೆ ಪ್ರಯತ್ನಿಸುತ್ತಿರುಬೇಕು.

* * * * *

# 58. ದೇಹ ಸ್ವರೂಪ

**ಕ್ವಾಯಂ ಮಲೀಮಸಃ ಕಾಯೋ ದೌರ್ಗಂಧ್ಯಾದ್ಯಾತ್ಮಕೋಽಶುಚಿಃ।**
**ಕ್ವಗುಣಾಃ ಸೌಮನಸ್ಯಾದ್ಯಾ ಹ್ಯಧ್ಯಾಸೋಽವಿದ್ಯಯಾ ಕೃತಃ॥**
**ಪಿತ್ರೋಃ ಕಿಂ ಸ್ವಂ ನು ಭಾರ್ಯಾಯಾಃ ಸ್ವಾಮಿನೋಽಗ್ನೇಃ ಶ್ವಗೃಧ್ರಯೋಃ।**
**ಕಿಮಾತ್ಮನಃ ಕಿಂ ಸುಹೃದಾಂ ಇತಿ ಯೋ ನಾವಸೀಯತೇ॥**

**- ಶ್ರೀಮದ್ಭಾಗವತ 11-26-18, 19**

ಈ ದೇಹವು ಅತ್ಯಂತ ಕೊಳಕಾದದ್ದು, ದುರ್ಗಂಧಾದಿಗಳಿಂದ ತುಂಬಿರುವುದು, ಅಪವಿತ್ರವಾದದ್ದು, ಇದೆಲ್ಲಿ? ಪ್ರಿಯವಾದ ಸೌಗಂಧ್ಯಾದಿ ಗುಣಗಳೆಲ್ಲಿ? ಈ ಗುಣಗಳು ಅಜ್ಞಾನದಿಂದ ದೇಹದಲ್ಲಿ ಆರೋಪಿತವಾಗಿವೆ. ಇದರಂತೆ ಈ ದೇಹವು ನನ್ನದೆಂಬುದೂ ಕಲ್ಪಿತವೇ ಸರಿ, ಏಕೆಂದರೆ ಇದು ತಂದೆ ತಾಯಿಯರದ್ದೇ? ಹೆಂಡತಿಯದೆ? ಅನ್ನಾದಿಗಳನ್ನು ಕೊಟ್ಟು ಬೆಳಸುವ ಸ್ವಾಮಿಯದೆ? ಅಗ್ನಿಯದೇ? ಅಥವಾ ನಾಯಿ ಹದ್ದುಗಳದ್ದೆ? ತನ್ನ ಸ್ನೇಹಿತರದ್ದೆ? ಎಷ್ಟು ವಿಚಾರಿಸಿದರೂ ಇದು ತೀರ್ಮಾನವಾಗುವುದಿಲ್ಲ.

## ದೇಹಾಭಿಮಾನ

ಎಂಥ ವಿವೇಕಿಯನ್ನೂ ಸಹ ಮರಳು ಮಾಡುವುದು ಈ ದೇಹಾಭಿಮಾನವು. ಎಲ್ಲಾ ತರಹದ ಯುಕ್ತಿದೃಷ್ಟಾಂತಗಳಿಗೂ ಶಾಸ್ತ್ರಾನುಭವಕ್ಕೂ ಇದು ನಮ್ಮ ಸ್ವರೂಪಕ್ಕೆ ಸೇರಿದ್ದಲ್ಲವೆಂಬುದು ಗೊತ್ತಾಗುವುದಾದರೂ ಇದರ ಅಭಿಮಾನವು ಮಾತ್ರ ನಮಗೆ ಹೋಗದೆ ಇರುವಂಥದ್ದಾಗಿದೆ. ಮೇಲಿನ ಭಾಗವತದ ಶ್ಲೋಕದ ಸಂದರ್ಭವನ್ನು ಪರ್ಯಾಲೋಚನೆಮಾಡಿದರೆ ಒಂದು ಸೊಗಸಾದ ತೀರ್ಮಾನವು ನಮ್ಮ ಬುದ್ಧಿಯಲ್ಲಿ ತೇಲುತ್ತದೆ. ಬಹಳ ಧರ್ಮಾತ್ಮನಾದ ಪುರೂರವನೆಂಬ ರಾಜನು ಊರ್ವಶೀ ಎಂಬ ಅಪ್ಸರ ಸ್ತ್ರೀಯನ್ನು ಕಂಡು ಆಕೆಯ ರೂಪಕ್ಕೆ ಮೋಹಿತನಾಗಿ ಆಕೆಯನ್ನು ಪಡೆದುಕೊಳ್ಳುವುದಕ್ಕೆ ಒಂದು ದೊಡ್ಡ ಯಾಗವನ್ನೇ ಮಾಡುತ್ತಾನೆ. ಅದರ ಫಲವಾಗಿ ಆತನು ಆಕೆಯ ಲೋಕಕ್ಕೆ ಹೋಗಿ ಆಕೆಯೊಡನೆ ಅನೇಕ ಸಂವತ್ಸರದವರೆಗೆ ಭೋಗವನ್ನುಭವಿಸಿ, ಕೊನೆಗೆ ಆಕೆಯ ಕೈಗೊಂಬೆಯಂತೆಯೇ ಆಗುತ್ತಾನೆ. ಆದರೆ

ಆಕೆಯು ಮಾತ್ರ ಈತನ ವಿಷಯಕ್ಕೆ ಉದಾಸೀನಳಾಗಿಯೇ ಇರುತ್ತಿರುವುದನ್ನು ಕಂಡು ಬೇಸತ್ತು ಆಕೆಯ ವಿಷಯದಲ್ಲಿ ವಿರಕ್ತನಾಗಿ ಒಂದು ಗಾಥೆಯನ್ನು ನುಡಿಯುತ್ತಾನೆ. "ಅಹೋ! ಮೇ ಆತ್ಮಸಂಮೋಹೋ....... ಕ್ರೀಡಾಮೃಗಶ್ಚಕ್ರವರ್ತೀ ನರದೇವ ಶಿಖಾಮಣಿಃ"। ಅಯ್ಯೋ! ನನ್ನ ಮೋಹವನ್ನು ಏನೆಂದು ವರ್ಣಿಸಲಿ? ನರದೇವನಾಗಿ ಚಕ್ರವರ್ತಿಯಾದ ನಾನು ಸ್ತ್ರೀಯರ ಗೊಂಬೆಯಾಟದ ವಸ್ತುವಾಗಿ ಬಿಟ್ಟೆನಲ್ಲಾ! ಎಂದಿರುತ್ತಾನೆ. ಹಾಗೆಯೇ ರಾಜ್ಯಪ್ರಾಪ್ತಿಯಿಂದ ಸಾರ್ವಭೌಮ ನೆನಿಸಿದ್ದರೂ ಹುಚ್ಚನಂತೆ ಆಗಿ ತಿರಸ್ಕರಿಸುತ್ತಿರುವ ಊರ್ವಶಿಯನ್ನು ಹಿಂಬಾಲಿಸಿ ಬಿಟ್ಟೆನಲ್ಲಾ! ಹೆಣ್ಣುಕತ್ತೆಯಿಂದ ಒದಿಸಿಕೊಳ್ಳುತ್ತಿರುವ ಗಂಡುಕತ್ತೆಯಂತೆಯೇ ಹಿಂದೆಯೇ ತೆರಳುತ್ತಿದ್ದೆನಲ್ಲಾ! ಯಾವ ನನಗೆ ಎಂಥ ವಿದ್ಯೆ ತಪಸ್ಸು ಶಾಸ್ತ್ರಾಧ್ಯಯನಾದಿಗಳಿದ್ದರೂ ಅದು ಯಾವುದೂ ಈ ಸಮಯಕ್ಕೆ ಉಪಯೋಗಕ್ಕೆ ಬರುತ್ತಿಲ್ಲವಲ್ಲಾ! ಪಂಡಿತಮಾನಿಯಾದ ಮೂರ್ಖನಾದ ನನಗೆ ಧಿಕ್ಕಾರವಿರಲಿ. ಇದರಲ್ಲಿ ನನ್ನದೇ ತಪ್ಪೆಹೊರತು ಊರ್ವಶೀಯದ್ದಾಗಲೀ ಬೇರೆ ಕಾಲದೈವಾದಿಗಳದ್ದಾಗಲೀ ಅಪರಾಧವಿಲ್ಲ. ವಿವೇಕ ಶೂನ್ಯನಾದ ನಾನು ದೇಹಸುಖಕ್ಕೆ ಮರುಳಾದವನಾಗಿ ಪರಮಾರ್ಥವಾದ ಬ್ರಹ್ಮಾನಂದ ಸುಖದಿಂದ ವಂಚಿತನಾದೆ ಎಂದೀಪರಿಯಾಗಿ ಬಹಳವಾಗಿ ಚಿಂತಿಸುತ್ತಾ, ಇಲ್ಲಿಂದ ಮುಂದಕ್ಕೆ ಷಡ್ಗುಣೈಶ್ವರ್ಯಸಂಪನ್ನನೂ ಆತ್ಮಾರಾಮನೂ ಆದ ಶ್ರೀಹರಿ ಭಗವಂತನನ್ನೇ ಆರಾಧಿಸುತ್ತಾ ಈ ಬಂಧನದಿಂದ ನಾನು ಕಳಚಿಕೊಳ್ಳುವೆನು ಎಂಬ ದೃಢವಾದ ನಿಶ್ಚಯಕ್ಕೆ ಬಂದನು.

ಇದೇ ತರಹ ಪ್ರತಿಯೊಬ್ಬ ಮನುಷ್ಯನಿಗೂ ತನ್ನ ನಿತ್ಯಜೀವನದಲ್ಲಿ ವಿಷಯಾಸಕ್ತಿಯಿಂದಲೇ ಅವನತಿಯಾಗುತ್ತದೆ. ಈ ವಿಷಯಾಸಕ್ತಿಗೆ- ಮಿತಿಮೀರಿದ- ದೇಹಾಭಿಮಾನವೇ ಕಾರಣವಾಗಿರುತ್ತದೆ. ದೇಹಾಭಿಮಾನಕ್ಕೆ ಕಾರಣವು ಸರ್ವದಾ ಅದರ ಪೋಷಣೆಯನ್ನೇ ಮಾಡುತ್ತಿರುವುದು, ಸ್ವಲ್ಪವೂ ಅದಕ್ಕೆ ಆಗುವ ಕಷ್ಟವನ್ನು ಸಹಿಸದೇ ಇರುವುದೇ ಮುಂತಾದದ್ದಾಗಿರುತ್ತದೆ.

ಈಗ ಈ ದೇಹವು ನಾನೆಂದಾಗಲೀ ನನ್ನದೆಂದಾಗಲೀ ನಮಗೆ ಏತಕ್ಕೆ ತೋರುತ್ತದೆ ಎಂಬುದನ್ನು ವಿಚಾರಿಸೋಣ. ಸರಿಯಾಗಿ ವಿಚಾರಿಸಿ ನೋಡಿದರೆ ಈ ದೇಹವು ನಾನೆಂಬುದು ಭ್ರಾಂತಿಮಾತ್ರವೇ ಆಗಿರುತ್ತದೆ. ಏಕೆಂದರೆ ಯಾವುದು ನಮ್ಮ ಅರಿವಿಗೆ ತೋರುತ್ತದೋ ಅದು ನಮಗಿಂತ ಬೇರೆಯೇ ಆಗಿರಬೇಕೆಂದು

ನಮಗೆಲ್ಲರಿಗೂ ತಿಳಿದಿರುವ ವಿಷಯವು. ಹೊರಗಿನ ಪದಾರ್ಥವಾದ ಪುಸ್ತಕಾದಿಗಳಾಗಲೀ ಪಶುಪ್ರಾಣಿ ಪಕ್ಷಿಗಳಾಗಲೀ ಕೊನೆಗೆ ಪಂಚಭೂತಗಳಾದ ಪೃಥಿವಿಯೇ ಮುಂತಾದವುಗಳಾಗಲೀ ಎಲ್ಲವೂ ನಮಗಿಂತ ಬೇರೆಯಾಗಿ ಇದು ಅದು ಎಂದು ವಿಷಯವಾಗಿಯೇ ತೋರುತ್ತದೆ. ಅದರಂತೆ ಈ ದೇಹ, ಈ ಇಂದ್ರಿಯಗಳು, ಮನಸ್ಸು ಪ್ರಾಣ ಬುದ್ಧಿ ಎಂದು ನಮ್ಮ ಅರಿವೇ ನೇರಾಗಿ ಎಲ್ಲವನ್ನೂ ವಿಷಯೀಕರಿಸಿ ಅರಿಯುತ್ತಿದೆ. ವಿಷಯವಾಗಿರುವುದು ನಾವಾಗಿರುವುದಿಲ್ಲ. ನಾವಾಗಿರುವುದು ವಿಷಯವಾಗಿರುವುದಿಲ್ಲ ಎಂಬ ನಿಯಮವನ್ನನುಸರಿಸಿ ದೇಹಾದಿಗಳು ನಾನಲ್ಲ ಎಂದು ನಿಶ್ಚಯಿಸಿಕೊಳ್ಳಬೇಕು. ಹೀಗೆ ವಿಷಯವಾಗಿರುತ್ತಿದ್ದರೂ ಅವನ್ನು ನಾನೆಂದು ಕೊಳ್ಳುತ್ತೇನೆಂದರೆ ಅದು ತಪ್ಪುತಿಳಿವಳಿಕೆಯಾಗುತ್ತದೆಯೇ ಹೊರತು ಸರಿಯಾದ ಜ್ಞಾನವಾಗುವುದಿಲ್ಲ. ನಮಗೆ ಗೊತ್ತಿದ್ದರೂ ಸುಮ್ಮನೆ ವ್ಯವಹಾರಕ್ಕಾಗಿ ಹಾಗೆ ಹೇಳುತ್ತಿದ್ದೇವೆಂದು ಯಾರಾದರೂ ಹೇಳಬಹುದು, ಆದರೆ ಅದು ಸರಿಯಲ್ಲ, ಏಕೆಂದರೆ ಆಗ ನಿಜವಾದ ನಾನು ಯಾರು ಎಂಬುದು ಗೊತ್ತಿರಬೇಕು, ಆಗಲೇ ದೇಹಾದಿಗಳನ್ನು ವ್ಯವಹಾರಕ್ಕಾಗಿ ನಾನೆಂದುಕೊಳ್ಳುತ್ತಿದ್ದೇನೆಂದು ಹೇಳುವುದಕ್ಕೆ ಬರುತ್ತದೆ. ಇಲ್ಲವಾದರೆ ಅದು ತಪ್ಪುತಿಳಿವಳಿಕೆಯೇ ಆಗುತ್ತದೆ. ಗೌಣವಾದ ನಾನು ಎಂತಲೂ ಹೇಳುವುದಕ್ಕೆ ಬರುವುದಿಲ್ಲ. ಏಕೆಂದರೆ ಎಲ್ಲಿ ಸ್ಪಷ್ಟವಾಗಿ ಭೇದವು ಕಂಡುಬಂದಿರುತ್ತದೋ ಅಲ್ಲಿ ಗೌಣವಾಗಿ ನಾನೆಂಬುದು ಬರುತ್ತದೆ. ಉದಾ|| ಮಗನಾಗಲೀ ಸ್ನೇಹಿತನಾಗಲೀ ಸ್ಪಷ್ಟವಾಗಿ ನನಗಿಂತ ಬೇರೆ ಎಂದು ಗೊತ್ತಿದ್ದರೂ ಕೆಲವೊಮ್ಮೆ ಅತಿ ಸ್ನೇಹದಿಂದ ಅವರನ್ನು ನಾನೇ ಎಂದು ಹೇಳಿಕೊಳ್ಳುವುದುಂಟು . ಆಗ ಅವರಲ್ಲಿದ್ದ ನಾನೆಂಬ ಬುದ್ಧಿಯು ಗೌಣವಾದ ನಾನಾಗಿರುವ ರೂಪದ್ದಾಗಿರುತ್ತದೆ. ಆದರೆ ದೇಹೇಂದ್ರಿಯ ಮನೋಬುದ್ಧಿಗಳಲ್ಲಿ ನಾನೆಂಬ ಬುದ್ಧಿಯು ಗೌಣವಲ್ಲ, ಅದು ತಪ್ಪಾದ ತಿಳಿವಳಿಕೆಯೇ ಆಗಿರುತ್ತದೆ. ಜ್ಞಾನಿಯಾದವನಲ್ಲಿ ಮಾತ್ರ ಬಾಧಿತಾನುವೃತ್ತಿಯಿಂದ ಆಗುತ್ತಿರುವದು.

ಈಗ ಈ ದೇಹವನ್ನು ನನ್ನದೆಂದುಕೊಳ್ಳುವಾಗ ಯಾವ ದೃಷ್ಟಿಯಿಂದ ಹೇಳಲಾಗುತ್ತದೆ? ಏಕೆಂದರೆ ಚಿನ್ಮಾತ್ರನಾದ ನನ್ನ ಸ್ವರೂಪಕ್ಕೆ ಈ ದೇಹವು ಅಂಶವಾಗಲೀ ಅವಯವವಾಗಲೀ ಆಗಲು ಸಾಧ್ಯವಿಲ್ಲ. ಇನ್ನು ನನಗೆ ಉಪಕಾರಮಾಡುತ್ತದೆ ಎಂಬರ್ಥದಲ್ಲಿ ಹೇಳೋಣವೆಂದರೆ ನನಗೆ ಈ ದೇಹವು ಉಪಕಾರವನ್ನು ಮಾಡುವಂತೆ ನನ್ನ ಮಕ್ಕಳಿಗೂ, ನನ್ನ ಹೆಂಡತಿಗೂ, ನನ್ನ ತಂದೆ

ತಾಯಿಯಂದಿರರಿಗೂ ಅಣ್ಣತಮ್ಮಂದಿರರಿಗೂ ಅಕ್ಕತಂಗಿಯರಿಗೂ ಕೊನೆಗೆ ಸ್ನೇಹಿತರಿಗೂ ಇದು ಉಪಕಾರವನ್ನು ಮಾಡುತ್ತದೆ. ಎಲ್ಲರಿಗಿಂತ ಹೆಚ್ಚಾಗಿ ನಾಯಿನರಿಗಳಿಗೂ ಹದ್ದು ಮುಂತಾದ ಪ್ರಾಣಿಗಳಿಗೂ ಸಂಪೂರ್ಣವಾಗಿ ಇದರಿಂದ ಉಪಕಾರವಾಗುತ್ತದೆ. ಆಗ ಅವರದ್ದೇ ಎಂದು ಏತಕ್ಕೆ ಹೇಳಬಾರದು? ಹೀಗೆಯೇ ದೇಹದಲ್ಲೇ ಇರುವ ಅನೇಕ ಕ್ರಿಮಿಗಳಿಗೂ ಇದು ಆಶ್ರಯವೂ ಉಪಕಾರಕವೂ ಆಗಿದೆ. ಹೀಗಾಗಿ ಈ ದೇಹವು ಎಷ್ಟು ಪ್ರಾಣಿಗಳಿಗೆ ಸೇರಿದ್ದೆಂದು ತಿಳಿಯೋಣ? ಕೇವಲ ಅಭಿಮಾನದಿಂದಲೂ ತಪ್ಪುತಿಳಿವಳಿಕೆಯಿಂದಲೂ ವಿಚಾರವನ್ನು ಮಾಡದೇ ನಾವುಗಳೆಲ್ಲಾ ನನ್ನದೆಂದುಕೊಳ್ಳುತ್ತಿರುವೆವು. ಎಲ್ಲಾ ರೀತಿಯಿಂದ ಇದಕ್ಕೆ ಷೋಡಶೋಪಚಾರಗಳನ್ನು ಮಾಡುತ್ತಾ ಗಟ್ಟಿಪಡಿಸಿಕೊಳ್ಳುತ್ತಲೂ ಇದ್ದೇವೆ. ಈ ದೇಹವನ್ನು ಮೊದಲು ಶಾಸ್ತ್ರೀಯಕರ್ಮಗಳನ್ನು ಮಾಡುತ್ತಾ ದೇಹವನ್ನು ದಂಡಿಸಬೇಕು. ಶಾಸ್ತ್ರೋಕ್ತದಿನಗಳಲ್ಲಿ ಉಪವಾಸಾದಿಗಳನ್ನೂ ವ್ರತಗಳನ್ನೂ ಕೈಗೊಂಡು ದೇಹಾಭಿಮಾನವನ್ನು ತಗ್ಗಿಸಿಕೊಳ್ಳಬೇಕು. ಅನಂತರ ವೇದಾಂತಶಾಸ್ತ್ರವು ತಿಳಿಸುವ ಅಧ್ಯಾತ್ಮ ವಿಚಾರವನ್ನು ಅನುಭವಪರ್ಯನ್ತವಾಗಿ ಮತ್ತೆ ಮತ್ತೆ ಮಾಡುತ್ತಾ ದೇಹೇಂದ್ರಿಯಾದಿ ಸಂಪೂರ್ಣವಾದ ಉಪಾಧಿಯಲ್ಲೇ ಆತ್ಮಬುದ್ಧಿಯನ್ನು ಬಿಟ್ಟು ಪರಮಾರ್ಥವಾದ ಆತ್ಮಸ್ವರೂಪದಲ್ಲಿ ನೆಲೆನಿಂತು ಕೃತಾರ್ಥರಾಗಬೇಕು.

* * * * *

## 59. ಸಾಧಕನಿಗೆ ಉಪದೇಶ

**ಕುರ್ಯಾತ್ ಸರ್ವಾಣಿ ಕರ್ಮಾಣಿ ಮದರ್ಥಂ ಶನಕೈಃ ಸ್ಮರನ್ ।**
**ಮಯ್ಯರ್ಪಿತಮನಶ್ಚಿತ್ತೋ ಮದ್ಧರ್ಮಾತ್ಮಮನೋ ರತಿಃ ।**
**ದೇಶಾನ್ಪುಣ್ಯಾನಾಶ್ರಯೇತ ಮದ್ಭಕ್ತೈಸ್ಸಾಧುಭಿಃ ಶ್ರಿತಾನ್ ।**
**ದೇವಾಸುರ ಮನುಷ್ಯೇಷು ಮದ್ಭಕ್ತಾಚರಿತಾನಿ ಚ ॥**

**- ಶ್ರೀಮದ್ಭಾಗವತ 11-29-9,10**

(ಬ್ರಹ್ಮಜ್ಞಾನವನ್ನು ಹೊಂದಬೇಕೆನ್ನುವವನು) ಯಾವಾಗಲೂ (ಆರಂಭದ ಹಂತದಲ್ಲಿ) ಪರಮಾತ್ಮನನ್ನೇ ಸ್ಮರಿಸುತ್ತಾ ಆತನಿಗಾಗಿ ಎಲ್ಲಾ ಕರ್ಮವನ್ನೂ

ಮಾಡುತ್ತಿರುವವನಾಗಬೇಕು. ಹಾಗೆಯೇ ಆತನಲ್ಲಿಯೇ ಮನಸ್ಸನ್ನೂ ಚಿತ್ತವನ್ನೂ ಅರ್ಪಿಸಿದವನಾಗಬೇಕು. ನನ್ನ ಗುಣಗಳಲ್ಲಿ ಅನುರಾಗವನ್ನು ಹೊಂದಿದವನಾಗಿರಬೇಕು. ಪುಣ್ಯಸ್ಥಳಗಳನ್ನೂ ಭಗವದ್ಭಕ್ತ ರಾದ ಸಾಧುಗಳನ್ನಾಶ್ರಯಿಸಿದವನಾಗಿ, ದೇವತೆ ಗಳಲ್ಲಾಗಲೀ ಅಸುರರಲ್ಲಾಗಲೀ ಮನುಷ್ಯರಲ್ಲಾಗಲೀ ಇರುವ ಭಾಗವತೋತ್ತಮರ ಚರಿತ್ರೆಗಳನ್ನು (ಅನುಸಂಧಾನವನ್ನು ಮಾಡುತ್ತಿರಬೇಕು).

**(ಇಂದ್ರಾದಿಗಳು ವಿಷ್ಣುವನ್ನು ಸ್ತೋತ್ರ ಮಾಡಿದ್ದು, ಪ್ರಹ್ಲಾದ, ವಿರೋಚನ, ಬಲಿ ಮುಂತಾದವರ ಕಥೆ, ಸನಕಾದಿಗಳ, ನಾರದಾದಿಋಷಿಗಳ ಭಕ್ತಿಬೋಧಕ ವಿಚಾರಗಳನ್ನು ಮನನ ಮಾಡುತ್ತಿರಬೇಕು)**

## ಸಾಧಕನ ಕರ್ತವ್ಯ

ತುಂಬಾ ಜನರಿಗೆ ಅಧ್ಯಾತ್ಮಮಾರ್ಗದಲ್ಲಿ ಪ್ರಗತಿಯನ್ನು ಹೊಂದಬೇಕೆಂತಲೂ ಕೆಲವರಿಗೆ ಇಲ್ಲಿಯೇ ಜ್ಞಾನಸಂಪಾದನೆಯನ್ನು ಮಾಡಿಕೊಂಡು ಕೃತಾರ್ಥರಾಗಿ ಬಿಡಬೇಕೆಂತಲೂ ತೀವ್ರವಾದ ಬಯಕೆಯಿರುತ್ತದೆ. ಆದರೆ ಸರಿಯಾದ ಮಾರ್ಗವು ತಿಳಿಯದೆಯೋ ಸರಿಯಾದ ಮಾರ್ಗದರ್ಶಕರು ಸಿಗದೆಯೋ ಎಲ್ಲೆಲ್ಲೋ ಹೋಗುತ್ತಾರೆ. ಆದರೆ ಉಪನಿಷತ್ತು, ಭಗವದ್ಗೀತೆ, ಮತ್ತು ಇದರ ವಿಚಾರವನ್ನೇ ಹೇಳುವ ಭಾಗವತಾದಿ ಸದ್ಗ್ರಂಥಗಳನ್ನವಲಂಬಿಸಿದರೆ, ಅದನ್ನೂ ಸಹ ಸರಿಯಾಗಿ ಸಂಪ್ರದಾಯ ಕ್ರಮದಲ್ಲಿ ತಿಳಿದವರ ಬಳಿಯಲ್ಲಿಯೇ ಅಧ್ಯಯನವನ್ನು ಮಾಡಿದರೆ ಸರಿಯಾದ ನಿಜವಾದ ಗುರಿಯನ್ನು ಮುಟ್ಟುವಹಾಗೆ ಇನ್ಯಾವುದರಿಂದಲೂ ಮುಟ್ಟುವದಿಲ್ಲ. ಇದು ಅನೇಕರಿಗೆ ಗೊತ್ತಿಲ್ಲ. ಯಾವುದಾದರೆ ಏನು? ಎಲ್ಲವೂ ಸದ್ಗ್ರಂಥವೇ ತಾನೆ! ಇದೇ ಸರಿ ಬೇರೆಯಾವುದೂ ಸರಿಯಲ್ಲ ಎಂಬುದಕ್ಕೆ ಏನು ಆಧಾರ? ಎಂಬುದಾಗಿ ಕೆಲವರು ವಾದವನ್ನು ಮಾಡುತ್ತಾರೆ. ಆದರೆ ಇಂದ್ರಿಯ ಮನಸ್ಸುಗಳಿಂದ ತಿಳಿಯಬಹುದಾದ ವಿಚಾರಕ್ಕೆ ಈ ತರಹವಾಗಿ ವಾದ ಮಾಡಬಹುದಾದರೂ ಆತ್ಮವಿಚಾರಕ್ಕೆ ಅಥವಾ ಬ್ರಹ್ಮವಿಚಾರಕ್ಕೆ ಈ ವಾದವು ಸರಿಯಲ್ಲ. ಇದನ್ನು ಅರಿಯುವುದೆಂದರೆ ಲೌಕಿಕವಸ್ತುವಿ ನಂತೆ ಅಲ್ಲವೇ ಅಲ್ಲ, ಅದರ ಕ್ರಮವೇ ಬೇರೆ- ಅದು ಅತೀಂದ್ರಿಯವಾದ ವಿಚಾರ, ಆದರೆ ಸ್ವರ್ಗನರಕಗಳಂತಾಗಲೀ ಜನ್ಮಾಂತರ ಲೋಕಾಂತರಗಳಂತಾಗಲೀ ಪುಣ್ಯ ಪಾಪಗಳಂತಾಗಲೀ ಈ ಆತ್ಮವಿಚಾರವು ಅತೀಂದ್ರಿಯವಲ್ಲವಾದರೂ, ಇಲ್ಲಿಯೇ ಈಗಲೇ ಉತ್ತಮಾಧಿಕಾರಿಯಾದ ಶಿಷ್ಯನಿಗೆ ಅನುಭವಿಯಾದ ಗುರುವು ಹೇಳಿದ ಕೂಡಲೇ

ತಿಳಿದುಬರುವುದಾದರೂ ಅದರ ತಿಳಿವಳಿಕೆಯ ಕ್ರಮವು ಲೌಕಿಕವಸ್ತುವಿನಂತಲ್ಲ. ಇದು ಹೇಗೆ ಎಂಬುದಿರಲಿ.

ಈ ತತ್ತ್ವವನ್ನು ತಿಳಿಯಬೇಕಾದರೆ ಮೊಟ್ಟಮೊದಲು ಸಾಧಕರು ಹೇಗೆ ವರ್ತಿಸಬೇಕು? (1) ಮೊದಲು ಶಾಸ್ತ್ರನಿಷಿದ್ಧಕರ್ಮವನ್ನು ಬಿಡುವವನಾಗಬೇಕು. ಅದಕ್ಕಾಗಿ ಶಾಸ್ತ್ರಜ್ಞರ ಹತ್ತಿರ ಶಾಸ್ತ್ರೀಯನಡವಳಿಕೆಯನ್ನು ಕಲಿತುಕೊಳ್ಳಬೇಕು. (2) ಸುಳ್ಳು, ಹಿಂಸೆ, ವಂಚನೆ, ಅಸೂಯಾದಿದೋಷಗಳಿಂದ ಬಹಳ ಎಚ್ಚರಿಕೆಯಿಂದಿದ್ದು ಅವುಗಳಿಗೆ ಅವಕಾಶವನ್ನು ಕೊಡದೇ ಶರೀರೇಂದ್ರಿಯಮನಸ್ಸುಗಳಿಂದ ಯಾರಿಗೂ ಯಾವ ತರಹದ ದ್ರೋಹವನ್ನೂ ಮಾಡಬಾರದು (3) ಮೊದಲು ಯಾವ ಅನಿವಾರ್ಯವಾದ ಇಷ್ಟಾರ್ಥಗಳುಂಟೋ ಅವುಗಳನ್ನೂ ಸಹ ಶಾಸ್ತ್ರೀಯವಾದ ಕರ್ಮಾನುಷ್ಠಾನದಿಂದಲೂ ಪೂಜಾ ಜಪ ಪಾರಾಯಣಾದಿಗಳಿಂದಲೇ ಪಡೆದುಕೊಳ್ಳುವವನಾಗಬೇಕು. ಕಾಲಕ್ರಮೇಣ (4) ಆ ಅನುಷ್ಠಾನಗಳನ್ನು ಫಲಾಪೇಕ್ಷೆ ಇಲ್ಲದೇ ಕೇವಲ ಚಿತ್ತಶುದ್ಧಿಗಾಗಿ ಈಶ್ವರಾರ್ಪಣಬುದ್ಧಿಯಿಂದಲೇ (ಕರ್ಮಯೋಗದಿಂದ ಕರ್ಮವನ್ನು) ಮಾಡುವುದಕ್ಕೆ ಆರಂಭಿಸಬೇಕು. ತನ್ನ ನಿತ್ಯಜೀವನದಲ್ಲಿ ಏನೇನು ಕಷ್ಟಸುಖಗಳನ್ನು ಅನುಭವಿಸುತ್ತಿರುವನೋ ಹಾಗೆಯೇ ಮುಂದೂ ಏನೇನನ್ನೂ ಅನುಭವಿಸಬೇಕಾಗುತ್ತದೋ ಅದೆಲ್ಲಾ ತನ್ನ ಪ್ರಾರಬ್ಧ ಕರ್ಮದಿಂದಲೇ ನಡೆಯುತ್ತಿದೆಯೆಂದು ಯಾವಾಗಲೂ ತಿಳಿದಿರುವನಾಗಬೇಕು. ಅದನ್ನು ತಪ್ಪಿಸಿಕೊಳ್ಳುವುದಕ್ಕೂ ಪಡೆಯುವುದಕ್ಕೂ ಶ್ರಮವನ್ನು ಪಡುವುದರಲ್ಲಿ ಯಾವ ಅರ್ಥವಿಲ್ಲವೆಂದು ತಿಳಿದು ತನ್ನ ಮನಃಸ್ಸಮಾಧಾನವನ್ನು ಯಾವಾಗಲೂ ಕಳೆದುಕೊಳ್ಳಬಾರದು. ಹೀಗೆ ಮನಸ್ಸಮಾಧಾನದಿಂದಲೂ ಕರ್ಮಯೋಗದಿಂದಲೂ ಚಿತ್ತಶುದ್ಧಿಯನ್ನು ಹೊಂದುತ್ತಿರುವಾಗಲೇ ಪ್ರಾಪಂಚಿಕ ಭೋಗವಸ್ತುವಿನಲ್ಲಿ ಜುಗುಪ್ಸೆ, ಅಂತರ್ಮುಖತೆ, ಭಗವಂತನನ್ನು ತಿಳಿಯುವ ಉತ್ಕಟೇಚ್ಛೆಯು ಬೆಳೆಯುವುದಕ್ಕೆ ಆರಂಭವಾಗುತ್ತದೆ.

ಇಂತಹ ಸಾಧನೆಯನ್ನು ನಡೆಸುವುದಕ್ಕೆ ಆಗಾಗ್ಗೆ ಪುಣ್ಯಕ್ಷೇತ್ರಕ್ಕೆ ಹೋಗಿ ಅಲ್ಲಿ ಅನುಷ್ಠಾನವನ್ನು ಮಾಡುವುದು, ಸಾಧುಸತ್ಪುರುಷರ ಸಹವಾಸವನ್ನು ಅಪೇಕ್ಷಿಸುವುದು, ಅವರ ಸೇವೆಯನ್ನು ಕೈಯಲ್ಲಾದಷ್ಟು ಮಟ್ಟಿಗೂ ಮಾಡುವುದೇ ಮುಂತಾದದ್ದನ್ನು ಮಾಡಬೇಕು. ಹಾಗೆಯೇ ಕರ್ಮಗಳಿಂದಲೂ ನಿವೃತ್ತನಾಗುತ್ತಾ ಬಂದು ಸಂನ್ಯಾಸಾಶ್ರಮದ ಧರ್ಮಗಳನ್ನು ಅಳವಡಿಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಿರಬೇಕು. ಎಷ್ಟೆಷ್ಟು ವೇದಾಂತವಿಚಾರಗಳನ್ನು ಶ್ರವಣವನ್ನು ಮನನವನ್ನು ಮಾಡುತ್ತಿರುತ್ತಾನೋ

ಅಷ್ಟು ಅಷ್ಟರಮಟ್ಟಿಗೆ ಆತನಿಗೆ ಅಂತರ್ಮುಖತ್ವವು ಅಳವಡುತ್ತಾ ಹೋಗುವುದು. ಇದು ಹೀಗೆಯೇ ಹೆಚ್ಚುತ್ತಾ ಹೆಚ್ಚುತ್ತಾ ಹೋದಂತೆಲ್ಲಾ ತತ್ತ್ವಸ್ವರೂಪವನ್ನು ತಿಳಿಯುವುದಕ್ಕೆ ತಕ್ಕ ಉತ್ತಮವಾದ ಅಧಿಕಾರಿಯಾಗುತ್ತಾನೆ. ಆಮೇಲೆ ಕಾಲಕ್ರಮೇಣ ದೈವಾನುಗ್ರಹದಿಂದ ತತ್ತ್ವಸ್ವರೂಪವೂ ಗೊತ್ತಾಗಿ ಅಂದರೆ ಅದರ ಬಗ್ಗೆ ಇರುವ ತಪ್ಪುತಿಳಿವಳಿಕೆಯನ್ನೆಲ್ಲಾ ಕಳೆದುಕೊಂಡು ತನ್ನ ಮೋಕ್ಷಸಾಮ್ರಾಜ್ಯದಲ್ಲಿ ತಾನೇ, ತನ್ನಿಂದಲೇ ಅಭಿಷಿಕ್ತನಾಗುತ್ತಾನೆ.

ಕಥೆಯನ್ನು ಶ್ರವಣಮಾಡುವುದು ಅಥವಾ ಓದುವುದೆಂಬುದೇನಿದೆ ಅದು ನಮ್ಮತನಕ್ಕೆ ಹತ್ತಿರವಾದ್ದರಿಂದ ಅದು ಬೇಗನೆ ನಮ್ಮ ಮನಸ್ಸಿಗೆ ಹಿಡಿಸುತ್ತದೆ. ಹಾಗೆಯೇ ಅಲ್ಲಿ ಬರುವ ವಿಶೇಷವಾದ ರೋಚಕಘಟ್ಟಗಳಿಂದ ರೋಮಾಂಚಿತನಾಗುವುದು. ವಿಶೇಷವಾದ ಭಕ್ತಿಭಾವೋದ್ರೇಕದ ಸಂದರ್ಭಗಳಲ್ಲಿ ಆರ್ತತೆಯುಂಟಾಗಿ ಕಣ್ಣೀರು ಬರುವುದು ಕಂಠವು ಗದ್ಗದವಾಗುವುದೇ ಮುಂತಾದ ಅನುಭವವಿಶೇಷಗಳಿಂದ ಬಲುಬೇಗನೆ ಚಿತ್ತಶುದ್ಧಿಯುಂಟಾಗುವುದು. ಕೆಲವೊಮ್ಮೆ ವೇದಾಂತವಿಚಾರಗಳೂ ಸಹ ಬೇಸರವಾಗುವುದಕ್ಕೂ ಶುಷ್ಕವಾಗುವುದಕ್ಕೂ ತಕ್ಕಮಟ್ಟದ ಚಿತ್ತಸಂಸ್ಕಾರವಿಲ್ಲದಿರುವುದೇ ಕಾರಣವಾಗುತ್ತದೆ. ಎಲ್ಲಿಯವರೆಗೆ ನಾವು ವೇದಾಂತವಿಚಾರವನ್ನೂ ಸಹ ಅನಾತ್ಮವಿಚಾರವನ್ನು ಮಾಡವ ಹಾಗೆ ಕೇವಲ ಬುದ್ಧಿಯ ಕಸರತ್ತಿನಿಂದ ಮಾಡುವೆವೋ ಹಾಗೆಯೇ ಸುಮ್ಮನೆ ಉಪಮಾನದೃಷ್ಟಾಂತಗಳಿಂದಲೂ ಬೇರೆ ಬೇರೆ ಶ್ರುತಿ, ಪುರಾಣಗೀತಾದಿಶ್ಲೋಕಗಳ ಉದಾಹರಣೆಗಳ ಸುರಿಮಳೆಯಿಂದಲೇ ತೃಪ್ತರಾಗುತ್ತಾ ಹೋಗುವೆವೋ ಅಲ್ಲಿಯವರೆಗೆ ವೇದಾಂತಗಳ ನಿಜವಾದ ಉದ್ದೇಶದ ಕಡೆಗೆ ನಾವು ನಡೆದಂತಾಗುವುದಿಲ್ಲ. ಆಗ ಅದೂ ಒಂದು ರೀತಿ ಕಾಲಯಾಪನೆಮಾಡಿಕೊಳ್ಳುವುದಕ್ಕೆ ಸಾಧನ ಮಾತ್ರವಾದಂತಾಗುತ್ತದೆ. ವೇದಾಂತಶಾಸ್ತ್ರವೆಂಬುದು ಲೋಕದ ಅನೇಕ ಶಾಸ್ತ್ರಗಳಂತೆ ಇದೂ ಒಂದು ಎಲ್ಲಾ ಶಾಸ್ತ್ರಗಳ ಪಕ್ಕದಲ್ಲಿ ನಿಲ್ಲುವ ಶಾಸ್ತ್ರವಲ್ಲ. ಇನ್ನೂ ಹೇಳುವುದಾದರೆ ಇದು ಬರಿಯ ಶಾಸ್ತ್ರವೆಂಬುದಲ್ಲವೇ ಅಲ್ಲ, ಮತ್ತೇನೆಂದರೆ ಇದೊಂದು ಜೀವನಧರ್ಮ, ಅಂದರೆ ನಮ್ಮ ಬದುಕಿನೊಡನೆ ಸೇರಿಕೊಂಡ ಸತ್ಯಶಾಸ್ತ್ರ ಮತ್ತು ತತ್ತ್ವಶಾಸ್ತ್ರ. ಇದು ಎಲ್ಲಾ ಶಾಸ್ತ್ರದ ಶಾಸ್ತ್ರತ್ವವನ್ನೂ ಅಳೆಯುವ ಮಾನದಂಡವಾಗಿದೆ. ಬಾಕಿ ಎಲ್ಲಾ ಶಾಸ್ತ್ರಗಳೂ ನಿಜವಾಗಿ ಶಾಸ್ತ್ರವಾಗಬೇಕಾದರೆ ಅವು ಯಾವುದಾದರೊಂದು ರೀತಿಯಿಂದ ಇದಕ್ಕೆ ಉಪಕಾರ ಮಾಡುವಂತಾಗಿರಬೇಕು. ಇದಕ್ಕೆ ಅಂಗವಾಗಿರಬೇಕು. ಆಗಲೇ ಅವಕ್ಕೂ ಶಾಸ್ತ್ರತ್ವವು ಬರುತ್ತದೆ. ಇಲ್ಲವಾದರೆ ಕೇವಲ ಹೊಟ್ಟೆಹೊರೆಯುವ

ವಿದ್ಯೆಯೋ ಇಂದ್ರಿಯಭೋಗವನ್ನು ಬೆಳಸುವ ವಿದ್ಯೆಯೋ ಆಗಿ ಕೊನೆಗೆ ಮನುಷ್ಯನು ಅಧೋಗತಿಗೆ ಹೋಗುವುದಕ್ಕೆ ಕಾರಣವಾಗುತ್ತದೆ. ಆಗ ಅದು ನಿಜವಾದ ಅರ್ಥದಲ್ಲಿ ಶಾಸ್ತ್ರವೇ ಆಗಲಾರದು. ಇದನ್ನೇ ಮುಂಡಕದಲ್ಲಿ ಈ ಬ್ರಹ್ಮವಿದ್ಯೆಯನ್ನು ''ಸರ್ವವಿದ್ಯಾಪ್ರತಿಷ್ಠಾಮ್'' ಎಲ್ಲಾ ವಿದ್ಯೆಗೂ ಆಧಾರವಾಗಿರುವಂಥದ್ದೆಂದು ಹೇಳಿರುತ್ತದೆ. ಹೀಗೆ ಇಂತಹ ಉತ್ಕೃಷ್ಟವಾದ ಬ್ರಹ್ಮವಿದ್ಯೆಯನ್ನು ಹೆಚ್ಚಿನ ಭಕ್ತಿಶ್ರದ್ಧಾದರಪುರಸ್ಸರವಾಗಿ ಸದ್ಗುರುವಿನ ಹತ್ತಿರ ಬಳಿಸಾರಿ ಅವರ ಉಪದೇಶವನ್ನು ಕೇಳಿ ಮನನ ಮಾಡಿ ಹಾಗೆಯೇ ಎಲ್ಲಾ ಶಮದಮಾದಿಸಾಧನಗಳನ್ನೂ ಚೆನ್ನಾಗಿ ಅಭ್ಯಾಸವನ್ನು ಮಾಡಿ ತತ್ತ್ವವನ್ನು ತಿಳಿದು ಕೃತಾರ್ಥರಾಗಬೇಕು.

* * * * *

## 60. ಆತ್ಮನು ನಿರ್ವಿಕಾರನು

**ಸ್ವಪ್ನೇ ಯಥಾ ಶಿರಚ್ಛೇದಂ ಪಂಚತ್ವಾದ್ಯಾತ್ಮನಃ ಸ್ವಯಮ್ ।**
**ಯಸ್ಮಾತ್ ಪಶ್ಯತಿ ದೇಹಸ್ಯ ತತ ಆತ್ಮಾ ಹ್ಯಜೋಽಮರಃ ॥**
**ಘಟೇ ಭಿನ್ನೇ ಯಥಾಕಾಶಃ ಆಕಾಶಃ ಸ್ಯಾದ್ಯಥಾ ಪುರಾ ।**
**ಏವಂ ದೇಹೇ ಮೃತೇ ಜೀವೋ ಬ್ರಹ್ಮಸಂಪದ್ಯತೇ ಪುನಃ ॥**

**- ಶ್ರೀಮದ್ಭಾಗವತ 12-5-4,5**

ಹೇಗೆ ಕನಸಿನಲ್ಲಿ ತನ್ನ ತಲೆಯನ್ನು ಕತ್ತರಿಸಿದ್ದನ್ನು ತಾನೇ ನೋಡುತ್ತಾನೋ ಹಾಗೆಯೇ (ಎಚ್ಚರದಲ್ಲೂ) ತನ್ನ ಮರಣಾದಿಗಳನ್ನು ಆತ್ಮನು ನೋಡುವವನಾಗಿರುತ್ತಾನೆ. ಆದ್ದರಿಂದ ಆತ್ಮನಿಗೆ ಸ್ವತಃ ಜನ್ಮಮರಣಾದಿಗಳು ಇರುವುದಿಲ್ಲ. ಹೇಗೆ ಗಡಿಗೆಯು ಒಡೆದು ಹೋದರೆ ಅದರೊಳಗಿನ ಆಕಾಶವು ಈ ಮಹಾಕಾಶವೇ ಆಗುತ್ತದೆಯೋ ಅದರಂತೆ ಆತ್ಮಸ್ವರೂಪದ ನಿಶ್ಚಯದಿಂದ ದೇಹವು ಲಯವಾಗಲಾಗಿ (ಬಾಧಿತವಾಗಲಾಗಿ) ಜೀವನೂ ಸಹ ಮತ್ತೆ ಬ್ರಹ್ಮವನ್ನು ಸೇರುತ್ತಾನೆ.

**(ಭಗವದ್ಗೀತೆಯಲ್ಲಿರುವ ''ದೇಹಿನೋಽಸ್ಮಿನ್ ಯಥಾ ದೇಹೇ'' ಎಂಬುದಕ್ಕೂ ಹಾಗೆಯೇ ಶ್ರೀ ಗೌಡಪಾದರ ''ಆತ್ಮಾಹ್ಯಾಕಾಶವಜ್ಜೀವೈರ್ಘಟಾಕಾಶೈಃ'' ಎಂಬ ಕಾರಿಕೆಗೆ ಈ ಮೇಲಿನ ಶ್ಲೋಕಗಳನ್ನು ಹೋಲಿಸಬಹುದು.)**

## ಭಗವತ್ಪ್ರಸಾದ

ಈ ಭಾಗವತದ ಶ್ಲೋಕದಲ್ಲಿ ಎಷ್ಟು ಸುಂದರವಾಗಿ ಸಾರ್ವತ್ರಿಕ ಪರಿಪೂರ್ಣಾನುಭವದ ಆಧಾರದ ಮೇಲೆ ದೇಹಾದಿಗಳು ಸುಳ್ಳೆಂತಲೂ, ಆತ್ಮನು ಏಕರೂಪನೂ, ನಿರ್ವಿಕಾರನೂ ಆಗಿರುವನೆಂದು ತಿಳಿಸಿದೆಯೆಂದು ನಾವು ಮನಗಾಣಬಹುದಾಗಿದೆ. ನಮಗೆಲ್ಲರಿಗೂ ಎಚ್ಚರ ಕನಸು ನಿದ್ರೆ ಎಂಬ ಮೂರು ಅವಸ್ಥೆಯಾಗುತ್ತಿರುವುದು ಒಂದು ಬಗೆಯಿಂದ ಇದು ಭಗವಂತನು ಕೊಟ್ಟ ವರವೆಂದು ತಿಳಿಯಬಹುದು. ಎಚ್ಚರ ಒಂದೇ ಇದ್ದಿದ್ದರೆ ಇದನ್ನು ಸುಳ್ಳೆಂದು ಯುಕ್ತಿ ಮತ್ತು ಅನುಭವದಿಂದ ಗೊತ್ತುಪಡಿಸುವುದು ತುಂಬಾ ಕಷ್ಟವಾಗುತ್ತಿತ್ತು. ಏಕೆಂದರೆ ಯಾವಾಗಲೂ ಅದೊಂದೇ ಇರುವಾಗ ಅದನ್ನೇ ಸತ್ಯವೆಂದು ತಿಳಿಯಬೇಕೇ ಹೊರತು ಅದಕ್ಕಿಂತ ಬೇರೆಯಾದದ್ದು ಇದೆ ಎಂದು ಕಲ್ಪಿಸುವುದಕ್ಕೂ ಆಗುತ್ತಿರಲಿಲ್ಲ. ಆದರೆ ಮೂರನ್ನೂ ಅನುಭವಿಸುತ್ತಿದ್ದರೆ ಮೂರು ಬಂದು ಹೋಗುತ್ತಿದ್ದಾಗ ಅಲ್ಲದೇ, ಮೂರೂ ನಮಗೇ ಆಗುತ್ತಿರುವಾಗ ಅದರಲ್ಲಿ ಒಂದನ್ನು ಮಾತ್ರ ಸತ್ಯವೆಂದು ತಿಳಿಯುವುದು ವಿಚಾರಪರರಾದವರಿಗೆ ಒಪ್ಪಾಗಿ ತೋರುವುದಿಲ್ಲ.

ಮೂರು ಅವಸ್ಥೆಗಳಲ್ಲಿ ಎಚ್ಚರ ಕನಸುಗಳಿಗೆ ತತ್ತತ್ಕಾಲದಲ್ಲಿ ಅವರೆಡಕ್ಕೆ ಯಾವ ವ್ಯತ್ಯಾಸವನ್ನು ಯಾರಿಗೂ ತೋರಿಸುವುದಕ್ಕೆ ಆಗುವುದಿಲ್ಲ. ಏಕೆಂದರೆ ಕನಸಿನ ಅವಸ್ಥೆಯೂ ಸಹ ತತ್ಕಾಲಕ್ಕೆ ಎಚ್ಚರವೆಂದೇ ತೋರುತ್ತಿರುತ್ತದೆ ಎಂದು ನಮಗೆಲ್ಲರಿಗೂ ತಿಳಿದಿರುವ ವಿಚಾರ. ಕನಸಿನಲ್ಲಿ ಹಾವು ಹುಲಿ ಮುಂತಾದವುಗಳನ್ನು ಕಂಡರೆ ಇದು ಕನಸು ಆದ್ದರಿಂದ ಇವು ಸುಳ್ಳು ಎಂದೇನು ಯಾರೂ ತಿಳಿಯುವುದಿಲ್ಲ. ಅಲ್ಲೂ ಅವು ಕಂಡಾಗ ಹೆದರಿಕೆ ಉಂಟಾಗಿ ಓಡುವುದಕ್ಕೂ ತಪ್ಪಿಸಿಕೊಳ್ಳುವುದಕ್ಕೂ ನಾವು ಪ್ರಯತ್ನಿಸುತ್ತಲೇ ಇರುತ್ತೇವೆಂದು ನಮ್ಮೆಲ್ಲರ ಕನಸಿನ ಅನುಭವವನ್ನು ಜ್ಞಾಪಿಸಿಕೊಂಡಾಗ ನಮಗೆ ಗೊತ್ತಾಗುತ್ತದೆ. ಹಾಗೆಯೇ ಇಷ್ಟವಾದದ್ದು, ಪ್ರಿಯವಾದದ್ದು ಕಂಡಾಗ ಅದನ್ನು ತೆಗೆದುಕೊಳ್ಳುವುದಕ್ಕೂ ಅದರೊಡನೆ ಸುಖವನ್ನು ಅನುಭವಿಸುವುದಕ್ಕೆ ಹವಣಿಸುತ್ತಿರುತ್ತೇವೆಂಬುದೂ ಗೊತ್ತಿರುವ ವಿಷಯವೇ ಆಗಿದೆ. ಈ ಸಂದರ್ಭದಲ್ಲಿ ನಾವು ತಿಳಿದುಕೊಳ್ಳಬೇಕಾದ ಸಂಗತಿ ಏನೆಂದರೆ, ಸ್ವಪ್ನದಲ್ಲಿ ನಾವೇ ನೇರಾಗಿ ನಮ್ಮ ತಲೆಯನ್ನು ನಮ್ಮ ಶತ್ರುಗಳೋ ಕಳ್ಳಕಾಕರೋ ಕತ್ತರಿಸಿ ಶರೀರವು ಸತ್ತುಹೋದದ್ದನ್ನು ಕಂಡಿರುವುದರಿಂದ ನಾವು ಸತ್ತುಹೋಗಿರುವುದಿಲ್ಲ ಎಂದು ಹೇಗೆ ಗೊತ್ತಾಗುತ್ತದೋ ಅದರಂತೆ ಈಗ ಎಚ್ಚರದಲ್ಲೂ ಶರೀರವು ನಾಶವಾದರೆ ನಾವು ನಾಶವಾಗುವವರಲ್ಲ

ಎಂದು ತಿಳಿಯಬೇಕು. ಕನಸಿನಲ್ಲಿ ಸತ್ತುಹೋದ ಶರೀರವನ್ನು ನೋಡುವಾಗ ತತ್ಕಾಲಕ್ಕೆ ಅದೇ ಎಚ್ಚರವಾಗಿರುತ್ತದೆಯಾದ್ದರಿಂದ ಎಚ್ಚರದಲ್ಲೇ ನಾವು ಸಾಯುವವರಲ್ಲ ಎಂಬ ಅನುಭವವಿದೆ ಎಂದು ತೀರ್ಮಾನವಾಗುತ್ತದೆ ಅಷ್ಟೇ ಅಲ್ಲದೇ ಈ ಎಚ್ಚರದಲ್ಲೇ ನಾವು ನಮ್ಮನ್ನು ಸತ್ತಿರುವುದನ್ನು ಕಲ್ಪಿಸಿಕೊಳ್ಳುವುದಕ್ಕೆ ಹೋದರೆ, ಹಾಗೆ ಕಲ್ಪಿಸಿಕೊಳ್ಳುವುದಕ್ಕೂ ಆಗುವುದೇ ಇಲ್ಲ, ಏಕೆಂದರೆ ಆ ಕಾಲಕ್ಕೆ ಆ ಕಲ್ಪನೆಯನ್ನು ನೋಡುತ್ತಿರುವವ ರಾಗಿರುತ್ತೇವೆ. ಯಾವ ಯಾವ ಬದಲಾವಣೆಯನ್ನಾಗಲೀ ವಿಕಾರವನ್ನಾಗಲೀ ನಮ್ಮಲ್ಲಿರಬಹುದೆಂದು ನಾವು ಕಲ್ಪಿಸಿಕೊಂಡರೂ ಅದೆಲ್ಲಕ್ಕೂ ನಾವು ಸಾಕ್ಷಿಯಾಗಿರು ತ್ತೇವೆಯೇ ಹೊರತು ಆಯಾ ಕಲ್ಪನೆಗೆ ವಿಷಯರೇ ಆಗಿರುವುದಿಲ್ಲ.

ಇನ್ನು ದೇಹಾದಿಗಳ ಸಂಬಂಧವಂತು ಬಲುದೂರದ ಮಾತಾಯಿತು. ಏಕೆಂದರೆ ದೇಹದ ಅಸ್ತಿತ್ವದ ಮೊದಲುಗೊಂಡು ಎಲ್ಲವೂ ಆತ್ಮನ ಅರಿವಿಗೆ ವಿಷಯವಾಗಿ ಬಿದ್ದುಕೊಂಡೇ ಸಿದ್ಧವಾಗಬೇಕಾಗಿದೆ. ದೇಹಕ್ಕೂ ಆತ್ಮನಿಗೂ ಯಾವ ರೀತಿಯ ಸಂಬಂಧವೂ ಹೊಂದುವುದಿಲ್ಲ, ಆದರೂ ಅದೇನು ಮಾಯೆಯೋ ಗೊತ್ತಿಲ್ಲ, ಆಬಾಲವೃದ್ಧರಿಗೂ ಸರ್ವರಿಗೂ ಯಾರೂ ಹೇಳಿಕೊಡದೇ ಸಹಜವಾಗಿಯೇ ಅದರಲ್ಲಿ ಮಿತಿ ಮೀರಿದ ಅಭಿಮಾನವಿರುತ್ತದೆ. ಈ ಅಭಿಮಾನವೇ ನಾವು ನಿಜವಾಗಿ ಯಾರಾಗಿದ್ದೇವೆ? ಎಂಬುದನ್ನು ತಿಳಿಯುವುದಕ್ಕೆ ಅಡ್ಡಿಯಾಗಿದೆ. ಆತ್ಮನು ಇಡಿಯ ಎಚ್ಚರಪ್ರಪಂಚಕ್ಕೆ ಸಾಕ್ಷಿಯಾಗಿರತಕಕವನು, ಆ ಎಚ್ಚರಪ್ರಪಂಚದ ಒಂದು ಭಾಗ ಮಾತ್ರವಾಗಿದೆ ಈ ಭೂಮಿಯು, ಈ ಭೂಮಿಯ ಒಂದು ಭಾಗ ಒಂದು ದೇಶವು, ಅದರ ಒಂದು ಭಾಗ ರಾಜ್ಯ, ಅದರ ಒಂದು ಭಾಗ ಜಿಲ್ಲಾ ತಾಲ್ಲೂಕ್, ಗ್ರಾಮ, ಮನೆ, ಅದರೊಳಗೆ ಪಂಚಭೂತದ ವಿಕಾರವಾಗಿರುವ ಶರೀರವನ್ನೇ ನಾನೆಂದು ಕೊಳ್ಳುತ್ತಿದ್ದೇನೆ. ಎಂದರೆ ಎಷ್ಟೊಂದು ದಡ್ಡತನದ ಪರಮಾವಧಿಯಾಯಿತು! ಇಡಿಯ ಎಚ್ಚರಪ್ರಪಂಚಕ್ಕೆ ಸಾಕ್ಷಿಯಾಗಿರುವವನಾದ ಆತ್ಮನು ಅದಕ್ಕಿಂತ ಬೇರೆಯಾದವನಾಗಿರು ತ್ತಾನೆ, ಅದರ ಸಂಬಂಧವಿಲ್ಲದವನಾಗಿರುತ್ತಾನೆ. ಹೀಗಿರುವ ಆತನಿಗೆ ಈ ದೇಹಮಾತ್ರದ ಅಭಿಮಾನವೆಂದರೆ ಇದೆಂತಹ ವಿಪರ್ಯಾಸ.

ಆದರೂ ದೇಹವು ನಾನಾಗಿದೆಯಲ್ಲ, ನಾನಾದ ಮೇಲೆ ಹಾಗೆ ಆಗುವುದಕ್ಕೆ ಕಾರಣವಿಲ್ಲ ಎಂದು ವಾದಿಸುವುದಕ್ಕೆ ಬರುವುದಿಲ್ಲವಲ್ಲ! ಏಕೆಂದರೆ ಅನುಭವವು ತರ್ಕಕ್ಕಿಂತ ಹೆಚ್ಚಿನದು, ಅನುಭವಕ್ಕೆ ತಕ್ಕಂತೆ ತರ್ಕಿಸಬೇಕೆ ಹೊರತು ತರ್ಕಕ್ಕೆ ತಕ್ಕಂತೆ

ಅನುಭವವನ್ನು ಬದಲಾಯಿಸಿಕೊಳ್ಳುವುದಕ್ಕೆ ಬರುವುದಿಲ್ಲವಲ್ಲ! ಎಂದರೆ ಇದು ಸರಿಯಲ್ಲ, ದೇಹವು ನಾನೆಂಬುದು ಅನುಭವವಲ್ಲ, ಮತ್ತೇನೆಂದರೆ ತಪ್ಪು ತಿಳಿವಳಿಕೆ. ನಾನೇ ದೇಹವಾಗಿದ್ದರೆ, ಅಥವಾ ದೇಹವೇ ನಾನಾಗಿದ್ದರೆ ಅದು ನನಗೆ ತೋರಬಾರದಾಗಿತ್ತು. ನಾನಾಗಿದ್ದು ತೋರುವುದಿಲ್ಲ, ತೋರುವುದು ನಾನಾಗಿರುವುದಿಲ್ಲ. ಏಕೆಂದರೆ ನಾನು ಎಂದರೆ ಅರಿಯುವವನೇ ಹೊರತು ಗೊತ್ತಾಗಿಸಿಕೊಳ್ಳುವವನಲ್ಲ, ನನಗೆ ನನಗಿಂತ ಬೇರೆಯಾದದ್ದು ಗೊತ್ತಾಗುತ್ತದೆಯೇ ಹೊರತು ನನಗೆ ನಾನೇ ಗೊತ್ತಾಗುವುದಿಲ್ಲ. ಏಕೆಂದರೆ ಗೊತ್ತಾಗುವ ಕ್ರಿಯೆಗೆ ಕರ್ತೃವೂ ವಿಷಯವೂ ಒಂದೇ ಆಗುವುದಕ್ಕೆ ಸಾಧ್ಯವಿಲ್ಲ. ಇದನ್ನು ಸಂಸ್ಕೃತಭಾಷೆಯಲ್ಲಿ ಕರ್ಮಕರ್ತೃದೋಷ ಎನ್ನುತ್ತಾರೆ. ಇನ್ನು ಒಂದು ಮಾತು ಏನೆಂದರೆ ನಾನಾದದ್ದು ಗೊತ್ತಾಗಬೇಕಾಗಿಯೂ ಇಲ್ಲ, ಏಕೆಂದರೆ ನಾನಾದ್ದರಿಂದಲೇ ಗೊತ್ತಾಗುವುದೂ ಅಲ್ಲ, ಗೊತ್ತಾದರೆ ಅದು ನಾನಲ್ಲ. ನನಗೆ ನಾನು ಗೊತ್ತಾಗಬೇಕೆಂಬ ಬಯಕೆಯೂ ಹೊಂದುವುದಿಲ್ಲ. ಏಕೆಂದರೆ ಬಯಕೆಯಾಗುವುದಕ್ಕೆ ಮುಂಚೆಯೇ ನಾನಿರುತ್ತೇನೆ. ನಾನಿದ್ದುಕೊಂಡ ಮೇಲೆಯೇ ಬಯಕೆಯಾಗಲೀ ಪ್ರಮಾಣ ವ್ಯವಹಾರವಾಗಲೀ ಎಲ್ಲವೂ ಸಿದ್ಧವಾಗಬೇಕಾಗಿ ರುವುದರಿಂದ ಎಲ್ಲದರ ಸಿದ್ಧಿಗೂ ಕಾರಣನಾದ ನಾನು ಇವುಗಳಿಂದ ಸಿದ್ಧನಾಗುವನಲ್ಲ.

ಹಾಗಾದರೆ ಆತ್ಮನನ್ನು ತಿಳಿಯಬೇಕು ಎಂದು ಮುಂತಾಗಿ ಉಪನಿಷತ್ತುಗಳು ಹೇಳುತ್ತಿವೆಯಲ್ಲಾ! ಇದಕ್ಕೇನು ಅರ್ಥ? ಎಂದರೆ ನಾನಲ್ಲದ್ದರಲ್ಲಿ ನಾನೆಂದು ಮಾಡಿಕೊಂಡ ತಪ್ಪುತಿಳಿವಳಿಕೆಯನ್ನು ಬಿಡಬೇಕೆಂಬುದೇ ಅದರ ಅರ್ಥ. ಎಲ್ಲಾ ಪ್ರಕಾರದ ಆತ್ಮನಲ್ಲಿ ಹುಟ್ಟಿಹಾಕಿಕೊಂಡ ತಪ್ಪುತಿಳಿವಳಿಕೆಯನ್ನು ಬಿಡುವುದನ್ನೇ ''ಆತ್ಮಜ್ಞಾನ'' ಎಂದು ಉಪಚಾರಕ್ಕೆ ಶಾಸ್ತ್ರದಲ್ಲಿ ಕರೆದಿರುತ್ತದೆ, ಎಂದು ತಿಳಿದರೆ ಸರಿಯಾಗಿ ಶಾಸ್ತ್ರಾರ್ಥವು ಗೊತ್ತಾದಂತಾಗುತ್ತದೆ. ಇಷ್ಟೇ ಹೊರತು ಗೊತ್ತಿಲ್ಲದ ಆತ್ಮನನ್ನು ತಿಳಿದುಕೊಳ್ಳುವುದಲ್ಲ ಆತ್ಮಜ್ಞಾನವೆಂಬುದು. ಈ ವಿಷಯವು ಅನೇಕ ವಾದಿಗಳಿಗೆ ತಿಳಿಯದೆಯೇ ಭಿನ್ನ ಭಿನ್ನ ಪ್ರಸ್ಥಾನಗಳು ಹೊರಟಿರುತ್ತದೆ.

ಹೀಗೆ ಪುರಾಣಸಾಹಿತ್ಯಗಳ ಮೂಲಕ ಋಷಿಗಳು ನಮಗೆ ಭಗವತ್ತ್ವವನ್ನು ಬೋಧಿಸಿರುತ್ತಾರೆ. ಭಾಗವತವು ಉಪನಿಷತ್ತು-ಭಗವದ್ಗೀತೆಗಳ ಕಥಾರೂಪದ ಭಾಷ್ಯವೆಂದು ಹೇಳಬಹುದು. ತ್ಯಾಗವನ್ನು ಬೋಧಿಸುವದೇ ಇವುಗಳ ತಿರುಳಾಗಿದೆ.

ಈ ಭಾಗವತದಲ್ಲಿ ಪರಮಹಂಸರ ಮನನಕ್ಕೆ ತಕ್ಕುದಾದ ಜ್ಞಾನರಾಶಿಯನ್ನೇ ಗಾನಮಾಡಲಾಗಿದೆ. ಇದರ ಸಾರವನ್ನು ಈ ಶ್ಲೋಕದಲ್ಲಿ:

ಶ್ರೀಮದ್ಭಾಗವತಂ ಪುರಾಣಮಮಲಂ ಯದ್ವೈಷ್ಣವಾನಾಂ ಪ್ರಿಯಂ
ಯಸ್ಮಿನ್ ಪಾರಮಹಂಸ್ಯಮೇಕಮಮಲಂ ಜ್ಞಾನಂ ಪರಂ ಗೀಯತೇ ।
ಯತ್ರ ಜ್ಞಾನವಿರಾಗಭಕ್ತಿಸಹಿತಂ ನೈಷ್ಕರ್ಮ್ಯಮಾವಿಷ್ಕೃತಂ
ತತ್ಶೃಣ್ವನ್ ಪ್ರಪಠನ್ ವಿಚಾರಣಪರೋ ಭಕ್ತ್ಯಾ ವಿಮುಚ್ಯೇನ್ನರಃ ॥

ಯಾವ ಗ್ರಂಥದಲ್ಲಿ ಪರಮಹಂಸರಿಗೆ ಅತ್ಯಂತ ಪ್ರಿಯವೂ ರಾಗಾದಿಮಲರಹಿತವೂ ನಿರ್ಮಲವೂ ಅದ್ವಿತೀಯವೂ ಆದ ತತ್ತ್ವಜ್ಞಾನವು ನಿರೂಪಿಸಲ್ಪಟ್ಟಿರುವದೋ, ಯಾವ ಗ್ರಂಥವು ವಿಷ್ಣುಭಕ್ತರಿಗೆ ಅತ್ಯಂತ ಪ್ರಿಯವಾದುದೋ, ಯಾವ ಗ್ರಂಥದಲ್ಲಿ ಜ್ಞಾನವೈರಾಗ್ಯಭಕ್ತಿಗಳಿಂದ ಕೂಡಿದ ಕರ್ಮಕಾಂಡದ ಉಪಸಂಹಾರವು ಪ್ರಕಟಿಸಲ್ಪಟ್ಟಿರುವದೋ, ಅಂತಹ ನಿರ್ದುಷ್ಟವಾದ ಶ್ರೀಮದ್ಭಾಗವತ ಪುರಾಣವನ್ನು ಆದರದಿಂದ ಶ್ರವಣಮಾಡುವ ಮತ್ತು ಭಕ್ತಿಯಿಂದ ಪಠಣಮಾಡುವ ಮನುಷ್ಯನು ಸಂಸಾರಬಂಧದಿಂದ ಮುಕ್ತನಾಗುವನು- ಎಂದು ತಿಳಿಸಿದೆ. ಇದೇ ಭಾಗವತರಸಾರ, ಮತ್ತಾವದೂ ಅಲ್ಲ. ತ್ಯಾಗವೇ ಅದರ ಪರಮಗುರಿ. ಸರ್ವಕರ್ಮವನ್ನೂ ಪರಿತ್ಯಾಗಮಾಡಿ, ಪರಮಹಂಸನಾಗಿ, ಪರಮಾತ್ಮನಿಷ್ಠೆಯನ್ನು ಪಡೆದುಕೊಳ್ಳುವದೇ ಇದರ ತಾತ್ಪರ್ಯ. ತ್ಯಾಗದಿಂದಲೇ ಆನಂದೋತ್ಕರ್ಷವು ಉಂಟಾಗುವದು. ತೃಪ್ತಿಯೇ ನಿಜವಾದ ಫಲ. ಅದೇ ನಿಜವಾದ ತ್ಯಾಗದ ಪರಾಕಾಷ್ಠೆಯಾಗಿದೆ. ಅದನ್ನು ಪಡೆದು ಕೃತಾರ್ಥರಾಗಬೇಕು.

ಈ ಲೇಖನಗಳಲ್ಲಿ ಭಾಗವತೋಪಾಖ್ಯಾನಗಳ ವ್ಯಾಜದಿಂದ ಅಧ್ಯಾತ್ಮ ತತ್ತ್ವವನ್ನು ಯಥಾಸಾಧ್ಯವಾಗಿ ವಿಚಾರಮಾಡಿದೆ. ಇವುಗಳ ಅನುಸಂಧಾನದ ಮೂಲಕ ಭWÜವಾನ್ ಶ್ರೀಕೃಷ್ಣನ ಭಕ್ತಿಯು ನಮ್ಮೆಲ್ಲರಿಗೂ ಉಂಟಾಗುವಂತಾಗಲಿ, ಆ ಪರಮ ಪುರುಷನು ಎಲ್ಲರಿಗೂ ಮಂಗಳವನ್ನು ಕರುಣಿಸಲಿ.

ನಾಮಸಂಕೀರ್ತನಂ ಯಸ್ಯ ಸರ್ವಪಾಪಪ್ರಣಾಶನಮ್ ।
ಪ್ರಣಾಮೋ ದುಃಖಶಮನಸ್ತಂ ನಮಾಮಿ ಹರಿಂ ಪರಮ್ ॥

॥ ಓಂ ತತ್ಸತ್ ॥

ಶ್ರೀಕೃಷ್ಣಾರ್ಪಣಮಸ್ತು